Sri H. SIDDAVEERAPPA.—It is purely a matter for clarification and nothing else. You have given certain figures and say there will be a reduction of Rs. 48 lakhs. What is that reduction? Are we not entitled to know that?

Mr. SPEAKER.—Is not that member Sri Nagappa entitled to participate in the debate? For every thing this member raises his voice.

Sri H. SIDDAVEERAPPA.—We are not here to hear our own voice. We are requesting the Government to know what is that.

Mr. SPEAKER.—I have asked the Minister to note it down and reply.

Sri S. SIVAPPA.—We wanted clarification earlier and nothing else.

ಶ್ರೀ ಎಚ್. ಸಿದ್ದವೀರಪ್ಪ.—ಹಣ ಕಡಿಮೆ ಮಾಡಿರುವುದು ಇವತ್ತಿನ ಅಜೆಂಡಾದಲ್ಲಿ ನಮಗೆ ತಿಳಿದು ಬಂದಿದೆ. 48 ಲಕ್ಷ ರೂಪಾಯಿ ತೋರಿಸಿರುವುದು ಏನು ಎಂದು ಕೇಳುತ್ತೇವೆ.

Sri D. M. SIDDIAH.—The Hon'ble Minister for Education will answer that point while he replies.

BUDGET ESTIMATES FOR 1967-68—DEMAND FOR GRANTS.

DEMAND NOS. 17 AND 37

(Debate continued)

ಶ್ರೀ ಎಂ. ನಾಗಪ್ಪ ಬಸಪ್ಪ (ರಾಯಚೂರು).—ಸನ್ಮಾನ್ಯ ಅಧ್ಯಕ್ಷರೇ, ವಿದ್ಯಾಭ್ಯಾಸಕ್ಕೆ ಸಂಬಂಧಿಸಿದ ಡಿಮ್ಯಾಂಡ್ 17 ರಲ್ಲಿ ಮಾನ್ಯ ವಿದ್ಯಾ ಮಂತ್ರಿಗಳು ಕೇಳಿದಂಥ ಬೇಡಿಕೆ 33,57,28,700 ರೂಪಾಯಿ ಇರುವುದನ್ನು ನಾನು ತೀವ್ರವಾಗಿ ಖಂಡಿಸುತ್ತೇನೆ. ಇದಕ್ಕೆ ಕಾರಣ ಇಷ್ಟೇ. ಮೂರನೇ ಪಂಚವಾರ್ಷಿಕ ಯೋಜನೆಯಲ್ಲಿ ನಮ್ಮ ಸರಕಾರ ಅಧ್ಯಾಪಕರ ನೇಮಕಕ್ಕಾಗಿ, ಸಲಕರಣೆಗಳನ್ನು ಖರೀದಿ ಮಾಡುವುದಕ್ಕಾಗಿ ಮತ್ತು ಕಟ್ಟಡಕ್ಕಾಗಿ 1451 ಲಕ್ಷ ರೂಪಾಯಿಯಷ್ಟು ಹಣ ಖರ್ಚು ಮಾಡಬೇಕು ಎಂದು ನಿರ್ಧರಿಸಿದ್ದರು. ಸರಕಾರದವರು ಹಣವನ್ನು ಮಾತ್ರ ಖರ್ಚು ಮಾಡಿದ್ದಾರೆ. ಆದರೆ ಸಾಧನೆ ಮಾತ್ರ ಆಗಿಲ್ಲ. 2,865 ಸಾಲೆ ಕಟ್ಟಡಗಳನ್ನು ಮಾಡಿಕೊಡಬೇಕು ಎಂದು ನಿಯಮಿಸಿದ್ದುದರಲ್ಲಿ ತಯಾರಾದುದು ಕೇವಲ 800 ಸಾಲೆ ಕಟ್ಟಡಗಳು ಮಾತ್ರ. ಇದಕ್ಕಾಗಿ ಇಟ್ಟುಕೊಂಡಿರತಕ್ಕಂಥ 1451·72 ಲಕ್ಷ ಹಣ ಖರ್ಚು ಮಾಡಿದ್ದರೂ ಕೂಡ ಸಾಕಷ್ಟು ಉಪಾಧ್ಯಾಯರುಗಳನ್ನು ನೇಮಕ ಮಾಡಿಕೊಳ್ಳಲಿಲ್ಲ, ಶಾಲೆ ಕಟ್ಟಡಗಳು ಆಗಲಿಲ್ಲ. ಆದುದರಿಂದ ಹಣ ಸರಿಯಾದ ರೀತಿಯಲ್ಲಿ ವ್ಯಯವಾಗಿರುತ್ತದೆ ಎಂದು ನನಗೆ ಅನಿಸುವುದಿಲ್ಲ. ಸ್ಕೂಲು ಬಿಲ್ಡಿಂಗ್ ಪರಿಸ್ಥಿತಿ ಸರಿಯಾಗಿಲ್ಲ. ಎಷ್ಟೋ ಪ್ರೀ-ಪ್ರೈಮರಿ ಸ್ಕೂಲುಗಳಲ್ಲಿ ಹೆಚ್ಚಾಗಿ ನೂತನ ಪ್ರಾಥಮಿಕ ಶಾಲೆಗಳನ್ನಾಗಿ ಪ್ರಾರಂಭಿಸಿದ್ದಾರೆ. ಮೊದಲು ಇದ್ದಂಥ ಕಟ್ಟಡದಲ್ಲಿಯೇ ನಾಲ್ಕನೇ ವರ್ಗದಿಂದ ಏಳನೇ ವರ್ಗದವರೆಗೆ ಪ್ರಾರಂಭ ಮಾಡಿದ್ದಾರೆ. ಇರತಕ್ಕಂಥ ಕಟ್ಟಡದ ಸ್ಥಳದಲ್ಲಿಯೇ ಹೊಸ ವರ್ಗಗಳನ್ನು ಪ್ರಾರಂಭಿಸಲಾಗಿದೆ, ಕಟ್ಟಡದಲ್ಲಿ ಯಾವ ತರಹದ ಬದಲಾವಣೆಯಾಗಿಲ್ಲ. ಸರಕಾರ ಎಷ್ಟೋ ನಿಯಮಾವಳಿಗಳನ್ನು ಮಾಡಿದ್ದಾರೆ. ತಾಲ್ಲೂಕ ಅಭಿವೃದ್ಧಿ ಮಂಡಳಿಯವರು ಕೆಲವು ಸಾಲೆಗಳನ್ನು ಕಟ್ಟಿಸಿ ಕೊಡಬೇಕೆಂದು ಇದೆ. ಅದಕ್ಕೆ ಸರಕಾರ ಕೂಡ ಕೈಲಾದಷ್ಟು ಹಣ ಸಹಾಯ ಕೊಡುತ್ತಾರೆ. ಆದರೆ ಪಟ್ಟಣಗಳಲ್ಲಿಯ ಸಾಲೆಗಳ ಬಗ್ಗೆ ಯಾವ ನಿಯಮಾವಳಿ ನಿರ್ಮಿಸಿಲ್ಲ. ಮುನಸಿಪಲ್ ಆಕ್ಟ್ ತೆಗೆದು ನೋಡಿದರೆ ಅದರಲ್ಲಿ ಈ ಬಗ್ಗೆ ಯಾವ ಅಧಿಕಾರ ನಗರ ಸಮಿತಿಗೆ ಕೊಟ್ಟಿಲ್ಲ. ತಾಲ್ಲೂಕ್ ಅಭಿವೃದ್ಧಿ ಮಂಡಳಿಗೆ ಸಾಲೆ ಕಟ್ಟಡ ಕಟ್ಟಿಸುವುದಕ್ಕೆ ಅಧಿಕಾರ ಕೊಟ್ಟಿರುವ ಹಾಗೆ ಮುನಿಸಿಪಲ್ ಆಕ್ಟ್‌ನಲ್ಲಿ ಯಾವ ಅಧಿಕಾರ ನಗರ ಸಭೆಗಳಿಗೆ ಕೊಟ್ಟಿಲ್ಲ. ಒಂದು ಸಾಲೆ ಕಟ್ಟಿಸಬೇಕಾದರೆ ಸಂಬಂಧಪಟ್ಟ ನಗರ ಸಭೆ ಒಂದು ತೀರ್ಮಾನ ಮಾಡಿ ಸರಕಾರಕ್ಕೆ ಅದನ್ನು

(ಶ್ರೀ ಎಂ. ನಾಗಪ್ಪ ಬಸಪ್ಪ)

ಮಂಜೂರಿಗಾಗಿ ಕಳಿಸಿಕೊಡಬೇಕಾಗುತ್ತದೆ. ಅದನ್ನು ಸರಕಾರ ಮಂಜೂರು ಮಾಡಿದರೆ ಶಾಲೆ ಕಟ್ಟಡ ತೆಗೆದುಕೊಳ್ಳಲಿಕ್ಕೆ ಬರುತ್ತದೆ, ಇಲ್ಲದಿದ್ದರೆ ಇಲ್ಲ. ಸರಕಾರ ಪಟ್ಟಣದಲ್ಲಿ ಇರತಕ್ಕ ಶಾಲೆ ಕಟ್ಟಡಗಳ ಬಗ್ಗೆ ಯಾವ ನಿಯಮವನ್ನು ಕೈಕೊಂಡಿಲ್ಲ ಎಂದು ಹೇಳಿದರೆ ತಪ್ಪಾಗಲಾರದು. ನಮ್ಮ ರಾಯಚೂರು ನಗರದಲ್ಲಿ 15 ಪ್ರಾಥಮಿಕ ಹಾಗೂ ನೂತನ ಮಾಧ್ಯಮಿಕ ಶಾಲೆಗಳಿವೆ. ಎರಡು ಎರಡು ಶಾಲೆಗಳಿಗೆ ಅಥವಾ ಮೂರು ಖೋಲಿಗಳನ್ನು ಕಟ್ಟಿಸಿಕೊಟ್ಟಿದ್ದಾರೆ. ಪ್ರೈವೇಟ್ ಬಿಲ್ಡಿಂಗ್‌ನಲ್ಲಿ ನಡೆದಿರುವ ಶಾಲೆ ಕಟ್ಟಣಗಳು ಜೀರ್ಣಾವಸ್ಥೆಯಲ್ಲಿದ್ದು ಕೆಲವು ಬಿದ್ದುಹೋಗಿವೆ. ಶಾಲೆಯಲ್ಲಿ ಹುಡುಗರಿಗೆ ಕೂಡುವುದಕ್ಕೆ ಸ್ಥಳವಿಲ್ಲ. ಒಂದು ರೂಮಿನಲ್ಲಿ ಮೂರು ಕ್ಲಾಸ್ ತೆಗೆದುಕೊಳ್ಳುತ್ತಾರೆ. ಒಬ್ಬ ಟೀಚರ್ ಒಂದು ಗಂಟೆಯಲ್ಲಿ ಮೂರು ಕ್ಲಾಸುಗಳಿಗೆ ಒಂದು ರೂಮಿನಲ್ಲಿ ಪಾಠ ಹೇಳಿಕೊಡಬೇಕು ಅಂದರೆ ಹುಡುಗರ ವಿದ್ಯಾಭ್ಯಾಸದ ಉನ್ನತಿ ಹೇಗೆ ಆಗುತ್ತದೆ? ಇಂಥಲ್ಲಿ ವಿದ್ಯಾಭ್ಯಾಸವಾಗುತ್ತದೆಯೇ? ಎಂಬುದನ್ನು ವಿಚಾರ ಮಾಡಬೇಕು. ಕೆಲವು ಕಡೆ ಶಿಫ್ಟ್ ಸಿಸ್ಟಂ ಮಾಡಿಕೊಂಡಿದ್ದಾರೆ. ಬೆಳಿಗ್ಗೆ 8 ಗಂಟೆಯಿಂದ ಮಧ್ಯಾಹ್ನ 12 ಗಂಟೆಯವರೆಗೆ ಕೆಲವು ಕ್ಲಾಸುಗಳನ್ನು ನಡೆಸಿ ಮಧ್ಯಾಹ್ನ ಒಂದು ಗಂಟೆಯಿಂದ ಸಂಜೆ 5 ಗಂಟೆಯವರೆಗೆ ಬೇರೆ ಕ್ಲಾಸ್ ನಡೆಸುತ್ತಾರೆ. ಅಕೋಮಡೇಷನ್ ಇಲ್ಲದ ಮೂಲಕ ಈ ತರಹದ ವ್ಯವಸ್ಥೆ ಮಾಡಿಕೊಂಡಿದ್ದಾರೆ. ಆದರೆ ಒಬ್ಬನೇ ಉಪಾಧ್ಯಾಯನು ಬೆಳಗ್ಗೆ 8 ಗಂಟೆಯಿಂದ ಸಂಜೆ ಐದು ಗಂಟೆಯವರೆಗೆ ಕೆಲಸ ಮಾಡಬೇಕು ಅಂದರೆ ಮಧ್ಯಾಹ್ನದ ಮೇಲೆ ಅವನಲ್ಲಿ ಯಾವ ಎನರ್ಜಿ ಇರುತ್ತದೆ, ಹುಡುಗರಿಗೆ ವಿದ್ಯೆ ಕಲಿಸಲು ಹೇಗೆ ಸಾಧ್ಯವೇ ಎಂಬುದನ್ನು ಎಲ್ಲರೂ ಗಮನಿಸಬೇಕು. ಷಿಫ್ಟ್ ಸಿಸ್ಟಂ ಏನು ಇದೆ ಅದನ್ನು ಖಂಡಿಸುತ್ತೇನೆ. ತೀವ್ರವಾಗಿ ತೆಗೆದುಬಿಡಬೇಕು ಮತ್ತು ಪದ್ಧತಿ ಪ್ರಕಾರ ನಡೆಸಬೇಕು. ಈಮುಂದೆ ಬರತಕ್ಕ ಐದು ವರ್ಷಗಳಲ್ಲಿ ಶಾಲೆಗಳು ಕಟ್ಟಡ ತೀವ್ರ ಮಾಡಲಿಲ್ಲ ಎಂದರೆ ಸರ್ಕಾರ ತಮ್ಮ ಕೈಯಿಂದ ಕಳೆದುಕೊಳ್ಳುವ ಪರಿಸ್ಥಿತಿ ಬರಬಹುದು ಎಂದು ಹೇಳಬಯಸುತ್ತೇನೆ.

2-30 P.M.

ಎರಡನೆಯದಾಗಿ ರಾಯಚೂರಿನಲ್ಲಿ ಯರಮರಸನಲ್ಲಿ ಐ.ಬಿ. ಇದೆ, ಒಂದು ಟಿ.ಬಿ. ಇದೆ. ಇದರ ಜೊತೆಗೆ ಮುನಿಸಿಪಲ್ ಗೆಸ್ಟ್ ಹೌಸ್ ಇದೆ ಮತ್ತೆ ಇದರ ಜೊತೆಗೆ ಎರಡು ಐ.ಬಿ. ಇದ್ದೂ ಇನ್ನು ಒಂದು ಟಿ.ಬಿ. ಕಟ್ಟಿಸಬೇಕು ಎಂದು ಪ್ರಯತ್ನ ಮಾಡುತ್ತಿದ್ದಾರೆ. ಶಾಲೆಗಳು ಕಟ್ಟಿಸಲಿಕ್ಕೆ ದುಡ್ಡು ಇಲ್ಲ ಎಂದು ಹೇಳುತ್ತಾರೆ. ಐ.ಬಿ. ಕಟ್ಟಿಸಲಿಕ್ಕೆ ದುಡ್ಡು ಎಲ್ಲಿಂದ ಬರಬೇಕು? ಸರಕಾರಿ ಅಧಿಕಾರಿಗಳಿಗೆ ಇಳಿದುಕೊಳ್ಳಲು ಐ.ಬಿ. ಕಟ್ಟಿಸಲು ದುಡ್ಡು ಇದೆ, ಆದರೆ ಶಾಲೆ ಕಟ್ಟಡ ಕಟ್ಟಿಸಲು ದುಡ್ಡು ಇಲ್ಲ ಎಂದು ಹೇಳುತ್ತಾರೆ. ಸರ್ಕಾರ ಮೂರನೇ ಪಂಚವಾರ್ಷಿಕ ಯೋಜನೆಯಲ್ಲಿ ಸ್ಕೀಮು ನಂ. 627ರ ಪ್ರಕಾರ ಕೆಲವು ಕಟ್ಟಡಗಳನ್ನು ಪಿ. ಡಬ್ಲ್ಯು. ಡಿ. ಡಿಪಾರ್ಟಮೆಂಟಿನವರು ಕಟ್ಟಿಸಬೇಕೆಂದು ಇದೆ. ಅದರಲ್ಲಿ ರಾಯಚೂರಿನಿಂದ 40 ಸಾವಿರ ರೂಪಾಯಿ ಸ್ಯಾಂಕ್ಷನ್ ಮಾಡಿ ಎಂದು ಇಲ್ಲಿಗೆ ಕಳುಹಿಸಿಕೊಟ್ಟಿದ್ದಾರೆ. ಎರಡು ವರ್ಷ ಆದರೂ ಇಲ್ಲಿಯ ಅಧಿಕಾರಿಗಳು ಯಾವ ಗಮನವನ್ನೂ ತೆಗೆದುಕೊಂಡಿಲ್ಲ. ಹಾಗೇಯೇ ಉಳಿದು ಬಿಟ್ಟಿದೆ.

ಇನ್ನು ಉಪಾಧ್ಯಾಯರನ್ನು ನೇಮಕ ಮಾಡುವ ಪದ್ಧತಿ ಎಲ್ಲರ ಅನುಭವಕ್ಕೆ ಬಂದ ಮಾತಾಗಿದೆ. ಅಭ್ಯರ್ಥಿಗಳು ಮೊದಲನೆಯದು ಪಿ. ಡಬ್ಲ್ಯು. ಡಿ. ಡಿಪಾರ್ಟಮೆಂಟಿಗೆ ಹೋಗುವ ಪ್ರಯತ್ನ; ಆಮೇಲೆ ರೆವಿನ್ಯೂ ಡಿಪಾರ್ಟಮೆಂಟ್ ಹೀಗೆ ಎಲ್ಲಾ ಡಿಪಾರ್ಟಮೆಂಟುಗಳಲ್ಲೂ ರಿಜೆಕ್ಟ್ ಆದಂಥ ಕ್ಯಾಂಡಿಡೇಟ್, ಉಪಯೋಗಕ್ಕೆಬಾರದ ಕ್ಯಾಂಡಿಡೇಟನ್ನು ಎಜುಕೇಷನ್ ಡಿಪಾರ್ಟ್‌ಮೆಂಟನಲ್ಲಿ ನೇಮಕ ಮಾಡುತ್ತಿದ್ದೀರಿ. ಮುಂದಿನ ಪಿ. ಯು. ಸಿ. ಕ್ಲಾಸಿಗೆ ಸೇರಲು ಅನರ್ಹತೆ ಇರತಕ್ಕವರನ್ನು ಎಜುಕೇಷನ್ ಡಿಪಾರ್ಟ್‌ಮೆಂಟಿನಲ್ಲಿ ನೇಮಕ ಮಾಡಿಕೊಳ್ಳುತ್ತಾರೆ. ಅರ್ಹತೆ ಕಡಿಮೆ ಇದ್ದು ಓದಿಸತಕ್ಕ ಶಕ್ತಿ ಇರಲಾರದಂಥ ಮತ್ತು ಗ್ರೇಸ್ ಮಾರ್ಕ್ಸ್‌ನಿಂದ ತೇರ್ಗಡೆ ಹೊಂದಿದ್ದ ಜನರನ್ನು ಮಾತ್ರ ಈ ಉಪಾಧ್ಯಾಯರನ್ನಾಗಿ ನೇಮಕ ಮಾಡಿ ಕಳುಹಿಸುತ್ತಾರೆ. ಆದ್ದರಿಂದ ನಾನು ಸೂಚಿಸುವುದೇನೆಂದರೆ ಫಸ್ಟ್ ಕ್ಲಾಸನಲ್ಲಿ ಪಾಸು ಮಾಡಿರತಕ್ಕ ಅಭ್ಯರ್ಥಿಗಳನ್ನು ಉಪಾಧ್ಯಾಯರನ್ನಾಗಿ ನೇಮಿಸಬೇಕು. ಈಗ ಇರತಕ್ಕ ಸಂಬಳ ಏನು ಇದೆ ಅದನ್ನು ಕ್ಲಾರ್ಕ್‌ಗಳಿಗಿಂತ ಉಪಾಧ್ಯಾಯರುಗಳಿಗೆ ಹೆಚ್ಚು ಮಾಡಿದರೆ ಒಂದು ಇನ್‌ಸೆನ್‌ಟೀವ್ ಬರುತ್ತದೆ. ಆಗ ಬಹಳ ಅರ್ಹತೆ ಇದ್ದಂಥಾ ಅಭ್ಯರ್ಥಿಗಳು ಸಹ ಪಿ. ಡಬ್ಲ್ಯು. ಡಿ. ಮತ್ತು ಬೇರೆ ಡಿಪಾರ್ಟ್‌ಮೆಂಟುಗಳಿಗೆ ಹೋಗುವುದರ ಬದಲಾಗಿ ವಿದ್ಯಾ ಇಲಾಖೆಯ ಉಪಾಧ್ಯಾಯರಾಗಿ ಬರುವುದಕ್ಕೆ ಪ್ರಯತ್ನ ಮಾಡು

ತ್ತಾರೆ. ಇಲ್ಲಿ ಸ್ವಲ್ಪ ವೇತನ ವ್ಯತ್ಯಾಸ ತೋರಿಸದೇ ಇದ್ದರೆ ಯಾರೂ ಈ ವಿದ್ಯಾಖಾತೆ ಕಡೆಗೆ ಗಮನ ಕೊಡುವುದಿಲ್ಲ. ಆದುದರಿಂದ ಸರ್ಕಾರದವರು ಇದಕ್ಕೆ ತೀವ್ರ ಗಮನಕ ಕೊಡಬೇಕು ಎಂದು ಹೇಳುತ್ತೇನೆ.

ರಾಯಚೂರಿನಲ್ಲಿ B. R. B. ಕಾಲೇಜು ಕಾಮರ್ಸ್‌ಗೆ ಬಿಲ್ಡಿಂಗ್ ಬೇಕು. ಲೋನ್ ಕೊಡಿರಿ, ಅಥವಾ ಗ್ರಾಂಟ್ ಕೊಡಿರಿ ಎಂದು ಕೇಳಿದ್ದಾರೆ. ಫೈಲುಗಳು ಎರಡು ವರ್ಷದಿಂದ ಫೈನಾನ್ಸ್ ಡಿಪಾರ್ಟ್‌ಮೆಂಟಿನಿಂದ ಕೊಲಿಗೇಷೆನ್ ಡೈರೆಕ್ಟರ್‌ಗೆ ಹೋಗುತ್ತದೆ. ಮತ್ತೆ ಪುನಃ ವಾಪಸ್ಸು ಹಣ ಕಾಸು ಮಂತ್ರಿಗಳಿಗೆ ಬರುತ್ತದೆ. ಈ ವರ್ಷದ ಬಡ್ಜೆಟ್ಟಿನಲ್ಲಿ ಸಾಲಕ್ಕಾಗಿ ಒಂದು ಲಕ್ಷ ರೂಪಾಯಿ ಮಾತ್ರ ತೋರಿಸಿದ್ದೀರಿ. ಒಂದು ಲಕ್ಷ ಸಹ ಕೊಡುವುದಕ್ಕಾಗುವುದಿಲ್ಲ ಎಂದು ಹೇಳುತ್ತಿದ್ದಾರೆ. ಯಾಕೆಂದರೆ ಅಗಲೇ ಬೇರೆ ಕಾಲೇಜುಗಳಿಗೆ ಕಮಿಟ್‌ಮೆಂಟ್ ಆಗಿದೆಯಂತೆ. ಉದಾಹರಣೆಗೆ ಹೇಳ ಬೇಕಾದರೆ ಕಿತ್ತೂರು ಕಾಲೇಜಿಗೆ ಅರ್ಜಿ ಬಂದ ಕೂಡಲೇ ಸ್ಪೆಷಲ್ ಗ್ರಾಂಟನ್ನು ಕನ್‌ವರ್ಟ್ ಮಾಡಿ ಲೋನ್ ಕೊಟ್ಟಿದ್ದಾರೆ. ಆದರೆ ಈ ಕಾಲೇಜಿಗೆ ಎರಡು ವರ್ಷದಿಂದ ತಮ್ಮಲ್ಲಿ ಈ ಬೇಡಿಕೆ ಇದ್ದರೂ ಸರ್ಕಾರ ಗಮನಿಸಲಾರದೆ ಆಮೇಲೆ ಬಂದಂಥ ಅರ್ಜಿಗೆ ಹಣವನ್ನು ಕೊಟ್ಟಿದ್ದೀರಿ. ಇದರಲ್ಲಿ ರಾಜಕೀಯ ಇದೆ ಎಂದರೆ ಏನೂ ತಪ್ಪಾಗಲಾರದು. ಇನ್ನೂ ಒಂದು ವಿಷಯವನ್ನು ತಮ್ಮ ಗಮನಕ್ಕೆ ತರುತ್ತೇನೆ. ಹೈದ್ರಾಬಾದ್ ಕರ್ನಾಟಕದವರು ವಿದ್ಯಾ ಮಂತ್ರಿಗಳಾಗಿದ್ದಾಗ ಅಲ್ಲಿಗೆ ಬೇಕಾದ ಅಭಿವೃದ್ಧಿ ಕಾರ್ಯಕಲಾಪಗಳನ್ನು ಮಾಡಿದರು ಎಂಬ ನೆಪದಿಂದ ಬಾಂಬೆ ಕರ್ನಾಟಕದವರು ಅವರು ಮಂತ್ರಿಗಳಾಗಿ ಬಂದಮೇಲೆ ಹಿಂದೆ ಇದ್ದ ಉಪಾಧ್ಯಾಯರನ್ನು ಕೆಳಗೆ ಇಳಿಸಿ ಬಾಂಬೆ ಕರ್ನಾಟಕ ದವರಿಗೆ ಬಡ್ತಿ ಕೊಟ್ಟರು. ಈಗ ಇರುವ ಮಂತ್ರಿಗಳು ಬಾಂಬೆ ಹೈದರಾಬಾದ್ ಕರ್ನಾಟಕದೊಳಗೆ ಇರತಕ್ಕ ಎಲ್ಲಾ ಉಪಾಧ್ಯಾಯರುಗಳನ್ನೂ ಕೆಳಗೆ ಇಳಿಸಿ ಮೈಸೂರಿನಲ್ಲಿರುವ ಜನರಿಗೆ ಸಹಾಯ ಮಾಡುತ್ತಾರೆ ಎನ್ನುವ ಭಯ ಇದೆ. ದಯವಿಟ್ಟು ಮಾನ್ಯ ಮಂತ್ರಿಗಳು ಇದನ್ನು ನಿವಾರಿಸಬೇಕು ಎಂದು ಕೇಳಿಕೊಳ್ಳುತ್ತೇನೆ.

ಮೆಡಿಕಲ್ ಮತ್ತು ಇಂಜನಿಯರಿಂಗ್ ಕಾಲೇಜು ಬಗ್ಗೆ ಹೇಳಬೇಕಾದರೆ ಒಂದೇ ಒಂದು ಉದಾಹರಣೆ ಕೊಡುತ್ತೇನೆ. ಹೈದ್ರಾಬಾದ್ ಸರ್ಕಾರದಲ್ಲಿ 1950ಕ್ಕಿಂತ ಮೊದಲು ಜಹಗೀರ್‌ದಾರ್ ಕಾಲೇಜಿನಲ್ಲಿ ಜಮೀನ್‌ದಾರ ಜಹಗೀರದಾರರ ಮಕ್ಕಳು ಓದುವುದಕ್ಕೆ ಮಾತ್ರ ಆಸ್ಪದ ಇತ್ತು. ನಮ್ಮ ಪ್ರಜಾ ಸರ್ಕಾರ ಬಂದನಂತರ, ಪ್ರಜಾತಂತ್ರ ರಾಜ್ಯದೊಳಗೆ ಇಂತಹ ಜನತಾ ಸರ್ಕಾರ ಇರುವ ಕಾಲಕ್ಕೆ ಜಾಗೀರ್‌ದಾರ್, ಜಮೀನದಾರರ ಮಕ್ಕಳು ವ್ಯಾಸಂಗ ಮಾಡತಕ್ಕ ಸ್ಕೂಲು ಇರಕೂಡದು ಎಂದು ನಿರ್ಮೂಲ ಮಾಡಿದರು. ಈ ದಿವಸ ನೀವು ನೋಡಿದರೆ ಪ್ರತಿ ಜಿಲ್ಲೆಯಲ್ಲೂ ಪ್ರತಿ ತಾಲ್ಲೂಕಿನಲ್ಲೂ ಜಾಗೀರದಾರರ ಕಾಲೇಜಗಳಾಗಿವೆ. ಅದರಲ್ಲಿ ಜಾಗೀರ್‌ದಾರ ಮತ್ತು ಜಮೀನ್ ದಾರರ ಮಕ್ಕಳಿಗೆ ಸ್ಥಾನ ಇದೆಯೇ ಹೊರತು ಬಡ ಮಕ್ಕಳಿಗೆ ಸ್ಥಾನ ಇಲ್ಲ ಎಂದು ಹೇಳಿದರೆ ತಪ್ಪಾಗ ಲಾರದು. ಕ್ಯಾಪಿಟೇಷನ್ ಫೀಸು ಕೊಡತಕ್ಕ ಶಕ್ತಿ, ಮತ್ತು ಈಗ ಇರತಕ್ಕ ಫೀಸು ಕೊಡಬೇಕಾದ ಶಕ್ತಿ ಇರತಕ್ಕದ್ದು ಬರೀ ಜಾಗೀರ್‌ದಾರ್ ಅಥವಾ ಜಮೀನ್‌ದಾರರ ಮಕ್ಕಳಿಗೆ ವಿನಃ ಬೇರೆ ಯಾರಿಗೂ ಇಲ್ಲ. ಸರ್ಕಾರದವರಿಗೆ ಒಂದು ವಿಶೇಷ ವಿಷಯ ಸೂಚಿಸಬಯಸುತ್ತೇನೆ. ಅದೇನೆಂದರೆ, ವಿದ್ಯಾ ಮಂತ್ರಿಗಳು ಅಥವಾ ಮುಖ್ಯ ಮಂತ್ರಿಗಳು ಆಂಧ್ರ ಪ್ರದೇಶಕ್ಕೆ ಹೋಗಿ ನೋಡಿಕೊಂಡು ಬಂದರೆ ಅವರಿಗೆ ಪಾಠ ಕಲಿಯುವುದಕ್ಕೆ ಅವಕಾಶವಾಗುತ್ತದೆ. ಪ್ರತಿಯೊಂದು ಕಾಲೇಜಿನಲ್ಲಿ ಆಂಧ್ರ ಜನಕ್ಕೆ ಮಾತ್ರ ಸ್ಥಾನ ಕೊಡುತ್ತಾರೆ. ಅಲ್ಲಿ ಮೆಡಿಕಲ್ ಕಾಲೇಜು ಆಕ್ಟ್ ಪಾಸು ಮಾಡಿದ್ದಾರೆ. ಅದರಂತೆ ತೆಲಂಗಾಣದ ಹುಡುಗರಿಗೆ ಆಂಧ್ರದಲ್ಲಿ ಸೀಟು ಸಿಕ್ಕುವುದಿಲ್ಲ, ಆಂಧ್ರದ ಹುಡುಗರಿಗೆ ತೆಲಂಗಾಣ ದಲ್ಲಿ ಸಿಕ್ಕುವುದಿಲ್ಲ. ಅವರಿಗೆ ಇಷ್ಟು ಪರ್ಸೆಂಟೇಜು ಆಫ್ ಮಾರ್ಕ್ಸ್ ಎಂದು ಇದೆ. ಡಿಸ್ಟ್ರಿಕ್ಟ್‌ವೈಸ್ ಪರ್ಸೆಂಟೇಜ್ ಆಫ್ ಸೀಟ್ಸ್, ಮತ್ತು ಡಿಸ್ಟ್ರಿಕ್ಟ್‌ವೈಸ್ ರೆಪ್ರೆಸೆಂಟೇಷನ್ ಹೀಗೆ ಕೊಡಬೇಕು ಎಂದು ಮಾಡಿದ್ದಾರೆ. ಹುಡುಗರಿಗೆ ಒಂದು ಡಿಸ್ಟ್ರಿಕ್ಟ್‌ನಲ್ಲಿ ಸಿಕ್ಕದೇಹೋದರೆ ಡಿಸ್ಟ್ರಿಕ್ಟ್ ಕಲೆಕ್ಟರ್ ಪರ್ಮಿಷನ್ ಕೊಟ್ಟರೆ ಬೇರೆ ಡಿಸ್ಟ್ರಿಕ್ಟ್‌ನವರಿಗೆ ಸೀಟು ಕೊಡುತ್ತಾರೆ. ಆಂಧ್ರದರಲ್ಲಿ ಸ್ಥಾನ ಸಿಕ್ಕಲಾರದೆ ಗುಲ್ಬರ್ಗ ದಾವಣಗೆರೆ ಇರತಕ್ಕ ಕಾಲೇಜುಗಳಿಗೆ ದುಡ್ಡು ಕೊಟ್ಟು ಆಂಧ್ರದವರೂ ನಮ್ಮಲ್ಲಿ ಅನು ಕೂಲ ಪಡೆಯುತ್ತಿದ್ದಾರೆ. ಹೀಗೆ ಕೇರಳ, ಮದ್ರಾಸ್ ಅಥವಾ ಹೈದರಾಬಾದ್ ಜನತೆ ನಮ್ಮಲ್ಲಿ ಪ್ರಯೋಜನ ಪಡೆಯುತ್ತಿದ್ದಾರೆ. ಆದುದರಿಂದ ಸರ್ಕಾರದವರು ಇದನ್ನು ಗಮನಿಸಿ ಮೈಸೂರಿನ ಜನತೆಗೆ ಸಹಾಯ ಆಗುವ ರೀತಿಯಲ್ಲಿ ಒಂದು ಆಕ್ಟ್ ತರಬೇಕು. ಹಿಂದುಳಿದ ಹೈದ್ರಾಬಾದ್, ಬಾಂಬೆ ಕರ್ನಾಟಕದವರಿಗೆ ಸರಿಯಾದ ರೆಪ್ರೆಸೆಂಟೇಷನ್ ಅಯಾ ಕಾಲೇಜುಗಳಲ್ಲಿ ಕೊಡಬೇಕು ಎಂದು ತಮ್ಮನ್ನು ಕೇಳಿಕೊಳ್ಳುತ್ತೇನೆ. ಮತ್ತು ಅಧ್ಯಕ್ಷರು ನನಗೆ ನಾಲ್ಕು ಮಾತುಗಳನ್ನಾಡಲು ಇಷ್ಟು ಸಮಯ ಕೊಟ್ಟಿದ್ದಕ್ಕಾಗಿ ಅವರಿಗೆ ವಂದನೆಯನ್ನು ಅರ್ಪಿಸಿ ನನ್ನ ಮಾತನ್ನು ಮುಗಿಸುತ್ತೇನೆ.

BUSINESS OF THE HOUSE

Mr. SPEAKER.--I looked into the point referred to Sri Siddaveerappa, unless the Members tell me, their representation goes in a wrong angle. I gathered the facts. This paper was laid on the Table of the House on the 14th and the assurance was also given by the Hon'ble Minister for Finance that copies would be circulated. It may be that the copies have been received only on the 14th or later. I have no idea.

Sri H. SIDDAVEERAPPA.—In today's papers probably it was also sent. I got one copy.

Mr. SPEAKER.—After all, these trifles are not going to change the merit of the discussion. This was laid on the 14th. We cannot say it is laid today. When it was mentioned that it was laid today and all that, I asked what is it the Hon'ble Member is referring to. I am asking the Hon'ble Minister to look into it and make some positive statement immediately after tea break, today about 3-15 or 3-30 Till then, the debate will go on so that members may participate. On page 8 Government have given particular items of economies they are going to effect, which practically means these amounts will not be spent. Whether they are included or not is a matter of detail and I do not know about it. The position has to be clarified ; if it is included in the demand. Then the effect of this Government Order may be that it stands reduced because Government have told us in advance that they are not going to spend it. How far this should be sanctioned by the House is a point for consideration. Till we get all these facts, it will not be proper for us to go on debating with insufficient data Therefore two points arise ; whether these economy amounts which have been mentioned here relating to the Education Department are included in the Demand as presented in the Budget ; if so, what is the effect of the Government order saying that these amounts are not going to be spent. So kindly have it considered and make a statement at 3-30 P.M. today.

And may I also know what time the minister will require for reply ?

Sri K. V. SHANKARA GOWDA (Minister for Education).—One hour.

Mr. SPEAKER.—Then the debate will go on till 4-45. P.M.

ಶ್ರೀ ಎನ್. ಹುಚ್ಚಮಾಸ್ತಿಗೌಡ (ಹುಲಿಯೂರು ದುರ್ಗ).—ಬಹಳ ಜನರು ಇಂದು ಮಾತನಾಡ ಬೇಕಾಗಿರುವುದರಿಂದ ಸಾಧ್ಯವಾದರೆ 7 ಗಂಟೆಯುವರೆಗೂ ಕುಳಿತುಕೊಂಡರೆ ಒಳ್ಳೆಯದು.

Mr. SPEAKER.—These things must be arranged by Whips.

BUDGET ESTIMATES FOR 1967-68—DEMANDS FOR GRANTS.

DEMAND NOS. 17 AND 37

(Debate contd.)

ಶ್ರೀ ಡಿ. ಎಸ್. ಗೌಡ (ದೇವನಹಳ್ಳಿ).—ಮಾನ್ಯ ಸಭಾಪತಿಗಳೇ. ವಿದ್ಯಾ ಮಂತ್ರಿಗಳು ಮಂಡಿಸಿರುವ ಬೇಡಿಕೆಗಳನ್ನು ಅನುಮೋದಿಸುತ್ತಾ ಕೆಲವು ಸಲಹೆಗಳನ್ನು ಕೊಡಲಿಚ್ಛಿಸುತ್ತೇನೆ. ನಮ್ಮ ಸರಕಾರ ಪ್ರಾಥಮಿಕ ಮತ್ತು ಮಾಧ್ಯಮಿಕ ಶಿಕ್ಷಣದ ಬಗ್ಗೆ ವಿಶೇಷ ಗಮನ ಕೊಡುತ್ತಿದೆ. ಸ್ವಾತಂತ್ರ್ಯ ಪೂರ್ವದಲ್ಲಿ ನಮ್ಮ ದೇಶದಲ್ಲಿ ಯಾವ ತೆರನಾದ ವಿದ್ಯಾಭ್ಯಾಸವಿತ್ತು, ಭಾರತೀಯ ಸಂಸ್ಕೃತಿ ನಾಗರೀಕತೆ ಹೇಗಿದೆ ಎಂಬುದನ್ನು ನೋಡಿ ನಮ್ಮ ದೇಶದ ಸ್ವಾಭಾವಿಕ ಸಮಸ್ಯೆಗಳಿಗನುಗುಣವಾಗಿ ನಮ್ಮ ಕಾಲಿನ ಮೇಲೆ ನಾವು ನಿಂತುಕೊಳ್ಳುವುದಕ್ಕನುಕೂಲವಾಗುವಂಥ ಸ್ವಾವಲಂಬನೆಗೆ ಅವಕಾಶವಾಗುವಂಥ ವಿದ್ಯಾಭ್ಯಾಸವನ್ನು ಕೊಟ್ಟು ಪ್ರಗತಿಯ ಕಡೆಗೆ ನಾವು ಹೆಜ್ಜೆಯನ್ನಿಡಬೇಕಾಗಿದೆ. ನಮ್ಮ ಸರಕಾರ, ವಿದ್ಯಾ ಇಲಾಖೆಯಲ್ಲಿರುವ ಪ್ರಾಧ್ಯಾಪಕರು ಮತ್ತು ಪರಿಣತರು ಚೆನ್ನಾಗಿ ಯೋಚನೆಮಾಡಿ ನಮ್ಮ ದೇಶದ ವಿದ್ಯಾ ಪದ್ಧತಿಯಲ್ಲಿರುವ ನ್ಯೂನತೆಗಳನ್ನು ಕಂಡುಹಿಡಿದು ನಮ್ಮ ದೇಶಕ್ಕನುಗುಣವಾದ ನಮ್ಮ ದೇಶದ ಸಂಸ್ಕೃತಿ, ನಾಗರೀಕತೆ, ಸರ್ವಧರ್ಮ ಸಮಾನತ್ವ ಇವೆಲ್ಲಕ್ಕೂ ಸಹಾಯಕವಾಗುವ ರಾಷ್ಟ್ರೀಯ ಐಕ್ಯತೆಗೆ ಸಾಧಕವಾಗುವ ಜನತೆಯನ್ನು ಒಂದುಗೂಡಿಸುವುದಕ್ಕೆ ಸಹಕಾರಿಯಾಗುವ ಹಾಗೆ ವಿದ್ಯಾಭ್ಯಾಸ ಕ್ರಮವನ್ನು ರೂಪಿಸಬೇಕಾಗಿದೆ. ಈ ದೆಶೆಯಲ್ಲಿ ಸರಕಾರ ಅನೇಕ ಕ್ರಮಗಳನ್ನು ಕೈಕೊಳ್ಳುತ್ತಿದೆ, ಇನ್ನೂ ಹೆಚ್ಚಿನ ರೀತಿಯಲ್ಲಿ ತೀವ್ರ ಕ್ರಮ ತೆಗೆದುಕೊಂಡು ಆದಷ್ಟು ಜಾಗ್ರತೆಯಾಗಿ ನಮ್ಮ ದೇಶಕ್ಕನುಗುಣವಾದ ವಿದ್ಯಾಭ್ಯಾಸ ಕ್ರಮವನ್ನು ಜಾರಿಗೆ ತರಬೇಕೆಂದು ಆಶಿಸುತ್ತೇನೆ. ಇಂದು ಶಿಕ್ಷಣವೇತ್ತರು ಅನೇಕ ಸಲಹೆಗಳನ್ನು ನೀಡಿದ್ದಾರೆ. ವಿದ್ಯಾ ಸಚಿವರು ಅವನ್ನು ಗಮನಿಸಿ ಇನ್ನೂ ಅನೇಕ ಪರಿಣತರಿಂದ ಸೂಕ್ತ ಸಲಹೆಗಳನ್ನು ಪಡೆದು ತೀವ್ರವಾಗಿ ನಮ್ಮ ದೇಶದ ಪರಿಸ್ಥಿತಿಗನುಗುಣವಾದ ವಿದ್ಯಾಭ್ಯಾಸ ಕ್ರಮವನ್ನು ಜಾರಿಗೆ ತರಬೇಕಾದ್ದು ಅಗತ್ಯವಾಗಿದೆ. ಹಾಗೆ ಮಾಡಿ ವಿದ್ಯಾರ್ಥಿಗಳ ಪ್ರತಿಭೆಗೆ ಅವಕಾಶವಾಗುವಂತೆ ಮಾಡಬೇಕು. ಈಗಿನ ಪರೀಕ್ಷೆ ಪದ್ಧತಿ ಜೂಟಾಟದಂತಿದೆ, ಕೆಲವರಿಗೆ ತೊಂದರೆಯಾಗುತ್ತಿದೆ. ಇದನ್ನು ಗಮನಿಸಿ ಪ್ರಾಥಮಿಕ, ಸೆಕೆಂಡರಿ ಮತ್ತು ಕಾಲೇಜು ಮಟ್ಟಗಳಲ್ಲಿ ಏನು ಮಾರ್ಪಾಡು ಮಾಡಬೇಕೆಂಬುದನ್ನು ವಿದ್ಯಾ ಪರಿಣತರು ಚೆನ್ನಾಗಿ ಯೋಚನೆ ಮಾಡಿ ಒಂದು ಹೊಸ ಪದ್ಧತಿಯನ್ನು ಯುಕ್ತ ರೀತಿಯಲ್ಲಿ ಜಾರಿಗೆ ತರಬೇಕೆಂದು ನಾನು ಆಶಿಸುತ್ತೇನೆ. ನಮ್ಮ ದೇಶದ ವಿದ್ಯಾವಂತರಲ್ಲಿ ಇಂದು ಪಾಶ್ಚಾತ್ಯ ದೇಶಗಳಿಗೆ ಹೋಗಿ ಡಾಕ್ಟರೇಟ್ ಪದವಿ, ಪಿ ಎಚ್ ಡಿ ಮುಂತಾದುವುಗಳನ್ನು ಪಡೆದು ಬರಬೇಕೆಂಬ ವ್ಯಾಮೋಹ ಹೆಚ್ಚಾಗಿದೆ. ಅನೇಕರು ಇಂಜಿನಿಯರುಗಳು, ಡಾಕ್ಟರುಗಳು, ವಿಜ್ಞಾನಿಗಳು ಆಗುತ್ತಿದ್ದಾರೆ. ಅವರು ಹೆಚ್ಚು ಸಂಶೋಧನೆ ಮಾಡಬೇಕು, ಪೂರ್ವದ ಗ್ರಂಥಗಳ ಮೂಲಕ ಸಂಶೋಧನೆ ಮಾಡಿ ತನ್ಮೂಲಕ ದೇಶಕ್ಕೆ ಅನುಕೂಲವಾಗುವಂತೆ ಮಾಡಬೇಕು. ಇದಕ್ಕೆ ವಿದ್ಯಾವಂತರು ಹೆಚ್ಚಿನ ಪ್ರಾಧಾನ್ಯತೆ ಕೊಡಬೇಕು. ಸಾಕಷ್ಟು ಸಂಶೋಧನೆ ಮಾಡಿದವರಿಗೆ ಡಾಕ್ಟರೇಟ್, ಪಿ ಎಚ್ ಡಿ ಕೊಡುವಂತೆ ಪದ್ಮಶ್ರೀ ಮುಂತಾದ ಪ್ರಶಸ್ತಿಗಳನ್ನು ಕೊಡಲಿ ಎಂದು ಆಶಿಸುತ್ತೇನೆ.

ಪ್ರಾಥಮಿಕ, ಸೆಕೆಂಡರಿ ಮತ್ತು ವಿಶ್ವವಿದ್ಯಾನಿಲಯಗಳ ಮಟ್ಟದಲ್ಲಿ ಯಾವ ಪುಸ್ತಕಗಳನ್ನಿಟ್ಟರೆ ರಾಷ್ಟ್ರೀಯ ಭಾವನೆ, ರಾಷ್ಟ್ರೀಯ ಐಕ್ಯತೆ ಮುಂತಾದುವುಗಳಿಗೆ ಸಹಾಯವಾಗುತ್ತದೆ ಎಂಬುದನ್ನು ಯೋಚಿಸಿ ಅದಕ್ಕನುಗುಣವಾದ ಪಠ್ಯಪುಸ್ತಕಗಳನ್ನಿಡಬೇಕು. ಇದಕ್ಕೆ ಪ್ರಾಥಮಿಕ ಮಟ್ಟದಿಂದ ಹಿಡಿದು ವಿಶ್ವವಿದ್ಯಾಲಯದ ಮಟ್ಟದವರೆಗೂ ಅಷ್ಟಾಗಿ ಗಮನ ಕೊಟ್ಟಿರುವಂತೆ ಕಾಣುವುದಿಲ್ಲ. ಇದನ್ನು ಗಮನಿಸಿ ಉತ್ತಮವಾದ ಪಠಪುಸ್ತಕಗಳನ್ನು ಆಯಾ ತರಗತಿಗೆ ತಕ್ಕಂತೆ ಗೊತ್ತುಮಾಡಬೇಕು.

ಇನ್ನು ಎಸ್. ಎಸ್. ಎಲ್. ಸಿ. ಆದ ವಿದ್ಯಾರ್ಥಿಗಳನ್ನು ಕಾಲೇಜುಗಳಿಗೆ ಸೇರಿಸಬೇಕಾದರೆ ಶೇಕಡ 40 ಅಂಕಗಳಿಗಿಂತ ಕಡಮೆ ಬಂದಿರಬಾರದೆಂದು ನಿಯಮ ಮಾಡಿದ್ದಾರೆ, ಆದರಂತೆ ಅನೇಕ ವಿದ್ಯಾರ್ಥಿಗಳಿಗೆ ಕಾಲೇಜುಗಳಿಗೆ ಪ್ರವೇಶಾವಕಾಶವಿಲ್ಲ. ಸರಕಾರ ಈ ನಿರ್ಧಾರನನ್ನು ತೀವ್ರವಾಗಿ ಬದಲಾಯಿಸಬೇಕು. ಕಾರಣ ಇದರಿಂದ ಗ್ರಾಮಾಂತರ ಪ್ರದೇಶಗಳ ವಿದ್ಯಾರ್ಥಿಗಳಿಗೆ ಇದರಿಂದ ತೊಂದರೆಯಾಗುತ್ತಿದೆ. ಅಲ್ಲಿ ಬೇಕಾದ ಸೌಲಭ್ಯಗಳಿಲ್ಲದೆ ಗ್ರಾಮಾಂತರದ ವಿದ್ಯಾರ್ಥಿಗಳು ಶೇಕಡ 40 ಕ್ಕಿಂತ ಹೆಚ್ಚು ಅಂಕಗಳನ್ನು ಪಡೆಯಲು ಅವಕಾಶವಾಗುತ್ತಿಲ್ಲ. ಅದೇ ನ್ಯಾಷನಲ್ ಕಾಲೇಜು, ವಿಜಯ ಕಾಲೇಜು, ಸ್ಯೆಂಟ್ ಜೋಸಫ್ ಕಾಲೇಜು ಮುಂತಾದ ಕಡೆ ಓದಿದವರಿಗೆ ಶೇಕಡ 60

(ಶ್ರೀ ಡಿ. ಎಸ್. ಗೌಡ)

ಅಂಕಗಳು ಬರುತ್ತವೆ. ಈ ಅನ್ಯಾಯವನ್ನು ಹೇಗಾದರೂ ಸರಿಪಡಿಸಬೇಕು. ಇದಕ್ಕಾಗಿ ಸರಕಾರ ಹೆಚ್ಚು ಕಾಲೇಜುಗಳನ್ನು ತೆರೆಯಬೇಕು, ಎಲ್ಲಾ ತಾಲ್ಲೂಕು ಕೇಂದ್ರಗಳಲ್ಲಿರುವ ಹೈಸ್ಕೂಲುಗಳಲ್ಲಿ ಪಿ.ಯು.ಸಿ. ತರಗತಿಯನ್ನು ತೆರೆದು ಅಲ್ಲಿಗೆ ಅರ್ಹರಾದ ಎಂ.ಎ., ಎಂ.ಎಸ್.ಸಿ. ಆದ ಲೆಕ್ಚರರುಗಳನ್ನು ಹಾಕಿ ವಿದ್ಯಾಭ್ಯಾಸವನ್ನು ಮುಂದುವರೆಸಿದರೆ ಈ ಸಮಸ್ಯೆ ಪರಿಹಾರವಾಗುತ್ತದೆ.

ಸರಕಾರ ಹೆಚ್ಚು ಗಮನಕೊಡಬೇಕಾದ ಇನ್ನೊಂದು ಸಮಸ್ಯೆಯಿದೆ. ಗ್ರಾಮಾಂತರ ಪ್ರದೇಶಗಳಲ್ಲಿ ವಿದ್ಯಾಭ್ಯಾಸ ಹೆಚ್ಚಾಗಿ ಹರಡಲು ಸಾಕಷ್ಟು ಸೌಕರ್ಯ ಕೊಡುತ್ತಿದೆ. ಆದರೆ ಗ್ರಾಮಾಂತರಗಳಲ್ಲಿ ಸರಿಯಾದ ಶಾಲಾ ಕಟ್ಟಡವಿಲ್ಲ, ಚಾವಡಿಗಳಲ್ಲಿ, ದೇವಸ್ಥಾನಗಳಲ್ಲಿ ಮರಗಳ ಕೆಳಗೆ ಶಾಲೆಗಳು ನಡೆಯುತ್ತಿವೆ. ನಾವು ಅನೇಕ ಯೋಜನೆಗಳಿಗೆ ಕೋಟ್ಯಾಂತರ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದೇವೆ. ಹಾಗಿರುವಾಗ ಅತ್ಯಾವಶ್ಯಕವಾಗಿ ಗ್ರಾಮಾಂತರ ಪ್ರದೇಶಗಳಲ್ಲಿ ಪ್ರತಿ ಊರಿನಲ್ಲೂ ಒಂದು ಶಾಲಾ ಕಟ್ಟಡವನ್ನು ಸರಕಾರವೇ ಕಟ್ಟಿಸಿಕೊಡಬೇಕು ಮತ್ತು ಸರಿಯಾದ ಉಪಾಧ್ಯಾಯರನ್ನು ಹಾಕಬೇಕು. ಜೊತೆಗೆ ಕೆಲವು ಗ್ರಾಮಗಳಲ್ಲಿ ಉಪಾಧ್ಯಾಯರುಗಳಿಗೆ ಮನೆಗಳಿಲ್ಲದೆ ಬೇರೆ ದೂರದ ಗ್ರಾಮಗಳಲ್ಲಿ ವಾಸಮಾಡಿಕೊಂಡಿದ್ದು ಅಲ್ಲಿಂದ ಶಾಲೆಗೆ ಬಂದು ಹೋಗಬೇಕಾಗಿರುವುದರಿಂದ ಅನಾನುಕೂಲವಾಗುತ್ತಿದೆ. ಇದನ್ನು ಗಮನಿಸಿ ಸರಕಾರ ಶಾಲೆಗೆ ಸಮೀಪದಲ್ಲೇ ಉಪಾಧ್ಯಾಯರಿಗೆ ಸೌಕರ್ಯ ಕಲ್ಪಿಸಿಕೊಡಬೇಕು. ನಮ್ಮ ವಿದ್ಯಾಭ್ಯಾಸದ ಆಡಳಿತದಲ್ಲಿ ಅನೇಕ ಬದಲಾವಣೆಗಳು ಆಗಬೇಕಾಗಿದೆ ಎಂದು ಕೊಠಾರಿ ಕಮಿಷನ್ನಿನವರು ಮಾಡಿರುವ ಸಲಹೆಗಳನ್ನು ಸರಕಾರ ಜಾರಿಗೆ ತರಬೇಕೆಂದು ಪ್ರಾರ್ಥಿಸಿಕೊಳ್ಳುತ್ತೇನೆ. ಇಂದು ಬಿ.ಇ., ಎಂ.ಬಿ.ಬಿ.ಎಸ್, ಮಾಡಿದವರಿಗೆ ಸಮಾಜದಲ್ಲಿ ಬಹಳ ಉನ್ನತಮಟ್ಟದ ಸ್ಥಾನ ದೊರೆಯುತ್ತದೆ ಎಂದು, ಇತರೇ ಪದವಿಗಳು ಬಹಳ ಕೆಳಮಟ್ಟಕ್ಕೆ ಇಳಿಯುತ್ತ ಇದೆ ಎನ್ನುವ ಭಾವನೆ ಇದೆ. ಈ ಭಾವನೆಯನ್ನು ಹೋಗಲಾಡಿಸಬೇಕಾದರೆ ವ್ಯವಸಾಯ ಕ್ಷೇತ್ರದಲ್ಲಾಗಲೀ, ಕೈಗಾರಿಕಾ ಕ್ಷೇತ್ರದಲ್ಲಾಗಲೀ ಹಾಗೂ ಇನ್ನಿತರ ಕ್ಷೇತ್ರಗಳಲ್ಲಿ ಸಣ್ಣ ಸಣ್ಣ ಕಡಿಮೆ ಕಾಲಾವಕಾಶವಿರುವಂತಹ ಟ್ರೈನಿಂಗು ಕೋರ್ಸುಗಳನ್ನು ನಮ್ಮ ಸರಕಾರದವರು ತೆರೆಯಬೇಕು. ಈ ರೀತಿ ಮಾಡುವುದರಿಂದ ಸ್ವಾವಲಂಬನೆ ಮಾಡಿದಂತಾಗುತ್ತದೆ. ನಮಗೆ ಸರಕಾರದಿಂದರೇ ನೌಕರಿ ದೊರೆಯಬೇಕೆನ್ನುವ ಭಾವನೆ ಹೋಗಬೇಕು ಮತ್ತು ಸರಕಾರದ ಸೇವಕರಾಗಿ ಇರಬೇಕು ಎನ್ನುವುದು ಮಾಯವಾಗಬೇಕು ಮತ್ತು ಸ್ವಾವಲಂಬನೆಯಿಂದ ಜನಗಳು ತಮ್ಮ ಕಾಲಿನ ಮೇಲೆ ನಿಂತು ಅವರ ಜೀವನವನ್ನು ನಡೆಸಬೇಕು ಎನ್ನುವ ಭಾವನೆ ಜನರಲ್ಲಿ ಮೂಡಬೇಕು. ಇದಕ್ಕಾಗಿ ನಮ್ಮ ಸರಕಾರದವರು ವ್ಯವಸಾಯ ಕ್ಷೇತ್ರದಲ್ಲಾಗಲೀ ಕೈಗಾರಿಕಾ ಕ್ಷೇತ್ರದಲ್ಲಾಗಲೀ ಹೆಚ್ಚು ಹೆಚ್ಚಾಗಿ ಟ್ರೇನಿಂಗು ಸ್ಕೂಲುಗಳನ್ನು ತೆರೆದು ಜನಗಳಿಗೆ ತರಬೇತಿಗೆ ಅವಕಾಶ ಮಾಡಿಕೊಡಬೇಕೆಂದು ಪ್ರಾರ್ಥಿಸಿಕೊಳ್ಳುತ್ತೇನೆ.

ಇಂದು ನಮ್ಮ ವಿದ್ಯಾರ್ಥಿಗಳಲ್ಲಿ ಹೆಚ್ಚಿನ ನೈತಿಕ ಶಿಸ್ತು ಮತ್ತು ದೈಹಿಕ ಶಿಸ್ತು ಇಲ್ಲ. ಇದರತ್ತ ಸೂಕ್ತವಾದ ಕಾರ್ಯಕ್ರಮಗಳನ್ನು ಮಾಡಲು ಅನುಕೂಲವಾಗುವಂತೆ ಈಗ ಇರುವ ಬೋಧನಾ ಕ್ರಮಗಳನ್ನು ಮಾರ್ಪಾಡು ಮಾಡಬೇಕು. ಹೀಗೆ ಮಾಡಲು ಪ್ರಾಥಮಿಕ ಶಿಕ್ಷಣದಿಂದಲೇ ಸರಿಯಾದ ಸಿಸ್ತು, ಸಂಯಮ ಇವುಗಳು ನಿಜವಾಗಿ ಮೂಡುವಂತೆ ಮಾಡಲು ನುರಿತ ಉಪಾಧ್ಯಾಯರುಗಳು ಇರಬೇಕು. ಇದೇ ಸಮಾಜಕ್ಕೆ ಒಂದು ಉತ್ತಮವಾದ ಬುನಾದಿಯಂತೆ ನಿಲ್ಲಲು ಮಾಡಬೇಕಾದ ಕ್ರಮ ಮತ್ತು ನಮ್ಮ ಜನಗಳಲ್ಲಿ ಉತ್ತಮವಾದ ಮಟ್ಟ ನಿರ್ಮಿಸಲು ಜನಜಾಗ್ರತಿಯನ್ನುಂಟು ಮಾಡಲು ಒಳ್ಳೆಯ ವಿದ್ಯಾವಂತರನ್ನಾಗಿ ಮಾಡತಕ್ಕ ಉಪಾಧ್ಯಾಯರುಗಳಿಗೆ ಈ ದೇಶದಲ್ಲಿ ಉನ್ನತ ಸ್ಥಾನ ಸಿಗಬೇಕು. ಮತ್ತೊಂದು ನನ್ನ ಮನವರಿಕೆ ಇದೆ. ಅದು ಪಿ.ಯು.ಸಿ. ಮಟ್ಟದಿಂದಲೇ ಎನ್.ಸಿ.ಸಿ. ಟ್ರೇನಿಂಗನ್ನು ಕಡ್ಡಾಯವಾಗಿರುವಂತೆ ಮಾಡಬೇಕು. ಇದರಿಂದ ನಮ್ಮ ವಿದ್ಯಾರ್ಥಿಗಳಲ್ಲಿ ನೈತಿಕ ಮಟ್ಟ ಹಾಗೂ ದೈಹಿಕ ಮಟ್ಟ ಚೆನ್ನಾಗಿರಲು ಅವಕಾಶವಾಗುತ್ತದೆ. ಈಗ ವಿದ್ಯಾರ್ಥಿಗಳಲ್ಲಿರುವ ಶಿಸ್ತು ಹಾಗೂ ಮಟ್ಟ ಕಡಿಮೆಯಾಗಿದೆ ಎನ್ನುವ ಭಾವನೆ ಇದೆ. ಇದಕ್ಕಾಗಿ ಎನ್. ಸಿ. ಸಿ. ಟ್ರೇನಿಂಗ್‌ನ್ನು ಕಡ್ಡಾಯವಾಗಿ ಮಾಡಬೇಕೆಂದು ಸರಕಾರದಲ್ಲಿ ಪ್ರಾರ್ಥಿಸಿಕೊಳ್ಳುತ್ತೇನೆ.

ಶ್ರೀ ಸಿದ್ದಯ್ಯ ಕಾಶೀಮಠ.—ಎನ್.ಸಿ.ಸಿ. ಕಡ್ಡಾಯ ಮಾಡಬೇಕೆಂದು ತಾವು ಹೇಳುವಂತೆ ಮಾಡಲು ಸರಕಾರ ಈಗ ಇಟ್ಟಿರುವ ಗ್ರ್ಯಾಂಟೇ ಬಹಳ ಕಡಿಮೆ ಇದೆ ಎನ್ನುವುದನ್ನು ತಾವು ಗಮನಿಸಿದ್ದೀರಾ? ಹೀಗಾದರೆ ಕಡ್ಡಾಯವಾಗಿ ಎನ್.ಸಿ.ಸಿ. ಶಿಕ್ಷಣ ಕೊಡಲು ಹೇಗೆ ಸಾಧ್ಯ?

ಶ್ರೀ ಡಿ. ಎಸ್. ಗೌಡ.—ನಾನು ಇರುವ ಕ್ಷೇತ್ರ ದೇವನಹಳ್ಳಿ. ನಮ್ಮ ಈ ದೇವನಹಳ್ಳಿ ಕ್ಷೇತ್ರದಲ್ಲಿ ಹಿಂದೆ ಟಿಪ್ಪುಸುಲ್ತಾನರು ವೈಭವದಿಂದ ಆಳಿದ ಸ್ಥಳ ಮತ್ತು ಮೈಸೂರು ಹುಲಿ ಎಂದು ಹೆಸ

ರಾಗಿದ್ದ ಟಿಪ್ಪುಸುಲ್ತಾನರಿಗೆ ಇಲ್ಲಿ ಯಾವ ಸ್ಮಾರಕವೂ ಇಲ್ಲ. ಇದಕ್ಕಾಗಿ ಟಿಪ್ಪುಸುಲ್ತಾನರ ಹೆಸರಿನಲ್ಲಿ ಒಂದು ಸೂಕ್ತವಾದ ಸ್ಮಾರಕವನ್ನು ಸ್ಥಾಪಿಸಬೇಕೆಂದು ಸರಕಾರಕ್ಕೆ ಸಲಹೆ ಮಾಡುತ್ತೇನೆ. ಇಂತಹ ಸ್ಮಾರಕವನ್ನು ಸ್ಥಾಪಿಸಲು ಇಲ್ಲಿ ಎಲ್ಲ ವಿಧವಾದ ಸೌಕರ್ಯಗಳೂ ಸ್ವಾಭಾವಿಕವಾಗಿ ಸಿಗಲು ಅನುಕೂಲಗಳು ಇವೆ. ಆದುದರಿಂದ ಇಂತಹ ಒಂದು ಸ್ಮಾರಕವನ್ನು ಇಲ್ಲಿ ಸ್ಥಾಪಿಸಬೇಕೆಂದು ಮಾನ್ಯ ಮುಖ್ಯ ಮಂತ್ರಿಗಳಲ್ಲೂ ಹಾಗೂ ವಿದ್ಯಾ ಮಂತ್ರಿಗಳಲ್ಲೂ ಪ್ರಾರ್ಥಿಸುತ್ತೇನೆ.

ಇಷ್ಟು ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರನ್ನು ವಂದಿಸಿ ನನ್ನ ಮಾತುಗಳನ್ನು ಮುಕ್ತಾಯ ಮಾಡುತ್ತೇನೆ.

† ಶ್ರೀ ಎಸ್. ಎಸ್. ಶೆಟ್ಟರ್ (ಹುಬ್ಬಳ್ಳಿ).—ಮಾನ್ಯ ಅಧ್ಯಕ್ಷರೇ, ಮೈಸೂರು ಕಂಪಲ್ಸರಿ ಪ್ರೈಮರಿ ಎಜುಕೇಷನ್ ಆಕ್ಟ್ 1960, ಇದು ಜಾರಿಯಲ್ಲಿ ಬಂದ ಮೇಲೆ ಮೊದಲು ಇದ್ದಂತಹ ಶಿಕ್ಷಣ ಕ್ಷೇತ್ರಗಳಲ್ಲಿ ಬದಲಾವಣೆಗಳಾದವು. ಬೊಂಬಾಯಿ ಏರಿಯಾದಲ್ಲಿ ಇರತಕ್ಕ ಕಾನೂನು ಎಂದರೆ ಬಾಂಬೆ ಪ್ರೈಮರಿ ಎಜುಕೇಷನ್ ಆಕ್ಟ್‌ನಲ್ಲಿರುವ ಕಾಲಂ ನಂಬರು 52 ಹಾಗೂ ಅದರ ವಿಭಾಗದ ನಂಬರು (6) ಇವುಗಳನ್ನು ಮಾತ್ರ ಬದಲಾಯಿಸಿ ಉಳಿದವುಗಳನ್ನು ಹಾಗೇ ಇಟ್ಟರು ಮತ್ತು ಮೈಸೂರಿನಲ್ಲಿ ಮೊದಲಿಗೇ ಯಾವ ಕಾನೂನುಗಳಿದ್ದವೋ ಅವುಗಳನ್ನು ಬದಲಾಯಿಸಲಾಯಿತು. ಇದರ ಮುಖ್ಯವಾದ ಉದ್ದೇಶವೇನೆಂದರೆ, ಯಾವ ಪ್ರೈಮರಿ ಎಜುಕೇಷನ್ ಫೀ ವಸೂಲು ಮಾಡಬೇಕೆಂದು ಇತ್ತೋ ಅವನ್ನು ವಸೂಲು ಮಾಡುವುದರಲ್ಲಿ ಬದಲಾವಣೆಯಾಯಿತು. ಇದರ ಕಾಲಂ (11) ರಲ್ಲಿ ಹೀಗಿದೆ ;

> "No fee shall be levied in respect of a child for attending school which is under the management of the State Government, Local Authority or School Board as the case may be..."

ಆದರೆ ಖಾಸಗಿ ಕ್ಷೇತ್ರಗಳಲ್ಲಿ ಯಾವ ಸಂಸ್ಥೆಗಳನ್ನು ನಡೆಸಿಕೊಂಡು ಹೋಗುತ್ತಿದ್ದರೋ ಅಂತಹ ಸಂಸ್ಥೆಗಳು ಇನ್ನೂ ಪ್ರೈಮರಿ ವರ್ಗದವರಿಂದ ಫೀಗಳನ್ನು ವಸೂಲು ಮಾಡುತ್ತಿರುವುದು ಕಂಡು ಬರುತ್ತದೆ. ಹೀಗೆ ಫೀಗಳನ್ನು ವಸೂಲು ಮಾಡುತ್ತಿದ್ದಾರೆ ಎಂದು ಸರಕಾರದ ಗಮನಕ್ಕೆ ತಂದಿದ್ದಾರೋ ಇಲ್ಲವೋ ಗೊತ್ತಿಲ್ಲ. ಪ್ರೈಮರಿ ಎಜುಕೇಷನ್ ಉಚಿತವಾಗಿ ದೊರೆಯಬೇಕೆಂದು ಇದ್ದರೂ ಇಂತಹ ಅನೇಕ ಸಂಸ್ಥೆಗಳವರು ಹಣವನ್ನು ಫೀ ರೂಪದಲ್ಲಿ ಇನ್ನೂ ವಸೂಲು ಮಾಡುತ್ತಿರುವುದು ತುಂಬಾ ಖೇದಕರವಾದ ಸಂಗತಿ. ಇದು ನಿಲ್ಲಬೇಕು. ಇನ್ನು ಬಾಂಬೆ ಏರಿಯಾದ ಕಡೆಗಳಿಂದ ನಮ್ಮ ಮೈಸೂರು ರಾಜ್ಯಕ್ಕೆ ಏಕೀಕರಣವಾದಾಗ ಸೇರಿದ ನಾಲ್ಕು ಜಿಲ್ಲೆಗಳಲ್ಲಿ ಅಲ್ಲರತಕ್ಕ ಸಂಸ್ಥೆಗಳು ಮುನಿಸಿಪಲ್ ಸೆಸ್, ಕಾರ್ಪೊರೇಷನ್ ಸೆಸ್ ಇತ್ಯಾದಿಗಳನ್ನು ಕೊಡಬೇಕೆಂದು ವಸೂಲ ಮಾಡುತ್ತಿದ್ದಾರೆ. ಇದರಲ್ಲಿರುವ ಮುಖ್ಯವಾದ ಅಂಶ ಎಂದರೆ ಕಲಮು 42 ಹೀಗಿದೆ :

> "(42) : If a scheme submitted by an authorised Municipality is sanctioned under Section 28, the State Government shall bear half the additional recurring and non-recurring cost of the scheme so sanctioned but the liability shall not exceed half of the cost as estimated by the authorised municipality..."

ಹೀಗೆ ಅರ್ಧದಷ್ಟು ಅಂಶದ ವೆಚ್ಚವನ್ನು ಸರಕಾರ ಪ್ರೈಮರಿ ಎಜುಕೇಷನ್‌ಗಾಗಿ ಇಲ್ಲಿ ಪೂರೈಸಬೇಕೆಂದು ಇನ್ನು ಅರ್ಧದಷ್ಟನ್ನು ಕಾರ್ಪೊರೇಷನ್ನು ಹಾಗೂ ಲೋಕಲ್ ಬೋರ್ಡುಗಳವರು ತಮ್ಮ ಉತ್ಪನ್ನದಲ್ಲಿ ಅವುಗಳನ್ನು ಕೊಡಬೇಕಾಗಿದೆ. ಹೀಗಾಗಿ ಇಲ್ಲಿರುವ ವಿದ್ಯಾ ಸಂಸ್ಥೆಗಳಿಗೆ ಬಹಳ ಅನ್ಯಾಯಗಳಾಗುತ್ತಿವೆ ಮತ್ತು ತಮ್ಮ ಉತ್ಪನ್ನದಲ್ಲಿ ಇಲ್ಲಿನ ಮುನಿಸಿಪಾಲಿಟಿಗಳು ಕೊಡಲು ಕೆಲವು ಬದಲಾವಣೆಗಳನ್ನು ಮಾಡಿರುವುದರಿಂದ ಪ್ರೈಮರಿ ಎಜುಕೇಷನ್ನಿನ ವೆಚ್ಚವನ್ನು ಕೊಡಲಿಕ್ಕಾಗದೆ ಅವನ್ನು ಜನರ ಮೇಲೆ ಹೊರಿಸುತ್ತಿದ್ದಾರೆ. ಇದರಿಂದ ಉಚಿತವಾದ ಶಿಕ್ಷಣ ಜನಕ್ಕೆ ದೊರೆಯುತ್ತಿಲ್ಲ ಎಂದು ಇಲ್ಲಿ ಸರಕಾರದ ಗಮನಕ್ಕೆ ತರಬಯಸುತ್ತೇನೆ.

ಇನ್ನು ಹೊಸದಾಗಿ ಬಂದಿರುವ ಗ್ರಾಂಟ್ ಇನ್ ಏಡ್ ಕೋಡ್‌ನಲ್ಲಿ ಸರಕಾರದವರಿಗೇ ಒಂದು ಡಿಸ್‌ಕ್ರಿಷನರಿ ಪವರನ್ನು ಕೊಟ್ಟಿರುವುದರಿಂದ ಕೆಲವು ಕಡೆಗಳಲ್ಲಿ ಶಿಕ್ಷಣಕ್ಕಾಗಿ ಎಷ್ಟು ಹಣವನ್ನು ಕೊಡಬೇಕೆಂದು ಇದೆಯೋ ಅದನ್ನೂ ಕೊಡಲಿಕ್ಕೆ ಆಗುತ್ತಿಲ್ಲ. ಹೀಗಾಗಿ ಪ್ರೈಮರಿ ಶಿಕ್ಷಣಕ್ಕಾಗಿ ಕೆಲವು ಕಡೆ ಈಗಾಗಲೇ ಹೆಲ್ತ್ ಸೆಸ್, ಸ್ಪೋರ್ಟ್ಸ್ ಸೆಸ್ ಇತ್ಯಾದಿ ಫೀಸುಗಳನ್ನು ವಸೂಲು ಮಾಡುತ್ತಿದ್ದಾರೆ. ಇದು ಸರಕಾರದ ಗಮನಕ್ಕೆ ಬಂದಂತೆ ಕಾಣುವುದಿಲ್ಲ. ಇದರಿಂದ ಕೆಲವು ಜನರ ಮೇಲೆ ವಿದ್ಯಾ

(ಶ್ರೀ ಎಸ್. ಎಸ್. ಶೆಟ್ಟರ್)

ಭ್ಯಾಸಕ್ಕೆ ಹೆಚ್ಚು ಭಾರ ಬೀಳುತ್ತಿದೆ. ಇನ್ನು ಕೆಲವು ಕಡೆ ಶಿಕ್ಷಣ ಯಾವ ರೀತಿಯಾಗಿದೆ ಎಂದರೆ ಚೆನ್ನಾಗಿ ಆಳವಾಗಿ ಅಭ್ಯಾಸ ಮಾಡಿದ ಹಾಗೂ ನುರಿತ ಉಪಾಧ್ಯಾಯರುಗಳಿಲ್ಲದೆ ಶಿಕ್ಷಣದ ಮಟ್ಟ ದಿನೇ ದಿನೇ ಕಡಿಮೆಯಾಗುತ್ತಿದೆ. ಯಾವಾಗಲೂ ಆಳವಾಗಿ ಹಾಗೂ ನುರಿತು ಅಭ್ಯಾಸ ಮಾಡಿರುವ ಉಪಾಧ್ಯಾಯರುಗಳು ಇದ್ದರೆ ವಿದ್ಯಾರ್ಥಿಗಳೂ ಚೆನ್ನಾಗಿ ಕಲಿಯಲು ಅವಕಾಶವಾಗುತ್ತದೆ. ಅಂತಹವರನ್ನು ಆಡಳಿತದವರು ಅವರ ಕಕ್ಷೆಯಲ್ಲಿಟ್ಟುಕೊಂಡು ಕೆಲಸ ಮಾಡಿದರೆ ಶಿಕ್ಷಣದ ಮಟ್ಟ ಹೆಚ್ಚುತ್ತದೆ. ಇದರ ಬಗ್ಗೆ ನೋಡಿದರೆ ಈ ಸಾರಿಯ ಬಡ್ಜೆಟ್ಟಿನಲ್ಲೂ ಏನೂ ಇಲ್ಲ, ಹೋದ ಸಾರಿಯ ಬಡ್ಜೆಟ್ಟಿನಲ್ಲೂ ಇಲ್ಲ. ತರಬೇತಿಗಾಗಿ ಎಷ್ಟೋ ಹಣ ಕೆಲಸ ಕಾರ್ಯಗಳನ್ನು ಮಾಡಲು ಟ್ರೇನಿಂಗು ಇನ್‌ಸ್ಟಿಟ್ಯೂಷನ್ನುಗಳಿಗಾಗಿ ಹಣವನ್ನು ಇಲ್ಲಿಯ ವರೆಗೂ ಸರಕಾರ ಖರ್ಚು ಮಾಡಧೇ ಇರುವುದು ಬಹಳ ವಿಷಾದದ ಸಂಗತಿ. ಇನ್ನೊಂದು ಸಂಗತಿ ಎಂದರೆ, ಟ್ರೇನ್ಡ್ ಹಾಗೂ ಅನ್‌ಟ್ರೇನ್ಡ್ ಉಪಾಧ್ಯಾಯರುಗಳು ಇಲ್ಲಿದ್ದಾರೆ ಮತ್ತು ಇವರ ಪಗಾರ ಕೂಡ ಬಹಳ ಕಡಿಮೆ. ಅಲ್ಲದೆ ತಮ್ಮ ಒಂದು ಖರ್ಚಿನಿಂದ ಇಲ್ಲಿನ ಉಪಾಧ್ಯಾಯರುಗಳು ತರಬೇತಿಪಡೆಯಲು ಆಗುತ್ತಿಲ್ಲ. ಏಕೆಂದರೆ, ಈಗ ಅವರು ಜೀವನ ಮಾಡುವುದೇ ಕಷ್ಟವಾಗಿದೆ ಮತ್ತು ಇದರಿಂದಾಗಿ ಶಿಕ್ಷಣದ ಮಟ್ಟವೂ ಕಡಿಮೆಯಾಗುತ್ತಾ ಹೋಗುತ್ತಿದೆ. ಇವರ ಜೀವನ ಮಟ್ಟವನ್ನು ಸುಧಾರಿಸಲು ಅನುಕೂಲ ಮಾಡದೇ ಇರುವುದರಿಂದ ಪ್ರೈವೇಟ್ ಟ್ಯೂಷನ್‌ಗಳಿಗೆ ಎನ್‌ಕರೇಜ್ ಮಾಡಿದಂತಾಗುತ್ತಿದೆ. ಅನೇಕ ಕಡೆ ಇರುವ ಶಾಲೆಗಳಲ್ಲಿ ಹುಡುಗರ ಕಡೆಗೆ ದುರ್ಲಕ್ಷವಾಗುತ್ತಿದೆ.

3.00 P.M.

ಶಾಲೆಗಳಲ್ಲಿ ಆಗಬೇಕಾದಂತಹ ವಿಷಯಗಳಿಗೆ ಶಿಕ್ಷಕರು ಸರಿಯಾದ ಗಮನಕೊಡುತ್ತಾ ಇಲ್ಲ. ಇದರಿಂದ ಶಿಕ್ಷಕರಿಗೆ ಆಪಾದನೆಮಾಡಿ ಪ್ರಯೋಜನವಿಲ್ಲ. ಅವರಿಗೆ ಕೊಡುವಂತಹ ಪಗಾರದ ವಿಷಯದಲ್ಲಿ ಸರ್ಕಾರದವರನ್ನು ದೂಷಿಸಬೇಕಾಗಿದೆ. ಈಗ ಅನೇಕ ಸ್ಕೂಲು ಬೋರ್ಡು ಇರತಕ್ಕ ಕಡೆಗಳಲ್ಲಿ ಈ ಲೋಕಲ್ ಸೆಲ್ಫ್ ಗೌರ್ನ್‌ಮೆಂಟ್‌ನ ಚುನಾವಣೆ ಆಗದೆ, ಸ್ಕೂಲು ಬೋರ್ಡು ಕಮಿಟಿಗಳು ಕೂಡ ಹೊಸದಾಗಿ ಬಂದಿಲ್ಲ. ಹೀಗಿದ್ದರಿಂದ ಎಷ್ಟೋ ಕಡೆ ಕಟ್ಟಡಗಳು ಸರಿಯಾಗಿಲ್ಲದೆ, ಬಹಳ ತೊಂದರೆಯಾಗಿದೆ. ಹೊಸದಾಗಿ ಕಟ್ಟುವಂತವುಗಳು ಅರ್ಧದಲ್ಲೇ ನಿಂತಿವೆ. ಇಂಥವುಗಳಲ್ಲಿ ಹುಬ್ಬಳ್ಳಿ ಮತ್ತು ಧಾರವಾಡಗಳಲ್ಲಿ ಅನೇಕ ಶಾಲೆಗಳು ಅರ್ಧಕ್ಕೆ ನಿಂತಿವೆ. ಅವು ಪೂರ್ಣವಾಗಿಲ್ಲ. ಅಂಥ ಕಡೆ ಶಾಲೆಗಳಲ್ಲಿ ಫ್ಯಾಕ್ಟರಿಯಲ್ಲಿ ಶಿಫ್ಟ್ ವ್ಯವಸ್ಥೆ ಮಾಡಿದಂತೆ, ಶಿಫ್ಟ್ ಬೇಸಿಸ್ ಮೇಲೆ ಶಾಲೆಯನ್ನು ನಡೆಸುತ್ತಿದ್ದಾರೆ. ಮತ್ತು ಅಲ್ಲಿಯ ವಾತಾವರಣವೂ ಶಾಲೆಗೆ ಅನುಗುಣವಾಗಿಲ್ಲ.

[Mr. CHAIRMAN SRI S. D. KOTHAVALE in the Chair]

ಆ ಶಾಲೆಯ ಪಕ್ಕದಲ್ಲಿ, ಮಾರ್ಕೆಟ್, ಸುತ್ತಮುತ್ತಲು ಅಂಗಡಿ ಹಾಗೂ ಇನ್ನಿತರ ಇನ್‌ಸ್ಯಾನಿಟರಿ ಇದ್ದಂತಹ ಪರಿಸ್ಥಿತಿ ಇದೆ. ಇನ್ನು ಹುಬ್ಬಳ್ಳಿಯ ಸರ್ಕಾರಿ ಸೆಂಟ್ರಲ್‌ಸ್ಕೂಲ್ ಅದಕ್ಕೆ ಕಟ್ಟಡವಿಲ್ಲದೆ, ಶಿಫ್ಟ್ ಬೇಸಿಸ್ ಮೇಲೆ, ಚಿಕ್ಕ ಕಟ್ಟಡದಲ್ಲಿ ನಡೆಸುತ್ತಿದ್ದಾರೆ. ಇದು ಬಹಳ ಖೇದಕರವಾದ ಸಂಗತಿ. ಇನ್ನು ಮುಖ್ಯವಾದಂತಹ ಪ್ರೈಮರಿ ವಿದ್ಯಾಭ್ಯಾಸ ಏಕರೂಪಮಟ್ಟದಲ್ಲಿ ಇಲ್ಲ. ಇದಲ್ಲದೆ, ಪ್ರೀ ಪ್ರೈಮರಿ ಎಜುಕೇಶನನ್ನು ಬಹಳ ಅಲಕ್ಷ್ಯ ಮಾಡಿದ್ದಾರೆ. ಮೂರು ವರ್ಷದಿಂದ ಆರು ವರ್ಷದ ವರೆಗೆ ಮಕ್ಕಳು ತಮ್ಮ ಸ್ವಭಾವವನ್ನು ರೂಪಿಸಿಕೊಳ್ಳುವಂತಹ ಸಮಯ. ಅವರಿಗೆ ನಿರ್ದಿಷ್ಟವಾದ ಸ್ವಭಾವ ಬರಬೇಕಾದರೆ. ಅಂಥ ಕಾಲದಲ್ಲಿ, ಹಾಗೆ ಬೆಳೆದು ಶಾಲೆಗೆ ಕಂಪಲ್ಸರಿ ಪ್ರೈಮರಿ ಎಜುಕೇಶನಿಗೆ ಬಂದಾಗ ಅವರಿಗೆ ಬಹಳ ಕಷ್ಟವಾಗುತ್ತದೆ. ಅದರ ಸಲುವಾಗಿ, ಪ್ರೀ ಪ್ರೈಮರಿ ವಿದ್ಯಾಭ್ಯಾಸವನ್ನು ನಾವು ಸರಿಯಾದ ವ್ಯವಸ್ಥೆ ಮಾಡದೆ ಮರೆತಿದ್ದೇವೆಂದು ಹೇಳಬಹುದು.

ಇನ್ನು ಪಾಠ ಪುಸ್ತಕಗಳ ವಿಷಯ. ಇದು ಯಾವಾಗ ರಾಷ್ಟ್ರೀಕರಣವಾಯಿತೋ ಅಲ್ಲಿಂದ ಇದರಲ್ಲಿ ಅನೇಕ ಲೋಪದೋಷಗಳು ಉಂಟಾಗಿವೆ. ಮುದ್ರಣ ಮಾಡುವುದರಲ್ಲೂ ಕೂಡ ಲೋಪ ದೋಷಗಳಿವೆ. ಎಷ್ಟೋ ಅಚ್ಚಿನ ದೋಷಗಳುಂಟು. ಇದರ ಬಗ್ಗೆ ಕೌನ್ಸಿಲಿನಲ್ಲೂ ಚರ್ಚೆಯಾಗಿದೆ. ಈ ವಿಚಾರದಲ್ಲಿ ಮಾನ್ಯ ಶಿಕ್ಷಣ ಮಂತ್ರಿಯವರು ಸಾಕಷ್ಟು ಕ್ರಮತೆಗೆದುಕೊಳ್ಳುತ್ತಾರೆಂಬುದು ಬಹಳ ಸಂತೋಷ, ಪುಸ್ತಕದಲ್ಲಿ ಶಿಲ್ಲಾಂಗ್ ಪಟ್ಟಣ ಎಲ್ಲಿದೆಯೆಂದು ನಮ್ಮವರಿಗೆ ಗೊತ್ತಿದೆಯೋ,

ಇಲ್ಲವೋ, ಇದು ಬಹಳ ವಿಚಿತ್ರವಾಗಿ ಪಠ್ಯ ಪುಸ್ತಕದಲ್ಲಿ ಪ್ರಕಟವಾಗಿದೆ. ಈ ಪಠ್ಯ ಪುಸ್ತಕವನ್ನು ಬಹಳ ಸೂಕ್ಷ್ಮವಾಗಿ ನೋಡಬೇಕು. ಮಕ್ಕಳಿಗೆ ಶುದ್ಧವಾದ ಬರಹಗಳಿರಬೇಕು. ಮತ್ತು ಕನ್ನಡ ಟೆಕ್ಸ್ಟ್ ಪುಸ್ತಕಗಳಲ್ಲಿ ಇಂಗ್ಲಿಷ್ ಅಂಕಿಗಳಿವೆ. ಕನ್ನಡ ಅಂಕಿಗಳಿಲ್ಲ. ಇದು ಒಂದು ವಿಚಿತ್ರವಾದ ಸಂಗತಿ. ಮಕ್ಕಳಿಗೆ ಚಿಕ್ಕ ವಯಸ್ಸಿನಲ್ಲಿ ಕನ್ನಡದ ಅಭಿಮಾನ ಬರಬೇಕಾದರೆ, ಅಂಕಿಗಳನ್ನೂ ಕನ್ನಡದಲ್ಲಿ ಮುದ್ರಿಸಬೇಕು. ಅದೇರೀತಿ ಶಿಕ್ಷಕರ ವ್ಯವಹಾರ ಮತ್ತು ಜೀವನ ರೀತಿಯನ್ನು ನೋಡಿದರೆ, ಇವತ್ತಿನ ದಿವಸ ಅವರು ರಾಜಕೀಯ ವಾತಾವರಣಕ್ಕೆ ಗಮನಕೊಡುತ್ತಿದ್ದಾರೆಂದು ತಿಳಿಯುತ್ತೇನೆ. ಇದು ಬಹಳ ಖೇದಕರವಾದ ಸಂಗತಿ. ಎಷ್ಟೋ ಸ್ಕೂಲು ಬೋರ್ಡುಗಳಿಂದ ಹಿಡಿದು ಹಳ್ಳಿಯವರೆಗೆ ನೋಡಿದರೆ, ವಾತಾವರಣ ಅಷ್ಟು ಒಳ್ಳೆಯದಾಗಿಲ್ಲ. ಅವರನ್ನು ಸೆನ್ಸಸ್ ಹಾಗೂ ಇನ್ನಿತರ ಕೆಲಸಗಳಿಗೆ ಉಪಯೋಗಿಸಿಕೊಳ್ಳುವುದರಿಂದ, ಮಕ್ಕಳಿಗೆ ಕಲಿಸುವುದರಲ್ಲಿ ತೊಂದರೆಯುಂಟಾಗುತ್ತದೆ. ಅದ್ದರಿಂದ ಅವರಿಗೆ ಕೇವಲ ಕಲಿಸುವ ವಿಚಾರ ಮಾತ್ರ ಬಿಟ್ಟುಬಿಡಬೇಕು. ಇದಲ್ಲದೆ ಯೂನಿವರ್ಸಿಟಿ ದೃಷ್ಟಿಯಲ್ಲೂ ಸಾಕಷ್ಟು ಅಟಾನಮಸ್ ಬಾಡಿ ಮಾಡಬೇಕು, ಮತ್ತು ಸರ್ಕಾರ ಇದರಲ್ಲಿ ಹೆಚ್ಚು ಹಸ್ತಕ್ಷೇಪ ಮಾಡಬಾರದು ಎಂದು ಹೇಳುತ್ತೇನೆ. ಇನ್ನು ಮಂಗಳೂರಿನಲ್ಲಿ ಬೇರೆ ಒಂದು ಯೂನಿವರ್ಸಿಟಿ ಮಾಡಬೇಕೆಂದು ಸೂಚನೆ ಮಾಡಿದ್ದಾರೆ. ಅದು ಸೂಕ್ತವೆಂದು ನಾನು ಹೇಳಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀಮತಿ ಬಸವರಾಜೇಶ್ವರಿ (ಮಾನ್ವಿ).—ಮಾನ್ಯ ಅಧ್ಯಕ್ಷರೇ, ನಮ್ಮ ಮುಂದಿರತಕ್ಕಂತಹ ವಿದ್ಯಾಭ್ಯಾಸಕ್ಕೆ ಸಂಬಂದಪಟ್ಟ ಬೇಡಿಕೆಗಳನ್ನು ಅನುಮೋದಿಸುತ್ತಾ ಕೆಲವು ವಿಚಾರಗಳನ್ನು ಸರ್ಕಾರದ ಗಮನಕ್ಕೆ ತರಲಿಚ್ಛಿಸುತ್ತೇನೆ. ಮೊದಲನೆಯದಾಗಿ ಪ್ರೈಮರಿ ಎಜುಕೇಶನ್ ಬಗ್ಗೆ ಹೇಳುವುದಾದರೆ, ಹಲವಾರು ಹಳ್ಳಿಗಳಲ್ಲಿ ಇವತ್ತಿನ ದಿವಸ ಪ್ರೈಮರಿ ವಿದ್ಯಾಭ್ಯಾಸವು ಎನ್ನ ತಕ್ಕಂಥದ್ದು ಬಹಳ ಕೆಳಮಟ್ಟಕ್ಕೆ ಇಳಿದಿದೆ. ಇವತ್ತು ಹಳ್ಳಿಗಳಲ್ಲಿ ಇರುವಂತಹ ಟೀಚರುಗಳು ಚೆನ್ನಾಗಿ ಕೆಲಸ ಮಾಡುತ್ತಾ ಇಲ್ಲ. ಇನ್‌ಸ್ಪೆಕ್ಷನ್ ಬಹಳ ಕಡಿಮೆ. ಯಾರು ಬರುತ್ತಾರೆ, ಯಾರು ಹೋಗುತ್ತಾರೆ, ಎಂದು ಗೊತ್ತಾಗುವುದಿಲ್ಲ. ಅದಕ್ಕಾಗಿ ನನ್ನ ಸಲಹೆ ಏನೆಂದರೆ, ಇನ್‌ಸ್ಪೆಕ್ಟರ್ ಬಂದಾಗ ಅಲ್ಲಿ ಸ್ಥಳದಲ್ಲಿರತಕ್ಕ ಸರ್ಪಂಚರನ್ನು ಮತ್ತು ಸ್ಕೂಲ್ ಕಮಿಟಿಯನ್ನು ಕರೆಸಿ, ಅಲ್ಲಿ ಇರತಕ್ಕ ನ್ಯೂನತೆಗಳನ್ನು ಕಂಡುಹಿಡಿಯಲು ಇನ್‌ಸ್ಪೆಕ್ಟಿಂಗ್ ಅಫೀಸರ ಜೊತೆಗೆ ಇನ್‌ಸ್ಪೆಕ್ ಮಾಡಬೇಕು ಮತ್ತು ಸ್ಥಳೀಯ ಜನರನ್ನು ಭೇಟಿ ಮಾಡಿ ಸ್ಕೂಲುಗಳಲ್ಲಿರತಕ್ಕ ತೊಂದರೆಗಳು, ಟೀಚರುಗಳ ಕಿರುಕುಳಗಳನ್ನು ಸ್ವಲ್ಪಮಟ್ಟಿಗೆ ತಿಳಿದುಕೊಳ್ಳಬಹುದು.

ಮತ್ತು ಪ್ರೈಮರಿ ಸ್ಕೂಲು ಕಟ್ಟಡಕ್ಕಾಗಿ, ತಾವು ಒಂದು ಸಾವಿರ ಕೊಡುತ್ತಿದ್ದೀರಿ ತಾಲ್ಲೂಕು ಬೋರ್ಡಿನವರು ಒಂದು ಸಾವಿರದ ಎಂಟು ನೂರು ಕೊಡುತ್ತಿದ್ದಾರೆ. ಆದರೆ ಕಟ್ಟಡಕ್ಕೆ 5 ಸಾವಿರದವರೆಗೆ ಆಗುತ್ತದೆ. ಕೆಲವು ಕಡೆ ಲೋಕಲ್ ಕಾಂಟ್ರಿಬ್ಯೂಷನಿಂದ ಪ್ರತಿಯೊಂದು ಹಳ್ಳಿಗಳಲ್ಲೂ ಸ್ಕೂಲುಗಳನ್ನು ಕಟ್ಟಿದ್ದಾರೆ. ಕೆಲವು ಕಡೆ ಲೋಕಲ್ ಕಾಂಟ್ರಿಬ್ಯೂಶನ್ ಸಾಧ್ಯ ಇಲ್ಲದೆ ಇವತ್ತು ಶಾಲಾ ಕಟ್ಟಡಗಳು ಹಾಗೆ ನಿಂತು ಹೋಗಿವೆ. ಈಗ 5 ಪರ್‌ಸೆಂಟು ಲ್ಯಾಂಡ್ ರೆವಿನ್ಯೂವನ್ನು ಡಿವಿಜನಲ್ ಕಮೀಶನರ್ ಇಟ್ಟಿರುತ್ತಾರೆ. ಅದರಲ್ಲೂ ಇನ್‌ಕಂಪ್ಲೀಟ್ ಮಾಡಿರತಕ್ಕ ಕಟ್ಟಡಗಳಿವೆಯೋ, ಅವುಗಳಿಗೆ ಮಾತ್ರ ಈ 5 ಪರ್‌ಸೆಂಟ್ ಲ್ಯಾಂಡ್ ರೆವಿನ್ಯೂವನ್ನು ಉಪಯೋಗಿಸಬೇಕೆಂದು ಇಟ್ಟಿದ್ದಾರೆ. ಅದರ ಬದಲು ಎಲ್ಲಿ ಕಾಂಟ್ರಿಬ್ಯೂಶನ್ ಕೊಡುವುದಕ್ಕೆ ಸಾಧ್ಯವಾಗುವುದಿಲ್ಲವೋ, ಅಂಥ ಕಡೆ ಇದನ್ನು ಉಪಯೋಗಿಸಿ ಕಟ್ಟುವುದಕ್ಕೆ ಏರ್ಪಾಡು ಮಾಡಬೇಕೆಂದು ನಾನು ಹೇಳುತ್ತೇನೆ.

ಇನ್ನು ಪ್ರೈಮರಿ ಶಿಕ್ಷಣದಲ್ಲಿ ಈ ಚಿಕ್ಕಮಕ್ಕಳ ಪಠ್ಯಪುಸ್ತಕಗಳು ತುಂಬಾ ಭಾರವಾಗಿದೆ. 3—4 ಭಾಷೆಗಳನ್ನು ಚಿಕ್ಕವಯಸ್ಸಿನಲ್ಲೇ ಇಟ್ಟರೆ ಬಹಳ ತೊಂದರೆಯಾಗುತ್ತದೆ. ಮತ್ತು ಈಗ ಇಂಗ್ಲೀಷ್ ಮೀಡಿಯಂನ ಎರಡನೆ ಪುಸ್ತಕ ಫಾರಿನ್‌ನಿಂದ ಬರಬೇಕಾಗಿದೆ. ಒಂದೊಂದು ಪುಸ್ತಕಕ್ಕೆ 7—8 ರೂಪಾಯಿ. ಇದು ಯಾರಿಗೆ ಸಾಧ್ಯ, ಯಾರಿಗೆ ಅಸಾಧ್ಯವೆಂಬುದನ್ನು ವಿಚಾರ ಮಾಡಬೇಕು. ಇದು ಪರದೇಶಗಳಿಂದ ಏಕೆ ತರಿಸಬೇಕು ? ಇಲ್ಲಿ ಯಾರೂ ಬರೆಯುವವರು ಇಲ್ಲವೆ ? ಇದನ್ನು ಇವತ್ತು ನಾನು ತರಲಿಲ್ಲ, ಬೇಕಾದರೆ ತಂದು ತೋರಿಸುತ್ತೇನೆ ; ಅದು ಏನಾದರೂ ಓದಿದರೆ ಅರ್ಥವಾಗುತ್ತದೆಯೇ ಎಂಬುದನ್ನು ನೋಡಿ. ದಯವಿಟ್ಟು ಇಂಥ ಪುಸ್ತಕಗಳನ್ನು ಯಾವುದಕ್ಕೋಸ್ಕರ ಮಾಡುವುದು ಎಂಬುದನ್ನು ನೋಡಿ, ಇನ್ನು ಮುಂದಾದರೂ ಹಾಗೆ ಮಾಡಬಾರದೆಂದು ನಾನು ಕೇಳಿಕೊಳ್ಳುತ್ತೇನೆ.

ಮತ್ತು ಹೈಸ್ಕೂಲು ವಿದ್ಯಾಭ್ಯಾಸದ ಬಗ್ಗೆ ಹೇಳುವುದಾದರೆ, ಈಗಾಗಲೇ ಮಾನ್ಯ ಸದಸ್ಯರನೇಕರು ಮಾತನಾಡಿದ್ದಾರೆ. ಈ ಹಿಂದಿ ಪುಸ್ತಕಗಳನ್ನು ನೀವು ಯಾವಾಗ ಕೊಟ್ಟಿರಿ?

(ಶ್ರೀಮತಿ ಬಸವರಾಜೇಶ್ವರಿ)

ಪರೀಕ್ಷೆಗೆ ಮೂರು ನಾಲ್ಕು ತಿಂಗಳು ಇರುವಾಗ ಎಸ್. ಎಸ್. ಎಲ್. ಸಿ. ಯವರಿಗೆ ಈ ಹಿಂದಿ ಪುಸ್ತಕಗಳನ್ನು ಒದಗಿಸಿದರೆ, ಎಷ್ಟೋ ಜನ ಇದರೊಳಗೆ ಫೈಲ್ ಆಗಿ ನಂತರ ಅವರಿಗೆ ಗ್ರೇಸ್ ಮಾರ್ಕ್ಸ್ ಕೊಟ್ಟರೆ ಅದು ಸರಿಕಾಣುವುದಿಲ್ಲ. ಇನ್ನು ಮುಂದಾದರೂ ಆ ರೀತಿ ಮಾಡಬಾರದೆಂದು ನಾನು ಕೇಳಿಕೊಳ್ಳುತ್ತೇನೆ.

ರಾಯಚೂರು, ಗುಲ್ಬರ್ಗ ಮತ್ತು ಬಿದರೆ ಜಿಲ್ಲೆಗಳಲ್ಲಿ ಹೈಸ್ಕೂಲ್ ಓದುವ ಮಹಿಳೆಯರಿಗೆ ತೊಂದರೆಯಾಗುತ್ತಿದೆ. ಕೊಪ್ಪಳದಲ್ಲಿ 120 ಮಂದಿ ಹುಡಿಗಿಯರು ಇದ್ದರೂ ಸಹ ಬೇರೆ ಒಂದು ಅವರಿಗಾಗಿ ಹೈಸ್ಕೂಲ್ ಇಲ್ಲ. ಈ ಕಡೆಗೆ ಸರ್ಕಾರದವರು ಹೆಚ್ಚು ಲಕ್ಷ್ಯ ಕೊಡಬೇಕು. ಸಿಂಧನೂರು ಮತ್ತು ಮಾನ್ವಿಯಲ್ಲಿ ಹೆಣ್ಣುಮಕ್ಕಳಿಗಾಗಿ ಹೈಸ್ಕೂಲ್‌ಗಳನ್ನು ಪ್ರಾರಂಭ ಮಾಡಬೇಕು. ಅಲ್ಲಿ ಮುಸ್ಲಿಮ್ ಹುಡುಗಿಯರು ಪರದಾ ಹಾಕಿಕೊಳ್ಳುವುದರಿಂದ ಒಂದೇ ಸ್ಕೂಲಿನಲ್ಲಿ ಓದಲು ಇಷ್ಟ ಪಡುವುದಿಲ್ಲ. ಆದ್ದರಿಂದ ಹೆಣ್ಣುಮಕ್ಕಳಿಗೆ ಪ್ರತ್ಯೇಕವಾದ ಸ್ಕೂಲ್‌ಗಳನ್ನು ತೆರೆಯಬೇಕು ಮತ್ತು ಅವರಿಗಾಗಿ ಹಾಸ್ಟೆಲ್‌ಗಳನ್ನು ಕಟ್ಟಿಸಿಕೊಟ್ಟರೆ ಹೆಣ್ಣುಮಕ್ಕಳು ಓದುವುದಕ್ಕೆ ಅನುಕೂಲ ವಾಗುತ್ತದೆಂದು ಸರ್ಕಾರದವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಇನ್ನು ಯೂನಿವರ್ಸಿಟಿ ಎಜುಕೇಷನ್ ಬಗ್ಗೆ ಹೇಳಬೇಕೆಂದರೆ ಈಗಾಗಲೇ ಮಹಾರಾಜ ಮತ್ತು ಯುವರಾಜ ಕಾಲೇಜುಗಳಲ್ಲಿ ಯು. ಜಿ. ಸಿ. ಸ್ಕೇಲ್‌ಗಳನ್ನು ಅಲ್ಲಿಯ ಲೆಕ್ಚರ್‌ಗಳಿಗೆ ಕೊಡುತ್ತಿದ್ದೀರಿ. ಅದೇ ಗೌರ್ನಮೆಂಟ್ ಕಾಲೇಜ್‌ಗಳಲ್ಲಿ ಕೆಲಸ ಮಾಡುತ್ತಿರುವ ಲೆಕ್ಚರರ್‌ಗಳಿಗೆ ಏತಕ್ಕೆ ಕೊಡುತ್ತಿಲ್ಲ ?

ಶ್ರೀ ಕೆ.ವಿ. ಶಂಕರಗೌಡ (ವಿದ್ಯಾಶಾಖೆಯ ಮಂತ್ರಿಗಳು).—ಮಹಾರಾಜ ಮತ್ತು ಯುವರಾಜ ಕಾಲೇಜಿನಲ್ಲಿರುವ ಲೆಕ್ಚರರ್‌ಗಳಿಗೆ ಯು. ಜಿ. ಸಿ. ಸ್ಕೇಲ್‌ಗಳನ್ನು ಕೊಡುತ್ತಿಲ್ಲ.

ಶ್ರೀಮತಿ ಬಸವರಾಜೇಶ್ವರಿ.—ನನ್ನ ಗಮನಕ್ಕೆ ಬಂದಿದ್ದರಿಂದ ಹೇಳಿದೆ. ಇನ್ನು ಪ್ರಮೋಷನ್ ವಿಚಾರದಲ್ಲಿ ಲೆಕ್ಚರರ್‌ಗಳಾಗಿ 10—15 ವರ್ಷ ಸರ್ವಿಸ್ ಮಾಡಿದ್ದರೂ ಸಹ ಅವರಿಗೆ ಪ್ರಮೋಷನ್ ಕೊಡುತ್ತಿಲ್ಲವೆಂದು ತಿಳಿದುಬಂದಿದೆ. ಎಲ್ಲಾ ಇಲಾಖೆಗಳಲ್ಲೂ ಪ್ರಮೋಷನ್ ಕೊಡುವಂತೆ ಇವರಿಗೂ ಏತಕ್ಕೆ ಕೊಡಬಾರದು ? 10—15 ವರ್ಷ ಸರ್ವಿಸ್ ಆದ ಲೆಕ್ಚರರ್‌ಗಳಿಗೆ ಪ್ರಮೋಷನ್ ಕೊಟ್ಟರೆ ಅವರು ಉತ್ಸಾಹದಿಂದ ಕೆಲಸ ಮಾಡುತ್ತಾರೆ.

ಇನ್ನು ಪಿ. ಯು. ಸಿ. ಯಲ್ಲಿ ಕನ್ನಡ ಮೀಡಿಯಮ್‌ನ್ನು ಜಾರಿಗೆ ತಂದಿದ್ದೀರಿ. ಕನ್ನಡದಲ್ಲಿ ಪಾಠ ಹೇಳಿಕೊಡುವ ಎಲ್ಲಾ ಸಬ್ಜೆಕ್ಟ್‌ಗಳಲ್ಲೂ ವಿದ್ಯಾರ್ಥಿಗಳು ಪಾಸ್ ಆಗುತ್ತಾರೆ ಅದೇ ಇಂಗ್ಲೀಷ್ ನಲ್ಲಿ 26—27 ಜನ ವಿದ್ಯಾರ್ಥಿಗಳು ಪರೀಕ್ಷೆಗೆ ಕೂತರೆ 20—21 ಜನ ವಿದ್ಯಾರ್ಥಿಗಳು ಫೇಲಾಗಿರು ತ್ತಾರೆ. ಆದ್ದರಿಂದ ಎಲ್ಲಾ ಕಡೆಗಳಲ್ಲೂ ಕನ್ನಡ ಮೀಡಿಯಮ್‌ನ್ನು ಜಾರಿಗೆ ತರಬೇಕು. ಇದರ ಬಗ್ಗೆ ಹೆಚ್ಚಿನ ಲಕ್ಷ್ಯವನ್ನು ಕೊಡಬೇಕೆಂದು ಹೇಳುತ್ತೇನೆ. ಮತ್ತು ಒಂದೊಂದು ಸೆಕ್ಷನ್‌ನಲ್ಲಿ 150ರಿಂದ 200ರವರೆಗೆ ಹುಡುಗರು ಇರುತ್ತಾರೆಂದು ತಿಳಿದುಬಂದಿದೆ. ಇಷ್ಟು ಜನ ಹುಡುಗರಿಗೆ ಒಬ್ಬ ಲೆಕ್ಚರರ್ ಪಾಠ ಹೇಳುವುದರಿಂದ ಹುಡುಗರಿಗೆ ತೊಂದರೆಯಾಗುತ್ತದೆ. 70—80 ಜನ ಹುಡುಗರು ಒಂದೊಂದು ಸೆಕ್ಷನ್‌ನಲ್ಲಿರುವುದರಿಂದ ತೊಂದರೆಯಾಗುವುದಿಲ್ಲ. 150ರಿಂದ 200 ಜನ ಹುಡುಗರಿಗೆ ಒಬ್ಬ ಲೆಕ್ಚರರ್ ಪಾಠ ಹೇಳಿ ಕೊಡುವುದೆಂದರೆ ಬಹಳ ತೊಂದರೆಯಾಗುತ್ತದೆ. ಈ ಕಡೆ ಸ್ವಲ್ಪ ಲಕ್ಷ್ಯ ಕೊಟ್ಟು ಸರಿಪಡಿಸಬೇಕು.

ಇನ್ನು ನಮ್ಮ ರಾಯಚೂರು ಜಿಲ್ಲೆಗೆ ಒಂದು ವ್ಯವಸಾಯದ ಕಾಲೇಜು ಬೇಕು ಎನ್ನುವ ವಿಷಯ ಎಲ್ಲರಿಗೂ ತಿಳಿದಿದೆ. ಇಂಜನಿಯರಿಂಗ್ ಕಾಲೇಜನ್ನು ಗುಲ್ಬರ್ಗಾಕ್ಕೆ ಕೊಡುವಾಗ ರಾಯಚೂರಿಗೆ ಮೆಡಿಕಲ್ ಕಾಲೇಜ್ ಕೊಡುತ್ತೇವೆಂದು ಹೇಳಿದರು. ಮತ್ತೆ ಮೆಡಿಕಲ್ ಕಾಲೇಜ್ ಕೊಡಬೇಕೆಂದು ಕೇಳಿದಾಗ ವ್ಯವಸಾಯದ ಕಾಲೇಜನ್ನು ಕೊಡುತ್ತೇವೆಂದು ಮಾನ್ಯ ಮುಖ್ಯಮಂತ್ರಿ ಗಳು ಹೇಳಿದರು. ರಾಯಚೂರಿಗೆ ಒಂದು ವ್ಯವಸಾಯದ ಕಾಲೇಜನ್ನು ಕೊಡುತ್ತೇವೆಂದು ಹೇಳಿ ದ್ದರೂ ಸಹ ಇದುವರೆಗೆ ಪ್ರಾರಂಭ ಮಾಡಿಲ್ಲ. ಇದರಿಂದ ನಮಗೆ ಅಸಮಾಧಾನವಾಗಿದೆ. ಯೂನಿವರ್ಸಿಟಿಯವರು ಒಪ್ಪಲಿಲ್ಲವೆಂದು ಒಂದು ಸಾರಿ ಹೇಳಿದರು. ದುಡ್ಡಿಗೆ ತೊಂದರೆಯಿರು ವುದರಿಂದ ಅದರ ಬಗ್ಗೆ ವಿಚಾರ ಮಾಡಲು ಒಂದು ಸಬ್ ಕಮಿಟಿಯನ್ನು ಕರೆದಿದ್ದೇವೆಂದು ಹೇಳಿದರು. ಇರುವ ತೊಂದರೆಗಳನ್ನೆಲ್ಲಾ ನಿವಾರಿಸಿ ಮಾನ್ಯ ಮುಖ್ಯಮಂತ್ರಿಗಳು ಒಂದು ವ್ಯವಸಾಯದ ಕಾಲೇಜನ್ನು ನಮ್ಮ ರಾಯಚೂರು ಜಿಲ್ಲೆಗೆ ಕೊಡಬೇಕು. ಸಂಬಂಧಪಟ್ಟ ಇಲಾಖೆಯವರು ಯಾವ ಜಾಗದಲ್ಲಿ ಸ್ಥಳ ಬೇಕೆಂದು ಕೇಳುತ್ತಾರೋ ಆ ಜಾಗವನ್ನು ನಾವು ಕೊಡಿಸುತ್ತೇವೆ. ಜಾಗಕ್ಕೆ ನಾವು ಜವಾಬ್ದಾರರು.

ಇನ್ನು ಹಾಸ್ಟಲ್ ವಿಚಾರ ಹೇಳಬೇಕೆಂದರೆ ಮೆಡಿಕಲ್ ಕಾಲೇಜಿನ ಹಾಸ್ಟೆಲ್‌ನಲ್ಲಿ ನೀರಿನ ಸೌಕರ್ಯವಿಲ್ಲದೆ ಹುಡುಗರಿಗೆ ತೊಂದರೆಯಾಗುತ್ತಿದೆಯೆಂದು ನನ್ನ ಗಮನಕ್ಕೆ ಬಂದಿದೆ.

ಶ್ರೀ ಕೆ. ಎಚ್. ಪಾಟೀಲ್.—ಎಲ್ಲಾ ಹಾಸ್ಟೆಲ್‌ಗಳಲ್ಲೂ ಇದೇ ತೊಂದರೆ ಇದೆ.

ಶ್ರೀಮತಿ ಬಸವರಾಜೇಶ್ವರಿ.—ಹುಡುಗರಿಗೆ ಊಟ ಮಾಡಲು ಒಂದು ಡೈನಿಂಗ್ ಹಾಲ್ ಇಲ್ಲ. ಒಂದು ಗ್ಲಾಸ್ ನೀರು ಬೇಕಾದರೆ 5 ಪೈಸೆ ಕೊಡಬೇಕಾಗಿದೆ. ಮೆಡಿಕಲ್ ಕಾಲೇಜ್ ಹಾಸ್ಟೆಲ್‌ಗಾಗಿ ಸರ್ಕಾರದವರು 5—10 ಸಾವಿರ ರೂಪಾಯಿಗಳನ್ನು ಗ್ರಾಂಟ್ ರೂಪದಲ್ಲಿ ಕೊಡಬೇಕು. ವಿದ್ಯಾರ್ಥಿಗಳ ಹಣದಲ್ಲಿ ಹಾಸ್ಟಲ್ ಖರ್ಚುಗಳು ಆಗಬೇಕಾಗಿದೆ. ಒಂದು ನಿಧಿಯನ್ನು ಕಲ್ಪಿಸಿ ಕೊಡಬೇಕು. ಇಲ್ಲದಿದ್ದರೆ ವಿದ್ಯಾರ್ಥಿಗಳು ಹೊಟೆಲ್‌ಗೆ ಊಟಕ್ಕೆ ಹೋಗಬೇಕಾಗುತ್ತದೆ. ಇದನ್ನು ನಿವಾರಣೆ ಮಾಡಬೇಕೆಂದು ಹೇಳುತ್ತೇನೆ.

ಇನ್ನು ನಮ್ಮ ರಾಯಚೂರು ಜಿಲ್ಲೆಯಲ್ಲಿ ಹೈಸ್ಕೂಲ್‌ಗಳ ಕೊರತೆಯಿರುವುದರಿಂದ ತಾಲ್ಲೂಕ್ ಬೋರ್ಡಿನವರು ಕೆಲವು ಹೈಸ್ಕೂಲ್‌ಗಳನ್ನು ಕಟ್ಟಿಸಲು ಜಾಗವನ್ನು ಖರೀದಿ ಮಾಡಿದ್ದಾರೆ. ಆದ್ದರಿಂದ ತಾಲ್ಲೂಕ್ ಬೋರ್ಡಿನವರು ಕಟ್ಟಿಸುವ ಹೈಸ್ಕೂಲ್‌ಗಳಿಗೆ ಪ್ರಥಮತಃ ಗಮನಕೊಟ್ಟು ಬಿಲ್ಡಿಂಗ್ ಗ್ರಾಂಟನ್ನು ತೀವ್ರವಾಗಿ ಮಂಜೂರು ಮಾಡಬೇಕು. ಕೌತಾಲ್, ಗೂಂಜೂಟ ಮತ್ತು ಮುದ್‌ಗಲ್‌ನಲ್ಲಿ ಹೈಸ್ಕೂಲ್ ಕಟ್ಟಡಗಳನ್ನು ಕಟ್ಟಿಸಲು ತಾಲ್ಲೂಕ್ ಬೋರ್ಡಿನವರು ಜಾಗವನ್ನು ಖರೀದಿ ಮಾಡಿದ್ದಾರೆ. ಅವರಿಗೆ ಜಾಗ್ರತೆ ಬಿಲ್ಡಿಂಗ್ ಗ್ರಾಂಟನ್ನು ಮಂಜೂರು ಮಾಡಬೇಕು. ಇಷ್ಟು ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಕೆ. ಎಂ. ತಮ್ಮಯ್ಯ (ಕಡೂರು).—ಮಾನ್ಯ ಸಭಾಪತಿಗಳೇ, ಸರ್ಕಾರದವರು ವಿದ್ಯೆಗೋಸ್ಕರವಾಗಿ ಸುಮಾರು ಸರ್ಕಾರದ ಆದಾಯದ ಮೂರನೇ ಒಂದು ಭಾಗವನ್ನು ಖರ್ಚು ಮಾಡುತ್ತಿದ್ದಾರೆ. ಸರ್ಕಾರದವರ ಧ್ಯೇಯ ಎಲ್ಲರೂ ಬುದ್ಧಿವಂತರಾಗಬೇಕು ಎಂಬುದು. ನಮ್ಮ ಪ್ರಜಾಪ್ರಭುತ್ವ ಬೆಳೆಯಬೇಕಾದರೆ ಅದು ಬುದ್ಧಿವಂತರ ಸಂಖ್ಯೆ ಹೆಚ್ಚಾದರೆ ಮಾತ್ರ ಸಾಧ್ಯ ಎಂಬ ದೊಡ್ಡ ಭಾವನೆಯಿಂದ ಇಷ್ಟು ಹಣವನ್ನು ಖರ್ಚು ಮಾಡುತ್ತಿದ್ದಾರೆ. ಆದರೆ ಅವರ ಭಾವನೆ ಫಲಿಸಿದೆಯೇ ಎಂಬ ಬಗ್ಗೆ ಅನುಮಾನ ಇದೆ. ಅನೇಕ ಮಾನ್ಯ ಸದಸ್ಯರುಗಳು ಪ್ರಾಥಮಿಕ ವಿದ್ಯಾಭ್ಯಾಸದಲ್ಲಿ ಎಷ್ಟು ತೊಡಕುಗಳು ಇವೆ ಎಂಬುದನ್ನು ಹೇಳಿದರು. ಶೇಕಡ 50 ಸ್ಕೂಲ್‌ಗಳಲ್ಲಿ ಒಬ್ಬ ಉಪಾಧ್ಯಾಯರು ಒಂದು ಕಟ್ಟಡದಲ್ಲಿ ಹುಡುಗರಿಗೆ ಪಾಠ ಹೇಳಿಕೊಡಬೇಕಾಗಿದೆ. ನಾವು ಖರ್ಚು ಮಾಡುವ ಹಣಕ್ಕೆ ಸರಿಯಾಗಿ ಮಕ್ಕಳಿಗೆ ಪಾಠವನ್ನು ಹೇಳಿಕೊಡುತ್ತಿಲ್ಲ. ಅಂದರೆ ಬೀದಿ ಗಲ್ಲಿಗಳಲ್ಲಿ ಆಡುವ ಹುಡುಗರನ್ನು ಕರೆದುತಂದು ಕೆಲವು ಘಂಟೆಗಳು ಕೂಡಿಸಿ ಮನೆಗೆ ಕಳಿಸುವುದು ಎಂಬ ಭಾವನೆ ಬರುತ್ತಿದೆ. ಕೆಲವು ಮಾನ್ಯ ಸದಸ್ಯರುಗಳು ಹೇಳಿದರು, ಉಪಾಧ್ಯಾಯರುಗಳಿಗೆ ಮನೆಗಳನ್ನು ಕಟ್ಟಿಸಿಕೊಡಬೇಕೆಂದು. ಒಂದು ಗಾದೆ ಜ್ಞಾಪಕಕ್ಕೆ ಬರುತ್ತದೆ, ''ಹನುಮಂತ ಹಗ್ಗ ತಿನ್ನುವಾಗ ಪೂಜಾರಿ ಶಾವಿಗೆ ಕೇಳಿದ'' ಎಂಬಂತೆ ಹುಡುಗರಿಗೆ ಪಾಠ ಹೇಳಿಕೊಡಲು ಒಂದು ಶಾಲಾ ಕಟ್ಟಡ ಇಲ್ಲದಿರುವಾಗ ಇನ್ನು ಉಪಾಧ್ಯಾಯರುಗಳಿಗೆ ಮನೆ ಕಟ್ಟಿಸಿಕೊಡಲು ಸಾಧ್ಯವೇ ಎಂದು ನೋಡಬೇಕು. ಪ್ರಾಥಮಿಕ ವಿದ್ಯಾಭ್ಯಾಸ ನಿಜವಾಗಿಯೂ ನಾವು ತಿಳಿದಮಟ್ಟಿಗೆ ಪ್ರಯೋಜನಕಾರಿಯಾಗಿಲ್ಲ. ನಮ್ಮ ಹುಡುಗರು ಮುಂದೆ ಓದುತ್ತಾರೆಯೇ ಎನ್ನುವುದು ಲೋಯರ್ ಸೆಕೆಂಡರಿಯಲ್ಲಿ ಮೊದಲು ತೀರ್ಮಾನವಾಗುತ್ತಿತ್ತು. ಅಲ್ಲಿ ಏನಾದರೂ ಹುಡುಗರು ಫೇಲಾದರೆ ತಂದೆ ತಾಯಿಗಳು ತಮ್ಮ ಮಕ್ಕಳನ್ನು ತಮ್ಮ ಕುಲಕಸಬಿಗೆ ತೆಗೆದುಕೊಳ್ಳುತ್ತಿದ್ದರು. ಈಗ ಎಸ್.ಎಸ್.ಎಲ್.ಸಿ. ಯವರೆಗೆ ನಮ್ಮ ಹುಡುಗರು ಮುಂದೆ ಬರುತ್ತಾರೆಂದು ತಿಳಿದು ಅಲ್ಲಿಯವರೆಗೆ ಕಳಿಸುತ್ತಾರೆ. ಎಸ್. ಎಸ್.ಎಲ್. ಸಿ.ಯಲ್ಲಿ 3-4 ಸಾರಿ ಫೇಲಾದರೆ, ಅಂತಹವರನ್ನು ತಮ್ಮ ಕುಲಕಸಬಿಗೆ ಕರೆದುಕೊಳ್ಳುವುದಕ್ಕೆ ತಂದೆತಾಯಿಗಳಿಗೆ ಸಾಧ್ಯವಾಗುವುದಿಲ್ಲ. ಗ್ರಾಮಾಂತರ ಪ್ರದೇಶಗಳಲ್ಲಿ ಈ ರೀತಿಯ ಫೇಲ್ ಆದವರು ಬಹಳ ಮಂದಿ ಇದ್ದಾರೆ. ಇವರುಗಳು ತಂದೆತಾಯಿಗಳಿಗೆ ಭಾರ, ಸಮಾಜಕ್ಕೆ ಹೊರೆ, ಸರ್ಕಾರಕ್ಕೆ ತಲೆನೋವು. ಅದರಿಂದ ಗ್ರಾಮಾಂತರಗಳಲ್ಲಿ ಹಾಹಾಕಾರ ಹೆಚ್ಚಾಗುತ್ತದೆ ; ಮತ್ತು ಅವರು ಸಮಾಜದ ಶತ್ರುಗಳಾಗಿ ಬಾಳುವುದಕ್ಕೆ ಸರ್ಕಾರದವರೇ ಅವಕಾಶ ಮಾಡಿಕೊಟ್ಟಂತಾಗುತ್ತದೆ. ಗ್ರಾಮಾಂತರ ಪ್ರದೇಶಗಳಲ್ಲಿ ಎಸ್.ಎಸ್.ಎಲ್.ಸಿ. ಓದಿದವರು ಸಾವಿರಾರು ಜನರು ವಿದ್ಯಾವಂತರು ಇದ್ದಾರೆ. ಅವರು ಅವರ ಕಸಬನ್ನು ಮಾಡುವ ಹಾಗಿಲ್ಲ, ತಂದೆತಾಯಿಗಳ ಕೆಲಸವನ್ನು ಮಾಡುವ ಹಾಗಿಲ್ಲ, ಸರ್ಕಾರದಲ್ಲಿ ಅಥವಾ ಇನ್ನೆಲ್ಲೂ ಕೆಲಸ ಸಿಕ್ಕುವ ಹಾಗಿಲ್ಲ. ಹೀಗಾಗಿ ಅವರಲ್ಲಿ ಯಾವ ಭಾವನೆ ಬರುತ್ತದೆ ಎಂದರೆ, ಗ್ರಾಮಾಂತರ ಪ್ರದೇಶಗಳಲ್ಲಿ ಒಬ್ಬರ ಮೇಲೆ ಒಬ್ಬರನ್ನು ಎತ್ತಿಕಟ್ಟಬೇಕು ಎಂಬುದೇ ಆಗಿದೆ. ಇಂತಹ ಪರಿಸ್ಥಿತಿ ಉಂಟಾಗಿ

(ಶ್ರೀ ಕೆ. ಎಂ. ತಮ್ಮಯ್ಯ)

ನಮ್ಮ ದೇಶದಲ್ಲಿ ಈಗ ಬಂಗಾಳದಲ್ಲಿ ಮಾತ್ರ ನಕ್ಸಲ್‌ಬಾರಿಯಲ್ಲಿ ಹೇಗೆ ನಡೆಯುತ್ತಾ ಇದೆ, ಅದೇ ರೀತಿ ಎಸ್. ಎಸ್. ಎಲ್. ಸಿ. ಓದಿದವರಿಗೆ ಕೆಲಸ ಸಿಕ್ಕದೇ ಇದ್ದಾಗ ದೇಶದ ಎಲ್ಲಾ ಕಡೆಯಲ್ಲೂ ಅದೇ ಪರಿಸ್ಥಿತಿ ಬರುತ್ತದೆ ಎಂದು ಸರ್ಕಾರದವರಿಗೆ ಹೇಳಬಯಸುತ್ತೇನೆ.

ಹೈಯರ್ ಸೆಕೆಂಡರಿ ಶಾಲೆಗಳನ್ನು ಅನೇಕ ಪೌರಸಭೆಗಳವರು ಮತ್ತು ತಾಲ್ಲೂಕು ಬೋರ್ಡುಗಳವರು ನಡೆಸುತ್ತಾ ಇದ್ದಾರೆ. ಈಗಿನ ತಾಲ್ಲೂಕು ಬೋರ್ಡಿನ ಸ್ಥಿತಿ ನೋಡಿದರೆ ಅವರವರ ವೆಚ್ಚವನ್ನು ಅವರು ಸರಿತೂಗಿಸುವುದೇ ಅವರಿಗೆ ಕಷ್ಟವಾಗಿದೆ. ಹೀಗಿರುವಾಗ ಸರ್ಕಾರದವರು ಅವರಿಗೆ ಎಷ್ಟೇ ಶಕ್ತಿಮೀರಿ ಸಹಾಯ ಮಾಡಿದರೂ ಕೂಡ ಈಗ ಬೆಳೆಯುತ್ತಿರುವ ಮಕ್ಕಳ ಸಂಖ್ಯೆಯನ್ನು ನೋಡಿದರೆ ಅವರಿಂದ ಇದನ್ನು ನಿರ್ವಹಿಸುವುದಕ್ಕೆ ಅವರಿಗೆ ಶಕ್ತಿ ಸಾಲದುದರಿಂದ ಅಲ್ಲಿ ಸರಿಯಾಗಿ ವಿದ್ಯಾಭ್ಯಾಸ ಸಿಕ್ಕುತ್ತಿಲ್ಲ. ಆದ್ದರಿಂದ ಅವನ್ನು ಆದಷ್ಟು ಬೇಗ ಸರ್ಕಾರದವರೇ ವಹಿಸಿಕೊಂಡು, ಇನ್ನೂ ಕೆಲವು ಕೋಟಿ ರೂಪಾಯಿಗಳು ಖರ್ಚಾದರೂ ಪರವಾಗಿಲ್ಲ ಸರಿಯಾದ ವಿದ್ಯಾಭ್ಯಾಸವನ್ನು ನಮ್ಮ ಮಕ್ಕಳಿಗೆ ಒದಗಿಸಿಕೊಡಬೇಕೆಂದು ಸರ್ಕಾರದವರನ್ನು ಪ್ರಾರ್ಥಿಸಿಕೊಳ್ಳುತ್ತೇನೆ.

ಇನ್ನು ಕಾಲೇಜಿನಲ್ಲಿ ಏನು ಸ್ಥಿತಿ ಇದೆ ಎಂದರೆ, ರೈತನ ಮಗ ರೈತನಾಗಿ ಉಳಿಯಲಿಕ್ಕೂ ಸಾಧ್ಯವಿಲ್ಲ, ವಿದ್ಯಾವಂತನಾಗಿ ದೇಶಸೇವೆ ಮಾಡಲಿಕ್ಕೂ ಸಾಧ್ಯವಿಲ್ಲ. ಈ ಮಧ್ಯೆ ತ್ರಿಶಂಕುಸ್ಥಾನದಲ್ಲಿದ್ದಾನೆ. ಪಟ್ಟಣಗಳಲ್ಲಿ ಎಲ್ಲಾ ಸೌಕರ್ಯವೂ ಇದೆ, ಗ್ರಾಮಾಂತರ ಪ್ರದೇಶಗಳಲ್ಲಿ ಸರಿಯಾದ ಸಿಬ್ಬಂದಿ ಇಲ್ಲ, ಸರಿಯಾದ ಲ್ಯಾಬೊರೇಟರಿಸ್ ಇಲ್ಲ, ಸರಿಯಾದ ಟೆಕ್ನಿಕಲ್ ಹ್ಯಾಂಡ್ಸ್ ಇಲ್ಲ, ಹೀಗಾಗಿ ನಗರದಲ್ಲಿ ಓದುತ್ತಿರುವ ವಿದ್ಯಾರ್ಥಿಗಳೊಂದಿಗೆ ಸ್ಪರ್ಧಿಸುವುದಕ್ಕೆ ಆಗುವುದಿಲ್ಲ. 35-40 ಪರ್ಸೆಂಟ್ ಮಾರ್ಕ್ಸ್ ತೆಗೆಯುವುದರಲ್ಲಿ ಅವರಿಗೆ ಸಾಕಾಗಿಹೋಗುತ್ತದೆ. ಈಗ 67 ಪರ್ಸೆಂಟ್ ಬಂದರೂ ಮೆಡಿಕಲ್ ಕಾಲೇಜಿನಲ್ಲಿ ಸೀಟು ಸಿಕ್ಕುವುದು ಕಷ್ಟ; ಮತ್ತು 77 ಪರ್ಸೆಂಟ್ ಬಂದರೂ ಇಂಜನಿಯರಿಂಗ್ ಕಾಲೇಜಿನಲ್ಲಿ ಸೀಟು ಸಿಕ್ಕುವುದು ಕಷ್ಟ. ಹೀಗಾಗಿ ಅವನು ಇಲ್ಲಿಗೆ ಬರುವ ಹಾಗಿಲ್ಲ ಮತ್ತು ಅಲ್ಲಿಯೇ ಉಳಿಯುವ ಹಾಗೆಯೂ ಇಲ್ಲ. ಹೀಗಾಗಿ ಸರ್ಕಾರಿ ಕಾಲೇಜಿನ ಮೆರಿಟ್ ಪೂಲ್‌ನಲ್ಲಿ ಬರೀ ನಗರಗಳಲ್ಲಿ ವಾಸಮಾಡುವವರ ಮಕ್ಕಳಿಗೆ ಸೀಟು ಸಿಕ್ಕುತ್ತಾ ಇದೆಯೇ ಹೊರತು ಗ್ರಾಮಾಂತರ ಪ್ರದೇಶಗಳಲ್ಲಿರತಕ್ಕವರ ಮಕ್ಕಳಿಗೆ ಸಿಕ್ಕುತ್ತಿಲ್ಲ. ಹಣ ಕೊಟ್ಟು ಮತ್ತೆ ಬೇರೆ ಯಾವುದಾದರೂ ಕಾಲೇಜುಗಳಿಗೆ ಸೇರಿಸೋಣ ಎಂದರೆ ನಮ್ಮ ರೈತನಾಗಲಿ ಅಥವಾ ಗ್ರಾಮಾಂತರಗಳಲ್ಲಿರತಕ್ಕವರಾಗಲಿ ಅಷ್ಟು ಹಣವಂತರಲ್ಲ. ಹೀಗಾಗಿ ಸರ್ಕಾರದ ಧ್ಯೇಯ ಮತ್ತು ನಾವು ಯಾವ ರೀತಿಯಾಗಿರಬೇಕೆಂದು ಹೇಳುತ್ತೇವೆಯೋ ಅದನ್ನು ಪಾಲಿಸುವುದಕಾಗುತ್ತಾ ಇಲ್ಲ. ಆದ್ದರಿಂದ ನಗರಗಳಲ್ಲಿ ಓದುವ ವಿದ್ಯಾರ್ಥಿಗಳೊಂದಿಗೆ ಗ್ರಾಮಾಂತರ ಪ್ರದೇಶಗಳಿಂದ ಬರತಕ್ಕ ವಿದ್ಯಾರ್ಥಿಗಳನ್ನು ಹೋಲಿಕೆ ಮಾಡದೆ ಮೆರಿಟ್ ಪೂಲ್‌ನಲ್ಲಿ ಇವರಿಗೆ 10-18 ಪರ್ಸೆಂಟ್ ಕಡಿಮೆ ಮಾಡಿ, ಮೆಡಿಕಲ್ ಆಗಲಿ, ಇಂಜನಿಯರಿಂಗ್ ಕಾಲೇಜಿನಲ್ಲಿ ಆಗಲಿ ಅವಕಾಶ ಮಾಡಿಕೊಡಬೇಕೆಂದು ಸರ್ಕಾರದವರಲ್ಲಿ ಪ್ರಾರ್ಥನೆ ಮಾಡಿಕೊಂಡು ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಕೆ. ಎಸ್. ಸಂಗನಗೌಡ (ಲಿಂಗಸುಗೂರು).—ಸನ್ಮಾನ್ಯ ಸಭಾಪತಿಗಳೇ, ನಾನು ಮಾನ್ಯ ಶಿಕ್ಷಣಸಚಿವರು ಮಂಡಿಸಿರತಕ್ಕ ಬೇಡಿಕೆಗಳ ಬಗ್ಗೆ ಸಮರ್ಥಿಸಿ ಕೆಲವೊಂದು ಸೂಚನೆಗಳನ್ನು ಕೊಡಬಯಸುತ್ತೇನೆ. ನಮ್ಮ ಸರ್ಕಾರ ಅಪಾರವಾದ ಹಣವನ್ನು ಜನತೆಯ ಶಿಕ್ಷಣಕ್ಕೆ, ಸಾರ್ವಜನಿಕರ ಶಿಕ್ಷಣಕ್ಕೆ, ಶಿಕ್ಷಣ ಮಟ್ಟ ಹೆಚ್ಚಬೇಕು, ಜನತೆಯ ನೈತಿಕ ಮಟ್ಟ ಹೆಚ್ಚಬೇಕೆಂಬ ಉದ್ದೇಶದಿಂದ ಅನೇಕ ಕ್ಷೇತ್ರಗಳಲ್ಲಿ ಹಣ ಒದಗಿಸಿ ಪ್ರತಿವರ್ಷ ಎಷ್ಟೋ ಸ್ಕೂಲುಗಳನ್ನು ಮತ್ತು ಕಾಲೇಜುಗಳನ್ನು, ಆಶ್ರಮ ಸ್ಕೂಲುಗಳನ್ನು ವಿದ್ಯಾ ಪೀಠಗಳನ್ನು ಮತ್ತು ಟ್ರೈನಿಂಗ್ ಇನ್‌ಸ್ಟಿಟ್ಯೂಟುಗಳನ್ನು ತೆಗೆದು ಸಾರ್ವಜನಿಕರ ಹಿತಸಾಧನೆ ಮಾಡುತ್ತಾ ಇರುವ ಕೆಲಸ ಬಹಳ ಸ್ತುತ್ಯವಾದದ್ದು ಮತ್ತು ಶ್ಲಾಘನೀಯವಾದದ್ದು ಎಂದು ಈ ಮೂಲಕ ಹೇಳಬಯಸುತ್ತೇನೆ. ಈ ಪ್ರಸಂಗದಲ್ಲಿ ಕೆಲವಾರು ವಿಷಯಗಳನ್ನು ಹೇಳುವುದಾದರೆ ದಿನೇ ದಿನೇ ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚು ಹೆಚ್ಚುತ್ತಾ ಇದ್ದು ವಿದ್ಯಾರ್ಥಿಗಳಲ್ಲಿ ಅಶಿಸ್ತು ಅಥವಾ ಇಂಡಿಸಿಪ್ಲಿನ್ ಬೆಳೆಯುತ್ತಾ ಇದೆ. ಈ ಬಗ್ಗೆ ನಮ್ಮ ಸರ್ಕಾರದವರು ಹೆಚ್ಚು ಲಕ್ಷ್ಯ ವಹಿಸಬೇಕೆಂದು ಕೇಳಿಕೊಳ್ಳುತ್ತೇನೆ. ಇದಕ್ಕೆ ಅನೇಕ ಕಾರಣಗಳಿರಬಹುದು. ಕೆಲವರ ಅಭಿಪ್ರಾಯದಲ್ಲಿ ಈಗಿನ ಶಿಕ್ಷಣ ಪದ್ಧತಿಯಲ್ಲಿ ಏನಾದರೂ ದೋಷ ಇದೆಯೇ ಅಂತ ಅಭಿಪ್ರಾಯ ಇದೆ. ಇನ್ನು ಕೆಲವರ ಅಭಿಪ್ರಾಯದಲ್ಲಿ ಶಿಕ್ಷಕರ ಕಲಿಸುವ ಪದ್ಧತಿಯಲ್ಲಿ ಏನಾದರೂ ತಪ್ಪಿದೆಯೇ ಅಂತ ಭಾವನೆ ಮೂಡಿ ಬರುತ್ತಾ ಇದೆ. ಇನ್ನು ಕೆಲವರು ಕಲಿಯತಕ್ಕ ಪಠ್ಯಪುಸ್ತಕದಲ್ಲಿ

ಅಥವಾ ಸಿಲಬಸ್‌ನಲ್ಲಿ ದೋಷ ಇದೆಯೋ ಅಂತ ಪ್ರಶ್ನೆ ಮಾಡುತ್ತಾ ಇದ್ದಾರೆ. ಈ ಎಲ್ಲಾ ವಿಷಯಗಳನ್ನೂ ಸರ್ಕಾರ ಗಮನಕ್ಕೆ ತೆಗೆದುಕೊಂಡು ಎಲ್ಲಿ ದೋಷ ಇದೆ ಅದನ್ನು ತಿದ್ದಬೇಕು, ಈಗಿನ ವಿದ್ಯಾರ್ಥಿ ಮುಂದಿನ ನಾಗರಿಕ, ಅವರು ನಮ್ಮ ದೇಶದ ಒಂದು ದೊಡ್ಡ ಆಸ್ತಿ. ಅವರು ನಾಡಿನ ಮತ್ತು ರಾಷ್ಟ್ರದ ರಾಜ್ಯಭಾರವನ್ನು, ಆಡಳಿತದ ಕಡಿವಾಣವನ್ನು, ಆಡಳಿತದ ಸೂತ್ರವನ್ನು ವಹಿಸಲಿಕ್ಕೆ ಸಮರ್ಥರು ಆಗುವಂತಹ ನಾಗರಿಕರನ್ನು ಒಂದು ಶಿಸ್ತಿಗೆ ಒಳಪಡಿಸಿದರೆ ಅವರು ನಮ್ಮ ರಾಷ್ಟ್ರದ ನಾಡಿನ ಒಂದು ದೊಡ್ಡ ಆಸ್ತಿಯಾಗಿ ಪರಿಣಮಿಸಬಹುದು ಇಲ್ಲದೇ ಹೋದರೆ ಅವರ ಜೀವನ ಸಮರ್ಥವಾಗಲಾರದೇ ಯಾವುದೋ ಒಂದು ಸುಳಿವಿಗೆ ಬಿದ್ದು ಅವರ ಜೀವನ ಅವರ ಭವಿಷ್ಯ ಒಳ್ಳೆಯದಾಗಲಿಕ್ಕಿಲ್ಲ ಎಂದು ತಿಳಿಸಬಯಸುತ್ತೇನೆ.

[MR. SPEAKER in the Chair]

ಅದು ಏನೇ ಇರಲಿ ಮೊದಲಿನ ಪರಿಸ್ಥಿತಿಗೂ ಮತ್ತು ಈಗಿನ ಪರಿಸ್ಥಿತಿಗೂ ಸಾಕಾದಷ್ಟು ವ್ಯತ್ಯಾಸ ನಮಗೆ ಕಾಣುತ್ತಾ ಇದೆ. ಹಿಂದಿನ ಪರಿಸ್ಥಿತಿಯಲ್ಲಿ ಶಿಕ್ಷಕರು ಮತ್ತು ವಿದ್ಯಾರ್ಥಿಗಳಲ್ಲಿ ನಿಕಟವಾದ ಸಂಬಂಧ ಬೆಳೆದು ಬರುತ್ತಾ ಇತ್ತು. ಶಿಕ್ಷಕರು ವಿದ್ಯಾರ್ಥಿಗಳಿಗೆ ಬಹಳ ಹತ್ತಿರದಲ್ಲಿ ಇದ್ದು ವಿದ್ಯಾರ್ಥಿಯ ಜೀವನದ ಮೇಲೆ ತಮ್ಮ ಪ್ರಭಾವವನ್ನು ಬೀರುತ್ತಾ ಇದ್ದರು. ವಿದ್ಯಾರ್ಥಿಯು ಪ್ರತಿಭಾವಂತನಾಗಿ ಇರುತ್ತಾ ಇದ್ದ, ಈಗಿನ ಪರಿಸ್ಥಿತಿ ಹಾಗಿಲ್ಲ. ವಿದ್ಯಾರ್ಥಿಗೂ, ಶಿಕ್ಷಕರಿಗೂ ಯಾವ ವಿಧವಾದ ಸಂಪರ್ಕವೂ ಇಲ್ಲದೇ ಇರುವುದಕ್ಕೆ ಅನೇಕ ಕಾರಣಗಳು ಉಂಟು. ಶಿಕ್ಷಕರ ಸಂಖ್ಯೆ ಕಡಿಮೆ. ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚು ಇದು ಒಂದು ಕಾರಣ. ಎಂದರೆ ತಪ್ಪಾಗಲಿಕ್ಕಿಲ್ಲ. ಈ ದೃಷ್ಟಿಯಿಂದ ವಿದ್ಯಾರ್ಥಿಗಳ ನೈತಿಕ ಮಟ್ಟ ಏರಿಸುವುದರ ಸಲುವಾಗಿ, ಅವರ ಪ್ರಭಾವ ಬೆಳೆಸುವಂತಹ ಶಿಕ್ಷಕರನ್ನು ಒದಗಿಸಿ ಅವರ ಭವಿಷ್ಯವನ್ನು ರೂಪಿಸುವ ಒಂದು ಪ್ರಸಂಗವನ್ನು ಉಂಟು ಮಾಡಬೇಕೆಂದು ಈ ಸಂದರ್ಭದಲ್ಲಿ ಕೇಳಿಕೊಳ್ಳುತ್ತೇನೆ. ಇನ್ನು ನಮ್ಮ ರಾಜ್ಯದ ವಿದ್ಯಾಭ್ಯಾಸದ ಕ್ರಮದಲ್ಲಿ ಒಂದು ತೆರನಾದ ಪರಿಸ್ಥಿತಿ ಇಲ್ಲ. ಹೈದರಾಬಾದು ಕರ್ನಾಟಕದಲ್ಲಿ ಒಂದು ರೀತಿ ಅನುಸರಿಸಿದರೆ, ಬೊಂಬಾಯಿ ಕರ್ನಾಟಕದಲ್ಲಿ ಒಂದು ರೀತಿಯ ವಿಶಿಷ್ಟಪದ್ಧತಿಯನ್ನು ಅನುಸರಿಸುತ್ತಾ ಇದ್ದಾರೆ. ಉದಾಹರಣೆಗೆ ಬೊಂಬಾಯಿ ಕರ್ನಾಟದಲ್ಲಿ ಡಿಸ್ಟ್ರಿಕ್ಟ್ ಮತ್ತು ತಾಲ್ಲೂಕು ಬೋರ್ಡ್ ಹೈಸ್ಕೂಲುಗಳು ಇದ್ದರೆ ಹೈದರಾಬಾದು ಕರ್ನಾಟದಲ್ಲಿ ಮತ್ತು ಇತರ ಭಾಗಗಳ ಸ್ಥಿತಿಯೇ ಬೇರೆ ಇದೆ. ವಿದ್ಯಾಭ್ಯಾಸದ ಕ್ರಮದಲ್ಲೂ ಕೂಡ ಸಿಲಬಸ್‌ನಲ್ಲಿ ವ್ಯತ್ಯಾಸ ಕಂಡುಬರುತ್ತಾ ಇದೆ. ಆದ್ದರಿಂದ ಸರ್ಕಾರದವರಿಗೆ ಇದು ಒಂದು ತಲೆಬೇನೆಯಾಗಿ ಪರಿಣಮಿಸಿರಬಹುದು. ಒಂದೇ ತೆರನಾದ ಒಂದು ಪದ್ಧತಿಯನ್ನು ನಮ್ಮ ಸರ್ಕಾರದವರು ಕಾರ್ಯಾಚರಣೆಗೆ ತಂದರೆ ದೇಶಕ್ಕೂ ಒಳ್ಳೆಯದು ಮತ್ತು ಜನರಿಗೂ ಒಳ್ಳೆಯದಾಗುತ್ತದೆ ಎಂದು ಹೇಳುತ್ತೇನೆ. ರಾಜ್ಯದಾದ್ಯಂತ ಒಂದು ರೀತಿಯಲ್ಲಿ ಡಿಸ್ಟ್ರಿಕ್ಟ್ ಸ್ಕೂಲ್‌ಬೋರ್ಡ್‌ಗಳನ್ನು ಸ್ಥಾಪನೆ ಮಾಡಬೇಕು ಇಲ್ಲದೆ ಇದ್ದರೆ ಅವುಗಳನ್ನು ತೆಗೆದುಹಾಕಿ ಒಂದೇ ರೀತಿಯ ಶಿಕ್ಷಣ ಪದ್ಧತಿಯನ್ನು ಎಲ್ಲಾ ಕಡೆಯಲ್ಲೂ ಜಾರಿಗೆ ತರಬೇಕೆಂದು ಸೂಚಿಸಬಯಸುತ್ತೇನೆ.

ಹೈದರಾಬಾದು ಕರ್ನಾಟಕದಲ್ಲ ಪ್ರಾಥಮಿಕ ಮತ್ತು ಮಾಧ್ಯಮಿಕ ಶಾಲೆ ವಿಶೇಷವಾಗಿ ಫಸ್ಟ್ರೇಡ ಶಾಲೆಗಳಲ್ಲಿ ಇನ್ನೂ ಮೆಟ್ರಿಕ್ ಪಾಸ್ ಆದ ಶಿಕ್ಷಕರೇ ಕೆಲಸ ಮಾಡುತ್ತಾ ಇರುವುದು ಶೋಚನೀಯವಾದ ವಿಷಯ. ಅಲ್ಲಿ ಓದುತ್ತಿರುವ ವಿದ್ಯಾರ್ಥಿಗಳು ಎಸ್. ಎಸ್. ಎಲ್. ಸಿ. ಪರೀಕ್ಷೆ ಪಾಸ್ ಮಾಡಿ ಪಿ. ಯು. ಸಿ.ಗೆ ಹೋಗುವವರು ಇರುತ್ತಾರೆ. ಅವರಿಕೆ ಕೇವಲ ಮೆಟ್ರಿಕ್ ಪಾಸ್ ಆದ ಶಿಕ್ಷಕರಿಂದ ಶಿಕ್ಷಣ ಕೊಡಿಸುವುದು ಸರಿಯಲ್ಲ. ಆದ್ದರಿಂದ ಸರ್ಕಾರದವವರು ಈ ಬಗ್ಗೆ ಹೆಚ್ಚು ಲಕ್ಷ ವಹಿಸಿ ಹೈಸ್ಕೂಲುಗಳಲ್ಲಿ ಕಡ್ಡಾಯವಾಗಿ ಪದವೀಧರರನ್ನೇ ನೇಮಿಸಬೇಕು, ಇತರರನ್ನು ನೇಮಿಸಬಾರದು ಎಂದು ಈ ಮೂಲಕ ಸರ್ಕಾರದವರಲ್ಲಿ ವಿನಯಪೂರ್ವಕವಾಗಿ ಬೇಡಿಕೊಳ್ಳುತ್ತೇನೆ. ಮಿಡ್ಲ್‌ಸ್ಕೂಲುಗಳಲ್ಲೂ ಕೂಡ ಅದೇ ರೀತಿ ಇದೆ. ಮಿಡ್ಲ್‌ಸ್ಕೂಲ್ ಹೆಡ್‌ಮಾಸ್ಟರು ಕನಿಷ್ಠ ಪದವೀಧರರಾಗಿರಬೇಕು ಮತ್ತು ಇವರು ಇಂಗ್ಲೀಷ್ ಅಗಲಿ ಗಣಿತಶಾಸ್ತ್ರವನ್ನಾಗಲಿ ಹೇಳಿಕೊಡಬೇಕು. ಇಂತಹ ವ್ಯವಸ್ಥೆಯನ್ನು ಮಾಡಬೇಕೆಂದು ಹೇಳಬಯಸುತ್ತೇನೆ.

3-30 P. M.

ಇನ್ನು ತಾಂತ್ರಿಕ ಶಾಲಾಕಾಲೇಜುಗಳ ವಿಚಾರಕ್ಕೆ ಬಂದರೆ ಈ ವಿಷಯದಲ್ಲಿ, ಈ ದಿಶೆಯಲ್ಲಿ ನಮ್ಮ ಹೈದ್ರಾಬಾದ್ ಕರ್ನಾಟಕ ಇನ್ನೂ ಬಹಳ ಹಿಂದುಳಿದ ಪ್ರದೇಶ ಎಂದರೆ ಅದು ತಪ್ಪಾಗ

(ಶ್ರೀ ಕೆ. ಎಸ್. ಸಂಗನಗೌಡ)

ಲಾರದು. ಅಲ್ಲಿಯ ಹುಡುಗರ ಶೊಂದರೆಯನ್ನು ಇಷ್ಟೇ ಎಂದು ಹೇಳುವುದಕ್ಕಾಗುವುದಿಲ್ಲ. ಕಾರಣ ಅಲ್ಲಿ ಬಹಳ ಕಾಲದಿಂದಲೂ ಶಿಕ್ಷಣ ಪ್ರಸಾರಕಾರ್ಯ ಆಗುತ್ತಿರಲಿಲ್ಲ. ಇದನ್ನು ಸರ್ಕಾರದವರು ಗಮನದಲ್ಲಿಟ್ಟುಕೊಂಡು ಅಲ್ಲಿಯ ವಿದ್ಯಾರ್ಥಿಗಳಿಗೆ ತಾಂತ್ರಿಕ ಶಾಲಾಕಾಲೇಜುಗಳಲ್ಲಿ ಸೀಟನ್ನು ಒದಗಿಸುವುದಕ್ಕೆ ಪ್ರಯತ್ನ ಮಾಡಬೇಕು. ಹಾಗೆ ಮಾಡದಿದ್ದರೆ ಅವರಿಗೆ ಈ ವಿದ್ಯೆ ಒಂದು ಗಗನ ಕುಸುಮವೇ ಸರಿ. ಮೆಡಿಕಲ್ ಮತ್ತು ಇಂಜನಿಯರಿಂಗ್ ಹಾಗೂ ತಾಂತ್ರಿಕ ಶಾಲೆಗಳಲ್ಲಿ ಷೆಡ್ಯೂಲ್ ಪಂಗಡಗಳಿಗೆ ರಾಜ್ಯಾಂಗದಲ್ಲಿ ರಿಜರ್ವ್ ಮಾಡಿರುವಂತೆ ಇಲ್ಲವೇ ಸೋಷಿಯಲಿ, ಎಜುಕೇಷನಲಿ, ಬ್ಯಾಕ್‌ವರ್ಡ್ ಎಂದು ಹೇಳಿರತಕ್ಕ ಜನರಿಗೆ ಹೇಗೆ ಸೀಟುಗಳನ್ನು ರಿಜರ್ವ್ ಮಾಡಲಾಗುತ್ತಿದೆಯೋ ಹಾಗೆ ಈ ವಿದ್ಯಾಭ್ಯಾಸದಲ್ಲಿ ಬಹಳ ಹಿಂದುಳಿದಿರತಕ್ಕ ನಮ್ಮ ಹೈದ್ರಾಬಾದ್ ಕರ್ಣಾಟಕ ಪ್ರದೇಶದ ಹುಡುಗರಿಗೆ ಅಂದರೆ ಗ್ರಾಮಾಂತರ ಪ್ರದೇಶಗಳಿಂದ ಬರತಕ್ಕ ವಿದ್ಯಾರ್ಥಿಗಳಿಗೆ ನೂರಕ್ಕೆ 25 ರಂತೆ ಆದರೂ ಸೀಟುಗಳನ್ನು ರಿಜರ್ವ್ ಮಾಡಬೇಕೆಂದು ಸರ್ಕಾರದವರಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಹೀಗೆ ಮಾಡತಕ್ಕದ್ದು ಬಹಳ ನ್ಯಾಯ್ಯಾರ್ಹವಾದುದು ಎಂದು ಹೇಳುತ್ತೇನೆ. ಪಟ್ಟಣಗಳಲ್ಲಿರತಕ್ಕ ಹುಡುಗರೊಂದಿಗೆ ಗ್ರಾಮಾಂತರ ಪ್ರದೇಶದಲ್ಲಿರತಕ್ಕ ಹುಡುಗರು ಸ್ಪರ್ಧೆ ಮಾಡುವುದಕ್ಕಾಗುವುದಿಲ್ಲ. ಪಟ್ಟಣಗಳಲ್ಲಿರತಕ್ಕ ಹುಡುಗರಿಗೆ ಎಲ್ಲಾ ವಿದ್ಯಾಸೌಲಭ್ಯಗಳೂ ಅಂದರೆ ಉತ್ತಮ ಶಿಕ್ಷಕರು, ಎಕ್ವಿಪ್‌ಮೆಂಟ್ ಮತ್ತು ಲೈಬ್ರರಿ ಇತ್ಯಾದಿ ಸೌಲಭ್ಯಗಳು ಇದ್ದಹಾಗೆ ಗ್ರಾಮಾಂತರ ಪ್ರದೇಶದಲ್ಲಿ ಇರುವುದಿಲ್ಲ. ಆದುದರಿಂದ ಈ ದಿವಸ ಗ್ರಾಮಾಂತರ ಪ್ರದೇಶದಲ್ಲಿರತಕ್ಕ ಹುಡುಗರು ಪಟ್ಟಣಗಳಲ್ಲಿರ ತಕ್ಕ ಹುಡುಗರಿಗೆ ಸರಿಯಾಗಿ ನಂಬರುಗಳನ್ನು ಪರೀಕ್ಷೆಯಲ್ಲಿ ಪಡೆಯಲು ಸಾಧ್ಯವಿಲ್ಲ; ಅದಕ್ಕಾಗೇ ಗ್ರಾಮಾಂತರದಲ್ಲಿರತಕ್ಕ ಹುಡುಗರು ಕಡಮೆ ನಂಬರುಗಳನ್ನು ಪಡೆಯುತ್ತಿದ್ದಾರೆ. ಇದು ಇವರ ವಿದ್ಯಾಭ್ಯಾಸದಲ್ಲಿರತಕ್ಕ ಮೂಲ ವ್ಯತ್ಯಾಸಕ್ಕೆ ಕಾರಣವಾಗಿದೆ. ಈ ವಿಚಾರವನ್ನು ಸರ್ಕಾರದವರು ಗಮನದಲ್ಲಿಟ್ಟುಕೊಂಡು ಗ್ರಾಮಾಂತರ ಪ್ರದೇಶದ ಹುಡುಗರಿಗೆ ತಾಂತ್ರಿಕ ಕಾಲೇಜುಗಳಲ್ಲಿ ಸೀಟನ್ನು ರಿಜರ್ವ್ ಮಾಡಬೇಕೆಂದು ಪ್ರಾರ್ಥಿಸುತ್ತೇನೆ.

ಇನ್ನು ಕಾಲೇಜ್ ಮಟ್ಟದಲ್ಲಿ ಹುಡುಗರಿಗೆ ವಯೋಮಿತಿಯನ್ನು ವಿಧಿಸಿರತಕ್ಕದ್ದು ಸರಿಯಲ್ಲ. ಇದನ್ನು ಕೂಡಲೇ ಪುನರ್ವಿಮರ್ಶೆಮಾಡಿ ಇದನ್ನು ತೆಗೆದುಹಾಕಬೇಕೆಂದು ಕೇಳಿಕೊಳ್ಳುತ್ತೇನೆ. ಈ ವಯೋಮಿತಿಯನ್ನು ನಾನು ಇಡಬಾರದು ಎಂದು ಹೇಳುತ್ತೇನೆ.

ಇನ್ನು ಪ್ರಾಥಮಿಕ ಶಾಲಾ ಕಟ್ಟಡಗಳ ವಿಚಾರಕ್ಕೆ ಬಂದರೆ ಈ ಕಟ್ಟಡಗಳಿಗಾಗಿ ಲೋಕಲ್ ಕಾಂಟ್ರಿಬ್ಯೂಷನ್ನನ್ನು ತೆಗೆದುಕೊಳ್ಳುತ್ತಿದ್ದಾರೆ. ಆದರೆ ಅಲ್ಲಿ ಕೆಲಸಮಾಡತಕ್ಕ ಉಪಾಧ್ಯಾಯರಿಗೆ ವಸತಿ ಸೌಕರ್ಯಗಳನ್ನು ಕಲ್ಪಿಸಿರುವುದಿಲ್ಲ. ಹಾಗೆ ಕಲೆಕ್ಟ್‌ಮಾಡತಕ್ಕ ಲೋಕಲ್ ಕಾಂಟ್ರಿಬ್ಯೂಷನ್ನಿನಲ್ಲಿ ಕೆಲವು ಭಾಗವನ್ನು ಈ ವಸತಿ ಸೌಕರ್ಯಗಳನ್ನು ಕಲ್ಪಿಸಲು ರಿಜರ್ವ್‌ಗಿಡಬೇಕೆಂದೂ ತಮ್ಮಮೂಲಕ ಆ ಉಪಾಧ್ಯಾಯರುಗಳಿಗೆ ಅನುಕೂಲ ಮಾಡಿಕೊಡಬೇಕೆಂಬ ಒಂದು ಸೂಚನೆಯನ್ನು ಕೊಡಬಯಸುತ್ತೇನೆ. ಇನ್ನು ನಮ್ಮ ಗುಲ್ಬರ್ಗ ಡಿವಿಜನ್ನಿನಲ್ಲಿ ಅನೇಕ ತಾಂತ್ರಿಕ ಶಾಲೆಗಳೂ, ಆರ್ಟ್ಸ್ ಮತ್ತು ಸೈನ್ಸ್ ಕಾಲೇಜುಗಳೂ ಅನೇಕವಾಗಿ ಬೆಳೆದು ಈ ದಿವಸ ಗುಲ್ಬರ್ಗ ಪಟ್ಟಣವು ಬೆಂಗಳೂರು, ಹೈದ್ರಾಬಾದ್ ನಗರಗಳಿಗೆ ಸರಿಸಮಾನವಾಗಿರುವಂತೆ ಕಂಡುಬರುತ್ತಿದೆ. ಇದು ಬಹಳ ಸಂತೋಷದ ವಿಷಯ. ಆದುದರಿಂದ ಅಲ್ಲ ಒಂದು ವಿಶ್ವವಿದ್ಯಾನಿಲಯವನ್ನು ಸರ್ಕಾರದವರು ಸ್ಥಾಪನೆಮಾಡಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಈಗ ಇದಕ್ಕೆ ಒಂದು ಯೋಗ್ಯ ಸಮಯಬಂದಿರುವುದರಿಂದ ಮಾನ್ಯ ವಿದ್ಯಾಸಚಿವರಲ್ಲೂ ಮತ್ತು ಮಾನ್ಯ ಮುಖ್ಯ ಮಂತ್ರಿಗಳಲ್ಲೂ ಅಲ್ಲಿ ಒಂದು ವಿಶ್ವವಿದ್ಯಾನಿಲಯವನ್ನು ಸ್ಥಾಪನೆಮಾಡಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಇನ್ನು ರಾಯಚೂರು ಜಿಲ್ಲೆಯ ದೃಷ್ಟಿಯಿಂದ ಹೇಳುವುದಾದರೆ ಈಗಾಗಲೇ ಹೇಳಿರುವಂತೆ ಅಲ್ಲಿ ಒಂದು ಅಗ್ರಿಕಲ್ಚರಲ್ ಕಾಲೇಜನ್ನು ಸ್ಥಾಪಿಸಬೇಕಾದ್ದು ಅತ್ಯಗತ್ಯ. ಈ ಬಗ್ಗೆ ಮಾನ್ಯ ಮುಖ್ಯ ಮಂತ್ರಿಗಳೂ ಕೂಡ ಒಂದು ಭರವಸೆಯನ್ನು ಇತ್ತಿದ್ದಾರೆ. ಹಾಗೆ ಕೊಟ್ಟಿರತಕ್ಕ ವಚನವನ್ನು ಒಂದು ನಿರ್ದಿಷ್ಟಕಾಲದಲ್ಲಿ ಅವರು ಪರಿಪಾಲನೆ ಮಾಡುತ್ತಾರೆಂಬ ಬಗ್ಗೆ ನಾವೆಲ್ಲರೂ ಒಂದು ವಿಶ್ವಾಸವನ್ನು ತಾಳಿದ್ದೇವೆ; ಅವರ ಮಾತಿನಲ್ಲಿ ನಾವು ನಂಬಿಕೆಯನ್ನು ಇಟ್ಟುಕೊಂಡಿದ್ದೇವೆ. ಅವರು ಈ ಅಧಿವೇಶನ ಮುಗಿಯುವುದರೊಳಗಾಗಿ ಈ ವಿಚಾರದಲ್ಲಿ ಒಂದು ನಿರ್ದಿಷ್ಟವಾದ ನಿಲುವನ್ನು ವ್ಯಕ್ತಪಡಿಸಿ ಅದನ್ನು ಮಾಡುತ್ತಾರೆಂದು ಆಶಿಸಿ ನನಗೆ ಈ ಎರಡು ಮಾತುಗಳನ್ನಾಡುವುದಕ್ಕೆ ಅವಕಾಶ ಮಾಡಿಕೊಟ್ಟ ಅಧ್ಯಕ್ಷರಿಗೆ ನನ್ನ ವಂದನೆಗಳನ್ನರ್ಪಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

Sri K. V. SHANKARA GOWDA.—With regard to the point raised by the hon'ble member Sri Sivappa, I would submit like this. The demand is for the entire amount of Rs. 33,57,28,700. The cut proposed and intended to be brought about is only a proposal for economy. We intend practising some economy and cut down the expenditure in respect of certain items. If the hon'ble member goes through line 3 on page 4 of the Government Order it will be clearly seen that the reduction amounting to Rs. 2,65,00,000 as shown in the Annexure is only anticipated and provisionally approved subject to further review. It is only provisional. We intend to bring about this economy, but we are not sure whether we will be able to achieve it and, therefore, the demand is for the entire amount of the grant, namely, Rs. 33,57,28,700.

Sri H. SIDDAVEERAPPA.—Arising out of this, I would like to submit that this is indeed very strange way of putting it. I am unable to understand the difference between intention and what they propose to do. Now is this done with a view to, if I may use that word, deceive us telling us that they propose to introduce economy, or do they really and sincerely believe in trying to translate into action what they propose to do in this Government Order ? In other words, is it only a make belive thing or a thing that is intended to be acted upon? Otherwise it is not even worthy of the paper on which it is printed.

Mr. SPEAKER.—The Minister will reply to it in the course of his reply.

Now I call upon Sri M. S. Krishnan. Before Sri Krishnan begins, I am happy to inform the House that both the Whips have met and it is agreed between the Treasury Benches and the Opposition that the whole of today will be open for debate and we will sit till 7 O'clock today because Education is the basis of everything and it is very important and a large number of members are very anxious to participate. Therefore we will devote the whole of today for the debate and the Hon'ble Minister will kindly reply tomorrow. The House will sit from 12 O' clock tomorrow. From 12 NOON to 1 P.M. there will be question hour and thereafter at 1 O' clock the Minister will reply.

ಶ್ರೀ ಎಂ. ಎಸ್. ಕೃಷ್ಣನ್ (ಮಲ್ಲೇಶ್ವರ).—ಮಾನ್ಯ ಸಭಾಪತಿಗಳೇ, 33 ಕೋಟಿ ರೂಪಾಯಿಗಳನ್ನು ವಿದ್ಯಾಭ್ಯಾಸಕ್ಕೆಂದು ಮಾನ್ಯ ಮಂತ್ರಿಗಳು ಕೇಳಿದ್ದಾರೆ. ವಿದ್ಯಾಭ್ಯಾಸ ಬಹಳ ಮುಖ್ಯವಾದದು ಅನ್ನುವುದು ನಿಜ. ಇದರ ಬಗ್ಗೆ ಇನ್ನೂ ಹೆಚ್ಚಿನ ಹಣವನ್ನು ಕೇಳಿದ್ದರೂ ಸಹಾ ನಾವೇನೂ ಇವರ ಬಗ್ಗೆ ದುಃಖಪಡಬೇಕಾಗಿದ್ದಿರಲಿಲ್ಲ. ಆದರೆ ಇದು ಒಂದು ಸರಿಯಾದ ರೀತಿಯಲ್ಲಿ, ನ್ಯಾಯವಾದ ರೀತಿಯಲ್ಲಿ, ಒಂದು ಗುರಿ-ಧ್ಯೇಯವನ್ನು ಸಾಧನೆಮಾಡತಕ್ಕದ್ದಾಗಿದ್ದರೆ ಮಾನ್ಯತೆ ಮಾಡಬಹುದಾಗಿತ್ತು. ಆದರೆ ನಾನು ಇಲ್ಲಿಯವರೆಗೂ ನೋಡಿದ್ದರಲ್ಲಿ ನಮ್ಮ ಸರ್ಕಾರ ಈ ವಿದ್ಯಾಭ್ಯಾಸದ ವಿಚಾರದಲ್ಲಿ ಒಂದು ನಿರ್ದಿಷ್ಟವಾದ ಗುರಿಯನ್ನಾಗಲಿ, ಧ್ಯೇಯವನ್ನಾಗಲಿ ಒಂದು ನಿಯೋಜಿತ ರೀತಿಯಲ್ಲಿ ಇಟ್ಟುಕೊಂಡಿಲ್ಲ ಎಂದು ಹೇಳಬೇಕಾಗಿದೆ. ನಮ್ಮ ವಿದ್ಯಾಭ್ಯಾಸದ ವಿಚಾರದಲ್ಲಿ ಇಲ್ಲಿಯೂ ಮತ್ತು ಹೊರಗಡೆಯೂ ಸಹಾ ಅನೇಕರು ಮಾತನಾಡುತ್ತಿದ್ದಾರೆ. ಈ ಶಾಸನ ಸಭೆಯಲ್ಲೂ ಅನೇಕರು ಹಿರಿಯರು ಮಾತನಾಡಿದ್ದಾರೆ. ನಾನು ಅದನ್ನೇ ಪುನಃ ಮಾತನಾಡಲು ಇಚ್ಛಿಸುವುದಿಲ್ಲ. ನಮ್ಮ ದೇಶದಲ್ಲಿ ಮಕ್ಕಳಿಗೆ ಕೊಡತಕ್ಕ ವಿದ್ಯಾಭ್ಯಾಸದ ಪದ್ಧತಿ ಏನಿದೆ ಎಂಬುದನ್ನು ಪರಿಶೀಲಿಸಿ ಇದು ಒಂದು ಸರಿಯಾದ ಗುರಿಯನ್ನು ಇಟ್ಟುಕೊಂಡಿದ್ದೇ ಆದರೆ ಈ ಕೇಳಿಕೆಯನ್ನು ಕೊಡಬೇಕು; ಆದರೆ ಆಳುವ ಪಕ್ಷವು ಈ ವಿದ್ಯಾಭ್ಯಾಸದ ಗುರಿಯನ್ನು ಸಮತಾವಾದಕ್ಕೆ ಅಳವಡಿಸಿಕೊಂಡು ಯಾವ ಯಾವ

(ಶ್ರೀ ಎಂ. ಎಸ್. ಕೃಷ್ಣನ್)

ಹಂತದಲ್ಲಿ ಹೇಗೆ ಇದನ್ನು ಜಾರಿಗೆ ತಂದರೆ ನಾವು ಒಂದು ಗುರಿಯನ್ನು ಮುಟ್ಟಬಹುದು ಎಂಬುದನ್ನು ಆಲೋಚನೆ ಮಾಡಿದಂತೆ ಕಂಡುಬರುವುದಿಲ್ಲ. ಆದುದರಿಂದ ಈ ದಿವಸ ನಮ್ಮ ವಿದ್ಯಾರ್ಥಿಗಳಿಗೆ ಸರ್ಕಾರ ಕೊಡುತ್ತಿರುವ ವಿದ್ಯಾ ಲಾಯಖಾದುದಲ್ಲ ಎಂದು ಹೇಳುತ್ತೇನೆ. ಈ ವಿಚಾರದಲ್ಲಿ ಇಲ್ಲಿಯವರೆಗೂ ಸರ್ಕಾರದವರು ಅನೇಕ ಸಮಿತಿಗಳನ್ನು ರಚಿಸಿದ್ದಾರೆ. ಈ ವಿಚಾರವನ್ನು ರಾಧಾಕೃಷ್ಣನ್ ಅವರ ಸಮಿತಿ ಪರ್ಯಾಲೋಚನೆ ಮಾಡಿದ್ದಾಯಿತು. ಈಗ ಕೊಠಾರಿ ಸಮಿತಿಯವರು ಕೊಟ್ಟಿರುವ ವರದಿಯನ್ನು ಪರಿಶೀಲನೆ ಮಾಡುತ್ತಿದ್ದಾರೆಂದು ಸರ್ಕಾರದವರು ಹೇಳುತ್ತಿದ್ದಾರೆ. ಆದರೆ ಅವರು ಇದನ್ನು ಪರಿಶೀಲನೆ ಮಾಡಿ, ಅದನ್ನು ನಾವು ಇಲ್ಲಿ ಚರ್ಚೆ ಮಾಡುವುದರೊಳಗೆ, ಮತ್ತೆಲ್ಲಿ ಇನ್ನೊಂದು ಸಮಿತಿಯನ್ನು ಸರ್ಕಾರದವರು ನೇಮಕ ಮಾಡುತ್ತಾರೋ ಅನ್ನೋ ಶಂಕೆ ನಮಗುಂಟಾಗಿದೆ. ನಮ್ಮಲ್ಲಿರತಕ್ಕ ಇಂದಿನ ವಿದ್ಯಾಭ್ಯಾಸ ಕ್ರಮದ ಬಗ್ಗೆ ಹೇಳುವುದಾದರೆ, ಇದು ವಿದ್ಯಾರ್ಥಿಗಳನ್ನು ''ಗಿನಿಪಿಗ್ಸ್'' ನಂತೆ ನೋಡಿಕೊಳ್ಳುತ್ತಿರುವಂತಹ ವಿದ್ಯಾಭ್ಯಾಸವಾಗಿದೆ ಎನ್ನಬಹುದು. ಗಿನಿಪಿಗ್ಸ್ ಎಂದರೆ ಅವುಗಳನ್ನು ಹಂದಿಗಳು ಎಂದು ಕೆಲವರು ಹೇಳುತ್ತಿದ್ದರೂ ಅವು ಒಂದು ಜಗೆಯ ಬಿಳಿ ಇಲಿಗಳೇ. ಅವುಗಳನ್ನು ಪ್ರಯೋಗಕ್ಕಾಗಿ ಉಪಯೋಗಿಸಲಾಗುತ್ತಿದೆ. ಅವುಗಳ ಗತಿಯೇ ನಮ್ಮ ವಿದ್ಯಾರ್ಥಿಗಳ ಗತಿಯಾಗಿದೆ. ಸಮತಾವಾದ ಎಂಬುದು ಬರೀ ಮಾತಾಗಿದೆ.

ಶ್ರೀ ಬಿ. ಡಿ. ಜತ್ತಿ (ಆಹಾರ ಮತ್ತು ನಿತ್ಯೋಪಯೋಗಿ ಶಾಖೆಗಳ ಮಂತ್ರಿಗಳು).—ಸಮತಾವಾದ ಪದ್ಧತಿಗೆ ತಾವು ಕಮ್ಯೂನಿಸ್ಟ್ ಪದ್ಧತಿ ಅಂತ ಕರೆಯುತ್ತೀರಲ್ಲವೇ ?

ಶ್ರೀ ಎಂ. ಎಸ್. ಕೃಷ್ಣನ್.—ಮಾನ್ಯ ಮಂತ್ರಿಗಳು ಪೇಪರನ್ನು ಓದಿದ್ದರೆ ಅವರು ಈ ಪ್ರಶ್ನೆಯನ್ನೇ ಕೇಳುತ್ತಿರಲಿಲ್ಲ ಎಂದು ಹೇಳುತ್ತೇನೆ. ಜುಲೈ 14ನೇ ತಾರೀಖಿನ 'ಡೆಕ್ಕನ್ ಹೆರಾಲ್ಡ್' ಪತ್ರಿಕೆಯನ್ನು ತಾವು ನೋಡಲಿಲ್ಲ. ಅದರಲ್ಲಿ ಡಾ. ಕೊಠಾರಿಯವರು ಯಾವ ರೀತಿಯ ಒಂದು ಪ್ರತಿಕ್ರಿಯೆ ವ್ಯಕ್ತಪಡಿಸಿದ್ದಾರೆಂಬುದನ್ನು ಓದುತ್ತೇನೆ. ಅವರು ಸೋವಿಯತ್ ರಷ್ಯಾಕ್ಕೆ ಇತರ 11 ಜನರೊಂದಿಗೆ ಹೋಗಿದ್ದಾರೆ. ಅವರ ಪ್ರವಾಸದ ಬಗ್ಗೆ ಈ ರೀತಿ ಹೇಳುತ್ತಾರೆ:—

"How the Soviet Union achieved great prosperity through proper planning, determination and a well-defined goal for education and how India made a mess of education and of the country through lack of them was yesterday brought out by Dr. D. S. Kothari, University Grants Commission Chairman.

He found that the educational revolution in the Soviet Union had transformed that country in just a generation or two from a land of poverty into one of prosperity.

Everybody in the Soviet Union was given the fullest opportunity to learn as much as he wanted and was assured employment immediately after the completion of studies.

Dr. Kothari referred to the chaotic condition prevailing in the Indian educational scene and said a great country must have a great national goal and this should reflect in the educational system.

In the Soviet Union the national goal of education was furthering communism and the role of teachers in this great task had been recognised.

The measure of respect a teachear there commanded could be gauged from the fact that tens of thousands of them were elected Deputies to the Supreme Soviet. In India teachers had no status.

Dr. Kothari stressed that the second half of the country in India, as elsewhere in the world, should be an era of educational revolution with education producing great engineers and scientists and industry getting greatly accelerated.

There was no point in having a confused goal in education and if India's goal in education and if India's goal was Socialism, there should be no hesitation in stressing it at all levels of education."

ಆದ್ದರಿಂದ ಮಾನ್ಯ ಮಂತ್ರಿಯವರು ಹೇಳಿದ್ದಕ್ಕೆ ಡಾ. ಕೊಠಾರಿಯವರು ಉತ್ತರ ಕೊಟ್ಟಿದ್ದಾರೆ.

ಶ್ರೀ ಕೆ. ವಿ. ಶಂಕರ ಗೌಡ.—ಸೋವಿಯತ್ ರಷ್ಯಾದವರ ಎಷ್ಟು ವರ್ಷ ತೆಗೆದುಕೊಂಡರು !

ಶ್ರೀ ಬಿ. ಪಿ ಗಂಗಾಧರ್ (ತುಮಕೂರು).—ನಿಮ್ಮ ಕೈಯಲ್ಲಿ 10 ಶತಮಾನಗಳಾದರೂ ಸಾಧ್ಯವಿಲ್ಲ.

ಶ್ರೀ ಎಂ. ಎಸ್. ಕೃಷ್ಣನ್.—ಮುಖ್ಯ ಮಂತ್ರಿಗಳು ಜಪಾನ್‌ಗೆ ಹೋಗುವ ಬದಲು ಮಾನ್ಯ ವಿದ್ಯಾಸಚಿವರು ಸೋವಿಯತ್ ರಷ್ಯಾಕ್ಕೆ ಹೋಗಿ ಬಂದರೆ ಒಳ್ಳೆಯದು. ಇಲ್ಲಿ ನಾನು ಹೇಳುತ್ತಿರುವುದು ಅವರ ಒಂದು ಗುರಿಯ ಬಗ್ಗೆ. ಆ ಗುರಿ ಮುಟ್ಟಬೇಕಾದರೆ, ಅದು ಒಂದು ಪ್ರಗತಿಪರವಾದ ವಿದ್ಯಾಭ್ಯಾಸ ಪದ್ಧತಿಯ ಮೂಲಕ ಎಂದು ನಾನು ಹೇಳುತ್ತೇನೆ. ಎರಡನೆಯದು ಈ ಶಾಲಾ ಮಟ್ಟದಲ್ಲಿ ಕಂಡುಬರುತ್ತಿರುವ ವಿದ್ಯಾಭ್ಯಾಸ ಅಂದರೆ, ಪ್ರಾಥಮಿಕ ವಿದ್ಯಾಭ್ಯಾಸವಾಗಲಿ, ಹೈಸ್ಕೂಲು ವಿದ್ಯಾಭ್ಯಾಸವಾಗಲೀ, ಕಾಲೇಜು ವಿದ್ಯಾಭ್ಯಾಸವಾಗಲಿ, ಇದು ಎಲ್ಲಾ ಒಂದು ರಂಗಸ್ಥಳವಾಗಿ ಕಂಡುಬರುತ್ತಿದೆ. ಇದರಿಂದ ಅದಕ್ಷತೆ ಹಾಗೂ ಸರಿಯಾದ ವಿದ್ಯಾಭ್ಯಾಸ ಕಂಡುಬಾರದಿರುವುದನ್ನು ನಾವು ನೋಡುತ್ತಿದ್ದೇವೆ.

ಇನ್ನು ಈ ಶಿಕ್ಷಕರ ಅನಾನುಕೂಲತೆಯ ಬಗ್ಗೆ ಎಲ್ಲರೂ ಮಾತನಾಡಿದ್ದಾರೆ. ನಾನು ಒಂದೆರಡು ನಿದರ್ಶನಗಳನ್ನು ಕೊಡುತ್ತೇನೆ. ನಿಮ್ಮ ಸ್ಕೂಲುಗಳು ಯಾವ ರೀತಿ ನಡೆಯುತ್ತಿದೆ ಎಂದರೆ, ಮಲ್ಲೇಶ್ವರಂನಲ್ಲಿ ಒಂದು ಮಿಡಲ್ ಸ್ಕೂಲ್ ಇದೆ. ಅದು ಮುಸ್ಲಿಂ ಸ್ಕೂಲ್. ಅಲ್ಲಿ ಹೋದರೆ, ಅದು ದನದ ಕೊಟ್ಟಿಗೆಗಿಂತ ನಾಯಿಲಾಯಕ್ಕಾಗಿದೆ. ಅಲ್ಲಿ ಒಬ್ಬರು ಹೆಡ್‌ಮಾಸ್ಟರು ದಾಡಿ ಬಿಟ್ಟುಕೊಂಡು ಮೇಲೆ ಕೂತಿರುತ್ತಾರೆ. ನೂರಾರು ಜನ ವಿದ್ಯಾರ್ಥಿಗಳು ಕೆಳಗಡೆ ಕೂತಿರುತ್ತಾರೆ. ಅದು ಇವತ್ತೋ ನಾಳೆಯೋ ಕುಸಿದು ಬೀಳುವ ಸ್ಥಿತಿಯಲ್ಲಿ ಇದೆ.

ಇನ್ನೊಂದು ನಿದರ್ಶನ. ಬೆಂಗಳೂರಿನಲ್ಲಿ ಒಂದು ಮತ್ತಿಕೆರೆ ಎಂಬ ಗ್ರಾಮ ಇದೆ. ಅಲ್ಲಿ ಒಂದು ಸ್ಕೂಲನ್ನು ಕಟ್ಟಿಬಿಟ್ಟರು. ಅಲ್ಲಿ ಕಂಟ್ರಾಕ್ಟರು ಬಂದು ಕಟ್ಟಡವನ್ನು ಕಟ್ಟಿಬಿಟ್ಟ. ಆದರೆ ಸ್ಕೂಲು ಪ್ರಾರಂಭವೇ ಆಗಲಿಲ್ಲ. ಏಕೆ ಪ್ರಾರಂಭವಾಗಿಲ್ಲವೆಂದು ಕೇಳಿದರೆ, ಆ ಕಟ್ಟಡ ಇನ್ನೊಂದು ಮತ್ತಿಕೆರೆ ಎಂಬಲ್ಲಿ ಕಟ್ಟಬೇಕಾಗಿತ್ತು. ಅದನ್ನು ತಪ್ಪಾಗಿ ಇಲ್ಲಿ ಕಟ್ಟಿಬಿಟ್ಟಿದ್ದಾರೆಂದು. ಅಂತೂ ಈಗ ಅಲ್ಲಿ 2-3 ಜನ ಮೇಸ್ಟ್ರುಗಳನ್ನು ಕಳಿಸಿದ್ದಾರೆ, ಸ್ಕೂಲು ಏನೋ ಬಂದಿದೆ. ಈ ನಿದರ್ಶನದಿಂದ ಇವರ ದಕ್ಷತೆ ಎಷ್ಟು ಇದೆ ಎಂಬುದನ್ನು ತಾವು ಯೋಚನೆ ಮಾಡಬೇಕು. ಇನ್ನು ಬೇಕಾದರೆ ಅನೇಕ ನಿದರ್ಶನಗಳನ್ನು ಕೊಡಬಹುದು. ಇವತ್ತು ವಿದ್ಯಾರ್ಥಿಗಳಿಗೆ ಓದುವುದರಲ್ಲಿ ಅನೇಕ ಅನಾನುಕೂಲಗಳು ಇವೆ. ಎಲ್ಲರೂ ಹೇಳುತ್ತಾರೆ-ಕಡ್ಡಾಯ-ಪ್ರಾಥಮಿಕ ಶಿಕ್ಷಣವೆಂದು. ಇದು ಬರೀ ಹೆಸರು. ಇವತ್ತು ಸರ್ಕಾರಿ ಕಾಲೇಜುಗಳಿಗೆ ಹೋದರೆ ಸೀಟು ಸಿಗುವುದಿಲ್ಲ, ಆದರೆ ಖಾಸಗೀ ಕಾಲೇಜಿಗೆ ಹೋದರೆ, ಅಲ್ಲಿ ದುಡ್ಡು ಕೊಡಬೇಕಾಗುತ್ತದೆ. ಅಲ್ಲಿ ಸ್ಟೂಡೆಂಟ್ ವೆಲ್‌ಫೇರ್ ಫಂಡ್, ಆ ವೆಲ್‌ಫೇರ್ ಫಂಡ್, ಈ ವೆಲ್‌ಫೇರ್ ಫಂಡ್ ಎಂದು, ಕೊನೆಗೆ ಅಲ್ಲಿಯ ಸ್ಥಾಪಕರ ಷಷ್ಠ್ಯಬ್ಧಿ ಪೂರ್ತಿಯ ಫಂಡ್ ಎಂದು ಕೂಡ ವಸೂಲು ಮಾಡುತ್ತಿದ್ದಾರೆ. ಈ ರೀತಿಯ ಒಂದು ಧೋರಣೆ ಇಟ್ಟುಕೊಂಡು ವಸೂಲು ಮಾಡಿದರೆ, ಅದು ತೀರಾ ಅನ್ಯಾಯ ಮತ್ತು ಅದನ್ನು ನಿಲ್ಲಿಸಬೇಕೆಂದು ಹೇಳುತ್ತೇನೆ.

ಇನ್ನು ಈ ಟೀಚರ್‌ಸ ಬಗ್ಗೆ ಅನೇಕ ಪ್ರಶ್ನೆಗಳು ಇವೆ. ಸಂಬಳ ಸರಿಯಾಗಿ ಸಿಗುತ್ತಾ ಇಲ್ಲ; ಸಂಬಳ ಕಡಿಮೆ ಕೊಡುತ್ತಿದ್ದಾರೆ. ಈಗ ಹೈಸ್ಕೂಲನಲ್ಲಿರುವವರಿಗೆ ಚೆಕ್ ಮೂಲಕ ಕೊಡಬೇಕೆಂದು ಹೇಳುತ್ತಾರೆ, ಸಂತೋಷ. ಅದೇ ರೀತಿ ಮಾನ್ಯ ಮಂತ್ರಿಯವರು ಪ್ರೈಮರಿ ಸ್ಕೂಲ್ ಟೀಚರ್ಸ್‌ಗೂ ಕೊಡುವ ಒಂದು ಅನುಕೂಲವನ್ನು ಮಾಡಿಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಅವರಿಗೆ ಬಹಳ ತೊಂದರೆಯಾಗುತ್ತಿದೆ. ಅವರೇ ಹೆಚ್ಚು ಜನ ಇರುವವರು. ಬರುವ ಸಂಬಳ ಬಹಳ ಕಡಿಮೆ, ಅದರಲ್ಲೂ ಕೆಲವನ್ನು ಹಿಡಿಯುತ್ತಾರೆ. ಆದ್ದರಿಂದ ಅವರಿಗೂ ಚೆಕ್ ಮೂಲಕ ಸಂಬಳ ಕೊಡುವಂತೆ ಮಾಡಬೇಕೆಂದು ನಾನು ಹೇಳುತ್ತೇನೆ.

(ಶ್ರೀ ಎಂ. ಎಸ್. ಕೃಷ್ಣನ್)

ಇನ್ನು ಹಿಂದಿಯ ವಿಚಾರ. "ಹಿಂದಿ" ರಾಷ್ಟ್ರಭಾಷೆ, ಅದನ್ನು ಬೆಳೆಸಬೇಕು ಎಂದೆಲ್ಲ ಮಂತ್ರಿಗಳು ಹೇಳುತ್ತಿರುತ್ತಾರೆ, ಆದರೆ ಈ ಹಿಂದಿಯನ್ನು ಯಾರು ಹೇಳಿಕೊಡುತ್ತಾರೋ, ಅಂಥವರಿಗೆ ಏನೂ ಅನುಕೂಲ ಮಾಡಿಕೊಡುವುದಿಲ್ಲ. ಉದಾಹರಣೆಗೆ ಬೆಂಗಳೂರು ನಗರದಲ್ಲಿ ಎಸ್.ಎಸ್.ಎಲ್.ಸಿ. ಪಾಸ್ ಆದ ಸುಮಾರು 500 ಜನ "ಪ್ರವೇಶಿಕ" ಮಾಡಿದವರನ್ನು ರಿಕ್ರೂಟ್‌ಮೆಂಟ್ ಮಾಡಿದರು. ಅವರನ್ನು ತೆಗೆದುಕೊಂಡ ಮೇಲೆ ಅವರಿಗೆ 80-150 ಒಂದು ಗ್ರೇಡಿನಲ್ಲಿ ಸಂಬಳ ನಿಷ್ಕರ್ಷೆ ಮಾಡಿದರು. ನಂತರ ಅವರು ಟ್ರೈನ್ ಆಗಿಲ್ಲವೆಂದು ಅವರ ಇನ್‌ಕ್ರಿಮೆಂಟ್ ನಿಲ್ಲಿಸಿದ್ದಾರೆಂದು ತಿಳಿದು ಬಂದಿದೆ. ಈ ರೀತಿ ಮಾಡಿದರೆ, ಯಾರು ಹಿಂದಿಯನ್ನು ಕಲಿಯುತ್ತಾರೆ ಮತ್ತು ಇದರಿಂದ ಹಿಂದಿಯನ್ನು ಬೆಳೆಸುವುದಕ್ಕೆ ಅವಕಾಶ ಮಾಡಿಕೊಟ್ಟಂತೆ ಆಗುತ್ತದೆಯೇ ಆಲೋಚಿಸಿ. ಆದ್ದರಿಂದ ನಾನಾದರೂ ಹೇಳುತ್ತೇನೆ-ಇದರ ಬಗ್ಗೆ ತಾವು ತಕ್ಷಣ ಗಮನ ಕೊಟ್ಟು ಯೋಗ್ಯ ಕಾರ್ಯಕ್ರಮ ತೆಗೆದುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನೊಂದು ವಿಷಯ. ಈ ಟೀಚರ್ಸ್ ಬಗ್ಗೆ ಅವರ ಸಂಬಳ ಸಾರಿಗೆಗಳ ಬಗ್ಗೆ ಕೊಠಾರಿಯವರ ರೆಕಮೆಂಡೇಶನ್‌ನ್ನು ಆದಷ್ಟು ತೀವ್ರವಾಗಿ ಜಾರಿಗೆ ತರಬೇಕೆಂದು ಒತ್ತಾಯ ಮಾಡುತ್ತೇನೆ.

ಇನ್ನೊಂದು ವಿಷಯ. ಯೂನಿವರ್ಸಿಟಿ ಎಜುಕೇಶನಿನ ಬಗ್ಗೆ ಹೇಳುತ್ತೇನೆ. ಬೆಂಗಳೂರು ನಗರದಲ್ಲಿರುವ ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಎಲ್ಲಾ ರೀತಿಯ, ಮೆಕ್ಯಾನಿಕಲ್, ಸಿವಿಲ್, ಎಲೆಕ್ಟ್ರಿಕಲ್ ವಿಭಾಗಗಳು ಇವೆ. ಆದರೆ ಒಂದು ವಿಭಾಗವಿಲ್ಲ. ಅದು ಎಲೆಕ್ಟ್ರಾನಿಕ್ ಇಂಜಿನಿಯರಿಂಗ್ ಮತ್ತು ಟೆಲಿ ಕಮ್ಯುನಿಕೇಶನ್ ಇಂಜಿನಿಯರಿಂಗ್. ಅದು ಇಂಡಿಯನ್ ಸಾಯನ್ಸ್ ಇನ್‌ಸ್ಟಿಟ್ಯೂಟ್‌ನಲ್ಲಿ ಮಾತ್ರ ಇದೆ. ಆದ್ದರಿಂದ ಇವು ಬಹಳ ಮುಖ್ಯವಾದುದರಿಂದ ಇದಕ್ಕೆ ತಾವು ಗಮನ ಕೊಟ್ಟು, ಈ ಕೋರ್ಸುಗಳನ್ನು ಇಂಟ್ರೊಡ್ಯೂಸ್ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಈ ಫೀಸ್ ವಿಚಾರ. ಇವತ್ತು ಎಲ್ಲಾ ವಿದ್ಯಾ ಸಂಸ್ಥೆಗಳಲ್ಲಿ ಹಾಗೂ ಇಂಜನಿಯರಿಂಗ್ ಮತ್ತು ಮೆಡಿಕಲ್ ಕಾಲೇಜುಗಳಲ್ಲಿ ಡೊನೇಶನ್, ಕ್ಯಾಪಿಟೇಶನ್ ಫೀ ಎಂದು ಹಣ ವಸೂಲು ಮಾಡುತ್ತಾರೆ. ಇದನ್ನು ಸರ್ಕಾರದವರು ತಪ್ಪಿಸಬೇಕು. ಇಲ್ಲದಿದ್ದರೆ, ಇದು ಕೇವಲ ಶ್ರೀಮಂತರಿಗೆ ಮಾತ್ರ ಸಾಧ್ಯವೇ ಹೊರತು, ಬಡವರಿಗಾಗಲಿ, ಸಾರ್ವಜನಿಕರಿಗಾಗಲಿ, ವಿದ್ಯಾಭ್ಯಾಸ ಸಿಗುವ ಹಾಗಿಲ್ಲ. ದಿವಂಗತ ಗೋಪಾಲಕೃಷ್ಣ ಗೋಖಲೆಯವರು ಈ ರೀತಿ ಹೇಳಿದಾರೆ, "educate everyone, educate all" ಆದ್ದರಿಂದ ಈ ಕ್ಯಾಪಿಟೇಶನ್ ಫೀಯನ್ನು ರದ್ದು ಮಾಡಬೇಕೆಂದು ಹೇಳಿ ಗೋಖಲೆಯವರ ಮಾತುಗಳನ್ನು ಗಮನದಲ್ಲಿಡಬೇಕೆಂದು ಹೇಳಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎ. ಆರ್. ಬದರೀನಾರಾಯಣ್ (ಶಿವಮೊಗ್ಗ).—ಮಾನ್ಯ ಸಭಾಪತಿಗಳೇ ಮಾನ್ಯ ವಿದ್ಯಾಮಂತ್ರಿಗಳು ಈ ಸಭೆಯ ಮುಂದೆ ತಂದಿರತಕ್ಕ 38 ಕೋಟಿ ರೂಪಾಯಿಗಳ ಬೇಡಿಕೆಯನ್ನು ನಾನು ಸ್ವಾಗತಿಸುತ್ತಾ ನಾನು ನಾಲ್ಕು ಮಾತುಗಳನ್ನು ಆಡಬೇಕೆಂದು ನಿಂತಿದ್ದೇನೆ. ಈ ವಿದ್ಯಾಭ್ಯಾಸ ಎನ್ನತಕ್ಕಂಥಾದ್ದು ಎಷ್ಟು ಮುಖ್ಯ ಎನ್ನುವುದನ್ನು ಯಾರೂ ಹೇಳಬೇಕಾಗಿಲ್ಲ. ಮುಖ್ಯವಾಗಿ ಒಂದು ಜನಾಂಗ ಮುಂದಕ್ಕೆ ಬರಬೇಕಾದರೆ ಅದಕ್ಕೆ ಮಕ್ಕಳಿಗೆ, ವಿದ್ಯಾರ್ಥಿಗಳಿಗೆ ಒಂದು ರೀತಿಯಾದ ವಿದ್ಯಾಭ್ಯಾಸ ಬಹಳ ಅವಶ್ಯಕ ಎನ್ನತಕ್ಕಂಥಾದ್ದನ್ನು ನಾವು ತಿಳಿದುಕೊಳ್ಳಬೇಕಾಗಿದೆ. ನಮ್ಮ ದೇಶದಲ್ಲಿ ಭಾರತದಲ್ಲಿ, ಮೈಸೂರಿನಲ್ಲಿ ಹೆಚ್ಚಿಗೆ ವ್ಯವಸಾಯದಿಂದ ಜೀವನ ಮಾಡತಕ್ಕ ಜನ ಜಾಸ್ತಿಯಾಗಿದ್ದಾರೆ.

[MR. DEPUTY SPEAKER in the Chair]

ಇನ್ನು ಎರಡನೆಯದು, ಕೈಗಾರಿಕೆಗಳು ಮತ್ತು ಕೂಲಿಯಿಂದ ಜೀವನ ಮಾಡತಕ್ಕವರು ಇದ್ದಾರೆ. ಮೂರನೆಯದು ಸರ್ಕಾರಿ ನೌಕರಿಯಿಂದ ಜೀವನ ಮಾಡತಕ್ಕವರು ಇದ್ದಾರೆ. ಇನ್ನೂ ಅನೇಕ ವೃತ್ತಿಗಳಿಂದ ಜೀವನ ಮಾಡತಕ್ಕವರೂ ಇದ್ದಾರೆ. ಇವೊತ್ತು ನಾವು ಏನು ವಿದ್ಯಾಭ್ಯಾಸದ ಪದ್ಧತಿಯನ್ನು ಅನುಸರಿಸುತ್ತಿದ್ದೇವೆಯೋ ಅದರ ಆಧಾರದ ಮೇಲೆ ಎಷ್ಟು ಜನಬೇಕು, ಅದರ ವ್ಯವಸ್ಥೆಗೆ ಎಷ್ಟು ಜನಬೇಕು, ಅದಕ್ಕೆ ಬೇಕಾದಂತಹ ವಿದ್ಯಾಭ್ಯಾಸವನ್ನು ಯಾವ ಮಟ್ಟದಲ್ಲಿ ಕೊಡಬೇಕು, ಡಾಕ್ಟರುಗಳು ಎಷ್ಟು ಜನಬೇಕು, ಇಂಜಿನಿಯರುಗಳು ಎಷ್ಟು ಜನಬೇಕು ಉಪಾಧ್ಯಾಯರು ಎಷ್ಟು ಜನಬೇಕು, ಎನ್ನತಕ್ಕಂಥಾದ್ದನ್ನು ನಾವು ವಿಮರ್ಶೆ ಮಾಡಿ ಅದಕ್ಕೆ ತಕ್ಕಂತೆ

ಒಂದು ವಿದ್ಯಾಭ್ಯಾಸ ಪದ್ಧತಿಯನ್ನು ಅನುಸರಿಸುವಂಥಾದ್ದು ಬಹಳ ಅವಶ್ಯಕ ಎಂದು ಹೇಳಿದರೆ ತಪ್ಪಾಗಲಾರದು. ಈಗ ಅನೇಕಕಡೆಗಳಲ್ಲಿ ಇಂಡಸ್ಟ್ರಿಯಲ್ ಟ್ರೇನಿಂಗ್ ಸೆಂಟರುಗಳನ್ನು ಮಾಡಿದ್ದಾರೆ. ಈಗ ಅದನ್ನು ಪಾಸುಮಾಡಿರತಕ್ಕ ವಿದ್ಯಾರ್ಥಿಗಳು ಸಾವಿರಾರು ಜನ ವಿದ್ಯಾರ್ಥಿಗಳು ಕೆಲಸ ಇಲ್ಲದೆ ಅಲೆಯುತ್ತಿದ್ದಾರೆ. ಅವರು ಏನು ಮಾಡಬೇಕು ? ಅವರು ವ್ಯವಸಾಯಕ್ಕೆ ಹೋಗುವ ಹಾಗಿಲ್ಲ. ವ್ಯವಸಾಯ ಪದ್ಧತಿ ಅವರಿಗೆ ಗೊತ್ತಿಲ್ಲ; ಅಭ್ಯಾಸವು ಇಲ್ಲ. ಆದ್ದರಿಂದ ಆ ಒಂದು ವಿದ್ಯಾಭ್ಯಾಸ ಪದ್ಧತಿಯನ್ನು ಅನುಸರಿಸುವುದರಿಂದ ಅದು ಕೆಲಸಕ್ಕೆ ಬರುವುದಿಲ್ಲ. ಆದ್ದರಿಂದ ಯಾವುದಾದರೂ ಒಂದು ವಿದ್ಯಾಭ್ಯಾಸ ಪದ್ಧತಿಯನ್ನು ಅನುಸರಿಸಬೇಕಾದರೆ, ನಾವು ನಮ್ಮ ಸ್ಕೂಲುಗಳಲ್ಲಿ, ಕಾಲೇಜುಗಳಲ್ಲಿ ನಮ್ಮ ಮಕ್ಕಳಿಗೆ ಏನು ವಿದ್ಯಾಭ್ಯಾಸವನ್ನು ಕೊಡುತ್ತೇವೆಯೋ ಅದು ಸಾಮಾನ್ಯವಾದ ವಿದ್ಯಾಭ್ಯಾಸವಾಗಿ ಎಲ್ಲರಿಗೂ ಒಂದು ಫೌಂಡೇಷನ್ ರೀತಿಯಲ್ಲಿ ನಡೆದರೆ ಅವನು ಯಾವುದಾದರೂ ಒಂದು ರೀತಿಯಲ್ಲಿ, ಯಾವುದಾದರೂ ಒಂದು ದಾರಿಯಲ್ಲಿ ಒಂದು ಗತಿ ಮುಟ್ಟುವಂತೆ ಮಾಡುವಂತಹ ವಿದ್ಯಾಭ್ಯಾಸವನ್ನು ಕೊಡಬೇಕಾಗುತ್ತದೆ. ಆದ್ದರಿಂದ ನಾನು ಶಿವಮೊಗ್ಗ ನಗರದಲ್ಲಿ ಒಂದು ವಿದ್ಯಾಶಾಲೆಯನ್ನು ಸ್ಥಾಪಿಸಿ ಅದರಲ್ಲಿ ಏನು ಮಾಡಬೇಕೆಂದು ಯೋಚನೆ ಮಾಡಿದ್ದೇನೆಂದರೆ ನಮ್ಮ ವಿದ್ಯಾಶಾಲೆಯ ಗೇಟನ್ನು ಒಬ್ಬ ವಿದ್ಯಾರ್ಥಿ ಪ್ರವೇಶ ಮಾಡಿದರೆ ಆ ವಿದ್ಯಾರ್ಥಿ ತಾಂತ್ರಿಕ ವಿದ್ಯಾಭ್ಯಾಸವನ್ನು ಹೊಂದಿ ಹೊರಗಡೆ ಹೋದರೆ ಜೀವನ ಮಾರ್ಗ ಬೇಕಾಗಿದ್ದರೆ ಜೀವನದಲ್ಲಿ ಎಲ್ಲಿಗೆ ಹೋಗಬೇಕು ಎನ್ನತಕ್ಕಂಥ ದಾರಿಯನ್ನು ತೋರಿಸಿ ಕೊಡತಕ್ಕಂಥ ಒಂದು ಪದ್ಧತಿಯನ್ನು ಅನುಸರಿಸಬೇಕು, ಎಂದು ತೀರ್ಮಾನಿಸಿದ್ದೇನೆ. ಮುಖ್ಯವಾಗಿ ಹೇಳುವುದಾದರೆ ಇಂಜಿನಿಯರಿಂಗ್ ಕಾಲೇಜುಗಳು ಸಾಕು, ಮೆಡಿಕಲ್ ಕಾಲೇಜುಗಳು ಸಾಕು, ಈಗಾಗಲೇ ಮದ್ರಾಸಿನಲ್ಲಿ ಹೇಳುತ್ತಿದ್ದಾರೆ, ನೂರಾರು ಜನ ಮೆಡಿಕಲ್ ಗ್ರ್ಯಾಜುಯೇಟ್ಸ್ ಕೆಲಸ ಇಲ್ಲದೆ ಇದ್ದಾರೆ ಎಂದು ಹೇಳುತ್ತಿದ್ದಾರೆ. ಆದ್ದರಿಂದ ಮೈಸೂರು ರಾಜ್ಯದಲ್ಲಿ ಸರ್ಕಾರಿ ಮೆಡಿಕಲ್ ಕಾಲೇಜುಗಳು, ಇಂಜಿನಿಯರಿಂಗ್ ಕಾಲೇಜುಗಳು, ಪ್ರೈವೇಟ್ ಮೆಡಿಕಲ್ ಕಾಲೇಜುಗಳು, ಪ್ರೈವೇಟ್ ಇಂಜಿನಿಯರಿಂಗ್ ಕಾಲೇಜುಗಳು ಏನಿವೆ ಇವುಗಳಲ್ಲಿ ಬಹುಶಃ ಇನ್ನು ನಾಲ್ಕಾರು ವರ್ಷಗಳು ಕಳೆದನಂತರ ಪಾಸುಮಾಡತಕ್ಕ ವಿದ್ಯಾರ್ಥಿಗಳು ಜೀವನ ಮಾರ್ಗವನ್ನು ಕಲ್ಪಿಸಿ ಕೊಳ್ಳುವುದಕ್ಕೆ ಎಲ್ಲಿಗೆ ಹೋಗಬೇಕು ಎನ್ನುವ ಪರಿಸ್ಥಿತಿ ಬರುತ್ತದೆ. ಈಗ ನನ್ನ ದೃಷ್ಟಿಯಲ್ಲಿ ಯೋಚನೆ ಮಾಡುವುದಾದರೆ ನಮ್ಮದೇಶದಲ್ಲಿ ಸಣ್ಣ ಕೈಗಾರಿಕೆಗಳನ್ನು ಸ್ಥಾಪಿಸಿ ಅದಕ್ಕೆ ಅವಲಂಬಿಸತಕ್ಕ ವಿದ್ಯಾಭ್ಯಾಸ ಪದ್ಧತಿಯನ್ನು ನಾವು ಕೊಡಬೇಕಾಗಿದೆ. ಈಗ ಸಾಮಾನ್ಯವಾಗಿ ಪ್ರತಿಯೊಂದು ಹಳ್ಳಿಯಲ್ಲಿಯೂ ಕೂಡ ಒಂದೊಂದು ಹೈಸ್ಕೂಲುಗಳಾಗಿವೆ. ಪ್ರತಿಯೊಂದು ತಾಲ್ಲೂಕುಗಳಲ್ಲಿಯೂ ಒಂದೊಂದು ಕಾಲೇಜುಗಳಾಗಿವೆ. ಪ್ರತಿಯೊಂದು ಜಿಲ್ಲಾ ಹೆಡ್‌ಕ್ವಾರ್ಟ್ರುಗಳಲ್ಲಿಯೂ 4—5 ಕಾಲೇಜುಗಳಿವೆ. ಈ ಸ್ಕೂಲುಗಳಿಂದ ಮತ್ತು ಕಾಲೇಜುಗಳಿಂದ ಪಾಸು ಮಾಡತಕ್ಕ ವಿದ್ಯಾರ್ಥಿಗಳು ಎಲ್ಲಿಗೆ ಹೋಗಬೇಕು ? ಏನು ಮಾಡಬೇಕು ? ಅವರಿಗೆ ಒಂದು ಸಾಮಾನ್ಯವಾದ ಜೀವನಮಾರ್ಗವನ್ನು ಕಂಡುಹಿಡಿಯಬೇಕು ಎನ್ನತಕ್ಕಂಥಾದ್ದನ್ನು ನಾವು ಯೋಚನೆ ಮಾಡಬೇಕಾಗಿದೆ. ಈ ದೃಷ್ಟಿಯಿಂದ ಬಹುಶಃ ನಮ್ಮ ದೃಷ್ಟಿಕೋಣ ಹೋದರೆ ನಮ್ಮ ವ್ಯವಸಾಯಕ್ಕೆ ಹೆಚ್ಚಿನ ಒಂದು ಗಮನವನ್ನು ಕೊಡಬೇಕು ಎನ್ನತಕ್ಕಂಥಾದ್ದು ನನ್ನ ವಾದ. ಈಗತಾನೆ ಹೇಳಿದರು, ರಾಯಚೂರು ಜಿಲ್ಲೆಯಲ್ಲಿ ಒಂದು ವ್ಯವಸಾಯದ ಕಾಲೇಜನ್ನು ಸ್ಥಾಪನೆ ಮಾಡಬೇಕೆಂದು. ಅಲ್ಲಿಗೆ ವ್ಯವಸಾಯದ ಕಾಲೇಜನ್ನು ಕೊಡತಕ್ಕದ್ದು ಸೂಕ್ತ. ಏತಕ್ಕೆಂದರೆ ತುಂಗಭದ್ರಾ ಜಲಾಶಯದ ಹಿಂದುಗಡೆ ಬೇಕಾದಷ್ಟು ಜಮೀನು ಇದೆ. ಅಲ್ಲಿ ಒಂದು ವ್ಯವಸಾಯದ ಕಾಲೇಜನ್ನು ಸ್ಥಾಪನೆ ಮಾಡಿದರೆ ಬಹಳ ಅನುಕೂಲವಾಗುತ್ತದೆ. ಅದೇರೀತಿಯಲ್ಲಿ ವ್ಯವಸಾಯದ ಕಾಲೇಜುಗಳು ಜಾಸ್ತಿ ಆದರೆ ದೇಶಕ್ಕೇನೂ ತೊಂದರೆಯಾಗುವುದಿಲ್ಲ. ಇದೇ ದೃಷ್ಟಿಯಲ್ಲಿ ನೋಡಿದರೆ ಶಿವಮೊಗ್ಗ ಜಿಲ್ಲೆಯಲ್ಲಿ ಒಂದು ವ್ಯವಸಾಯದ ಕಾಲೇಜನ್ನು ಸ್ಥಾಪನೆ ಮಾಡಿದರೆ ಬಹಳ ಅನುಕೂಲವಾಗುತ್ತದೆ. ಸುಮ್ಮನೆ ಏನೇನೋ ಒಂದು ವಿದ್ಯಾಭ್ಯಾಸಕ್ಕೆ ಹೋಗುವುದನ್ನು ಬಿಟ್ಟು ನಿಜವಾಗಿಯೂ ಉಪಯುಕ್ತವಾದಂತಹ ಒಂದು ವಿದ್ಯಾಭ್ಯಾಸಕ್ಕೆ ಹೋಗುವುದು ಬಹಳ ಸೂಕ್ತ ಎಂದು ಕಾಣುತ್ತದೆ. ನಮ್ಮ ಮಾನ್ಯ ಸ್ನೇಹಿತರು ಹೇಳಿದರು ಸರ್ಕಾರದವರು ಏನು ಮಾಡಿದ್ದಾರೆ, ಆಡಳಿತದಲ್ಲಿ ಅಧಕ್ಷತೆ ಇದೆ ಎಂದು ಹೇಳಿದರು. ಈಗ ಸರ್ಕಾರದವರು ಒಂದು ಅಘಾಧವಾದ ಸಮಸ್ಯೆಯನ್ನು ಎದುರಿಸಬೇಕಾಗಿದೆ. ಏಕಕಾಲದಲ್ಲಿ ವಿದ್ಯಾಭ್ಯಾಸದ ಕೆಲಸವಾಗಬೇಕು, ಆಸ್ಪತ್ರೆಗಳ ಕೆಲಸವಾಗಬೇಕು, ಸ್ಕೂಲು ಕಟ್ಟಡಗಳಾಗಬೇಕು, ಇವುಗಳೆಲ್ಲಕ್ಕೂ ಹಣ ಮತ್ತು ಸಿಬ್ಬಂದಿಯನ್ನು ಒದಗಿಸಬೇಕು. ಇವುಗಳನ್ನೆಲ್ಲಾ ಇಷ್ಟು ಪ್ರಮಾಣದಲ್ಲಿ ಮಾಡಿದ್ದರೂ ಕೂಡ ಏನೂ ಮಾಡಿಲ್ಲ ಎಂದು ಹೇಳಿದರೆ ಹೇಗೆ ?

ಇನ್ನು ಕಾಲೇಜುಗಳಲ್ಲಿ ಸೀಟು ಕೊಡತಕ್ಕ ವಿಚಾರದಲ್ಲಿ ಹೇಳುವುದಾದರೆ ಸರ್ಕಾರದ ಕಾಲೇಜುಗಳಲ್ಲಿ ಹುಡುಗರಿಗೆ ಸೀಟು ಕೊಡುವುದಕ್ಕೆ ಹಣವನ್ನು ತೆಗೆದುಕೊಳ್ಳುವುದಿಲ್ಲ. ನಮ್ಮ ದೇಶದಲ್ಲಿ ಡಾಕ್ಟರುಗಳ ಅಭಾವವಿದೆ. ಆದ್ದರಿಂದ ಪ್ರೈವೇಟ್ ಕಾಲೇಜುಗಳಾಗಬೇಕು ಎಂದು ಅದನ್ನು

(ಶ್ರೀ ಎ. ಆರ್. ಬದರೀನಾರಾಯಣ್)

ಸ್ಥಾಪನೆ ಮಾಡುವುದಕ್ಕೆ ಪ್ರೋತ್ಸಾಹವನ್ನು ಕೊಟ್ಟದ್ದು ಆಯಿತು. ಸರ್ಕಾರದವರು ಮೆಡಿಕಲ್ ಕಾಲೇಜನ್ನು ನಡೆಸತಕ್ಕದ್ದು ಬಹಳ ಕಷ್ಟ. ನಾವು ಅದನ್ನು ಅರಿತುಕೊಂಡಿದ್ದೇವೆ. ಅದಕ್ಕೆ ದುಡ್ಡು ಬೇಕು. ಈಗ ಖಾಸಗಿ ಮೆಡಿಕಲ್ ಕಾಲೇಜಿನವರು ಕ್ಯಾಪಿಟೇಷನ್ ಫೀಜನ್ನು ವಸೂಲು ಮಾಡದೇ ಹೋದರೆ ಅವರಿಗೆ ಸರ್ಕಾರದಿಂದ ಹಣವನ್ನು ಒದಗಿಸಬೇಕಾಗುತ್ತದೆಂದು ಮಾತ್ರ ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಅಪೇಕ್ಷೆ ಮಾಡುತ್ತೇನೆ. ಕ್ಯಾಪಿಟೇಷನ್ ಫೀಜನ್ನು ಹಾಕ ತಕ್ಕದ್ದು ಅವಶ್ಯಕ. ಆದರೆ ಕೆಲವು ಕಾಲೇಜುಗಳಲ್ಲಿ ಕ್ಯಾಪಿಟೇಷನ್ ಫೀಜನ್ನು ಬಹಳ ಜಾಸ್ತಿ ಹಾಕುತ್ತಿದ್ದಾರೆ ಅನೇಕ ಪ್ರೈವೇಟ್ ಕಾಲೇಜುಗಳಲ್ಲಿ ಕೇರಳ, ಆಂಧ್ರ ಮತ್ತು ಇತರೆ ರಾಜ್ಯಗಳಿಂದ ಬರತಕ್ಕ ವಿದ್ಯಾರ್ಥಿಗಳ ಸಂಖ್ಯೆ ಜಾಸ್ತಿಯಾಗಿದೆಯೇ ಹೊರತು ನಮ್ಮ ದೇಶದ ವಿದ್ಯಾರ್ಥಿಗಳಿಗೆ ಹೆಚ್ಚು ಅವಕಾಶವಿಲ್ಲ, ಅದೂ ಅಲ್ಲದೆ ಆ ಪ್ರೈವೇಟ್ ಮೆಡಿಕಲ್ ಕಾಲೇಜು ಮತ್ತು ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಏನು ಕ್ಯಾಪಿಟೇಷನ್ ಫೀಜು ತೆಗೆದುಕೊಳ್ಳುತ್ತಾರೆಯೋ ಅದಕ್ಕೆ ರಶೀತಿಯನ್ನು ಕೊಡುವುದಿಲ್ಲ ಎನ್ನತಕ್ಕಂಥ ಒಂದು ವಾದ ಇದೆ. ಕ್ಯಾಪಿಟೇಷನ್ ಫೀಜು ಇಲ್ಲದ ನಡೆಸುತ್ತೇವೆ ಎಂದು ಹೇಳಿದರೆ ಕಾಲೇಜನ್ನು ಮುಚ್ಚಬೇಕು. ಕಾಲೇಜನ್ನೇ ಮಾಡುವುದಕ್ಕಾಗುವುದಿಲ್ಲ. ಆದರಲ್ಲಿ ಏನಾದರೂ ನ್ಯೂನತೆ ಇದ್ದರೆ ಅದರಕಡೆಗೆ ಮಾನ್ಯ ವಿದ್ಯಾಮಂತ್ರಿಗಳು ಗಮನಕೊಡಬೇಕು ಅನ್ಯಾಯ ಆಗಬಾರದು ಎಂದು ಹೇಳುವುದಕ್ಕೆ ಅಪೇಕ್ಷೆಪಡುತ್ತೇನೆ.

4-00 P. M.

ಶ್ರೀ ಸಿ. ಹೆಚ್. ಸಿದ್ದವೀರಪ್ಪ.—ದಾವಣಗೆರೆ ಮೆಡಿಕಲ್ ಕಾಲೇಜಿನಲ್ಲಿ ಮೂರು ವರ್ಷದಲ್ಲಿ ಮೈಸೂರಿನವರಿಗೆ ಎಷ್ಟು ಪರ್ಸೆಂಟ್ ಕೊಟ್ಟಿದ್ದಾರೆ ? ಹೊರಗಡೆಯವರಿಗೆ ಎಷ್ಟು ಪರ್ಸೆಂಟು ಕೊಟ್ಟಿದ್ದಾರೆ ? 20 ಸಾವಿರ ರೂಪಾಯಿನವರೆಗೆ ಕ್ಯಾಪಿಟೇಷನ್ ಫೀಸು ತಗೆದುಕೊಂಡಿದ್ದಾರೆ ಎನ್ನುವುದಕ್ಕೆ ದಾಖಲೆ ಇದೆ, ರುಜುವಾತು ಕೊಡುತ್ತೇನೆ, ಈಸಾರಿ 25 ಪರ್ಸೆಂಟ್ ಮೈಸೂರಿನವರಿಗೆ ಕೊಟ್ಟರೆ ಹೊರಗಡೆಯವರಿಗೆ 75 ಪರ್ಸೆಂಟು ಕೊಡುವುದಕ್ಕೆ ಮಾಡಿದ್ದಾರೆ.

ಶ್ರೀ ಕೆ. ವಿ. ಶಂಕರ ಗೌಡ.—ಅದು ಪ್ರೈವೇಟ್ ಕಾಲೇಜು ಸ್ವಾಮಿ.

Sri H. SIDDAVEERAPPA.—Then close the hospital to them. It is maintained by public funds.

Sri K. V. SHANKARA GOWDA.—That is why they have given 10 seates to the Government.

ಶ್ರೀ ಎ. ಆರ್. ಬದರಿನಾರಾಯಣ್.—ಈ ಕಟ್ಟಡಗಳ ವಿಚಾರದಲ್ಲಿ ಈಗತಾನೆ 10 ಲಕ್ಷ ರೂಪಾಯಿಗಳನ್ನು ಲೋಕಲ್‌ಬಾಡೀಸ್‌ಗೆ ಖೋತಾ ಮಾಡತಕ್ಕ ಪ್ರಪೋಸಲ್ ತಾವು ಇಟ್ಟಿದ್ದೀರಿ. ತಾಲ್ಲೂಕು ಬೋರ್ಡುಗಳಿಗೆ ಮುನಿಸಿಪಾಲಟಿಗೆ ಕಟ್ಟಡಗಳಿಗೆ ಕೊಡತಕ್ಕ ಹಣವನ್ನು ನಿಲ್ಲಿಸಿದ್ದೀರಿ. ತಾಲ್ಲೂಕು ಬೋರ್ಡುಗಳು ಈಗಾಗಲೇ ಹಣ ಕೊಡುತ್ತಾ ಇಲ್ಲ. ಇದು ನಿಲ್ಲಿಸಿಬಿಟ್ಟರೆ ಸ್ಕೂಲು ಕಟ್ಟಡಗಳನ್ನು ಕಟ್ಟಿಸುವುದಕ್ಕಾಗುವುದಿಲ್ಲ. ಅವಶ್ಯಕವಾದ ಹಣವನ್ನು ಖೋತಾ ಮಾಡುವುದಕ್ಕಾಗುವುದಿಲ್ಲ. ಕಟ್ಟಡಗಳಿಗೆ ಬಹಳ ಹಣ ಹಾಕಬೇಕಾಗಿರುವುದರಿಂದ ಕಟ್ಟಡ ಕಟ್ಟುವುದರಲ್ಲಿ ಒಬ್ಬ ಎಕ್ಸ್‌ಪರ್ಟ್‌ನ್ನು ಕನ್ಸಲ್ಟ್ ಮಾಡಿ ಕಡಿಮೆ ದರದಲ್ಲಿ ಕಟ್ಟಡ ಆಗುವುದನ್ನು ಕಂಡುಹಿಡಿಯಬೇಕು. ಇಂಜಿನೀಯರ್ಸ್‌ನ್ನು ಕೇಳಿದರೆ ಹೇಳುತ್ತಾರೆ. ಒಂದೊಂದು ರೂಮಿಗೆ 4 ಸಾವಿರ ಆಗುತ್ತದೆ. ಆದ್ದರಿಂದ 4 ಸಾವಿರಕ್ಕೆ 3 ರೂಮು ಆಗುವಂತೆ ಇನ್‌ವೆಸ್ಟಿಗೇಟ್ ಮಾಡಬೇಕು. ಇನ್‌ಸ್ಪೆಕ್ಷನ್ ಸರಿಯಾಗಿ ಇಲ್ಲದೇ ಸ್ಕೂಲುಗಳು ಸರಿಯಾಗಿ ನಡೆಯುತ್ತಾ ಇಲ್ಲ. ಅದಕ್ಕೆ ಲೈಸಾನ್ ಇರಬೇಕು, ಕಮಿಟಿಗಳು ಇರಬೇಕು. ಕಮಿಟಿಗಳು ಇದ್ದರೆ ಕಷ್ಟನಿಷ್ಠೂರಗಳು ಏನು ಎಂಬುದನ್ನು ನೋಡಿ ಸರಿ ಮಾಡುವುದಕ್ಕೆ ಅವಕಾಶ ಇದೆ. ಮಲೆನಾಡು ವಿಷಯವಾಗಿ ಒಂದು ವಿಚಾರ ಹೇಳುತ್ತೇನೆ. ಅಲ್ಲಿ ಕಾಲೇಜುಗಳು ಎಲ್ಲಾ ಕಡೆಯೂ ಇದೆ. ಸೌತ್ ಕೆನರಾ, ಶಿವಮೊಗ್ಗ ಡಿಸ್ಟ್ರಿಕ್ಟ್, ನಾರ್ತ್ ಕೆನರಾ, ಹಾಸನ, ಚಿಕ್ಕಮಗಳೂರು ಎಲ್ಲಾ ಸೇರಿ ಒಂದು ಮಲೆನಾಡು ಯೂನಿವರ್ಸಿಟಿ ಮಾಡುವ ಯೋಚನೆ ಮಾಡಬೇಕೆಂದು ತಮ್ಮ ಮುಂದೆ ಇಟ್ಟಿದ್ದೇನೆ. 80 ಮೈಲಿ ಒಳಗೆ ಬೆಂಗಳೂರು ಯೂನಿವರ್ಸಿಟಿ ಇದೆ ; ಮೈಸೂರು ಯೂನಿವರ್ಸಿಟಿ ಇದೆ, ಕರ್ನಾಟಕ ಯೂನಿವರ್ಸಿಟಿ ಇದೆ. ಎಲ್ಲಕ್ಕಿಂತಲೂ ಕೇಂದ್ರವಾದಂಥ ಶಿವಮೊಗ್ಗದಲ್ಲಿ ಮಲೆನಾಡು ಯೂನಿವರ್ಸಿಟಿ ಸ್ಥಾಪನೆ ಮಾಡುವ ಯೋಜನೆಯನ್ನು ತೆಗೆದುಕೊಳ್ಳಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ ; ಮತ್ತು ಅಗ್ರಿಕಲ್ಚರಲ್ ಸ್ಕೂಲುಗಳನ್ನು ಪ್ರತಿ

ತಾಲ್ಲೂಕಿನಲ್ಲೂ ತೆರೆಯಬೇಕು. ಅನೇಕ ಪ್ರಾಜೆಕ್ಟ್‌ಗಳಲ್ಲಿ ಕಟ್ಟಡಗಳು ಇವೆ, ಜಮೀನುಗಳು ಬೇಕಾದಷ್ಟು ಇವೆ. ಕಟ್ಟಡಗಳನ್ನೂ ಜಮೀನುಗಳನ್ನೂ ಉಪಯೋಗಿಸಿಕೊಂಡು ಈ ಅಗ್ರಿಕಲ್‌ಚರಲ್ ಸ್ಕೂಲುಗಳನ್ನು ತರೆಯಬೇಕು ಎಂದು ಪ್ರಾರ್ಥನೆ ಮಾಡಿ ಐದು ನಿಮಿಷ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ಅಧ್ಯಕ್ಷರಿಗೆ ವಂದನೆಯನ್ನು ಅರ್ಪಿಸಿ ನನ್ನ ಮಾತನ್ನು ಮುಗಿಸುತ್ತೇನೆ.

Sri P. B. NANDIHALI (Uchagaon).—Hon'ble Speaker, Sir, while opposing the Demand No. 17 for Rs. 33,57,28,700, I wish to submit some of my remarks on 'Education'.

It is said in the Report of the committee on Pre-primary Education in Mysore State that the responsibility of the Government is :

> "The child that is sick must be nursed, the child that is hungry must be fed, the child must be properly educated and protected beyond and above all considerations of race, nationality or creed."

We know that pre-primary education is the foundation of the educational progress. Because there is no educational atmosphere in the rural area and 50 per cent of the children are from poor and backward class and 25 per cent are from the landless labourers and workers who are crying, lying and dying in the fields and workshops of the rich. I request the Hon'ble Minister to take the responsibility of compulsory pre-primary education in the rural areas. According to article 45 of the Directive Principles, of the constitution it is the State which must take the responsibility of free and compulsory education upto the age of 14. So, the Government should execute the scheme of free and compulsory education to the children in age 3 to 6 also.

So far as primary education is concerned, I want to bring to your kind notice that there is only registration under compulsory primary education scheme and not compulsory education. There are no proper buildings, play-grounds, reading rooms, scince equipments, etc.. There are no text books in time and no proper syllabus. There is a change in the Text book frequently and it is informed very late. There are so many grammatical and punctuation mistakes in the books.

The important factor is the teacher and it is not there according to the need. Nobody is willingly entering in this field. The salary is very meagre and there are no facilities of housing and other things. Frequent transfers, heavy work, political pressure on a teacher and so many other restrictions make a man to join this service. Corruption became the tradition in this country and it rushed in this holy field at the time of transfer and appointment. This must be stopped immediately.

In ancient India, there was great respect to the 'Guruji'. He was also the 'Purohit' and 'Leader'. But British Government made a complete change. They made the schools, the workshops to produce clerks, the teacher supervisors and the students, labourers in the workshop. Here stopped the missionary work and started the machinery work. The same existed up to the day!

(SRI P. B. NANDIHALI)

There must be one teacher to each division. The number of students in each class must not be more than 40. There should be atleast one graduate teacher in the full primary school. Though the Government has introduced compulsory English from Fifth standard, there are no English teachers in many schools. So, the foundation of education became weaker. I request the Hon'ble Minister to increase the salaries of the teachers and facilities to the teachers. Unless and until the teacher is satisfied, there is no use to expect better services from him. The missionary spirit of Mahatma Fule and Karmaveer Bhaurao Patil must come in the Government machinery now. Today it is an urgent necessity. Sir, there were primary schools run by private managements and handed over to Government. The teachers in those schools have worked with a great sacrifice. So, I request the Hon'ble Minister to take their services into consideration.

I request the Hon'ble Minister here Sir, to give them increments according to their service in the private managements.

About higher secondary education. Government should correct themselves making four yours course in high schools. Most of the students of the rural area must be taught only ABCD, that is the beginning of English in the Eighth standard as in so many primary schools, there are no English teachers. The Text Book Committee has prescribed a book for 8th standard which cannot be learned and taught. It is Greek and Latin to the students. I wish to bring to your kind notice two instances. There was a poem prescribed for 8th standard ABU BEN ADEM which was prescribed for B A part I in 1966. "The Charge of the Light Brigade," was prescribed for the PUC. There is a passage from Shakespere's " AS YOU LIKE IT." I am surprised to see all these books. I wonder how to teach and how to learn from these books. The Hon'ble Minister should guide the Text Book Committe properly. In fact Sir, in these text books, there must be stories from Ramayana, Mahabharata, Shivaji Maharaj, and other heros who have sacrificed their lives in the cause of the country's freedom. Students should be inspired. Even up till now, in the text books, there are Johns and Jacks. I am surprised to see all these things. In the High Schools also it is difficult to get intelligent teachers. If there is no service anywhere, then these graduates try to enter into these educational field. There are no proper science equipment, libraries, and there is no wonder, standards became very low. Due to pressure from parents the students are promoted up to SSLC. So the results of SSLC at present are only 30 per cent. I thank the Educational Department and Director of Examination Board that they brought to light the standard ofeducation in Mysore State. I also congratulate the Department for having introduced the procedure of evaluating answer papers of SSLC examination in the Headquarters at Bangalore under the control of the Departmental officers as this will put an end to all malpractices. I request the Hon'ble

Minister to sanction Rs 8 as daily allowance to the Examiner of S.S.L.C. and the advance amount should be given to the examiners at the time of the work. I request the Department and also the Hon'ble Minister to see while appointing supervisers in the several centres that the teachers should not be appointed as supervisers on the students whom they teach. students. I congratulate the Government that they declared a policy of free education. But at the same time, I want to bring to the notice of the Minister that there are fees such as, betterment fees, sports fees and library fees. This is an injustice towards the common people of the State. I suggest here not to charge any kind of fees for the students whose annual income is less than Rs. 1,200. Secondly, hostel facilities given to the S.C. and S.T. students must be available to students of other back-ward classes whose parent's annual income is less than Rs. 1,200.

Taking the present position of unemployment, the Government must change the whole policy of high school education. There must be agriculture, industrial and commercial and technical education. The educational system must be so oriented as to make the students to have full and all round development, efficiency and self-dependent. Education should take into account the psychological, social and mental and practical progress. In this connection, I want to bring to your notice that full scope should be given to all the private aided high schools. I want to bring to the notice of Government that whenever there is poor-result, the grants given to the private aided high schools are cut. I have examples to say that so many high schools run by the Government, there are rusults less than 10 per cent. So, I request not to cut grants to private aided high schools.

I request the Hon'ble Minister to give more facilities for the high schools in the forest area and backward areas, especially in the rural areas. I shall give one instance—in Jamboti and Kankumbi in Khanapur taluka. It is the forest area. Even during day time people cannot enter that area. And a local management has started a high school in Jamboti, which is a great necessity. I request the Hon'ber Minister to kindly give all necessary facilities such as grant, recognition etc. The Grant-in-aid code says that there must be a stability fund of Rs. 5000 and secondly there will be no maintenance grant for three years. How is it that you expect poor people to come forward and start high schools ? I do not think that TATAS and BIRLAS will ever come forward in such areas, to provide educational facilities to the common people at large. I request the Government urgently to have some provision made for forest area or backward area and to give some concession for these two items, *i.e.*, deposit and no grant for three years.

About College Education, I wish to say in one sentence. It is truely impossible to have college education for the common people. I request the Hon'ble Minister to think of this seriously and see that free education facilities are given to students whose annual income is less than Rs. 1,200 as it is done in Maharashtra.

(SRI. P. B. NANDIHALI)

I must also say some words about the grievances in the border areas. These are facts and figures. I do not want to criticise the concerned officers, Sir. But I have to do some frank speaking and I speak openly on the face about the policy of the Government. Government has not been able to take the people in Marathi area into their confidence only due to that policy—wrong and partial policy. I think they are giving instructions and suggestions to those officers to murder the Marathi language. Here are two Kannada circulars sent to Marathi schools. It is truely impossible for schools which are 20 miles away from the City to get the meaning of the circulars. There is no person who is knowing Kannada. We are not hating Kannada. I am also trying to learn Kannada. But at the same time, we must protect our mother tongue. How is it possible for those people to understand the meaning of it and to reply immediately ? The teacher is a sheep before his officers. This is truely the case of teacher in the marathi border areas. Kannada circulars are there and they are required to reply to the same immediately.

About students in examination. Marathi questions are printed and hundreds of mistakes are there. I will bring to your kind notice one instance.

The Question Papers for the Marathi students are always incorrect; none can understand their meaning. For example, the Examination of the Tailoring Course in Belgaum took place on the 24th April 1967. The Question paper for that Examination was so wonderful that the Editor of "Tharun Bharath" declared a prize of "Usha Machine" to the person who can translate it into Marathi; because it was the Marathi of "Shila Press, Bangalore". Most of the Question Papers are of the same type.

Then a word about the change in Text Books. The text books are changed at any time. This is the Circular issued in July about the change of Books. The pupils have already purchased the books. Who is responsible for the loss ? The text books are supposed to be in Marathi. But I should say they are a mixture of Kannada-Marathi. They are full of grammatical and punctuation mistakes and still they are printed and issued for being used as text books. There is a great injustice towards Marathi students about Hindi books. There are Kannada Passages to translate. How can we tolerate this ?

Mr. DEPUTY SPEAKER.—The Member has taken more time. Now Smt. Nagarathnamma Hiremath to commence her speech.

ಶ್ರೀಮತಿ ನಾಗರತ್ನಮ್ಮ ಹಿರೇಮಠ (ಗಾಂಧಿನಗರ).—ಮಾನ್ಯ ಸಭಾಪತಿಗಳೇ, ನಮ್ಮ ಮುಂದಿರುವ ವಿದ್ಯಾ ಇಲಾಖೆಯ ಬೇಡಿಕೆಗಳನ್ನು ಸ್ವಾಗತಿಸುತ್ತಾ ಈ ಇಲಾಖೆಯಲ್ಲಿರುವ ಒಂದೆರಡು ಅಕ್ರಮಗಳನ್ನು ಸರಕಾರದ ಗಮನಕ್ಕೆ ತರಬೇಕೆಂದಿದ್ದೇನೆ. ಅದನ್ನು ಹೇಳುವ ಮೊದಲು "ಅನ್ನದಾನಂ ಮಹಾದಾನಂ, ವಿದ್ಯಾದಾನಂ ತತೋಧಿಕಂ, ಅನ್ನೇನ ಕ್ಷಣಿಕಾತೃಪ್ತಿಃ ಯಾವಜ್ಜೀವಂತು ವಿದ್ಯಯಾಂ" ಎಂಬುದನ್ನು ಸೂಚಿಸಲಚ್ಛಿಸುತ್ತೇನೆ. ಜೀವಮಾನ ಪರ್ಯಂತ ತೃಪ್ತಿ ಕೊಡುವ ದಾನಗಳಲ್ಲೇ ಶ್ರೇಷ್ಠವಾದ ವಿದ್ಯಾದಾನದಲ್ಲಿ ತುಂಬಾ ಕುಂದುಕೊರತೆಗಳಿರುವುದನ್ನು ತಪ್ಪಿಸಿರೆಂದು

ವಿನಂತಿಸಲಿಕ್ಕಾಗಿಯೇ ಸರ್ಕ್ಯಾರದ ವಿದ್ಯಾಖಾತೆಯ ಖರ್ಚಿನ ಬೇಡಿಕೆಯ ಮೇಲೆ ಮಾತನಾಡುತ್ತಿದ್ದೇನೆ. ದೇಹಪೋಷಣೆಯ ಆಹಾರಧಾನ್ಯಗಳ ಬೆಲೆ ಕೈಗೆ ಸಿಲುಕದಷ್ಟು ಹೇಗೆ ಏರುತ್ತಿದೆಯೋ, ಹಾಗೆಯೇ ಜ್ಞಾನಪೋಷಣೆಯ ವಿದ್ಯೆಯ ಬೆಲೆಯೂ ನಭೋಮಂಡಲಕ್ಕೇರಿದೆ. ಉಚಿತ ವಿದ್ಯಾಭ್ಯಾಸದ ಮಾತು ಹಾಗಿರಲಿ, ಖಚಿತವಾದ ಬೆಲೆಗಾದರೂ ನಮ್ಮ ಮಕ್ಕಳಿಗೆ ಕಾಲೇಜುಗಳಲ್ಲಿ ಪ್ರವೇಶ ದೊರೆಯುವುದು ಕಷ್ಟ. ಇದು ಖಾಸಗಿ ಇಂಜನಿಯರಿಂಗ್, ಮತ್ತು ಮೆಡಿಕಲ್ ಕಾಲೇಜುಗಳಾದಮೇಲೆ ಪ್ರವೇಶ ಶುಲ್ಕಗಳು ಸಹಸ್ರಾರು ಸಂಖ್ಯೆಯಲ್ಲಿ ಪೈಪೋಟಿಯಿಂದ ಏರುತ್ತಿವೆ. "ಏನಿದು ಅನ್ಯಾಯ! ಆಹಾರದಲ್ಲಿಯೂ ಕರಾಳಸಂತೆ, ವಿದ್ಯೆಯಲ್ಲಿಯೂ ಕರಾಳಸಂತೆ, ತೇರ್ಗಡೆಯಾಗುವುದರಲ್ಲಿಯೂ ಕರಾಳಸಂತೆ," ಘನಸರಕಾರದವರೇ, ಈ ಕರಾಳಸಂತೆಗಳ ಚಿಂತೆಯಿಂದ ನಮ್ಮನ್ನು ಎಂದು ಪಾರು ಮಾಡುತ್ತೀರೆಂದು ಕಳಕಳಿಯಿಂದ ಕೇಳಿಕೊಳ್ಳುತ್ತೇನೆ. ಮಾನ್ಯ ವಿದ್ಯಾ ಮಂತ್ರಿಗಳು, ಬ್ರಹ್ಮಾಸ್ತ್ರವಾದರೂ ಚಿಂತೆಯಿಲ್ಲ, ಪ್ರಯೋಗಿಸಿ ಈ ವಿದ್ಯಾ ಕರಾಳಸಂತೆಯನ್ನು ತಪ್ಪಿಸಿ ಪುಣ್ಯಕೀರ್ತಿಗಳಿಗೆ ಭಾಗಿಗಳಾಗಿರೆಂದು ಕೇಳಿಕೊಳ್ಳುತ್ತೇನೆ.

ಇನ್ನೊಂದು ವಿಚಾರ ವಿದ್ಯಾ ಇಲಾಖೆಯವರು ಗಮನಿಸಬೇಕು. ವಿದ್ಯಾರ್ಥಿಗಳ ತೇರ್ಗಡೆ ವಿಚಾರ. ನೂರಕ್ಕೆ ಇಂತಿಷ್ಟೇ ಅಂಕಗಳನ್ನು ತೆಗೆದರೆ ಮಾತ್ರ ತೇರ್ಗಡೆಯಾದಂತೆ ಎಂದು ಮಾಡಿದ್ದೀರಿ. ಅದರಂತೆ ತೇರ್ಗಡೆಯಾದವರಿಗೆ ಮುಂದಿನ ವಿದ್ಯಾಭ್ಯಾಸಕ್ಕೆ ಕಾಲೇಜುಗಳಲ್ಲಿ ಅವಕಾಶವಿಲ್ಲ. ಕಾಲೇಜುಗಳಿಗೆ ಇಂತಿಷ್ಟು ಅಂಕ ತೆಗೆದರೆ ಮಾತ್ರ ಸೀಟು ಎಂದು ಮಾಡಿದ್ದೀರಿ. ಹಾಗಾದರೆ ನಿಮ್ಮ ಅಂಕಗಳಂತೆ ತೇರ್ಗಡೆಯಾದವರ ಗತಿ ಏನು ? ಅವರ ಮುಂದಿನ ವಿದ್ಯಾ ಆಕಾಂಕ್ಷಗೆ ತ್ರಿಶಂಕುಸ್ವರ್ಗವಾದರೆ ಭಾವಿ ಪ್ರಜೆಗಳಾಗುವ ಅವರ ಮನಸ್ಸಿನಮೇಲೆ ಎಂತಹ ದುಷ್ಪರಿಣಾಮವಾಗುತ್ತದೆಂಬುದನ್ನು ಯೋಚಿಸಿರಿ. ನಿಮ್ಮ ಅಂಕದಂತೆ ತೇರ್ಗಡೆಯಾಗಿಯೂ ಕಾಲೇಜಿನಲ್ಲಿ ಸೀಟು ಸಿಕ್ಕದೆ ವಿದ್ಯಾರ್ಥಿಗಳ ಮನೋವ್ಯಥೆ ನಿಮಗೆ ಅರ್ಥವಾಗಿದ್ದಂತೆ ಕಾಣುವುದಿಲ್ಲ. ಎಂ. ಎಲ್. ಎ. ಗಳಿಗೆ ಅವರ ಕಾಟ ಹೇಳತೀರದು. ಅವರ ಕಾಟ ತಾಳಲಾರದೆ ನಾವು, ವಿದ್ಯಾಮಂತ್ರಿ ಘೇರಾವೊ, ಎಂದು ಹೇಳಬೇಕಾಗುತ್ತದೆ. ಇಂತಹ ಪರಿಸ್ಥಿತಿ ಬರದಂತೆ ತೇರ್ಗಡೆಯಾಗಿ ವಿದ್ಯೆ ಮುಂದುವರಿಸುವ ವಿದ್ಯಾರ್ಥಿಗಳಿಗೆಲ್ಲಾ ಕಾಲೇಜುಗಳಲ್ಲಿ ಬಿ.ಇ., ಎಂ.ಬಿ.ಬಿ.ಎಸ್. ಇಲ್ಲದಿದ್ದರೂ ಚಿಂತೆಯಿಲ್ಲ, ಇತರೆ ವ್ಯಾಸಂಗಗಳಿಗಾದರೂ ಪ್ರವೇಶ ದೊರಕಿಸಿರೆಂದು ವಿನಂತಿಸುತ್ತೇನೆ.

ಇನ್ನೊಂದು ವಿಚಾರ. ತೇರ್ಗಡೆಯಾಗುವ ವಿದ್ಯಾರ್ಥಿಗಳ ಸಂಖ್ಯೆ ಖಾಸಗಿ ಶಾಲೆ, ಕಾಲೇಜುಗಳಲ್ಲೇ ಹೆಚ್ಚು. ಅಂದರೆ ಮೆರಿಟ್, ರ್‍ಯಾಂಕ್ ಎಲ್ಲಾ ಖಾಸಗಿ ಕಾಲೇಜುಗಳಲ್ಲೇ ಜಾಸ್ತಿ, ಇದರಿಂದ ಖಾಸಗಿ ಸಂಸ್ಥೆಗಳ ಅರ್ಹತೆ ದೊಡ್ಡದೆಂಬ ಭಾವನೆ ಸಹಜವಾಗಿ ಬರುತ್ತದೆ. ಹೀಗಾಗಲು ಶಿಕ್ಷಣ ಕೊಡುವ ಪದ್ಧತಿ ಸರ್ಕಾರಿ ಕಾಲೇಜುಗಳಲ್ಲಿ ಸರಿಯಾಗಿಲ್ಲದಿರಬೇಕು. ಇಲ್ಲವೇ ತೇರ್ಗಡೆ ಮಾಡಿಸುವ ಕ್ರಮದಲ್ಲಿ ಕುಂಭಕೋಣ ನಡೆಯಬೇಕು. ಏನಾದರೊಂದು ಅಕ್ರಮದಿಂದಲೇ ಈ ರೀತಿ ಆಗುತ್ತಿರಬೇಕೆಂದು ನನ್ನ ಬಲವತ್ತರವಾದ ಭಾವನೆ. ಅಂತೆಯೇ ಈ ವಿಷಯವನ್ನು ಶೋಧಿಸಿ ನೋಡಿ, ಯೋಚಿಸಿ ನೋಡಿ ಎಂದು ವಿನಂತಿಸುತ್ತೇನೆ.

ಇನ್ನು ಎಂ.ಎ, ಎಂ.ಎಸ್.ಸಿ. ಮಾಡಿಕೊಂಡು ಕೆಲವರು 5—6—10 ವರ್ಷ ಅವರ ಸರ್ವಿಸ್ ಆಗಿದ್ದರೂ ಇನ್ನೂ ಡೆಮಾನ್ಸ್ಟ್ರೇಟರ್ಸ್, ರೀಡರ್ಸ್ ಆಗಿಯೇ ಉಳಿದಿದ್ದಾರೆ. ಇನ್ನೂ ಅವರ ಸಂಬಳ—ಸಾರಿಗೆ ಬಗ್ಗೆ ಯಾವ ನಿರ್ಧಾರಕ್ಕೂ ಬಂದಿಲ್ಲ. ಎಲ್ಲಾ ಇಲಾಖೆಗಳವರೂ ಒಂದಲ್ಲ ಒಂದು ರೀತಿಯಿಂದ ಮುಷ್ಕರ, ಚಳವಳಿ ಮಾಡಿದರೂ ಶಾಲೆ ಕಾಲೇಜುಗಳ ಸಿಬ್ಬಂದಿ ವರ್ಗದವರು ಉಪಾಧ್ಯಾಯರುಗಳು ಮುಷ್ಕರ ಹೂಡಿಲ್ಲ. ಅದು ಸರ್ಕ್ಯಾರದಲ್ಲಿಟ್ಟಿರುವ ಒಂದು ವಿಶ್ವಾಸ, ನಂಬುಗೆಯನ್ನು ತೋರಿಸುತ್ತದೆ. ಇನ್ನುಮೇಲಾದರೂ ಸರ್ಕ್ಯಾರ ಇವರ ಬಡ್ತಿ ಸಂಬಳಗಳ ಬಗ್ಗೆ ಒಂದು ನಿರ್ದಿಷ್ಟ ಕ್ರಮ ಕೈಕೊಳ್ಳಲೆಂದು ಸೂಚಿಸುತ್ತೇನೆ. ಅದರಲ್ಲೂ ಎಂ.ಎ., ಪಿ.ಎಚ್.ಡಿ. ಮಾಡಿಕೊಂಡಿರುವ ಕೆಲವರು 10—18 ವರ್ಷಗಳಿಂದ ಕಾಲೇಜುಗಳಲ್ಲಿದ್ದರೂ ಅವರುಗಳಿಗೆ ಯಾವ ಪ್ರಮೋಷನ್ ಸಹ ಸಿಕ್ಕಿಲ್ಲ. ಇದನ್ನು ಮಂತ್ರಿಗಳು ವಿಚಾರಮಾಡಬೇಕು.

ಇನ್ನು ಹೆಣ್ಣುಮಕ್ಕಳ ಹಾಸ್ಟಲ್ ಒಂದೇ ಇದ್ದು ಪರಸ್ಥಳದಿಂದ ಬಂದಂಥ ಹೆಣ್ಣುಮಕ್ಕಳಿಗೆ ತುಂಬಾ ಅನಾನುಕೂಲವಾಗಿದೆ. ಇದಕ್ಕೆ ಏನಾದರೂ ಒಂದು ವ್ಯವಸ್ಥೆಮಾಡಿರೆಂದು ಕೇಳಿಕೊಳ್ಳುತ್ತೇನೆ. ಮಹಾರಾಣಿ ಕಾಲೇಜಿನಲ್ಲಿ ಹೆಣ್ಣುಮಕ್ಕಳಿಗೆ ಪ್ರಿಯವಾದಂಥ ಸಂಗೀತ ಕ್ಲಾಸುಗಳು ಬಿ.ಎ. ವರೆಗೆ ನಡೆಯುತ್ತವೆ. ಅಲ್ಲಿ ಎಂ.ಎ. ಕ್ಲಾಸನ್ನೂ ತೆಗೆದರೆ ಇನ್ನೂ ಹೆಚ್ಚಿನ ಸಂಗೀತಾಭ್ಯಾಸಕ್ಕೆ ಅನುಕೂಲವಾಗುತ್ತದೆ. ಅಲ್ಲಿ ಎಲ್ಲಾ ಸಲಕರಣೆಗಳೂ ಇರುವುದರಿಂದ ಸರಕಾರಕ್ಕೆ ಹೆಚ್ಚಿನ ಖರ್ಚು ಬರುವುದಿಲ್ಲ. ಆದುದರಿಂದ ಎಂ.ಎ. ಕ್ಲಾಸನ್ನೂ ನಡೆಸಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಇಂಜನಿಯರಿಂಗ್, ಮೆಡಿಕಲ್ ಕಾಲೇಜುಗಳಲ್ಲಿ ಸೀಟುಗಳನ್ನು ಅರ್ಹತೆಯಮೇಲೆ ಕೊಟ್ಟಾಗ, ಬೆಂಗಳೂರು ವಿದ್ಯಾರ್ಥಿಯನ್ನು ಗುಲ್ಬರ್ಗಾಕ್ಕೆ ಹಾಕುವುದು, ತುಮಕೂರು ಸ್ಥಳದವ

(ಶ್ರೀಮತಿ ನಾಗರತ್ನಮ್ಮ ಹಿರೇಮಠ)

ರನ್ನು ದಾವಣಗೆರೆಗೆ ಹಾಕುವುದು ಹೀಗೆಲ್ಲಾ ಮಾಡಿದರೆ ಅವರ ಗತಿಯೇನು ? ಇದರಿಂದ ಖರ್ಚು ಸಹ ಹೆಚ್ಚುಮಾಡಬೇಕಾಗುವುದಲ್ಲದೆ ತೊಂದರೆಯಾಗುತ್ತದೆ. ಆದುದರಿಂದ ಯಾರು ಯಾರು ಯಾವ ಯಾವ ಸ್ಥಳದವರೋ, ಯಾವ ಸ್ಥಳದಲ್ಲಿ ಓದಿರುತ್ತಾರೋ ಅವರುಗಳಿಗೆ ಆಯಾ ಸ್ಥಳಗಲ್ಲೇ ಸೀಟು ಕೊಡುವ ಏರ್ಪಾಡುಮಾಡಬೇಕೆಂದು ಸೂಚಿಸುತ್ತೇನೆ.

ವಿದ್ಯಾರ್ಥಿವೇತನ ಮತ್ತು ಫ್ರೀಷಿಪ್ ಕೊಡುವ ವಿಚಾರವನ್ನು ಶ್ರೀಮತಿ ಕೆ. ಎಸ್. ನಾಗ ರತ್ನಮ್ಮನವರು ಆಗಲೇ ಹೇಳಿದರು. ನಾನು 15 ವರ್ಷಗಳಿಂದ ಸಂಬಂಧಪಟ್ಟ ಸಮಿತಿಯಲ್ಲಿದ್ದು ನೋಡುತ್ತಿದ್ದೇನೆ. ಹೆಣ್ಣುಮಕ್ಕಳು ಮದುವೆ ಮಾಡಿಕೊಂಡು ಅತ್ತೆಯಮನೆಗೆ ಹೋದರೂ ಅದರ ಹಣ ಬರುವುದಿಲ್ಲ. ಸಮಿತಿಯವರು ಪಾಸ್‌ಮಾಡಿದರೂ ಕೂಡ ಅಧಿಕಾರಿಗಳು ಹಣ ಪಾವತಿಮಾಡು ವುದಕ್ಕೇಕೆ ನಿಧಾನ ಮಾಡುತ್ತಿದ್ದಾರೆಂಬುದನ್ನು ವಿಮರ್ಶೆಮಾಡಬೇಕು. ಹಾಗೆ ಮಾಡಿ ಜಾಗ್ರತೆ ಮಕ್ಕಳಿಗೆ ಹಣ ದೊರೆತು ತೊಂದರೆಯಾಗದಂತೆ ಮಾಡಬೇಕು. ಇದಕ್ಕೆ ಸಂಬಂಧಪಟ್ಟ ಸಮಿತಿಯು ಸಭೆ ಸೇರುವುದಕ್ಕೆ ಮೊದಲೇ ಫೀಜಿನ ಹಣ ಕಟ್ಟಬೇಕು. ಇದರಿಂದ ಕೆಲವರಿಗೆ ಬಹಳ ಕಷ್ಟವಾಗು ತ್ತದೆ. ಸರಕಾರ ಕೊಡುವುದು ಸದುಪಯೋಗವಾಗಬೇಕು. ಇದಕ್ಕೆ ಸರಿಯಾದ ಕ್ರಮ ತೆಗೆದು ಕೊಳ್ಳುವಂತೆ ಅಧಿಕಾರಿಗಳಿಗೆ ತಿಳಿಸಬೇಕು, ಮಕ್ಕಳಿಗೆ ಸರಿಯಾದ ಕಾಲಕ್ಕೆ ತಲಪುವಂತೆ ಮಾಡ ಬೇಕು.

ಹಿಂದಿಯಲ್ಲಿ ರಾಷ್ಟ್ರಭಾಷೆ, ವಿಶಾರದ ಇವುಗಳನ್ನು ಮಾಡಿಕೊಂಡರೂ ಕೂಡ ಆ ಉಪಾಧ್ಯಾ ಯರಿಗೆ ಶಾಲೆಗಳಲ್ಲಿ ಶಾಶ್ವತವಾದ ಸ್ಥಳವನ್ನು ಕೊಡದೆ ಮೂರು ತಿಂಗಳು, ಆರು ತಿಂಗಳು ಪಾಠ ಹೇಳಿಸಿ ಮತ್ತೆ ಮನೆಗಳಿಗೆ ಕಳಿಸುತ್ತಿದ್ದೀರಿ. ಇವರಿಗೆ ಶಾಶ್ವತವಾದ ಪರಿಹಾರ ಹುಡುಕುವುದು ಒಳ್ಳೆಯದು.

ಇನ್ನು ವರ್ಗಾವರ್ಗಿಗಳ ವಿಚಾರದಲ್ಲಿ ಪ್ರೈಮರಿ, ಮಾಧ್ಯಮಶಾಲೆಗಳ ಉಪಾಧ್ಯಾಯರು ಗಳನ್ನು ಒಂದು ಡಿಸ್ಟ್ರಿಕ್ಟಿನಿಂದ ಇನ್ನೊಂದು ಡಿಸ್ಟ್ರಿಕ್ಟಿಗೆ ವರ್ಗಮಾಡುವುದು ಸರಿಯಲ್ಲ. ಅವರಿಗೆ ಸಂಬಳಸಾರಿಗೆ ಕಡಮೆ ಇರುವುದರಿಂದ ಕಷ್ಟವಾಗುತ್ತದೆ. ಆದುದರಿಂದ ಅವರನ್ನು ಹತ್ತಿರದ ಊರುಗಳಿಗೆ ಮಾತ್ರ ವರ್ಗಮಾಡಬೇಕು.

ಶಾಲೆ ಪ್ರಾರಂಭವಾಗಿ 8—10 ತಿಂಗಳುಗಳಾದರೂ ಪಠ್ಯಪುಸ್ತಕಗಳು ದೊರೆಯುವುದಿಲ್ಲ. ಹೀಗೆ ಅವು ಸಿಕ್ಕದಿದ್ದರೆ ವಿದ್ಯಾರ್ಥಿಗಳು ವಿದ್ಯಾಭ್ಯಾಸಮಾಡುವುದು ಹೇಗೆ? 10 ವರ್ಷಗಳಿಂದ ಇದನ್ನು ಹೇಳುತ್ತಿದ್ದರೂ ಕೂಡ ಏಕೆ ವಿಳಂಬವಾಗುತ್ತಿದೆ ಎಂಬುದನ್ನು ವಿಚಾರಮಾಡಿ, ಜಾಗ್ರತೆ ದೊರೆಯುವಂತೆ ಮಾಡಲು ಸೂಕ್ತ ಕ್ರಮ ಕೈಗೊಳ್ಳಬೇಕು.

ಇನ್ನು ಹೇಗೆ ವಿದ್ಯಾ ಇಲಾಖೆಯಲ್ಲಿ ಖರ್ಚಾಗುತ್ತಿದೆ ಎನ್ನುವುದಕ್ಕೆ ಒಂದು ನಿದರ್ಶನವನ್ನು ಕೊಡುತ್ತೇನೆ. ವಿಮೆನ್ಸ್ ಎಜುಕೇಷನ್ ಕೌನ್ಸಿಲ್ ಎಂದು ಸರಕಾರ ಒಂದು ಕಮಿಟಿಯನ್ನು ಮಾಡಿ ಅದರೊಳಗೆ ಸುಮಾರು 25-30 ಜನ ಮೆಂಬರುಗಳನ್ನು ಹಾಕಿದ್ದಾರೆ. ಇದರಲ್ಲಿ ಬೆಳಗಾಂನಿಂದ ಒಬ್ಬರು, ಮರಕೆರಾದಿಂದ ಒಬ್ಬರು, ಮಂಗಳೂರಿನಿಂದ ಒಬ್ಬರು ಮತ್ತು ಇತರ ಎಲ್ಲ ಭಾಗ ಗಳಿಂದಲೂ ಒಬ್ಬರು ಮೆಂಬರುಗಳಿರಬೇಕೆಂದು ಮಾಡಿದ್ದಾರೆ ಮತ್ತು ಇದರ ಮೀಟಿಂಗ್‌ನ್ನು ಒಂದು ವರ್ಷದಲ್ಲಿ ಒಂದು ಸಾರಿ ಅಥವಾ ಎರಡು ಸಾರಿ ಸೇರಿಸುತ್ತಾರೆ. ಇದೊಂದು ಸುಮ್ಮನೆ ಸೇರಿಸ ಬೇಕೆಂದು ಒಂದು ರೂಢಿ ಇದೆ. ಆದರೆ ಇದರಿಂದ ಏನೂ ಪ್ರಯೋಜನವಾಗುತ್ತಿಲ್ಲ ಮತ್ತು ಯಾವ ಕೆಲಸಗಳೂ ನಡೆಯುತ್ತಿಲ್ಲ. ಇಂತಹವರಿಗಾಗಿ ಸುಮ್ಮನೆ ಬರೀ ಟಿ.ಎ. ಹಾಗೂ ಡಿ.ಎ. ಗಾಗಿ ಸರಕಾರ ವೃಥಾ ಹಣವನ್ನೇಕೆ ಖರ್ಚು ಮಾಡಬೇಕು ? ಇದನ್ನು ಕೂಡಲೇ ರದ್ದು ಮಾಡಿ ಇಂತಹ ಅನಾವಶ್ಯಕವಾದ ಕಮಿಟಿಗಳನ್ನು ಸರಕಾರ ಮಾಡುವುದಕ್ಕೆ ಹೋಗಬಾರದು ಎಂದು ನಾನು ಇಲ್ಲಿ ಸಲಹೆ ಮಾಡುತ್ತೇನೆ.

4-30 P.M.

ಇನ್ನು ಬಾಂಬೆ ಕರ್ನಾಟಕದಲ್ಲಿ ಸ್ಕೂಲು ಬೋರ್ಡುಗಳನ್ನು ನಿರ್ಮಿಸಿ ಸುಮಾರು ಹತ್ತು ಹದಿನೈದು ವರ್ಷಗಳಾದವು ಮತ್ತು ಇದರ ಚೇರ್ಮನ್ನರುಗಳಾಗಿ ಹಾಗೂ ಮೆಂಬರುಗಳಾಗಿ ಇವರೇ ಇಪ್ಪತ್ತು ವರ್ಷಗಳಿಂದಲೂ ಇದ್ದಾರೆ. ಇವರನ್ನು ಬದಲಾಯಿಸಲು ಬೇರೆ ಸದಸ್ಯರುಗಳು ಇರಲಿಲ್ಲವೇ? ಇತರರು ಯಾರೂ ಬುದ್ಧಿವಂತರಾದವರು ಚೇರ್ಮನ್ನರನ್ನಾಗಿ ಮಾಡಲು ಆಗುತ್ತಿರಲಿಲ್ಲವೇ ? ಇವರನ್ನೇ ಏಕೆ ಇಷ್ಟು ಕಾಲ ಒಂದೇ ಕಡೆ ಇಡಬೇಕು. ಇವರನ್ನು ಬದಲಾಯಿಸಲು ಸೂಕ್ತವಾದ ಕಾರ್ಯಕ್ರಮ ತೆಗೆದುಕೊಳ್ಳಬೇಕೆಂದು ಸರಕಾರಕ್ಕೆ ಹೇಳಬಯಸುತ್ತೇನೆ.

ಇನ್ನು ಕಾಲೇಜುಗಳಲ್ಲಿ ಈಗಾಗಲೇ ಕ್ಲಾಸುಗಳು ಪ್ರಾರಂಭವಾಗಿವೆ. ಅಲ್ಲದೆ ಬಿ.ಎಸ್‌ಸಿ., ಆನರ್ಸ್ ರಿಸಲ್ಟ್‌ನ್ನು ಇನ್ನೂ ತಡೆ ಹಿಡಿಯಲಾಗಿದೆ. ಕ್ಲಾಸುಗಳು ಆರಂಭವಾಗಿದ್ದರೂ ಇನ್ನೂ ರಿಸಲ್ಟ್ ಬರದೇ ಇರುವುದು ಏತಕ್ಕಾಗಿ ? ಹೀಗಾದರೆ ಮಕ್ಕಳ ಗತಿಯೇನು ? ಇದರ ಬಗ್ಗೆ ವಿಚಾರ ಮಾಡಿ ಸೂಕ್ತ ಕಾರ್ಯಕ್ರಮ ತೆಗೆದುಕೊಳ್ಳಬೇಕು.

ಇನ್ನೊಂದು ವಿಚಾರವನ್ನು ತಮ್ಮ ಗಮನಕ್ಕೆ ಇಲ್ಲಿ ತರಬೇಕಾಗಿದೆ. ತಾಲ್ಲೂಕಾ ಪ್ಲೇಸುಗಳಲ್ಲಿ ತಾಲ್ಲೂಕಾ ಬೋರ್ಡುಗಳವರು ಹಾಗೂ ಪಂಚಾಯತಿಗಳವರು ಪ್ರೈಮರಿ ಶಾಲೆಗಳಿಗಾಗಿ ಶಾಲಾ ಕಟ್ಟಡಗಳನ್ನು ಕಟ್ಟಿಸಿಕೊಡಬೇಕೆಂದು ಇದೆ. ಕೆಲವು ಕಡೆ ಕಾರ್ಪೊರೇಷನ್ ಇರುವ ಕಡೆ ಅವರೇ ಪ್ರೈಮರಿ ಶಾಲಾ ಕಟ್ಟಡಗಳನ್ನು ಕಟ್ಟಿಸಬೇಕೆಂದು ಇದೆ. ಅವರು ಕಟ್ಟದೇ ಇದ್ದರೆ ಸರಕಾರದವರೇ ಕಟ್ಟಿಸಿಕೊಡಬೇಕು. ಹೀಗಿದ್ದರೂ ನಮ್ಮ ನಗರದಲ್ಲಿರುವ ಕಾರ್ಪೊರೇಷನ್ನಿನವರು ಸ್ಕೂಲು ಬೇಕೆಂದರೂ ಕಟ್ಟಿಸಿ ಕೊಡುತ್ತಿಲ್ಲ. ಸರಕಾರದವರನ್ನು ಕೇಳಿದರೆ ಅವರೂ ಕೂಡ ಕಟ್ಟಿಸಿಕೊಡುತ್ತಿಲ್ಲ. ಇದನ್ನು ಯಾರ ಮುಂದೆ ಹೇಳಬೇಕು ? ಸುಮಾರು ಮೂವತ್ತು ಹಾಗೂ ನಲವತ್ತು ಸಾವಿರ ಜನಸಂಖ್ಯೆ ಇರುವ ರಾಮಚಂದ್ರಪುರ ಹಾಗೂ ಶ್ರೀರಾಮಪುರ ಇಲ್ಲಿ ಹಿಂದುಳಿದವರು ಹಾಗೂ ಬರೀ ಕೂಲಿಕಾರರು ಇರುವ ಪ್ರದೇಶಗಳಲ್ಲಿರುವ ಮಕ್ಕಳಿಗಾಗಿ ಒಂದು ಪ್ರೈಮರಿ ಹಾಗೂ ನರ್ಸರಿ ಶಾಲೆ ಯಾಗಲೀ ಇಲ್ಲ. ಕಾರ್ಪೊರೇಷನ್ನಿನವರನ್ನು ಕೇಳಿದರೆ ಅವರೂ ಇಲ್ಲಿ ಶಾಲೆಗಳನ್ನು ತೆರೆಯುತ್ತಿಲ್ಲ. ಸರಕಾರದವರೂ ತೆರೆಯುತ್ತಿಲ್ಲ. ಇದರ ಬಗ್ಗೆ ಇನ್ನಾದರೂ ಸರಕಾರ ಸೂಕ್ತವಾದ ಕಾರ್ಯಕ್ರಮ ವನ್ನು ಕೈಗೊಳ್ಳಬೇಕು. ಇಲ್ಲದೇ ಇದ್ದರೆ ಇಲ್ಲಿರುವ ಮಕ್ಕಳು ಬೀದಿ ಮಕ್ಕಳಾಗಿ ಕಳ್ಳಕಾಕರಾಗಿ ಹೋಗುವ ಸಂಭವ ಇದೆ. ಇಲ್ಲಿ ಒಂದು ಪ್ರೈಮರಿ ಹಾಗೂ ನರ್ಸರಿ ಶಾಲೆಯನ್ನು ಸರಕಾರ ಪ್ರಾರಂಭ ಮಾಡಬೇಕೆಂದು ಸಲಹೆ ಮಾಡುತ್ತೇನೆ.

ಇನ್ನು ಶೇಷಾದ್ರಿಪುರಂನಲ್ಲಿ ಹೆಣ್ಣುಮಕ್ಕಳಿಗಾಗಿ ಒಂದು ಸ್ಕೂಲು ಇದೆ. ಇದು ಬಾಡಿಗೆಯ ಕಟ್ಟಡದಲ್ಲಿದೆ. ಆದರೆ ಇಲ್ಲಿರುವ ಹುಡುಗರಿಗೆ ಕುಡಿಯುವ ನೀರು ಸಿಗುತ್ತಿಲ್ಲ. ಇಲ್ಲಿಗೆ ಒಂದು ನಲ್ಲಿ ಹಾಕಬೇಕೆಂದು ನಾನು ಎಷ್ಟೋ ಸಲ ಸರಕಾರಕ್ಕೂ ಕೂಡ ಬರಿದಿದ್ದೇನೆ ಮತ್ತು ಇದರ ಪಕ್ಕದ ಮನೆಯಲ್ಲಿರುವವರನ್ನು ನೀರು ಕೇಳಲು ಹೋದರೆ ನೀರಿನ ಬಿಲ್ಲು ಜಾಸ್ತಿಯಾಗುತ್ತದೆ ಎಂದು ಅವರು ನೀರು ಕೊಡುತ್ತಿಲ್ಲ ಮತ್ತು ಇದರಿಂದ ಇಲ್ಲಿನ ಹುಡುಗರಿಗೆ ಬಹು ತೊಂದರೆಯಾಗಿದೆ, ಮತ್ತು ಇಲ್ಲಿನ ಹುಡುಗರಿಗೆ ಸರಿಯಾದ ಒಂದು ಆಟದ ಮೈದಾನವಿಲ್ಲ. ಶಾಲೆಗಳಲ್ಲಿರುವ ಹುಡುಗರಿಗೆ ದೈಹಿಕ ಶಕ್ತಿ ಹೆಚ್ಚಲು ಹಾಗೂ ಮಾನಸಿಕ ಶಕ್ತಿ ಹೆಚ್ಚಲು ಸರಿಯಾದ ಆಟದ ಮೈದಾನಗಳು ಇರಬೇಕಾದುದು ಅಗತ್ಯ. ನಾನೂ ಕೂಗ ಸರಕಾರಕ್ಕೆ ಆಟದ ಮೈದಾನಗಳನ್ನು ಕೊಡಬೇಕೆಂದು ಕೇಳಿದ್ದೇನೆ. ಈಗಲಾದರೂ ಸರಕಾರ ಇದರ ಕಡೆಗೆ ಗಮನ ಕೊಡಬೇಕು.

ಇನ್ನು ಪಠ್ಯ ಪುಸ್ತಕಗಳ ಬಗ್ಗೆ ನಾನಾಗಲೇ ಹೇಳಿದ್ದೇನೆ. ಇದು ಒಂದೊಂದು ಕಡೆಗೆ ಒಂದೊಂದು ರೀತಿಯಾಗಿದೆ. ಆರು ವರ್ಷದ ಒಂದು ಮಗುವನ್ನು ಶಾಲೆಗೆ ವಿದ್ಯಾಭ್ಯಾಸಕ್ಕಾಗಿ ಸೇರಿಸಿದರೆ ಅವನಿಗೆ ಸುಮಾರು 30 ರೂಪಾಯಿ ಬೆಲೆ ಬಾಳುವ ಸುಮಾರು 15 ಪುಸ್ತಕಗಳನ್ನು ಓದಬೇಕೆಂದು ಮಾಡಿದ್ದಾರೆ. ಇಷ್ಟು ಪುಸ್ತಕಗಳನ್ನೂ ಅವರು ಓದಲು ಸಾಧ್ಯವೇ ? ಇದನ್ನು ಯಾವ ಉಪಾಧ್ಯಾಯರೂ ಅರ್ಥ ಮಾಡಿಕೊಂಡಂತೆ ಕಾಣುವುದಿಲ್ಲ. ಪಠ್ಯಪುಸ್ತಕಗಳ ಕಮಿಟಿಯವರು ಇಂತಹ ಪುಸ್ತಕಗಳನ್ನು ಪ್ರಚಾರ ಮಾಡಿದರೆ ಇಂತಹ ಎಳೆಯ ವಯಸ್ಸಿನ ಮಕ್ಕಳ ಮೇಲೆ ಪರಿಣಾಮ ಹೇಗಾಗುತ್ತದೆ, ಇದರಿಂದ ಎಷ್ಟುಮಟ್ಟಿನ ಪರಿಣಾಮವಾಗುತ್ತದೆ ಎನ್ನುವುದನ್ನು ಯಾರೂ ತಲೆಗೆ ಹಾಕಿಕೊಂಡಂತೆ ಇಲ್ಲ. ಇಂತಹ ಹೆಚ್ಚು ಹೊರೆಯನ್ನು ಈ ಮಕ್ಕಳ ಮೇಲೆ ಹಾಕುವುದು ಸರಿಯೇ ಎನ್ನುವುದನ್ನು ವಿಚಾರ ಮಾಡಿ ಪಠ್ಯ ಪುಸ್ತಕಗಳ ಕಮಿಟಿಯವರು ಸರಿಯಾದ ಕ್ರಮ ತೆಗೆದುಕೊಳ್ಳ ಬೇಕೆಂದು ಸಲಹೆ ಮಾಡುತ್ತೇನೆ. ಪಠ್ಯಪುಸ್ತಕಗಳಿಗೆ ಬಂದಿದೆ ಭಾಷಾ ವೈವಿಧ್ಯತೆಯು ಕೆಮ್ಮು, ಮೈಸೂರು, ಧಾರ್ವಾಡ, ಗುಲ್ಬರ್ಗಗಳ ದಮ್ಮು ಎಂದು ಒಬ್ಬ ವಿದ್ಯಾಕಾರಿಣಿ ಹೇಳಿದ್ದಾರೆ. ಪಠ್ಯ ಪುಸ್ತಕಗಳ ವೈವಿಧ್ಯತೆಯಿಂದ ವಿದ್ಯಾರ್ಥಿಗಳಿಗೂ, ಪೋಷಕರಿಗೂ ತುಂಬಾ ತೊಂದರೆ. ಕನ್ನಡ ನಾಡಿನ ಎಲ್ಲಾ ವಿಶ್ವವಿದ್ಯಾನಿಲಯಗಳೂ ಇದನ್ನು ಏಕರೂಪತೆಗೆ ತರಲು ಪ್ರಯತ್ನಿಸಬೇಕು. ಪಠ್ಯ ಪುಸ್ತಕಗಳ ನಿರ್ಣಯದ ವಿಚಾರದಲ್ಲಿನ ಅಕ್ರಮಗಳನ್ನು ಸರಿಪಡಿಸಲು ಪ್ರಯತ್ನಿಸಬೇಕೆಂದು ಅಪೇಕ್ಷಿ ಸುತ್ತೇನೆ. ಕೊನೆಯದಾಗಿ ಪರಾವಲಂಬನೆ, ನೌಕರಿಯ ವ್ಯಾಮೋಹ, ಗೀಳು ಕಲ್ಪಿಸಿರುವ ವಿದ್ಯಾ ಪದ್ಧತಿ ಹೋಗಿ ಸ್ವಾವಲಂಬಿಗಳಾಗುವ ವಿದ್ಯಾಭ್ಯಾಸ ಇಂದು ಬೇಕಾಗಿದೆ. ಜ್ಞಾನ ಶುದ್ಧಿ, ಕ್ರಿಯಾ ಸಿದ್ಧಿಗೆ ಮಾರ್ಗದರ್ಶಕವಾದ ವಿದ್ಯಾಭ್ಯಾಸ ಇಂದು ದೇಶಕ್ಕೆ ಬೇಕಾಗಿದೆ. ಇಂತಹ ವಿದ್ಯಾಪದ್ಧತಿ, ಯನ್ನು ಇಂದಲ್ಲ ನಾಳೆಯಾದರೂ ಅನುಷ್ಠಾನಕ್ಕೆ ತರುವ ಕಾರ್ಯಕ್ರಮಗಳನ್ನು ವಿದ್ಯಾ ಇಲಾಖೆ ಗಮನಿಸಲೆಂದು ಹಾರೈಸಿ ಈ ಬೇಡಿಕೆಗಳನ್ನು ಅನುಮೋದಿಸುತ್ತಾ ನನ್ನ ಮಾತುಗಳನ್ನು ಮುಗಿಸುತ್ತೇನೆ.

Sri C. K. RAJAIAH SHETTY (Chickanayakanahalli).—Mr. Speaker Sir, I rise to ventilate some suggestions before this demand is put to vote. The other day I noted with pain the Minister for Education saying that no new Engineering Colleges would be started in the near future. Really, it is an unfortunate stand that has been taken by the Government. I do not know whether the Minister is aware of the rapid development in science and technology in the World and which is so very essential for our country. No less a person than Pandit Nehru was emphasising on this aspect of the matter whenever he spoke. As it is, we have very few courses in our Engineering Colleges. We have Civil Engineering, Mechanical Engineering and Electric Engineering. Technology is developing everyday and new things are coming to light. It is better that the Minister should have a second thought about this.

Sir, in our Country there is no college to have specialisation in industrial engineering, nuclear engineering, chemical engineering and ever so many subjects, except a few in the Indian Institute of Science in Bangalore and that is not enough.

Sri K. V. SHANKARA GOWDA.—They can be introduced in the existing colleges.

Sri C. K. RAJAIAH SHETTY.—How can that be done ? A Foundry Engineering could be started at Bhadravati and not at Bangalore. Such courses could be started where there are facilities for it. Sir, we are told that in U.S.A., the number of engineers produced yearly is one lakh ; in U.S.S.R., the number of engineers produced annually is 30,000; in a small country like the U.K., the number of engineers coming out every year is 10,000 whereas in the entire India, the number of engineers is about 10,000 coming out every year. If we look to the vast population and the number of programmes that we have in our Plans and the number of industries that are going to be started in our State and the nearly 200 miles of coast that we have, all these require a number of engineers specialised in different lines. Sir, we have nearly 200 miles of coast line for our State but there is no ship building centre. Our Government should move the Centre in the matter and see that we have a ship building area at Karwar or Mangalore. The Civil Engineers cannot do that kind of work there. Even in industries, the engineers who are employed there do not fit in. Probably, you are aware that in Bhadravati a portion of the construction collapsed. Industrial engineering is something different from the Civil Engineering. Therefore, specilisation is needed for the different lines of engineering. That is why Germany has progressed so well because they have specialisation in every branch of engineering. Unfortunately, we have not thought of these but have only a few. At least Mysore should take the lead and start these new lines in engineering. Even the Mining Engineering Diploma Institute at K.G.F. is not upgraded as a Mining College. About five or six years ago, the Minister holding Industries port-folio has made a promise that this would be considered. There are several gold mines to be exploited and there is the Kudure Mukha iron deposit to be exploited. For all this, not less than 500 mining engineers would be needed there.

Is it not necessary to get mining engineers from Nagpur or other places ? So, we must have a college here to teach mining engineering. That is the reason why in this State, other people are appointed in preference to Mysoreans. Now, in several industries, the key posts are occupied by the outsiders and they in turn appoint outsiders. For instance in the Bharat Earth Movers, a Keralite is appointed to the top most job and he is recruiting only Keralites.

Sri M. MALLIKARJUNASWAMY. (Malavalli).— Is not a Keralite an Indian ?

ಶ್ರೀ ಎಸ್. ವಿ. ಅಗ್ನಿಹೋತ್ರಿ (ಧಾರವಾಡ-ರೂರಲ್).—ಮಾನ್ಯ ಸದಸ್ಯರು ತಮಗಾಗಿ ಮಾಡಿದಂತಹ ಹಲ್ಲನ್ನು ಮನೆಯಲ್ಲಿ ಬಿಟ್ಟು ಬಂದಿರುವ ಕಾರಣ ಇಲ್ಲಿ ಅವರು ಏನು ಮಾತಾಡುತ್ತಾರೆಂದು ಗೊತ್ತಾಗುವುದಿಲ್ಲ. ಅದನ್ನು ಹಾಕಿಕೊಂಡು ಮಾತನಾಡಿದರೆ ಬಹಳ ಒಳ್ಳೆಯದು.

(ನಗು)

Sri C. K. RAJIAH SETTY.—So what I mean to say is, at least in the 4th Plan engineering colleges to teach special subjects like Mining Engineering, Nuclear Engineering, Industrial Engineering, Chemical Engineering should be started in the interest of the Country and Nation at large.

Coming to the other aspect of education, what is the outcome of education since the last 20 years ? Have you built any National Character? Have you tried to maintain National morality or discipline? Every day, we find indiscipline. Nearly 25 per cent of the teachers of this, Country do not know even how to sing National Anthem. Sometime back, I went to a school where I presided over a function and there were three teachers. At the end I asked them to sing the National Anthem. They said that they did not know and a gramaphone record had to be played to conclude the function. There is a proverb in Kannada.

" ಮಂತ್ರಿ ಮುಠ್ಠಾಳನಾದರೆ ದೇಶದ ಮಂದಿಯೆಲ್ಲಾ ಪಾಪಿಗಳು, ಮೇಸ್ಟ್ರು ಮುಠ್ಠಾಳನಾದರೆ ಮಂದಿ ಮಕ್ಕಳೆಲ್ಲಾ ಪಾಪಿಗಳು".

If the teachers cannot teach what the National character is, what is the use of such education ? This is all due to the fact that there is a large amount of political interference in the educational institutions, Secondly, there is a social evil like caste, creed, community and region in these educational institutions. I may give a recent example. Very recently, there was a D.E.O. in Tumkur. After he joined duty he was transferred within a very short time and like that four D.E.Os. have been transferred within one or two years. The reason is some politician went to him and asked for transfers of certain persons to particular places. For a teacher who has put in 8 or 9 years, they do not want a transfer but for a person who has hardly put in a few months of service they want a transfer. If politicians interfere like this, no officer can work. You have not evolved any policy at least in regard to transfers. There are teachers who are not transferred even though they have put in 10 or 12 years and teachers who have put in hardly for 8 or 10 months, are transferred, and thay have become political victims. That is the reason why there is no purity in education. As a matter of fact, very recently,

(SRI C. K. RAJAIAH SETTY)

a teacher went and took charge of his duties and within six days he was transferred. That poor teacher had his six children admitted into schools paying fees and all that and he had paid an advance rent for the house and within six days he was transferred. What should he do ? It is all political influence. The D.E.Os who are not amenable to influence are transferred. In our district, we have a minister who interferes in very minor matters. Some of the members of the ruling party go announceing decisions even before something is done and immediately transfers are done. In every department, transfers are frequent on account of the politieal interference. In the District Development Committee where the Chairman was the Deputy Commissioner, was openly challenged by a member that he would see to it that the Deputy Commissioner incharge would be transferred within 24 hours. Actually within three days he was transferred. He was an honest officer and I.A.S. man and he was free from all bias and vices, he was neither favouring nor harassing any body. He was transferred. What I am trying to impress upon the minister is that there should be less political interference and there should not be.... ..

Sri K. V. SHANKARA GOWDA.—Less political or no political interference ?

Sri C. K. RAJIAH SETTY.—You are in power; you have to keep the balance and do good.

Very recently, I came across a bad example where a person who was the victim of caste prajudice. He was the senior most Attender and the Registrar of the University called his subordinate to put up a note proposing for the promotion of the senior most man. Immediately within 10 minutes thereafter when he saw the Service Register of that particular individual, he made out that, that person belonged to some other community. He stated that that person had no chance for promotion. So, if in the educational field this communal feeling is there, what is the sort of National character we can hope to build? The Hon'ble Minister for Education should be firm. He must see that such things do not happen and he must maintain purity in the Education Department though not in other departments because this is the one department where character of millions of students has to be shaped and some spirit of National character has to be built up. Without these, our education is useless. I request the Minister to be firm, sincere and honest either in giving promotion or transfer or passing any order. There should be respect for law and he should care more for law rather than for favour, I hope at least in future, we expect such bad things not to happen.

Recently about Rs. 4,000 worth of CARE materials were found when they were being transported from Tiptur town from Baligere village and that person was caught and police registered the case. The Assistant Education Officer reported it but due to political pressures we are not bearing anything. Even for such things there is no punishment

and how can you maintain purity in administration? You should be firm and strict at least in the Education Department. There should be a revolutionary change in future administration. I hope at least hereafter there will not be such misdeeds. Thank you.

ಶ್ರೀ ಆರ್. ಮುನಿಸ್ವಾಮಯ್ಯ (ಆನೇಕಲ್).—ಸ್ವಾಮಿ, ನಮ್ಮ ಮಾನ್ಯ ವಿದ್ಯಾ ಮಂತ್ರಿಗಳು ಮಂಡಿಸಿರತಕ್ಕ ಬೇಡಿಕೆ ನಂ. 17 ಮತ್ತು 37 ರಲ್ಲಿ ವಿದ್ಯಾಭ್ಯಾಸ ಮತ್ತು ಲೇಖನ ಸಾಮಗ್ರಿ ಮತ್ತು ಮುದ್ರಣ, ಇವುಗಳಲ್ಲಿ ವಿದ್ಯಾಭ್ಯಾಸಕ್ಕೆ 33 ಕೋಟಿ 57 ಲಕ್ಷ 28 ಸಾವಿರದ 700 ರೂಪಾಯಿ ಮತ್ತು ಸಾಮಗ್ರಿ ಮತ್ತು ಮುದ್ರಣಕ್ಕೆ ಒಂದು ಕೋಟಿ, ನಾಲ್ಕು ಲಕ್ಷ, 93 ಸಾವಿರ ರೂಪಾಯಿಯ ಬೇಡಿಕೆಗಳನ್ನು ನಾನು ಸಮರ್ಥಿಸುತ್ತಾ ಕೆಲವು ವಿಷಯಗಳನ್ನು ಪ್ರಸ್ತಾಪ ಮಾಡಬೇಕೆಂದು ಇಚ್ಛಿಸುತ್ತೇನೆ. ಈಗ ವಿದ್ಯಾಭ್ಯಾಸಕ್ಕೆ ಬಹಳ ಹಣವನ್ನು ಮುಂಗಡ ಪತ್ರದಲ್ಲಿ ಒದಗಿಸಿದ್ದಾರೆ.

ಮುಂಗಡ ಪತ್ರದಲ್ಲಿ ಒದಗಿಸಿರುವ ಹಣ ಸಾಲದು, ಇನ್ನು ಹೆಚ್ಚು ಹೆಚ್ಚು ಹಣವನ್ನು ವೆಚ್ಚ ಮಾಡತಕ್ಕಂಥ ಅವಕಾಶವಿದ್ದರೆ ಕೊಡಬಹುದಾಗಿತ್ತು ಎಂದು ಕಾಣುತ್ತದೆ. ಏಕೆಂದರೆ ನಮ್ಮ ದೇಶದ ಏಳಿಗೆ ನಮ್ಮ ಜನಾಂಗದ ಏಳಿಗೆ ವಿದ್ಯಾಭ್ಯಾಸದ ಆಧಾರದ ಮೇಲಿದೆ. ಅದಕ್ಕೋಸ್ಕರವಾಗಿ ಖರ್ಚು ಮಾಡುವ ಹಣವನ್ನು ಅದು ಹೆಚ್ಚಾದರೂ ಖರ್ಚು ಮಾಡಬೇಕಾಗುತ್ತದೆ. ಈ ಭಾಗಕ್ಕೆ ಖರ್ಚು ಮಾಡುವ ಹಣವನ್ನು ವೆಚ್ಚ ಎಂದಾಗಲಿ, ನಷ್ಟ ಎಂದಾಗಲಿ ತಿಳಿಯಬೇಕಾಗಿಲ್ಲ. ನಮ್ಮ ಮಕ್ಕಳ ವಿದ್ಯಾಭ್ಯಾಸದ ಪ್ರಗತಿಯನ್ನು. ಕಾಲೇಜ್ ವಿದ್ಯಾಭ್ಯಾಸದ ಪ್ರಗತಿಯನ್ನು ನೋಡಿದರೆ, ಪರೀಕ್ಷೆಗಳ ಫಲಿತಾಂಶ ಬಹಳ ಭಯಂಕರವಾಗಿ ಕಾಣುತ್ತಿದೆ. ನಮ್ಮ ಉತ್ಸಾಹವನ್ನು ಕಡಿಮೆ ಮಾಡುತ್ತಿದೆ. ಕಾಲೇಜ್‌ಗಳಲ್ಲಿ ಶೇಕಡ 28ರಷ್ಟು ಫಲಿತಾಂಶ ಬಂದರೆ ಹೈಸ್ಕೂಲ್‌ಗಳಲ್ಲಿ ಶೇಕಡ 35 ರಷ್ಟು ಫಲಿತಾಂಶವಿದೆ. ಈ ರೀತಿ ಕಡಿಮೆ ಮಟ್ಟದಲ್ಲಿ ಪಾಸ್ ಆಗುತ್ತಿರುವುದನ್ನು ನೋಡಿದರೆ, ವಿದ್ಯಾಭ್ಯಾಸದ ಮಟ್ಟ ಕೆಳಗಿಳಿದಿದೆಯೆಂದು ಕಾಣುತ್ತದೆ. 10 ವರ್ಷ ಒಬ್ಬ ವಿದ್ಯಾರ್ಥಿ ವ್ಯಾಸಂಗ ಮಾಡಿ ಪ್ರತಿ ವರ್ಷವೂ ತೇರ್ಗಡೆಯಾಗಿ ಎಸ್. ಎಸ್. ಎಲ್. ಸಿ. ಯಲ್ಲಿ ತೇರ್ಗಡೆಯಾಗದಿದ್ದರೆ ಅದಕ್ಕೆ ಕಾರಣವೇನು ? ಈ ಪ್ರಕಾರ ಬಹಳಷ್ಟು ಮಂದಿ ಫೇಲಾಗುತ್ತಿದ್ದರೆ ಇದನ್ನು ನಾವೆಲ್ಲರೂ ತೀವ್ರವಾಗಿ ಗಮನಿಸಬೇಕಾಗಿದೆ. ವಿದ್ಯಾ ಇಲಾಖೆಯ ಅಧಿಕಾರಿಗಳು, ವಿದ್ಯಾಪರಿಣಿತರು ಎಚ್ಚರದಿಂದ ಈ ವಿಷಯವನ್ನು ಗಮನಿಸಬೇಕಾಗಿದೆ. ವಿಧಾನಸಭೆಯ ಸದಸ್ಯರು ಕೂಡ ಈ ಬಗ್ಗೆ ಎಚ್ಚರದಿಂದ ಗಮನಿಸಬೇಕಾಗಿದೆ. ಅದಕ್ಕೋಸ್ಕರವಾಗಿ ವಿದ್ಯಾ ಇಲಾಖೆಯಲ್ಲಿರತಕ್ಕಂಥ ಉನ್ನತ ಅಧಿಕಾರಿಗಳು ಮತ್ತು ವಿದ್ಯಾಪರಿಣಿತರು, ಮತ್ತು ಖಾಸಗೀ ವ್ಯಕ್ತಿಗಳು ಇರುವಂಥ ಒಂದು ಕಮಿಟಿ ಮಾಡಿ, ಹೆಚ್ಚು ವಿದ್ಯಾರ್ಥಿಗಳು ತೇರ್ಗಡೆ ಹೊಂದದಿರುವುದಕ್ಕೆ ಕಾರಣವೇನು ಎಂಬುದನ್ನು ಕಂಡುಹಿಡಿಯಬೇಕು. ಹೆಚ್ಚು ಹೆಚ್ಚು ವಿದ್ಯಾರ್ಥಿಗಳು ಪಾಸ್ ಆಗುವುದಕ್ಕೆ ಅವರು ಏನಾದರೂ ಒಂದು ಸಲಹೆ ಕೊಡಬೇಕೆಂದು ಹೇಳುತ್ತೇನೆ.

ಪ್ರಾಥಮಿಕ ಶಾಲೆಗಳಲ್ಲಿ ವರ್ಷದಿಂದ ವರ್ಷಕ್ಕೆ ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚುತ್ತಿದೆ. ಈಗ ಕಡ್ಡಾಯ ಶಿಕ್ಷಣವನ್ನು ಜಾರಿಗೆ ತಂದಿರುವುದರಿಂದ ವಿದ್ಯಾರ್ಥಿಗಳ ಸಂಖ್ಯೆ ಇನ್ನೂ ಜಾಸ್ತಿಯಾಗುತ್ತಿದೆ. ಮೊದಲು ಒಂದು ಸೆಕ್ಷನ್‌ನಲ್ಲಿ 40 ವಿದ್ಯಾರ್ಥಿಗಳು ಇರುತ್ತಿದ್ದರು. ಈಗ ಅದೇ ಸೆಕ್ಷನ್‌ನಲ್ಲಿ 60 ರಿಂದ 100 ರವರೆಗೆ ಇರುತ್ತಾರೆ. 10 ವರ್ಷಗಳ ಹಿಂದೆ ಎಷ್ಟು ಕಟ್ಟಡಗಳು ಇದ್ದವೋ ಅಷ್ಟೇ ಇವೆ, ಹೆಚ್ಚಾಗಲಿಲ್ಲ. ಉಪಾಧ್ಯಾಯರುಗಳ ಸಂಖ್ಯೆಯೂ ಕೂಡ ಅಷ್ಟೇ ಇದೆ. ಬಹಳ ಮಟ್ಟಿಗೆ ಇವರ ಸಂಖ್ಯೆ ಹೆಚ್ಚಲಿಲ್ಲ. 10 ವರ್ಷಗಳ ಹಿಂದೆ ಎಷ್ಟು ಉಪಕರಣಗಳು, ಪೀಠೋಪಕರಣಗಳು ಇದ್ದವೋ ಅಷ್ಟೇ ಇವತ್ತಿಗೂ ಇವೆ. ವಿದ್ಯೆಯ ಮಟ್ಟ ಕಡಿಮೆಯಾಗುವುದಕ್ಕೆ ಇದೂ ಕಾರಣವೆಂದು ಹೇಳುತ್ತೇನೆ. ವಿದ್ಯಾರ್ಥಿಗಳು ಹೆಚ್ಚಿದಂತೆ, ಉಪಾಧ್ಯಾಯರುಗಳು ಕಡಿಮೆಯಾಗುತ್ತಿದ್ದಾರೆ. ಕೊಡುತ್ತಿರುವ ಉಪಕರಗಳು ಸಾಲದಿರುವುದರಿಂದ, ಸಾಕಷ್ಟು ಸ್ಥಳ ಇಲ್ಲದಿರುವುದರಿಂದ ವ್ಯಾಸಂಗದ ಮಟ್ಟವೂ ಕಡಿಮೆಯಾಗುತ್ತಿದೆ. ಈ ಕಾರಣಗಳಿಂದ ಎಸ್.ಎಸ್.ಎಲ್. ಸಿ. ಯಲ್ಲಿ ಹೆಚ್ಚಾಗಿ ವಿದ್ಯಾರ್ಥಿಗಳು ಫೇಲಾಗುವುದಕ್ಕೆ ಕಾರಣವಿರಬಹುದು ತಿಳಿಯುತ್ತಿದ್ದೇನೆ. ಆದ್ದರಿಂದ ಈ ಬಗ್ಗೆ ವಿದ್ಯಾ ಇಲಾಖೆಯವರು, ಖಾಸಗಿಯವರು ವಿಚಾರ ಮಾಡಿ, ಇರುವ ಕೊರತೆಗಳನ್ನು ಸರಿಪಡಿಸಬೇಕು.

ಗ್ರಾಮಗಳಲ್ಲಿ ಪೋಷಕರಿಗೂ, ಉಪಾಧ್ಯಾಯರುಗಳಿಗೂ ಸಾಕಷ್ಟು ಸಂಬಂಧವಿಲ್ಲ. ಈ ರೀತಿ ಸಂಬಂಧವಿಲ್ಲದಿರುವುದರಿಂದ ಉಪಾಧ್ಯಾಯರುಗಳು ಮಕ್ಕಳಿಗೆ ಸರಿಯಾಗಿ ಪಾಠವನ್ನು ಹೇಳಿಕೊಡದೆ ವಿದ್ಯಾರ್ಥಿಗಳ ವಿದ್ಯಾಮಟ್ಟ ಕಡಿಮೆಯಾಗುತ್ತದೆ. ಉಪಾಧ್ಯಾಯರುಗಳು ಸುಮ್ಮನೆ ಶಾಲೆಗಳಿಗೆ ಬಂದು ಕಾಲ ಕಳೆದುಕೊಂಡು ಹೋಗುತ್ತಾರೆ. ನಮ್ಮ ಮಕ್ಕಳು ಮತ್ತು ಪೋಷಕರ ಹಿತದೃಷ್ಟಿ

(ಶ್ರೀ ಆರ್. ಮುನಿಸ್ವಾಮಯ್ಯ)

ಯಿಂದ, ದೇಶದ ಹಿತದೃಷ್ಟಿಯಿಂದ ಉಪಾಧ್ಯಾಯರುಗಳಿಗೂ ಖಾಸಗೀ ಸದಸ್ಯರುಗಳಿಗೂ ಒಂದು ರೀತಿಯ ಸಂಬಂಧವಿರುವಂತೆ ವಿದ್ಯಾ ಇಲಾಖೆಯವರು ಏರ್ಪಾಡು ಮಾಡಬೇಕೆಂದು ಕೋರುತ್ತೇನೆ.

ವಿದ್ಯಾರ್ಥಿಗಳು 7 ವರ್ಷಗಳು ಓದಿದ ನಂತರ ಜಿಲ್ಲಾ ಮಟ್ಟದಲ್ಲಿ ಎರಡು ರೂಪಾಯಿಗಳ ಶುಲ್ಕವನ್ನು ವಸೂಲುಮಾಡಿ ಪರೀಕ್ಷೆಯನ್ನು ಮಾಡುತ್ತಾರೆ. ಪರೀಕ್ಷೆ ಮುಗಿದ ಮೇಲೆ ಉತ್ತರ ಪತ್ರಿಕೆಗಳನ್ನು ಆಯಾ ಜಿಲ್ಲೆಗೆ ಸೇರಿದ ತಾಲ್ಲೂಕ್‌ಗಳಲ್ಲಿರುವ ಉಪಾಧ್ಯಾಯರುಗಳಿಗೆ ಕಳಿಸುತ್ತಾರೆ. ಅವರು ಉತ್ತರ ಪತ್ರಿಕೆಯನ್ನು ನೋಡಿ ಬೆಲೆ ಕಟ್ಟುತ್ತಾರೆ. ಇವರು ಕೆಲವರ ಪ್ರಭಾವಕ್ಕೆ ಒಳಗಾಗಿ ಉತ್ತರ ಪತ್ರಿಕೆಗಳಿಗೆ ಅಂಕಗಳನ್ನು ಕೊಡಬೇಕಾಗುವುದರಿಂದ, ಆಯಾ ಜಿಲ್ಲಾ ಮಟ್ಟದಲ್ಲಿ ಪರೀಕ್ಷೆ ನಡೆದ ಮೇಲೆ ಉತ್ತರ ಪತ್ರಿಕೆಗಳನ್ನು ದೂರದ ತಾಲ್ಲೂಕ್‌ಗಳಿಗೆ ಕಳಿಸುವ ಏರ್ಪಾಡು ಮಾಡಿ, ವಿದ್ಯಾಭ್ಯಾಸದ ಮಟ್ಟವನ್ನು ಹೆಚ್ಚಿಸಬೇಕು. ಎರಡು ರೂಪಾಯಿಗಳ ಫೀ ಸಾಲದೆ ಹೋದರೆ ಜಾಸ್ತಿ ಹಾಕಬಹುದು. ಉತ್ತರ ಪತ್ರಿಕೆಗಳನ್ನು ನೋಡುವ ಉಪಾಧ್ಯಾಯರುಗಳಿಗೆ, ಪ್ರತಿಯೊಂದು ಉತ್ತರ ಪತ್ರಿಕೆಗೆ ನಾಲ್ಕಾಣೆಯನ್ನು ಕೊಡಬೇಕೆಂದು ಹೇಳುತ್ತೇನೆ.

ವಿದ್ಯಾಭ್ಯಾಸದಲ್ಲಿ ಒಂದು ಹೆಚ್ಚಿನ ಸ್ಟ್ಯಾಂಡರ್ಡ್ ಇಲ್ಲದಿರುವುದಕ್ಕೆ ಕಾರಣ ವರ್ಗಾವರ್ಗಿಗಳು. ಉಪಾಧ್ಯಾಯರುಗರು ಸರ್ಕಾರದ ಕೆಲಸಗಾರರಾಗಿರುವುದರಿಂದ ಇಷ್ಟಬಂದಾಗ ವರ್ಗ ಮಾಡುತ್ತಾರೆ. ಅದು ತಪ್ಪು. ಬೇಸಿಗೆ ಕಾಲದಲ್ಲಿ ಏಪ್ರಿಲ್ ಅಥವಾ ಮೇ ತಿಂಗಳುಗಳಲ್ಲಿ ವರ್ಗ ಮಾಡಿ ಉಳಿದ ಕಾಲದಲ್ಲಿ ವರ್ಗ ಮಾಡಬಾರದೆಂದು ಹೇಳುತ್ತೇನೆ. ಶಾಲೆಗಳು ಪ್ರಾರಂಭವಾದ ಒಂದೆರಡು ತಿಂಗಳ ನಂತರ ವರ್ಗ ಮಾಡಿದರೆ, ವರ್ಷದ ಮಧ್ಯ ಭಾಗದಲ್ಲಿ ವರ್ಗ ಮಾಡಿದರೆ, ಅವರಿಂದ ವಿದ್ಯಾರ್ಥಿಗಳಿಗೆ ತೊಂದರೆಯಾಗುತ್ತದೆ. ಇವರು ಸ್ವಲ್ಪ ಪಾಠ ಮಾಡಿರುತ್ತಾರೆ. ಬೇರೆಯವರು ಬಂದರೆ ಅವರ ಪಾಠ ಹುಡುಗರಿಗೆ ಅರ್ಥವಾಗುವುದಿಲ್ಲ. ಇದರಿಂದ ವಿದ್ಯಾ ಮಟ್ಟ ಕಡಿಮೆಯಾಗುತ್ತದೆ. ವರ್ಷದ ಮಧ್ಯಭಾಗದಲ್ಲಿ ವರ್ಗ ಮಾಡಬಾರದೆಂದು ಬೇಸಿಗೆಯಲ್ಲಿ ವರ್ಗ ಮಾಡುವ ಪದ್ಧತಿಯನ್ನು ಜಾರಿಗೆ ತರಬೇಕೆಂದು ವಿದ್ಯಾ ಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಎ. ಮುನಿಯಪ್ಪ (ಬಾಗೇಪಲ್ಲಿ).—ಪರೀಕ್ಷೆಗಳಲ್ಲಿ ಹೆಚ್ಚು ಮಂದಿ ಫೇಲಾಗುತ್ತಾರೆಂದು ಹೇಳಿದಿರಿ. ಪ್ರತಿಯೊಬ್ಬ ಉಪಾಧ್ಯಾಯನೂ 40-50 ಮಂದಿ ವಿದ್ಯಾರ್ಥಿಗಳಿಗೆ ಮನೆಯಲ್ಲಿ ಪಾಠ ಹೇಳಿಕೊಡುತ್ತಾನೆ. ಒಬ್ಬ ಉಪಾಧ್ಯಾಯರ ಮನೆಗೆ ಪಾಠಕ್ಕೆ ಹೋಗುವ ವಿದ್ಯಾರ್ಥಿಯನ್ನು ಮತ್ತೊಬ್ಬ ಉಪಾಧ್ಯಾಯನು ಹೈಪೋಟಿಯಿಂದ ಫೇಲ್ ಮಾಡಿಸುತ್ತಾನೆ ಎಂದು ತಿಳಿದುಬಂದಿದೆ. ಅದಕ್ಕೆ ಏನು ಹೇಳುತ್ತೀರಿ ?

ಶ್ರೀ ಆರ್. ಮುನಿಸ್ವಾಮಯ್ಯ.—ಅದೂ ಒಂದು ಕಾರಣ ಇದ್ದರೂ ಇರಬಹುದು. ವಿದ್ಯಾ ಮಂತ್ರಿಗಳನ್ನು ಕೇಳಿಕೊಳ್ಳುತ್ತೇನೆ, ಇಲಾಖಾ ಅಧಿಕಾರಿಗಳಿಂದ, ಸ್ಥಳೀಯ ಅಧಿಕಾರಿಗಳಿಂದ ಅಂತಹ ಉಪಾಧ್ಯಾಯರುಗಳನ್ನು ಹಿಡಿದು ಅವರ ಮೇಲೆ ಕ್ರಮ ತೆಗೆದುಕೊಳ್ಳಬೇಕು. ಪ್ರೈವೇಟ್ ಪಾಠ ಹೇಳುವುದನ್ನು ಕಡಿಮೆ ಮಾಡಿಸಬೇಕು. ಆ ರೀತಿ ಹೇಳುವವರ ಮೇಲೆ ಶಿಸ್ತಿನ ಕ್ರಮ ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ.

ಇನ್ನು ಪಠ್ಯಪುಸ್ತಕದ ಬಗ್ಗೆ ವಿಚಾರ ಮಾಡಬೇಕಾಗಿದೆ. ಕೆಲವು ವರ್ಷಗಳಿಂದೀಚೆಗೆ ಪಠ್ಯ ಪುಸ್ತಕಗಳನ್ನು ರಾಷ್ಟ್ರೀಕರಣ ಮಾಡಿದ್ದಾರೆ. ಈಗ ಉತ್ತಮ ಪುಸ್ತಕಗಳು ಬರುತ್ತಿವೆಯೇ ? ಅನೇಕ ಪುಸ್ತಕಗಳಲ್ಲಿರುವ ಭಾಷೆ ಆಯಾ ವರ್ಗದ ಮಟ್ಟಕ್ಕೆ ತಿಳಿಯದಂತೆ ಇರುತ್ತದೆ. ಕೆಲವು ಪುಸ್ತಕಗಳಲ್ಲಿ ಪದಗಳು ಸರಿಯಾಗಿ ಪ್ರಿಂಟ್ ಆಗಿರುವುದಿಲ್ಲ. ವಾಕ್ಯಗಳು ಸರಿಯಾಗಿರುವುದಿಲ್ಲ. ಕಾಗುಣಿತ ಸರಿಯಾಗಿರುವುದಿಲ್ಲ. ಚಿತ್ರ ಒಂದು ರೀತಿ ಇದ್ದರೆ ಅದರ ವಿವರಣೆ ಮತ್ತೊಂದು ರೀತಿಯಿರುತ್ತದೆ. ಈ ಕಾರಣಗಳಿಂದ ವಿದ್ಯಾಭ್ಯಾಸದ ಪ್ರಗತಿ ಕುಂಠಿತವಾಗಿದೆಯೆಂದು ಹೇಳಬಹುದು. ಮಕ್ಕಳಿಗೆ ಈ ಪುಸ್ತಕಗಳು ಕಲಬೆರಕೆಯಾಗಿ ಕಾಣುತ್ತಿದೆ. ನಮ್ಮ ಕನ್ನಡ ಭಾಷೆ ಸುಂದರವಾಗಿದೆ. ನಮ್ಮ ಅಕ್ಷರಗಳಲ್ಲಿ ಹ್ರಸ್ವ, ದೀರ್ಘ, ಕೊಂಬು ಮುಂತಾದವು ಬರುತ್ತವೆ. ಇಂಗ್ಲೀಷ್‌ನಲ್ಲಿ ಇಷ್ಟು ಸ್ಪಷ್ಟವಿರುವುದಿಲ್ಲ. ಟಿಗೆ ಓ ಸೇರಿಸಿದರೆ ಟೋ ಆಗುತ್ತದೆ. ನಮ್ಮ ಲಿಪಿಗಳೇ ಬೇರೆ, ಇಂಗ್ಲೀಷ್ ಲಿಪಿಗಳೇ ಬೇರೆ. ಇಂಗ್ಲೀಷ್‌ನ ರೀತಿಯ ಆಧಾರದ ಮೇಲೆ ಕನ್ನಡದ ಪದಮಾಲೆಯನ್ನು ಪ್ರಿಂಟ್ ಮಾಡಿಸಿದ್ದಾರೆ. ಇಂಗ್ಲೀಷ್‌ನಲ್ಲಿ ಒಂದು ಲಿಪಿಗೆ ಇನ್ನೊಂದು ಲಿಪಿಯನ್ನು ಸೇರಿಸಿ ಪದ ಮಾಡಿ ಹುಡುಗರಿಗೆ ಹೇಳಿಕೊಡುವಂತೆ ಕನ್ನಡದಲ್ಲೂ ಸಹ ಒಂದು ಅಕ್ಷರಕ್ಕೆ ಮತ್ತೊಂದು ಅಕ್ಷರ ಸೇರಿಸಿ ಪದ ಮಾಡಿ ಪ್ರೈಮರಿ ಶಾಲಾ ಹುಡುಗರಿಗೆ ಹೇಳಿಕೊಡುತ್ತಿದ್ದಾರೆ, ಇದರಿಂದ ಹುಡುಗರಿಗೆ ಕಲಿಯಲು ತೊಂದರೆಯಾಗುತ್ತದೆಂದು ತಿಳಿಯಬೇಕು.

5-00 P.M.

ಕಾಲೇಜು ಮತ್ತು ಹೈಸ್ಕೂಲುಗಳಲ್ಲಿ ಷೆಡ್ಯೂಲ್ ಕ್ಯಾಸ್ಟ್‌ನವರಿಗೆ ವಿದ್ಯಾರ್ಥಿವೇತನ ಕೊಡುತ್ತಾ ಇದ್ದೀರಿ, ಅದನ್ನು ಇನ್ನೂ ಹೆಚ್ಚಿನ ಸಂಖ್ಯೆಯಲ್ಲಿ ಕೊಡಬೇಕು ; ಮತ್ತು ಹೆಚ್ಚು ಮೊತ್ತವನ್ನು ಒದಗಿಸಬೇಕು, 10 ವರ್ಷಗಳ ಮೊದಲಿನ ಮೊತ್ತವನ್ನೇ ಈಗಲೂ ಒದಗಿಸುತ್ತಾ ಇದ್ದೀರಿ, ಅದನ್ನು ಹೆಚ್ಚು ಮಾಡಬೇಕೆಂದು ಹೇಳುತ್ತೇನೆ. 11ನೇ ಸ್ಟ್ಯಾಂಡರ್ಡ್ ಇರುವ ಕಡೆ ಆ ಹುಡುಗರನ್ನೂ ಕೂಡ ಈ ಹಾಸ್ಟೆಲುಗಳಲ್ಲಿ ಸೇರಿಸಲು ಅವಕಾಶ ಮಾಡಿ ಕೊಡಬೇಕು ಮತ್ತು ಅದಕ್ಕೆ ಒದಗಿಸತಕ್ಕ ಹಣವನ್ನು ಕೇಂದ್ರ ಸರ್ಕಾರದಿಂದ ತೆಗೆದುಕೊಳ್ಳಬೇಕೆಂದು ಸಲಹೆ ಮಾಡಿ ನನ್ನ ಭಾಷಣವನ್ನು ಮುಗಿಸುತ್ತೇನೆ.

ಶ್ರೀ ಎಂ. ಮಲ್ಲಪ್ಪ (ಬೀರೂರು).—ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಗಳು ಈ ಸಭೆಯ ಮುಂದೆ ಇಟ್ಟಿರತಕ್ಕ ಬೇಡಿಕೆಗಳನ್ನು ಕೆಲವು ಕಾರಣಗಳಿಗಾಗಿ ವಿರೋಧಿಸುತ್ತಾ ಒಂದೆರಡು ಸೂಚನೆಗಳನ್ನು ಈ ಸಮಯದಲ್ಲಿ ನಾನು ಕೊಡಬಯಸುತ್ತೇನೆ. ರಾಜ್ಯ ಬೊಕ್ಕಸದ ಬಹುಪಾಲು ಹಣ ವಿದ್ಯಾ ಖಾತೆಗೆ ಖರ್ಚಾಗುತ್ತಾ ಇದೆ. ಆದರೆ ಅದರಿಂದ ನಾವು ರಾಷ್ಟ್ರದಲ್ಲಿ ಹೆಚ್ಚಿನ ಪ್ರಯೋಜನವನ್ನು ಪಡೆಯುತ್ತಿದ್ದೇವೆಯೇ ಎಂಬುದನ್ನು ಕುರಿತು ಯೋಚನೆ ಮಾಡಬೇಕಾಗಿದೆ. ಈಗ ನನಗೆ ತಿಳಿದಮಟ್ಟಿಗೆ ಹೇಳುವುದಾದರೆ ಈ ವಿದ್ಯೆಗೆ ಹಣ ಇಷ್ಟೊಂದು ಖರ್ಚಾದರೂ ಕೂಡ ರಾಷ್ಟ್ರದಲ್ಲಿ ಒಳ್ಳೆಯ ಯುವಕರನ್ನು ತಯಾರುಮಾಡತಕ್ಕ ವಿದ್ಯೆಯನ್ನು ಕೊಡುತ್ತಿಲ್ಲ, ಇದು ಬದಲಾವಣೆಯಾಗಬೇಕು, ಇದಕ್ಕೆ ಅನೇಕ ಸಮಿತಿಗಳು, ತಯಾರಾಗಿ ಈ ಬಗ್ಗೆ ಇನ್ನೂ ಕೂಡ ಸಂಶೋಧನೆ ನಡೆಯುತ್ತಾ ಇದೆ, ಒಂದು ತೀರ್ಮಾನಕ್ಕೆ ಬಂದಿಲ್ಲ ಎಂಬ ವಿಷಯವನ್ನು ನಾವು ಖಂಡಿತವಾಗಿಯೂ ಒಪ್ಪಲೇಬೇಕಾಗಿದೆ. ಈಗ ಪ್ರೈಮರಿ ಶಾಲೆಗೆ ಹೋಗಬೇಕಾದರೆ ಹುಡುಗ ಅಥವಾ ಬಾಲಕಿಗೆ ಐದು ವರ್ಷ ಎಂಟು ತಿಂಗಳಾಗಿರಬೇಕು, ಅದಕ್ಕೆ ಮುಂಚೆ ಶಿಶುವಿಹಾರಗಳನ್ನು ಏರ್ಪಡಿಸಿ ಅದಕ್ಕೆ ತರಪೇತು ಕೊಡುವುದಕ್ಕೆ ಮನಸ್ಸು ಮಾಡಬೇಕು, ಅದಕ್ಕೆ ಹೆಚ್ಚು ಹಣವನ್ನು ಖರ್ಚುಮಾಡಬೇಕು. ಈಗಿರತಕ್ಕ 26 ಸಾವಿರ ಹಳ್ಳಿಗಳಲ್ಲಿ ಕೇವಲ 33 ಸಾವಿರ ಪ್ರಾಥಮಿಕ ಶಾಲೆಗಳು ಇವೆ, ಅವುಗಳನ್ನು ನಡೆಸಲಿಕ್ಕೆ ಈಗಿನ ಡೈರೆಕ್ಟರು ಒಬ್ಬರಿಗೆ ನಿಜವಾಗಿಯೂ ಸಾಧ್ಯವಾಗುತ್ತಿಲ್ಲ. ಇದರ ಜೊತೆಗೆ ಈ ಪ್ರೈಮರಿ ಶಾಲೆಗಳನ್ನೇ ನಡೆಸಲು ಪ್ರತ್ಯೇಕವಾಗಿ ಒಬ್ಬ ಡೈರೆಕ್ಟರನ್ನು ನೇಮಿಸಬೇಕು ಮತ್ತು ಅವರು ಅದಕ್ಕೆ ಹೆಚ್ಚು ನಿಗಾ ಕೊಡಬೇಕಾದ್ದು ಸೂಕ್ತ ಮತ್ತು ಅಗತ್ಯ ಎಂಬುದನ್ನು ಈ ಸಮಯದಲ್ಲಿ ನಾನು ಒತ್ತಿ ಹೇಳಬಯಸುತ್ತೇನೆ. ಏಕೆಂದರೆ ಗ್ರಾಮಾಂತರ ಪ್ರದೇಶಗಳಲ್ಲಿರತಕ್ಕ ಪ್ರೈಮರಿ ಶಾಲೆಗಳು ಸಮರ್ಪಕವಾಗಿ ನಡೆಯುತ್ತಿಲ್ಲ, ಪ್ರೈಮರಿ ಶಾಲೆಗಳಿಗೆ ಕಟ್ಟಡಗಳು ಇಲ್ಲ. ಕಟ್ಟಡ ಇದ್ದರೂ ಶಾಲೆಗಳನ್ನು ನಡೆಸಲಿಕ್ಕೆ ಉಪಾಧ್ಯಾಯರುಗಳು ಇಲ್ಲ. ಉಪಾದ್ಯಾಯರುಗಳು ಇದ್ದರೂ ಬಹುಮಂದಿ ತರಪೇತಾದವರು ಇಲ್ಲ, ಹೀಗಿರುವಾಗ ಪ್ರೈಮರಿ ವಿದ್ಯಾಭ್ಯಾಸವನ್ನು ಹೇಗೆ ಸುಧಾರಿಸಬೇಕು, ಉತ್ತಮವಾದ ವಿದ್ಯೆಯನ್ನು ಹೇಗೆ ಕೊಡಬೇಕೆಂದು ಯೋಚನೆ ಮಾಡತಕ್ಕ ಕಾಲ ಬಹಳ ಗಾಢವಾಗಿ ಬಂದಿದೆ. ಇದನ್ನು ಇವತ್ತಿನ ದಿವಸ ಯೋಚನೆ ಮಾಡಬೇಕು ಎಂದು ಬಹಳ ಕಳಕಳಿಯಿಂದ ಹೇಳುತ್ತೇನೆ, ಏಕೆಂದರೆ ಹಣವನ್ನು ಸುಮ್ಮನೆ ಖರ್ಚು ಮಾಡಿದರೆ ಸಾಲದು, ಇವತ್ತು ಎಸ್.ಎಸ್.ಎಲ್.ಸಿ ಯಲ್ಲಿ ಪಾಸ್ ಆಗದೆ ಇರತಕ್ಕ ಅಥವಾ ಅಲ್ಲಿ ಉತ್ತೀರ್ಣರಾಗದೇ ಬೇರೆ ಕಡೆ ಎಲ್ಲೂ ಅವಕಾಶವಿಲ್ಲದೇ ಇರತಕ್ಕ ಎಷ್ಟೋ ಜನರು ಈ ಇಲಾಖೆಗೆ ಸೇರಿ ಅವರು ಅಧ್ಯಾಪಕರಾಗುತ್ತಾರೆ, ಅವರು ಉತ್ತಮವಾದ ಅಭ್ಯಾಸವನ್ನು ನೀಡಬಲ್ಲರೇ ಎಂಬುದನ್ನು ಯೋಚನೆ ಮಾಡಬೇಕಾಗಿದೆ. ತರಪೇತು ಹೊಂದಿದವರಲ್ಲದ ಉಪಾಧ್ಯಾಯರ ಕೈಯ್ಯಲ್ಲಿ ವಿದ್ಯಾರ್ಥಿಗಳನ್ನು ಕೊಟ್ಟರೆ ನಿಜವಾಗಿಯೂ ಅದರಿಂದ ಯಾವ ಪ್ರಯೋಜನವೂ ಆಗಲಿಕ್ಕಿಲ್ಲ. ಇದನ್ನು ಸರ್ಕಾರದವರು ಗಾಢವಾಗಿ ಯೋಚನೆ ಮಾಡಬೇಕು. ತರಪೇತು ಹೊಂದಿರತಕ್ಕ ಶಿಕ್ಷಕರನ್ನು ಎಲ್ಲಾ ಕಡೆಯಲ್ಲೂ ನೇಮಕ ಮಾಡತಕ್ಕ ಒಂದು ನೀತಿಯನ್ನು ಅನುಸರಿಸಿ ಕಡ್ಡಾಯವಾಗಿ ಕೂಡಲೇ ಜಾರಿಗೆ ತರಬೇಕೆಂದು ಈ ಸಮಯದಲ್ಲಿ ಸೂಚಿಸುತ್ತೇವೆ. ಈ ದಿವಸ ವಿದ್ಯಾಭ್ಯಾಸ ಕಡ್ಡಾಯ ಹಾಗೂ ಉಚಿತವಾಗಿ ಕೊಡುತ್ತಾ ಇದ್ದೇವೆ ಎಂದು ಹೇಳುತ್ತೇವೆ. ಆದರೆ ಇವತ್ತು ಅದು ಕಡ್ಡಾಯವೂ ಆಗಿಲ್ಲ ಮತ್ತು ಉಚಿತವೂ ಆಗಿಲ್ಲ ಎನ್ನುವುದನ್ನು ತಾವು ಗಮನಿಸಬೇಕಾಗಿದೆ. ಏಕೆಂದರೆ ಇವತ್ತು ನಮ್ಮ ದೇಶದಲ್ಲಿ ಬಡತನ ಹೆಚ್ಚಾಗಿರುವಾಗ ಬಡತನದಲ್ಲಿರತಕ್ಕ ತಂದೆ ತಾಯಿಗಳು ಅವರ ಮಕ್ಕಳ ವಿದ್ಯಾಭ್ಯಾಸವನ್ನು ಮಾಡಿಸಬೇಕು, ಅವರಿಗೆ ವಿದ್ಯೆಯನ್ನು ಕೊಡಿಸಬೇಕೆಂಬ ಯೋಚನೆ ಅವರ ತಲೆಗೆ ಹೋಗುವುದು ಸ್ವಾಭಾವಿಕವಾಗಿ ಕಷ್ಟವಿರುವಾಗ್ಗೆ ಇವತ್ತಿನ ದಿವಸ ನಾವು ಉಚಿತ ಮತ್ತು ಕಡ್ಡಾಯ ವಿದ್ಯಾಭ್ಯಾಸವನ್ನು ಕೊಡಿಸುತ್ತೇವೆ ಎಂದು ಹೇಳಿ ಆ ರೀತಿ ಕಾರ್ಯತಃ ಮಾಡದೇ ಇರುವುದು ಹಾಸ್ಯಾಸ್ಪದವಾಗಿದೆ. ಇವತ್ತು ಜನರು ತಮ್ಮ ಮಕ್ಕಳಿಗೆ ವಿದ್ಯಾಭ್ಯಾಸವನ್ನು ಕೊಡಿಸಲು ಅಶಕ್ತರಾಗಿದ್ದಾರೆ, ಯಾರು ಬಡವರೋ, ಯಾರು ಸಮಾಜದಲ್ಲಿ ಹಿಂದೆ ಬಿದ್ದಿದ್ದಾರೋ ಬದುಕಲಿಕ್ಕೇ ಸಾಧ್ಯವಿಲ್ಲವೋ ಅಂತಹವರ ಮಕ್ಕಳನ್ನು ಶಾಲೆಗೆ ಸೇರಿಸಿ ಅವರನ್ನು ಓದಿಸಲಿಕ್ಕೆ

(ಶ್ರೀ ಎಂ. ಮಲ್ಲಪ್ಪ)

ತೊಂದರೆಯಾಗಿದೆ. ಇವತ್ತಿನ ದಿವಸ ಗ್ರಾಮಾಂತರ ಪ್ರದೇಶಗಳಲ್ಲಿ ಬಡವರ ಮಕ್ಕಳು ಬೀದಿ ಬೀದಿಗಳಲ್ಲಿ ಅಲೆಯುತ್ತಾ ಇದ್ದಾರೆ, ಅದನ್ನು ನೋಡಿದರೆ ನಾವು ಭವಿಷ್ಯದಲ್ಲಿ ಉತ್ತಮ ಜನಾಂಗವನ್ನೇ ತಯಾರು ಮಾಡಲಿಕ್ಕೆ ಸಾಧ್ಯವೇ, ಅದಕ್ಕೆ ಪ್ರಯತ್ನ ಮಾಡುತ್ತಾ ಇದ್ದೇವೆಯೇ ಎಂಬುದು ಗಾಢವಾಗಿ ಯೋಚನೆ ಮಾಡಬೇಕು. ಅಲ್ಲದೇ ಇವತ್ತಿನ ದಿವಸ ಗ್ರಾಮಾಂತರ ಪ್ರದೇಶಗಳಲ್ಲಿ ಈ ಉಚಿತ ಮತ್ತು ಕಡ್ಡಾಯ ವಿದ್ಯಾಭ್ಯಾಸದ ಬಗ್ಗೆ ಏನೊಂದು ಅಭಿಪ್ರಾಯ ಇದೆ ಎಂಬುದನ್ನು ನೋಡಿದರೆ, ಇದು ನಡೆಯುತ್ತಾ ಇಲ್ಲ, ಇದನ್ನು ನಡೆಸಲಿಕ್ಕೆ ಪ್ರಯತ್ನ ಮಾಡಬೇಕೆಂದು ಮಾನ್ಯ ಮಂತ್ರಿಗಳಲ್ಲಿ ಬಹಳ ಕಡ್ಡಾಯವಾಗಿ ಒತ್ತಾಯ ಮಾಡಿ ಹೇಳುತ್ತಾ ಇದ್ದೇನೆ. ಈಗ ಏನಾಗಿದೆ ಎಂದರೆ, ಮೊದಲೇ ಈ ಇಲಾಖೆ ಬಹಳ ಹೆಚ್ಚಾಗಿ ಬೆಳೆದಿದೆ. 19 ಜಿಲ್ಲೆಗಳಲ್ಲಿರತಕ್ಕ ಪ್ರಾಥಮಿಕ ವಿದ್ಯಾಭ್ಯಾಸ ಯಾವ ರೀತಿ ನಡೆಯುತ್ತಾ ಇದೆ ಎಂಬುದನ್ನು ನೋಡಿದರೆ ಅದು ಬಹಳ ವಿಚಿತ್ರವಾಗಿ ನಡೆಯುತ್ತಾ ಇದೆ. ಆದ್ದರಿಂದ ಪ್ರಾಥಮಿಕ ವಿದ್ಯಾಭ್ಯಾಸಕ್ಕೆ ಪ್ರತ್ಯೇಕವಾಗಿ ಒಬ್ಬ ಡೈರೆಕ್ಟರನ್ನು ನೇಮಕ ಮಾಡಬೇಕೆಂಬುದನ್ನು ಕೂಡಲೇ ಸರ್ಕಾರದವರು ಯೋಚನೆ ಮಾಡಬೇಕು. ಆ ಬಗ್ಗೆ ಕಾರ್ಯಕ್ರಮ ತೆಗೆದುಕೊಳ್ಳಬೇಕೆಂದು ಹೇಳಬಯಸುತ್ತೇನೆ.

ಇನ್ನು ಸೆಕೆಂಡರಿ ವಿದ್ಯಾಭ್ಯಾಸದ ಬಗ್ಗೆ ಹೇಳುವುದಾದರೆ ಇದೂ ಕೂಡ ಬಹಳ ವಿಚಿತ್ರವಾಗಿದೆ. ಇವತ್ತಿನ ದಿವಸ ಒಂದು ವಾರಕ್ಕೆ 22 ಗಂಟೆ ಅಭ್ಯಾಸ ಆಗಬೇಕೆಂದು ಇತ್ತು, ಅದನ್ನು 26 ಗಂಟೆಗೆ ಏರಿಸಬೇಕೆಂದು ಯೋಚನೆ ಮಾಡುತ್ತಾ ಇದ್ದಾರೆ. ಗಂಟೆಗಳನ್ನು ಏರಿಸಿದ ಮಾತ್ರಕ್ಕೆ ದಕ್ಷತೆ ಅಥವಾ ಶಿಕ್ಷಣ, ವಿದ್ಯಾಭ್ಯಾಸ ಸರಿಯಾಗಿ ದೊರಕುತ್ತದೆಯೇ ಎಂಬುದನ್ನು ಯೋಚನೆ ಮಾಡಬೇಕು. ಇವತ್ತು ಹುಡುಗರು ಒಳಗಡೆ ಕುಳಿತು ಕಲಿಯಲಿಕ್ಕೆ ಅಪೇಕ್ಷೆಪಡುವುದಿಲ್ಲ. ಹೊರಗಡೆಯೇ ಕಲಿಯತಕ್ಕ ಅವಕಾಶವನ್ನು ಕಲ್ಪಿಸಿಕೊಡಬೇಕು. ಆದ್ದರಿಂದ ಅವರ ಪಾಠ ಕ್ರಮದಲ್ಲಿ ಹೆಚ್ಚಿನ ಬದಲಾವಣೆ ಮಾಡಿ ಹೆಚ್ಚಿನ ಒಂದು ಸಮಯವನ್ನು ಅವರು ಒಳಗಡೆಯೇ ಕಲಿಯಬೇಕು—22 ಗಂಟೆ ಇದ್ದದ್ದನ್ನು 26 ಗಂಟೆಗೆ ಏರಿಸಬೇಕೆಂದು ಹೇಳಿ ಏನು ಯೋಚನೆ ಮಾಡಿದ್ದೀರಿ ಅದನ್ನು ಬಿಟ್ಟುಬಿಡಬೇಕೆಂದು ಇವತ್ತಿನ ದಿವಸ ಕಡ್ಡಾಯವಾಗಿ ಒತ್ತಾಯ ಪೂರ್ವಕವಾಗಿ ಮಂತ್ರಿಗಳಲ್ಲಿ ಬಿನ್ನೈಸಿಕೊಳ್ಳುತ್ತಾ ಇದ್ದೇನೆ. ಇವತ್ತಿನ ದಿವಸ ಹುಡುಗ 11ನೇ ಸ್ಟ್ಯಾಂಡರ್ಡ್‌ಗೆ ಹೋದ ಅಂದರೆ ತನ್ನ ಐಚ್ಛಿಕ ವಿಷಯವನ್ನು ಕುರಿತು ಯೋಚನೆ ಮಾಡಬೇಕು. ಎಷ್ಟೋ ಮಂದಿ ತಂದೆ ತಾಯಿಗಳಿಗೆ ತಮ್ಮ ಹುಡುಗರಿಗೆ ಯಾವ ವಿಷಯದಲ್ಲಿ ಆಸಕ್ತಿ ಇದೆ, ಯಾವುದನ್ನು ಅವರಿಗೆ ಕೊಡಿಸಬೇಕು ಎಂದು ಯೋಚನೆ ಮಾಡಲಿಕ್ಕೆ ಶಕ್ತಿ ಇರುವುದಿಲ್ಲ. ಮಿಡ್ಲ್‌ಸ್ಕೂಲು ಮುಗಿಸಿ 11ನೇ ಸ್ಟ್ಯಾಂಡರ್ಡ್‌ಗೆ ಹೋದ ಅಂದರೆ ಸೈನ್ಸ್ ತೆಗೆದುಕೊಳ್ಳಬೇಕೇ, ಕಾಮರ್ಸ್ ತೆಗೆದುಕೊಳ್ಳಬೇಕೇ ಹಿಸ್ಟರಿ ತೆಗೆದುಕೊಳ್ಳಬೇಕೇ ಅನ್ನುವ ಈ ನೀತಿ ಏನಿದೆ ಇದು ಬಹಳ ಕಷ್ಟ, ಆದ್ದರಿಂದ ಅದನ್ನು ಬದಲಾವಣೆ ಮಾಡಬೇಕು. ಯೂನಿವರ್ಸಿಟಿ ಎಜ್ಯುಕೇಷನ್ ಕೂಡ ಅಷ್ಟೆ. ಇವತ್ತು ನಮ್ಮಲ್ಲಿ ಮೂರು ವಿಶ್ವವಿದ್ಯಾನಿಲಯಗಳು ಇವೆ, ಕರ್ನಾಟಕ ವಿಶ್ವವಿದ್ಯಾನಿಲಯ, ಮೈಸೂರು ವಿಶ್ವವಿದ್ಯಾನಿಲಯ, ಬೆಂಗಳೂರು ವಿಶ್ವವಿದ್ಯಾನಿಲಯ. ಕರ್ನಾಟಕ ವಿಶ್ವವಿದ್ಯಾನಿಯದಲ್ಲಿ ಈಗ ಪಿ.ಯು.ಸಿ. ಕೋರ್ಸ್ ಇದೆ. ಅದರಲ್ಲಿ ಐಚ್ಛಿಕ ಭಾಗವನ್ನು ಅವನು ತೆಗೆದುಕೊಂಡು ಪಾಸ್ ಆದನಂತರ ಮೆಡಿಕಲ್‌ಗೆ ಬೇಕಾದರೂ ಹೋಗಬಹುದು, ಇಂಜನಿಯರಿಂಗ್‌ಗೆ ಬೇಕಾದರೂ ಹೋಗಬಹುದು. ಇಲ್ಲಿ ಹೇಗಿದೆ ಎಂದರೆ ಪಿ.ಯು.ಸಿ.ನಲ್ಲಿ ಮ್ಯಾತಮ್ಯಾಟಿಕ್ಸ್ ತೆಗೆದುಕೊಂಡರೆ ಮೆಡಿಕಲ್‌ಗೆ ತಲೆ ಹಾಕುವ ಹಾಗಿಲ್ಲ, ಈ ರೀತಿ ಇರತಕ್ಕ ಕಷ್ಟ ತಪ್ಪಬೇಕು. ಯೂನಿವರ್ಸಿಟಿಯಲ್ಲಿ ವೈವಿಧ್ಯತೆ ಇರಬೇಕಾದ್ದು ಸ್ವಾಭಾವಿಕ. ಆದರೆ ಈ ರೀತಿ ತಳಹದಿಯಲ್ಲೇ ಬದಲಾವಣೆಯಾಗಬಾರದು. ಬೆಂಗಳೂರಿನಲ್ಲಿರತಕ್ಕ ಒಬ್ಬ ಆಫೀಸರ ಮಗ ಪಿ.ಯು.ಸಿ.ನಲ್ಲಿ ಓದುತ್ತಾ ಇದ್ದು ಮಧ್ಯ ಕಾಲದಲ್ಲಿ ವರ್ಗವಾದರೆ ಅವರ ಗತಿ ಏನಾಗಬೇಕು ? ಇಲ್ಲಿ ಓದತಕ್ಕ ಐಚ್ಛಿಕ ವಿಷಯಗಳೇ ಬೇರೆ. ಅಲ್ಲಿ ಓದತಕ್ಕ ಐಚ್ಛಿಕ ವಿಷಯಗಳೇ ಬೇರೆ. ಆದ್ದರಿಂದ ಕರ್ನಾಟಕ ಯೂನಿವರ್ಸಿಟಿಯಲ್ಲಿ ಏನು ಸಿಲಬಸ್ ಇವೆ ಅದನ್ನೇ ಎಲ್ಲಾ ಕಡೆಯಲ್ಲೂ ಆಚರಣೆಗೆ ತರಲಿಕ್ಕೆ ಮತ್ತು ಅದನ್ನು ಅನುಸರಿಸಲಿಕ್ಕೆ ಮೈಸೂರು ಮತ್ತು ಬೆಂಗಳೂರು ಯೂನಿವರ್ಸಿಟಿಯವರಿಗೆ ಸರ್ಕಾರದವರು ಕಡ್ಡಾಯವಾಗಿ ಒತ್ತಾಯ ಮಾಡಬೇಕು, ಮತ್ತು ಅದನ್ನು ಅನುಸರಿಸುವಂತೆ ಮಾಡಬೇಕು. ಏಕೆಂದರೆ ವಿದ್ಯಾರ್ಥಿಗಳಿಗೆಲ್ಲಾ ಸಮಾನವಾದ ಅವಕಾಶ ಇವತ್ತು ದೊರಕಬೇಕಾಗುತ್ತದೆ. ಇವತ್ತು ಇನ್ನೂ ಒಂದು ವಿಚಿತ್ರವಾದ ಪರಿಸ್ಥಿತಿ ಎಂದರೆ ಸೀಟುಗಳನ್ನು ಹಂಚುವಾಗ ಕರ್ನಾಟಕ ಯೂನಿವರ್ಸಿಟಿಯಲ್ಲಿ ಪಿ.ಯು.ಸಿ.ಪಾಸ್ ಆದವನು ಪಿ.ಸಿ.ಬಿ.ನಲ್ಲಿ 55 ಅಂಕ ತೆಗೆದುಕೊಂಡಿದ್ದರೆ ಸಾಕಂತೆ, ಇನ್ನುಳಿದವರು 68 ಅಂಕ ತೆಗೆದುಕೊಂಡಿದ್ದರೂ ಕೂಡ ಅವರಿಗೆ ಇಂಟರ್‌ವ್ಯೂ ಇಲ್ಲವಂತೆ. ಒಂದೇ ರೂಲ್ಸನ್ನು ಅನುಸರಿಸತಕ್ಕ ವಿಶ್ವವಿದ್ಯಾನಿಲಯಗಳಲ್ಲಿ ಅಭ್ಯಾಸ ಮಾಡಿದ ವಿದ್ಯಾರ್ಥಿಗಳಿಗೆ ಒಂದೊಂದು ಕಡೆ ಒಂದೊಂದು ರೀತಿಯಲ್ಲಿ ಪರಿಗಣನೆ ಮಾಡುವುದು ಸರಿಯಲ್ಲ. ಅಲ್ಲಿ ಓದಿದ ತಕ್ಷಣ

ಹೆಚ್ಚೇನು, ಇಲ್ಲಿ ಓದಿದ ತಕ್ಷಣ ಇವರ ದಕ್ಷತೆ ಕಡಿಮೆ ಏನು ? ಈ ರೀತಿ ಒಂದು ತಾರತಮ್ಯ ಮಾಡಿ ಅವರಿಗೆ ಇರತಕ್ಕ ಉತ್ಸಾಹವನ್ನು ಕುಂಠಿತಮಾಡಿ ವಿದ್ಯಾರ್ಥಿಗಳ ಮನಸ್ಸಿನಲ್ಲಿ ಜಿಗುಪ್ಸೆಯನ್ನುಂಟು ಮಾಡುವುದು ಸರಿಯಲ್ಲ. ಇದರಿಂದ ವಿದ್ಯೆಯ ಪ್ರಗತಿಗೆ ಬಹಳ ಕುಂಠಿತವಾಗುತ್ತದೆ ಎಂಬುದನ್ನು ಬಹಳ ಕಳಕಳಿಯಿಂದ ಹೇಳಬಯಸುತ್ತೇನೆ.

ಇನ್ನು ವಯಸ್ಕರ ಶಿಕ್ಷಣಸಮಿತಿ ಎಂದು ಒಂದು ಸಮಿತಿ ಬಹಳ ಕಾಲದಿಂದಲೂ ಇದೆ; ಕೆಲಸ ಮಾಡಿಕೊಂಡು ಬರುತ್ತಿದೆ. ಆದರೆ ಇಲ್ಲಿಯವರೆಗೆ ಇದು ಎಷ್ಟು ಜನ ವಯಸ್ಕರನ್ನು ವಿದ್ಯಾವಂತರನ್ನಾಗಿ ಮಾಡಿದೆ ಎಂಬುದನ್ನು ನೋಡಿದರೆ ಇದು ಒಂದು ಹಾಸ್ಯಾಸ್ಪದವಾದ ವಿಚಾರವಾಗಿದೆ ಎಂದು ಯಾರಾದರೂ ಹೇಳಬಹುದು. ಚಿಕ್ಕಮಕ್ಕಳಿಗೆ ಉತ್ತಮವಾದ ವಿದ್ಯಾಭ್ಯಾಸವನ್ನು ಕೊಡದೆ, ದೊಡ್ಡವರಿಗೆ ಅವರಿಗೆ ಕೇವಲ ಒಂದು ರುಜುಮಾಡುವುದು ಬಂದರೆ ಸಾಕು. ಅವರು ಎಷ್ಟೋ ಫೋರ್ಜರಿ ಕೇಸುಗಳನ್ನು ಮಾಡುತ್ತಾರೆ. ಅಂಥಾದ್ದರಲ್ಲಿ ಅವರನ್ನು ವಿದ್ಯಾವಂತರನ್ನಾಗಿ ಮಾಡುವುದಕ್ಕೆ ಹಣವನ್ನು ವೃಥಾ ಖರ್ಚುಮಾಡುತ್ತಿದ್ದಾರೆ, ಇದು ಸರಿಯಾದುದಲ್ಲ. ಕೂಡಲೆ ಇದನ್ನು ಸ್ಕ್ರಾಪ್ ಮಾಡಿ ಸರಕಾರಕ್ಕೆ ಉಂಟಾಗುತ್ತಿರುವ ಲಕ್ಷಾಂತರ ರೂಪಾಯಿಗಳನ್ನು ಉಳಿಸಿ ಈ ಮೊಬಲಗನ್ನು ಮಕ್ಕಳಿಗೊಂದು ಉತ್ತಮವಾದ ಶಿಕ್ಷಣವನ್ನು ಕೊಡುವುದಕ್ಕೋ, ಇಲ್ಲವೇ ಪ್ರಾಥಮಿಕ ಶಾಲೆಗಳನ್ನು ಉತ್ತಮಗೊಳಿಸಿ ಮಕ್ಕಳ ವಿದ್ಯಾಭಿವೃದ್ಧಿಗೆ ಈ ಹಣವನ್ನು ಉಪಯೋಗಿಸಬೇಕೆಂದು ನಾನು ಸಲಹೆ ಮಾಡುತ್ತೇನೆ.

ಇನ್ನು ನಮ್ಮ ಆಡಿಯೋ ವಿಷುಯಲ್ ಎಜುಕೇಷನ್ ಎಂತ ಒಂದು ವಿದ್ಯಾಭ್ಯಾಸ ಕ್ರಮವಿದೆ. ಆದರೆ ಇದು ಅಷ್ಟು ಯಶಸ್ವಿಯಾಗಿ ಕೆಲಸವಾಡುತ್ತಿಲ್ಲ. ಕಾರಣ ಇದಕ್ಕೆ ಸರ್ಕಾರದವರು ಕೊಡುತ್ತಿರುವ ಗ್ರಾಂಟ್ ಬಹಳ ಕಡಮೆಯಾಗಿರಬೇಕು, ಇಲ್ಲವೇ ಬೇರಾವುದಾದರೂ ಅಶ್ರದ್ಧೆಯಿಂದ ಇದನ್ನು ದೇಶಾದ್ಯಂತವೂ ಆಚರಣೆಗೆ ತಂದಿಲ್ಲ. ಇದನ್ನು ರಾಜ್ಯಾದ್ಯಂತವೂ ಜಾರಿಗೆ ತಂದರೆ ಇದರಿಂದ ಮಕ್ಕಳ ಮನಸ್ಸಿನಮೇಲೆ ಒಂದು ಒಳ್ಳೆಯ ಪರಿಣಾಮವಾಗುತ್ತದೆ. ಅವರ ಬುದ್ಧಿಶಕ್ತಿ ಹೆಚ್ಚಾಗುತ್ತದೆ. ಆದುದರಿಂದ ಈ ಬಾಬಗೆ ಹೆಚ್ಚಿನ ಗ್ರಾಂಟನ್ನು ಕೊಡಬೇಕೆಂದು ನಾನು ಹೇಳಬಯಸುತ್ತೇನೆ.

ಇನ್ನು ವಿದ್ಯಾರ್ಥಿಗಳಲ್ಲಿ ಈಗಾಗಲೇ ಅಶಿಸ್ತು ಬಹಳ ಜಾಸ್ತಿಯಾಗಿದೆ. ಇದಕ್ಕೆ ವಿದ್ಯಾರ್ಥಿಗಳು ಕಾರಣರೋ, ವಿಶ್ವವಿದ್ಯಾನಿಲಯಗಳು ಕಾರಣವೋ ಅಥವಾ ನಮ್ಮ ಸಮಾಜ ಕಾರಣವೋ ಗೊತ್ತಾಗುವುದಿಲ್ಲ. ಆದರೆ ಇದನ್ನು ಆದಷ್ಟೂ ಕಡಿಮೆಮಾಡುತ್ತಾ ಬರಬೇಕು. ಮೈಸೂರು ದೇಶದಲ್ಲಿ ಈ ದಿವಸ ಸ್ಕೌಟ್ಸ್ ಅಂಡ್ ಗೈಡ್ಸ್ ಎಂದು ಒಂದು ಸಂಸ್ಥೆ ಇದೆ. ಅಲ್ಲಿ ತರಪೇತಾಗತಕ್ಕ ವಿದ್ಯಾರ್ಥಿಗಳಲ್ಲಿ ಒಂದು ರೀತಿಯಲ್ಲಿ ಒಳ್ಳೇ ಸಿಸ್ತು ಮೂಡಿರುತ್ತದೆ. ಈ ಸಂಸ್ಥೆಗೆ ನಮ್ಮ ಮುಖ್ಯ ಮಂತ್ರಿಗಳು ಅಧ್ಯಕ್ಷರೆಂದು ಕೇಳುತ್ತೇನೆ. ಆದರೆ ಅದಕ್ಕೆ ಈ ದಿವಸ ಕೊಡುತ್ತಿರುವ ಗ್ರಾಂಟ್ ಏನೇನೂ ಸಾಲದು. ಇದನ್ನು ಇನ್ನೂ ಮೂರು ಪಟ್ಟು ಕನಿಷ್ಠಪಕ್ಷ ಜಾಸ್ತಿಮಾಡಬೇಕೆಂದು ಹೇಳಬಯಸುತ್ತೇನೆ.

ಇನ್ನೊಂದು ವಿಷಯ : ನಮ್ಮಲ್ಲಿ ಕೇರ್ ಸಂಸ್ಥೆಯ ಮೂಲಕ ನಡೆಸಿಕೊಂಡು ಬರುತ್ತಿರುವ ಮಧ್ಯಾಹ್ನದ ಊಟದ ವ್ಯವಸ್ಥೆಯೇನಿದೆ ಇದು ಬಹಳ ಒಳ್ಳೆಯದು. ಇದಕ್ಕೆ ಇನ್ನೂ ಹೆಚ್ಚಿನ ಪ್ರೋತ್ಸಾಹ ನೀಡತಕ್ಕದ್ದು ಅಗತ್ಯ. ಕಾರಣ ನಮ್ಮ ದೇಶದಲ್ಲಿ ಬಡವರೇ ಹೆಚ್ಚು. ಆದರೆ ಈ ಸಂಸ್ಥೆಯಲ್ಲಿ ಸೇರತಕ್ಕ ವಿದ್ಯಾರ್ಥಿಗಳಲ್ಲಿ ನಾನು ಬಡವ, ನಾನು ಬಲ್ಲಿದ ಎಂಬ ತಾರತಮ್ಯ ಅಳಿಸಿ ಹೋಗುತ್ತದೆ. ಆದುದರಿಂದ ಇವುಗಳನ್ನು ಇನ್ನೂ ಹೆಚ್ಚಿನ ಸಂಖ್ಯೆಯಲ್ಲಿ ತೆರೆದು, ಇವುಗಳನ್ನು ಇನ್ನೂ ಯಶಸ್ವಿಯಾಗಿ ಹಾಗೂ ಪ್ರಾಮಾಣಿಕತೆಯಿಂದ ನಡೆಸತಕ್ಕ ಜನರನ್ನು ಇವುಗಳಿಗೆ ನೇಮಕಮಾಡಿ ಅನುಕೂಲ ಮಾಡಬೇಕೆಂದು ಹೇಳಬಯಸುತ್ತೇನೆ.

ಇನ್ನು ಯೂನಿವರ್ಸಿಟಿ ವಿದ್ಯಾಭ್ಯಾಸದ ವಿಚಾರದಲ್ಲಿ ಒಂದು ಮಾತನ್ನು ಹೇಳಬೇಕಾಗಿದೆ. ಒಂದೊಂದು ಕಾಲೇಜಿನಲ್ಲಿ ಒಂದೊಂದು ಕಾನೂನು ಇರುವುದರಿಂದ ಇವುಗಳನ್ನು ಸಮನ್ವಯಗೊಳಿಸಲು ಒಂದು ಕೋಆರ್ಡಿನೇಷನ್ ಕಮಿಟಿಯನ್ನುಮಾಡಿ ಇದರಲ್ಲಿರತಕ್ಕ ಲೋಪದೋಷಗಳನ್ನು ಸರಿಪಡಿಸಿ, ಎಲ್ಲಾ ಕಾಲೇಜುಗಳಲ್ಲೂ ಒಂದೇ ರೀತಿಯ ನಡೆವಳಿಕೆಗಳು ಇರುವಂತೆ ಮಾಡಬೇಕೆಂದು ಮಾಡುವುದಕ್ಕೆ ಕೂಡಲೆ ಪ್ರಯತ್ನ ಮಾಡಬೇಕೆಂದು ಹೇಳಿ ನನಗಿಷ್ಟು ಮಾತನಾಡುವುದಕ್ಕೆ ಅವಕಾಶ ಮಾಡಿಕೊಟ್ಟ ಅಧ್ಯಕ್ಷರಿಗೆ ವಂದನೆಗಳನ್ನರ್ಪಿಸಿ ನಾನು ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಕೆ. ಎಂ. ದಾಸನಕೊಪ್ಪ (ಧಾರವಾಡಸಿಟಿ).—ಮಾನ್ಯ ಅಧ್ಯಕ್ಷರೇ, ನೆನ್ನೆಯ ದಿವಸ ನಮ್ಮ ಶಿಕ್ಷಣ ಸಚಿವರಾದ ಶ್ರೀಮಾನ್ ಶಂಕರೇಗೌಡರು ನಮ್ಮಮುಂದೆ ಒಂದು ಡಿಮ್ಯಾಂಡನ್ನು ಮಂಡಿಸಿದ್ದಾರೆ. ಅದರ ಬಗ್ಗೆ ನಾನು ಕೆಲವು ಸೂಚನೆಗಳನ್ನು ಮಾಡಬಯಸುತ್ತೇನೆ.

(ಶ್ರೀ ಕೆ. ಎಂ. ದಾಸನಕೊಪ್ಪ)

ಸದ್ಯಕ್ಕೆ ನಮ್ಮ ಪ್ರಾಂತದೊಳಗೆ ಎಷ್ಟೋ ಶಿಕ್ಷಣ ಖಾತೆಯಲ್ಲಿ ಎಷ್ಟೋ ಲೋಪದೋಷಗಳು ಕಾಣಬರಲಿಕ್ಕೆ ಹತ್ತಿವೆ. ನಾನು ಕೆಲವುಕಾಲ ಶಿಕ್ಷಣ ಸಂಸ್ಥೆಯಲ್ಲಿ ಕೆಲಸಮಾಡಲಿಕ್ಕೆ ಹತ್ತಿದ್ದೆನು. ಅದರ ಅನುಭವದಿಂದ ನಾನು ಈ ಮಾತುಗಳನ್ನು ಹೇಳಬಯಸುತ್ತೇನೆ. ನಮ್ಮ ಪ್ರಾಂತದಲ್ಲಿ ಅಂದರೆ ಈಗ ಧಾರ್ವಾಡ ಜಿಲ್ಲೆಯಲ್ಲಿ ಶಿಶುವಿಹಾರ ಶಾಲೆಗಳು ಬಹಳ ಕಡಮೆ ಆದಾವು. ಆದುದರಿಂದ ಎಲ್ಲಾ ಗ್ರಾಮಾಂತರ ಪ್ರದೇಶಗಳಲ್ಲಿಯೂ ಶಿಶುವಿಹಾರಗಳನ್ನು ತೆರೆಯುವುದಕ್ಕಾಗಿ ಸರ್ಕಾರದವರು ಹೆಚ್ಚು ಹಣವನ್ನು ಒದಗಿಸಬೇಕೆಂದು ನಾನು ಅವರಲ್ಲಿ ಬಿನ್ನವಿಸಿಕೊಳ್ಳುತ್ತೇನೆ.

ಇನ್ನು ಓಲ್ಡ್ ಮೈಸೂರು ಮತ್ತು ಹಳೇ ಕರ್ಣಾಟಕದಲ್ಲಿ ಸರ್ಕಾರದವರು ತಾವು ನಡೆಸುತ್ತಿರುವ ಶಾಲೆಗಳಿಗೆ ಪೂರಾ ಗ್ರಾಂಟನ್ನು ಕೊಡುತ್ತಿದ್ದಾರೆ. ಆದರೆ ಖಾಸಗಿಯವರು ನಡೆಸತಕ್ಕ ಶಾಲೆಗಳಿಗೆ ಕಡಮೆ ಗ್ರಾಂಟನ್ನು ಕೊಡುತ್ತಿದ್ದಾರೆ ಎಂದು ತಿಳಿದುಬಂದಿದೆ. ಸರ್ಕಾರದವರು ಈ ಎರಡು ನಮೂನೆಯ ಶಾಲೆಗಳಿಗೂ ಒಂದೇ ತೆರನಾದ ಗ್ರಾಂಟನ್ನು, ಒಂದೇ ನಮೂನೆಯ ಗ್ರಾಂಟನ್ನು ಕೊಡುವಂತೆ ಆಜ್ಞೆ ಮಾಡಬೇಕೆಂದು ಬಿನ್ನವಿಸಿಕೊಳ್ಳುತ್ತೇನೆ. ಇನ್ನು ಖಾಸಗಿಯವರು ಶಾಲೆಗಳನ್ನು ಕೇಳಿದರೆ ಅವರು ಅವನ್ನು 3 ವರ್ಷಗಳ ಕಾಲ ನಡೆಸತಕ್ಕ ಜವಾಬ್ದಾರಿಯನ್ನು ಅವರ ಮೇಲೆ ಹಾಕುತ್ತಿದ್ದಾರೆ. ಹೀಗೆ ಒಂದು ಆಜ್ಞೆಯನ್ನು ಕೂಡ ಮಾಡಿದ್ದಾರೆ. ಜನರಲ್ಲಿ ಸಾಕಷ್ಟು ಹಣದ ಅಭಾವವಿರುವುದರಿಂದ ಅವರಿಗೆ ಸಾಕಷ್ಟು ಶಾಲೆಗಳನ್ನು ತೆರೆಯುವುದಕ್ಕೆ ಸಾಧ್ಯವಿಲ್ಲ. ಆದುದರಿಂದ ಈ 3 ವರ್ಷದ ನಿರ್ಬಂಧವನ್ನು ತೆಗೆದುಹಾಕಬೇಕೆಂದು ಬೇಡಿಕೊಳ್ಳುತ್ತೇನೆ. ಪ್ರತಿಯೊಂದು ಗ್ರಾಮಕ್ಕೆ ಒಂದೊಂದು ಇಂಗ್ಲೀಷ್ ಶಾಲೆಯನ್ನು ಕೊಡಬೇಕು, ಮತ್ತು 3 ವರ್ಷಗಳ ನಿರ್ಬಂಧವನ್ನು ತೆಗೆದುಹಾಕಬೇಕೆಂದು ಬೇಡಿಕೊಳ್ಳುತ್ತೇನೆ.

ಇನ್ನು ಟೆಕ್ಸ್ಟ್ ಬುಕ್ಕುಗಳ ವಿಚಾರಕ್ಕೆ ಬಂದರೆ. ಕನ್ನಡ ಮತ್ತು ಉರ್ದು ಈ ಎರಡು ಟೆಕ್ಸ್ಟ್ ಬುಕ್ಕುಗಳಲ್ಲಿಯೂ ಬಹಳ ದೋಷಗಳು ಕಂಡುಬರುತ್ತಿವೆ. ಇದನ್ನೆಲ್ಲಾ ಟೆಕ್ಸ್ಟ್ ಬುಕ್ ಕಮಿಟಿಯವರು ಬರೋಬರಿಯಾಗಿ ನೋಡುವುದಿಲ್ಲ. ಈಗಲಾದರೂ ಅವರು ಕಣ್ಣು ತೆರೆದುನೋಡಿ ಆ ಲೋಪ ದೋಷಗಳನ್ನು ಕೂಡಲೆ ಸರಿಪಡಿಸುವಂತೆ ಆಜ್ಞೆಮಾಡಲು ಸರಕಾರದವರಲ್ಲಿ ಬಿನ್ನವಿಸಿಕೊಳ್ಳುತ್ತೇನೆ.

ಇನ್ನು ಬೊಂಬಾಯಿ ಕರ್ಣಾಟಕದಲ್ಲಿ ಪ್ರೈಮರಿ ಎಜುಕೇಷನ್ ಆಕ್ಟಿಗೂ ಮತ್ತು ಮೈಸೂರು ದೇಶದಲ್ಲಿರತಕ್ಕ ಪ್ರೈಮರಿ ಎಜುಕೇಷನ್ ಆಕ್ಟಿಗೂ ಹೋಲಿಸಿ ನೋಡಿದರೆ ಇವು ಒಂದೊಂದೂ ಬೇರೆ ಬೇರೆಯಾಗಿರುವಂತೆ ಕಂಡುಬರುತ್ತಿವೆ. ಈ ಎರಡು ಆಕ್ಟ್‌ಗಳೂ ಒಂದೇ ಆಗಿರುವಂತೆ ಮಾಡಬೇಕೆಂದು ಸರ್ಕಾರದವರಲ್ಲಿ ಬಿನ್ನವಿಸಿಕೊಳ್ಳುತ್ತೇನೆ.

ಇನ್ನು ಹೋದ ಸಾರ್ತಿ ಜರುಗಿದ ಎಸ್. ಎಸ್. ಸಿ. ಪರೀಕ್ಷೆಯ ಫಲಿತಾಂಶದ ಸರ್ಟಿಫಿಕೇಟುಗಳನ್ನು ಶಾಲಾಕಾಲೇಜುಗಳು ಚಾಲೂ ಆದರೂ ಕಳಿಸಿಕೊಟ್ಟಿರಲ್ಲಿಲ್ಲ. ಆ ಎಗ್ಝಾಮಿನೇಷನಗಳು ಆದಕೂಡಲೆ ಸರ್ಟಿಫಿಕೇಟುಗಳನ್ನು ಕೊಡುವಂತೆ ಮಾಡಬೇಕೆಂದು ನಾನು ಸರ್ಕಾರದಲ್ಲಿ ಬಿನ್ನವಿಸಿಕೊಳ್ಳುತ್ತೇನೆ.

ಇನ್ನು ಬೊಂಬಾಯಿ ಕರ್ಣಾಟಕ ಪ್ರಾಂತದಲ್ಲಿ ಉರ್ದು ಟ್ರೈನಿಂಗ್ ಕಾಲೇಜುಗಳು ಮೂರು ಮಾತ್ರ ಆದಾವೆ, ಈ ದೋಷದಿಂದ ಸಾವಿರಾರು ಜನ ಶಿಕ್ಷಕರು ಅಂದರೆ 5–6 ಸಾವಿರ ಜನರು ಅನ್‌ಟ್ರೈಂಡಾಗಿ ಕೂತಿದ್ದಾರೆ. ಟ್ರೈಂಡ್ ಆಗದೆ ಇವರು ಮಕ್ಕಳಿಗೆ ಹೇಗೆ ಪಾಠ ಹೇಳುವುದು ! ಸಾಲದ್ದಕ್ಕೆ ಇವರಿಗೆ ಒಂದೊಂದು ಇಂಕ್ರಿಮೆಂಟುಗಳನ್ನು ಸಹಾ ನಿಲ್ಲಿಸಿದ್ದಾರೆ. ಇವರಿಗೆ ಕೊಟ್ಟಿದ್ದ ಇಂಕ್ರಿಮೆಂಟುಗಳನ್ನು ಅವರ ಪಗಾರದಿಂದ ಮತ್ತೆ ವಾಪಸ್ಸು ತೆಗೆದುಕೊಂಡಿದ್ದಾರೆ. ಅದನ್ನು ಹಾಗೆ ಅವರು ಮುರಿದುಕೊಳ್ಳಬಾರದಾಗಿತ್ತು. ಅಲ್ಲಿ ಕೆಲವರು ರಿಟೈರ್ ಆಗುವುದರೊಳಗೂ ಸಹಾ ಟ್ರೈನಿಂಗ್ ಪಡೆಯುವುದಕ್ಕೆ ಅವರಿಗೆ ಅವಕಾಶವಿರುವುಲ್ಲ. ಅಲ್ಲಿ ಇಂಥಾ ಒಂದು ಪರಿಸ್ಥಿತಿಯೊದಗಿದೆ. ಆದುದರಿಂದ ಸರ್ಕಾರದವರು ಅಲ್ಲಿ ಹೆಚ್ಚು ಉರ್ದು ಟ್ರೈನಿಂಗ್ ಕಾಲೇಜುಗಳನ್ನು ತೆರೆಯುವುದಕ್ಕೆ , ಸರ್ಕಾರದವರಲ್ಲಿ ಬಿನ್ನವಿಸಿಕೊಳ್ಳುತ್ತೇನೆ, ಮತ್ತು ಜುಲೈ ತಿಂಗಳು 11 ನೇ ತಾರೀಖು ಫೈನಾನ್ಸ್ ಇಲಾಖೆಯಿಂದ ಒಂದು ಸರ್ಕ್ಯುಲರನ್ನು ಕಳುಹಿಸಿದ್ದಾರೆ. ಅದರೊಳಗೆ ಸುಮಾರು 48 ಲಕ್ಷ ರೂಪಾಯಿಗಳಷ್ಟು ಬೇಡಿಕೆಗಳನ್ನು ಶಿಕ್ಷಣ ಇಲಾಖೆಯಲ್ಲಿ ಕಡಿಮೆ ಮಾಡಬೇಕಾಗಿ ಬಂದಿದೆ ಎಂದು ಸರಕಾರದವರು ಒಂದು ಅಂದಾಜನ್ನು ಹೇಳಿದ್ದಾರೆ. ಅದಕ್ಕೆ ಕಾರಣಗಳನ್ನು ಕೊಟ್ಟಿರುವುದು ಹೀಗಿದೆ ಎಂದರೆ ಲೋಕಲ್ ಬಾಡೀಸ್‌ಗಳಿಗೆ 20ಲಕ್ಷ, ಎನ್.ಸಿ.ಸಿ. ಗಾಗಿ 20ಲಕ್ಷ, ಮಿಡ್-ಡೇ ಮೀಲ್ಸ್‌ಗಾಗಿ 8 ಲಕ್ಷ ರೂಪಾಯಿ

ಗಳು, ಸೈನಿಕ ಶಾಲೆಗಳಿಗಾಗಿ ಮೂರು ಲಕ್ಷ ರೂಪಾಯಿಗಳು, ಡೆವಲಪ್‌ಮೆಂಟು ಸ್ಕೀಂಗಳಲ್ಲಿ ಹತ್ತು ಲಕ್ಷ ರೂಪಾಯಿಗಳು—ಈ ಪ್ರಕಾರ ಸುಮಾರು 63 ಲಕ್ಷ ರೂಪಾಯಿಗಳಷ್ಟು ಕಮ್ಮಿ ಮಾಡಬೇಕಾಗಿ ಬಂದಿದೆ, ಮತ್ತು 15 ಲಕ್ಷ ರೂಪಾಯಿಗಳಷ್ಟನ್ನು ಯೂನಿವರ್ಸಿಟಿಯವರಿಗೆ ವಜಾಮಾಡಿ ಸುಮಾರು 48 ಲಕ್ಷದಷ್ಟು ಕಡಿಮೆಮಾಡಬೇಕೆಂದರೆ ಹೇಗೆ? ಲೋಕಲ್‌ಬಾಡೀಸ್‌ಗಳಿಗೆ ಗ್ರಾಂಟು ಕಡಿಮೆಮಾಡಿದರೆ ಅವರು ಶಾಲೆಗಳನ್ನು ನಡೆಸುವುದಾದರೂ ಹೇಗೆ? ಅವರು ಮುಂದೆ ಶಾಲೆಗಳನ್ನು ನಡೆಸುವುದೇ ಕಠಿಣವಾಗುತ್ತದೆ. ಸರಕಾರ ಕೊಡುವ ಶೇಕಡಾ 50 ರಷ್ಟು ಗ್ರಾಂಟುಗಳನ್ನು ಕೊಡಬೇಕೆಂದು ಏನಿದೆಯೋ ಅದನ್ನು ಪೂರ್ತಿ ಕೊಡಬೇಕು, ಇಲ್ಲವೇ ಸರಕಾರದವರೇ ಎಲ್ಲ ಜವಾಬುದಾರಿಗಳನ್ನೂ ಅವರೇ ವಹಿಸಿಕೊಂಡು ಲೋಕಲ್‌ಬಾಡೀಸ್‌ಗಳವರಿಂದ ಇರುವ ಪ್ರಾಥಮಿಕಶಾಲೆಗಳನ್ನು ತಮ್ಮ ವಶಕ್ಕೆ ತೆಗೆದುಕೊಳ್ಳಬೇಕು. ಇನ್ನು ಎನ್.ಸಿ.ಸಿ.ಬಾಬಿನಲ್ಲಿ 20 ಲಕ್ಷ ಕಮ್ಮಿ ಮಾಡಬೇಕೆಂದರೆ ಹುಡುಗರಿಗೆ ಸೈನಿಕ ಶಿಕ್ಷಣ ಯಾವ ಪ್ರಕಾರ ಕೊಡಬೇಕು? ಅಲ್ಲದೆ ಬಡ ಹುಡುಗರಿಗಾಗಿ ಸ್ವಲ್ಪ ತಿಂಡಿ ಕೊಡುತ್ತಿದ್ದ ಬಾಬಿನಲ್ಲಿ ಎಂಟು ಲಕ್ಷ ರೂಪಾಯಿಗಳನ್ನು ಕಡಿಮೆಮಾಡಬೇಕೆಂದರೆ ಅದು ಸರಿಯಲ್ಲ. ಆ ರೀತಿ ಮಾಡಬಾರದು. ಇದರ ಬಗ್ಗೆ ಸರಕಾರ ಗಮನಕೊಡಬೇಕು.

ನನಗೆ ಮಾತಾಡಲು ಅವಕಾಶ ಕೊಟ್ಟುದಕ್ಕಾಗಿ ಮಾನ್ಯ ಅಧ್ಯಕ್ಷರಿಗೆ ನನ್ನ ಆಭಾರವನ್ನು ಮನ್ನಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಎಚ್. ಎನ್. ನಂಜೇಗೌಡ (ಅರಕಲಗೂಡು).—ಮಾನ್ಯ ಅಧ್ಯಕ್ಷರೇ, ಎಜುಕೇಷನ್ ಡಿಮ್ಯಾಂಡನ್ನು ವಿರೋಧಮಾಡುವ ಕಾಲದಲ್ಲಿ ಕೆಲವು ವಿಷಯಗಳನ್ನು ಸರಕಾರದ ಗಮನಕ್ಕೆ ತರಲು ಅಪೇಕ್ಷಿಸುತ್ತೇನೆ.

ಯಾವ ವಿದ್ಯಾಭ್ಯಾಸದ ಪದ್ಧತಿಯೇ ಆಗಲೀ ಅದರ ಉದ್ದೇಶ ಸಮಾಜದ ಜನರು ಮುಂದು ವರಿಯುವಂತೆ ಮಾಡಬೇಕು, ಅದಕ್ಕೆ ಪೂರಕವಾಗಬೇಕು ಎಂಬುದು. ನಮ್ಮಲ್ಲಿರುವ ವಿದ್ಯಾಭ್ಯಾಸದ ಪದ್ಧತಿಯಲ್ಲಿ ಯಾವ ಒಂದು ಯೋಜನೆಯೂ ಇಲ್ಲ, ಅಥವಾ ಯಾವ ಒಂದು ಪಾಲಿಸಿಯೂ ಇಲ್ಲ ಮತ್ತು ಪೂರ್ವಾಪರ ಆಲೋಚನೆ ಯಾವುದೂ ಇಲ್ಲ ಎನ್ನುವುದು ಈಚೆಗೆ ಕಂಡುಬರುತ್ತಿದೆ. ಉದಾಹರಣೆ ಯಾಗಿ ಹೇಳುವುದಾದರೆ, ಈಗ ಪಾಲಿಟೆಕ್ನಿಕ್ಸ್ ಎಂದು ಏನು ಮಾಡಿದ್ದಾರೆ ಅಲ್ಲಿಗೆ ಸಿವಿಲ್ ಇಂಜನಿಯರುಗಳು ಡಿಪ್ಲೊಮಾ ತೆಗೆದುಕೊಂಡವರನ್ನು ನೇಮಿಸಿಕೊಂಡು ಅವರಿಗೆ ಕೆಲಸಗಳನ್ನು ಕೊಡತಕ್ಕ ಸ್ಥಿತಿಯಲ್ಲಿ ಇಂದು ನಮ್ಮ ಸರಕಾರ ಇಲ್ಲ. ಇಂತಹ ಸ್ಥಿತಿ ಇರುವಾಗ ಇಂತಹ ಪಾಲಿಟೆಕ್ನಿಕ್ ಶಾಲೆಗಳನ್ನು ತೆರೆಯುವುದಕ್ಕಿಂತ ಮುಚ್ಚುವಂತೆ ಏಕೆ ಮಾಡಬಾರದು ಎಂದು ನಾನು ಸರಕಾರವನ್ನು ಕೇಳುತ್ತೇನೆ. ಸರಕಾರದವರು ನಿರುದ್ಯೋಗಿ ವಿದ್ಯಾವಂತರ ಒಂದು ಸೈನ್ಯವನ್ನೇ ಕಟ್ಟುವುದಕ್ಕಿಂತ ಅಥವಾ ಸೃಷ್ಟಿಮಾಡುವುದಕ್ಕಿಂತ ಎಲ್ಲೆಲ್ಲಿ ಅವಶ್ಯಕತೆಗಳು ಇವೆಯೋ ಅಂತಹ ಕಡೆಗಳಲ್ಲಿ ಸೂಕ್ತವಾದ ಕೋರ್ಸುಗಳನ್ನು ಸರಕಾರ ತೆರೆದು ಜನರಿಗೆ ಅನುಕೂಲಗಳನ್ನು ಮಾಡಿ ಕೊಡಬೇಕು. ಎಲ್ಲಿ ಉಪಯೋಗಿಸಿಕೊಳ್ಳಲು ಸಾಧ್ಯವಿಲ್ಲವೋ ಅಂತಹ ಕೋರ್ಸುಗಳನ್ನು ತಗೆಯಬೇಕು. ಇಂತಹ ಕೋರ್ಸುಗಳನ್ನು ತೆಗೆದುಹಾಕುವುದರಿಂದ ತೊಂದರೆಯೇನೂ ಆಗುವುದಿಲ್ಲ. ಸರಕಾರದವರು ಇಂತಹ ಪಾಲಿಟೆಕ್ನಿಕ್ ಶಾಲೆಗಳನ್ನು ಮತ್ತು ಇದರ ಡೆವಲಪ್‌ಮೆಂಟು ಕೋರ್ಸು ಗಳನ್ನೇತಕ್ಕೆ ತೆಗೆಯಬಾರದು ಎಂದು ಸರಕಾರ ತೀವ್ರವಾಗಿ ಆಲೋಚನೆ ಮಾಡಬೇಕು. ಇಲ್ಲದಿದ್ದರೆ ಇವರಿಗೆಲ್ಲಾ ಕೆಲಸಗಳನ್ನು ಕೊಡಲು ಸಾಧ್ಯವೇ ಎನ್ನುವುದನ್ನಾದರೂ ಆಲೋಚನೆ ಮಾಡಬೇಕು, ಮತ್ತು ಇದಕ್ಕೆ ತಕ್ಕ ಒಂದು ಸ್ಕೀಮನ್ನಾದರೂ ತಯಾರುಮಾಡಿ ಇದರ ಉದ್ದೇಶವನ್ನು ಸಾರ್ಥಕ ವಾಗುವಂತೆ ಮಾಡಬೇಕು. ಈ ರೀತಿ ಹೇಳತಕ್ಕ ಕಾಲದಲ್ಲಿ ಒಂದು ಸೂಚನೆಯನ್ನು ಸರಕಾರದ ಮುಂದೆ ಇಡುತ್ತೇನೆ. ನಮ್ಮಲ್ಲಿ ಫಿಷರೀಸ್ ಇಲಾಖೆ ಇದೆ, ಕೋಳಿ ಸಾಕಾಣಿಕೆ ಇದೆ ಮತ್ತು ವ್ಯವಸಾಯಕ್ಕೆ ಸಂಬಂಧಪಟ್ಟ ಇಲಾಖೆ ಇದೆ. ಇದರಲ್ಲಿ ಸರಿಯಾದ ಕೋರ್ಸುಗಳನ್ನು ತೆರೆದು ಇಲ್ಲಿ ಪಾಸಾದವರು ಹಳ್ಳಿಗಳಲ್ಲಿ ಹೋಗಿ ಕೆಲಸ ಮಾಡಬೇಕೆಂದು ವಿಧಾಯಕಮಾಡಿ ಅವರಿಗೆ ತಕ್ಕ ತರಬೇತಿಗಳನ್ನು ಕೊಡಬೇಕು.

ಇನ್ನು ಏಡೆಡ್ ಇನ್‌ಸ್ಟಿಟ್ಯೂಷನ್ನುಗಳ ಬಗ್ಗೆ ಒಂದೆರಡು ಮಾತುಗಳನ್ನು ಇಲ್ಲಿ ಹೇಳಬೇಕಾಗಿದೆ. ಕೆಲವು ತಾಲ್ಲೂಕು ಬೋರ್ಡುಗಳವರು ಶಾಲೆಗಳನ್ನು ನಡೆಸುತ್ತಿದ್ದಾರೆ. ಕೆಲವು ಕಡೆ ಹೈಸ್ಕೂಲು ಗಳನ್ನೂ ನಡೆಸುತ್ತಿದ್ದಾರೆ. ಹೈಸ್ಕೂಲುಗಳನ್ನು ನಡೆಸಬೇಕಾದರೆ ಸರಕಾರದವರಿಂದ ಅನುಮತಿ ತೆಗೆದುಕೊಂಡು ಮಾಡಬೇಕು. ಆದರೆ ಕೆಲವು ವೇಳೆ ಸರಕಾರದ ಅನುಮತಿ ಬರುವುದಿಲ್ಲ. ಇದರಿಂದ ತಾಲ್ಲೂಕು ಬೋರ್ಡುಗಳವರೇ ಇದರ ಅಡ್ಮಿನಿಸ್ಟ್ರೇಷನ್ ಹಾಗೂ ಮ್ಯಾನೇಜುಮೆಂಟನ್ನು ವಹಿಸು ವುದಕ್ಕಾಗುತ್ತಿಲ್ಲ. ಇದರಿಂದ ಇವನ್ನೆಲ್ಲಾ ಸರಕಾರದವರೇ ತಮ್ಮ ಇಲಾಖೆಗೆ ವಹಿಸಿಕೊಳ್ಳಬೇಕೆಂದು ಒತ್ತಾಯಪೂರ್ವಕವಾಗಿ ಇಲ್ಲಿ ಹೇಳಲು ಇಷ್ಟಪಡುತ್ತೇನೆ.

(ಶ್ರೀ ಎಚ್. ಎನ್. ನಂಜೇಗೌಡ)

ಇನ್ನು ಸೆಕಂಡರಿ ಎಜುಕೇಷನ್ ಉಚಿತವಾಗಿದೆ ಎಂದು ಹೇಳುತ್ತಾರೆ. ಆದರೆ ಕೆಲವಾರು ಕಡೆ ಇರುವ ಮುನಿಸಿಪಲ್ ಹೈಸ್ಕೂಲುಗಳಲ್ಲಿ ಹಾಗೂ ಇನ್ನಿತರ ಹೈಸ್ಕೂಲುಗಳಲ್ಲಿ ಬಿಲ್ಡಿಂಗು ಫಂಡಿಗಾಗಿ ಎಂದು ಸುಮಾರು 20 ರೂಪಾಯಿನಿಂದ 50 ರೂಪಾಯಿಗಳವರೆಗೂ ವಸೂಲು ಮಾಡಿ ರಸೀದಿಗಳನ್ನು ಕೂಡ ಕೊಡುತ್ತಿದ್ದಾರೆ. ಆ ರಸೀದಿಗಳು ನನ್ನಲ್ಲೂ ಇವೆ, ಬೇಕಾದರೆ ಅದನ್ನೂ ತಮ್ಮ ಗಮನಕ್ಕೆ ತರುತ್ತೇನೆ. ಇಂತಹ ಬಿಲ್ಡಿಂಗ್ ಫಂಡನ್ನು ವಸೂಲು ಮಾಡುವುದು ಸರಿಯಲ್ಲ. ಇದನ್ನು ಕೂಡಲೇ ತೆಗೆದುಹಾಕಬೇಕು ಎಂದು ನಾನು ಇಲ್ಲಿ ಒತ್ತಾಯದಿಂದ ಹೇಳುತ್ತೇನೆ.

ಇನ್ನೊಂದು ಆಶ್ಚರ್ಯಕರವಾದ ಸಂಗತಿಯನ್ನು ಇಲ್ಲಿ ಹೇಳಬೇಕಾಗಿದೆ. ಇದರ ಬಗ್ಗೆ ಈಗಾಗಲೇ ಶ್ರೀಮಾನ್ ರಾಜಯ್ಯಶೆಟ್ಟರು ಮಾತನಾಡುವಾಗಲೂ ಹೇಳಿದರು. ಶೈಕ್ಷಣಿಕ ರಿಯಾಯಿತಿಗಳನ್ನು ಕೊಡುವುದರ ಬಗ್ಗೆ ಸರಕಾರ ಒಂದು ಪ್ರಕಟಣೆಯನ್ನು ಪೇಪರಿನಲ್ಲಿ ಪ್ರಕಟಿಸಿರುವುದನ್ನು ಓದಿ ನೋಡಿದೆ. ಅದರಂತೆ ರಾಜಕೀಯ ಸಂತ್ರಸ್ತರು ಎಂದು ಇರುವವರ ಮಕ್ಕಳಿಗೆ ಹಾಗೂ ಅವರ ದತ್ತು ಮಕ್ಕಳಿಗೆ ಎಲ್ಲ ವಿಧವಾದ ಸೌಕರ್ಯಗಳನ್ನೂ ಸರಕಾರ ಮಾಡಿಕೊಡುತ್ತದೆ ಎಂದು. ಇದರಿಂದ ಏನಾಗಿದೆ ಎಂದರೆ, ಬುದ್ಧಿವಂತರಾದ ಮಕ್ಕಳಿಗೆ ಅನುಕೂಲಗಳು ಸಿಗುವುದಕ್ಕೆ ಬದಲಾಗಿ ಅವರವರ ಮಕ್ಕಳಿಗೆ ಅನುಕೂಲಗಳನ್ನು ಮಾಡಿಕೊಡಲು ಪ್ರಯತ್ನ ಮಾಡುತ್ತಿದ್ದಾರೆ. ಅಂಕಗಳನ್ನು ತೆಗೆದುಕೊಂಡು ಇರಬೇಕು ಎಂದು ಹೇಳುತ್ತ ಸೇಕಡಾ 50 ರಷ್ಟು ಹಾಗೂ 45 ರಷ್ಟು ಅಂಕಗಳನ್ನು ಪಡೆದಿರುವ ಹುಡುಗರಿಗೆ ಅವರು ರಾಜಕೀಯ ಸಂತ್ರಸ್ತರ ಮಕ್ಕಳಾಗಿದ್ದರೆ ಕೊಡುವುದೇನೋ ಸರಿ. ಏನೂ ಇಲ್ಲದ ರಾಜಕೀಯ ಸಂತ್ರಸ್ತರಿಗೆ ಹಾಗೂ ಹಿಂದೆ ಸ್ವಾತಂತ್ರ್ಯದ ಯಾವ ಕಾರ್ಯಾಚರಣೆಯಲ್ಲೂ ಭಾಗವಹಿಸದೇ ಇರುವಂತಹವರ ಮಕ್ಕಳಿಗೂ ರಾಜಕೀಯ ಸಂತ್ರಸ್ತರು ಎಂದು ಅವರಿಗೆ ಎಲ್ಲ ಅನುಕೂಲಗಳನ್ನು ಕೊಡುತ್ತಿದ್ದಾರೆ. ಹಿಂದೆ ಸ್ವಾತಂತ್ರ್ಯ ಹೋರಾಟ ಕಾಲದಲ್ಲಿ ಜೈಲಿಗೆ ಹೋಗಿ ಬಂದವರು ಕಷ್ಟಗಳನ್ನು ಅನುಭವಿಸಿ ಬಂದವರಿಗೆ ಕೊಡುವುದೇನೋ ಸರಿ. ಆದರೆ ಇದರಲ್ಲಿ 48ನೇ ಇಸವಿಯಿಂದ ಸೇರಿದವರು, 52ರಲ್ಲಿ ಸೇರಿದವರು ಹಾಗೂ 67ನೇ ಇಸವಿಯಲ್ಲಿ ಸೇರಿದವರೂ ಕೂಡ ರಾಜಕೀಯ ಸಂತ್ರಸ್ತರಾಗಿಬಿಟ್ಟಿದ್ದಾರೆ. ಇದನ್ನು ಸರಕಾರ ತೀವ್ರವಾಗಿ ಆಲೋಚನೆ ಮಾಡಿ ನಿಲ್ಲಿಸಬೇಕು.

ಶ್ರೀ ಕೆ. ವಿ. ಶಂಕರ ಗೌಡ.—ಆರು ತಿಂಗಳಾದರೂ ಜೈಲಿಗೆ ಹೋಗಿ ಬಂದಿರಬೇಕು ಮತ್ತು ಅದಕ್ಕೆ ಸರಿಯಾದ ಅರ್ಹತೆಗಳಿವೆ ಎಂದು ಆಯಾ ಜಿಲ್ಲಾ ಕೇಂದ್ರಗಳ ಅಧ್ಯಕ್ಷರಿಂದ ಸರ್ಟಿಫಿಕೇಟನ್ನು ಪಡೆದು ತಂದಿರಬೇಕು, ಇಲ್ಲದಿದ್ದರೆ ಅವರು ರಾಜಕೀಯ ಸಂತ್ರಸ್ತರಾಗುವುದಿಲ್ಲ.

ಶ್ರೀ ಎಚ್. ಎನ್. ನಂಜೇಗೌಡ.—ಮಾನ್ಯ ವಿದ್ಯಾ ಮಂತ್ರಿಗಳು ಈಗ ತಾನೇ ಹೊಸದಾಗಿ ಬಂದಿರುವವರು; ಮತ್ತು ಇವರಿಂದ ನಮ್ಮ ದೇಶ ಬಹಳವಾಗಿ ನಿರೀಕ್ಷಿಸುತ್ತಿದೆ. ಮತ್ತು ಇಂತಹ ತಪ್ಪುಗಳು ಎಲ್ಲಿ ಆಗಿವೆಯೋ ಅಂತಹವುಗಳನ್ನೆಲ್ಲಾ ಕೂಲಂಕಷವಾಗಿ ವಿಚಾರಮಾಡಿ ಸರಿಮಾಡುತ್ತಾರೆ ಎಂದು ನಾನು ನಂಬುತ್ತೇನೆ; ಮತ್ತು ಇವರ ಆಡಳಿತ ಮುಂದೆ ಹೇಗಾಗುವುದೋ ಕಾದು ನೋಡೋಣ.

ಕನ್ನಡ ರಾಜ್ಯದಲ್ಲಿ ಕನ್ನಡಕ್ಕೆ ಎಷ್ಟುಮಟ್ಟಿಗೆ ಪ್ರೋತ್ಸಾಹ ದೊರೆಯುತ್ತಿದೆ ಎನ್ನುವುದನು ಇಲ್ಲಿ ನೋಡಬೇಕು. ನಮ್ಮಲ್ಲಿ ವಿದ್ಯಾವಂತರಾದ ಹಾಗೂ ಬುದ್ಧಿವಂತರಾದ ಜನರಿಲ್ಲವೇ? ಎಜುಕೇಷನಿಸ್ಟ್‌ಗಳಿಲ್ಲವೇ? ಹೀಗಿದ್ದರೂ ಮೈಸೂರು ವಿಶ್ವವಿದ್ಯಾನಿಲಯಕ್ಕೆ ಹೊರಗಿಂದ ಇಂಪೋರ್ಟು ಮಾಡಿ ಇಲ್ಲಿಗೆ ವೈಸ್‌ಚಾನ್ಸಲರಾಗಿ ಮಾಡಿದ್ದಾರೆ. ಇದೂ ಅಲ್ಲದೆ ಇಲ್ಲಿನ ಕಂಟ್ರೋಲರು, ರಿಜಿಸ್ಟ್ರಾರ್ ರವರು ಎಲ್ಲರೂ ಐ.ಎ.ಎಸ್. ಅಧಿಕಾರಿಗಳೇ. ಇವರ ಕೈಕೆಳಗೆ ಫಿ.ಹೆಚ್.ಡಿ. ಡಿಗ್ರಿ ಪಡೆದಿರುವ ಆಫೀಸರುಗಳು ಕೆಲಸ ಮಾಡಬೇಕಾಗಿದೆ. ನಮ್ಮಲ್ಲೇ ಅನೇಕ ಮೆರಿಟೆಡ್ ಅಧಿಕಾರಿಗಳು ಹಾಗೂ ಎಜುಕೇಷನಿಸ್ಟ್‌ಗಳು ಇನ್ನೂ ಇತರ ಬುದ್ಧಿವಂತರು ಇರುವಾಗ ಹೊರಗಿನಿಂದ ಇಲ್ಲಿಗೇಕೆ ಅಧಿಕಾರಿಗಳನ್ನು ತರಬೇಕು? ಇದು ಬಹಳ ಆಶ್ಚರ್ಯದ ಸಂಗತಿ. ಎಜುಕೇಷನಲ್ ಇನ್ಸ್ಟಿಟ್ಯೂಷನ್ನುಗಳಲ್ಲಿ ಐ.ಎ.ಎಸ್. ಅಧಿಕಾರಿಗಳನ್ನು ಹಾಕುವುದು ಬಹಳ ಅನುಚಿತವಾದ ವಿಷಯ. ಈಗಲಾದರೂ ವೈಸ್ ಚಾನ್ಸಲರ್ ಹುದ್ದೆಗೆ ಹೊರಗಿನಿಂದ ಇಂಪೋರ್ಟು ಮಾಡುವುದನ್ನು ನಿಲ್ಲಿಸಬೇಕೆಂದು ಒತ್ತಾಯ ಮಾಡುತ್ತೇನೆ. ಅಮೇರಿಕಾದಲ್ಲಿ ತಳಿಗಳನ್ನು ಅಭಿವೃದ್ಧಿ ಮಾಡುತ್ತಿರುವಂತೆ, ಕೇಂದ್ರದವರು ಹೇಳಿದರು ಎಂದು, ಮೈಸೂರು ರಾಜ್ಯದ ವಿಶ್ವವಿದ್ಯಾನಿಲಯ ಇರುವ ಕನ್ನಡ ರಾಜ್ಯದಲ್ಲಿ ಹೊರಗಿನಿಂದ ಅಧಿಕಾರಿಗಳನ್ನು ಆಮದುಮಾಡಿಕೊಳ್ಳುವ ನೀತಿಯನ್ನು ಕೈಬಿಡಬೇಕು ಮತ್ತು ಹೊರಗಿನಿಂದ ಯಾರನ್ನೂ ಇಲ್ಲಿಗೆ ತರಕೂಡದು. ಇದು ಬಹು ನಾಚಿಕೆಗೇಡಿನ ವಿಷಯ. ಇದರಿಂದ ನಮ್ಮ ರಾಜ್ಯದ ಕನ್ನಡಿಗರೆಲ್ಲಾ ತಲೆತಗ್ಗಿಸಬೇಕಾಗಿ ಬಂದಿದೆ. ಇಂತಹ ನೀತಿಯನ್ನು ಕೂಡಲೇ ಬದಲಾವಣೆ ಮಾಡಿ

ನಮ್ಮಲ್ಲೇ ಇರತಕ್ಕ ಹಾಗೂ ಉನ್ನತ ಸ್ಥಾನ ಪಡೆದಿರುವಂತಹ ವ್ಯಕ್ತಿಗಳೊಬ್ಬರನ್ನು ಇಲ್ಲಿಗೆ ನೇಮಿಸ ಬೇಕು ಎಂದು ತಮ್ಮ ಮೂಲಕ ಭರವಸೆ ಈ ಸಭೆಗೆ ಕೊಡಬೇಕೆಂದು ಸೂಚಿಸುತ್ತೇನೆ, ಹಾಗೂ ಒತ್ತಾಯಪಡಿಸುತ್ತೇನೆ. ಹಾಗೆ ಮಾಡಿದರೆ ಕನ್ನಡ ಜನತೆಯೂ ಕೂಡ ಇದನ್ನು ಸ್ವಾಗತಿಸುತ್ತದೆ ಎಂದು ಹೇಳುತ್ತೇನೆ.

ಇನ್ನು ಅಡಲ್ಟ್ ಎಜುಕೇಷನ್ ಕೌನ್ಸಿಲ್ ಬಗ್ಗೆ ಒಂದು ಮಾತು ಇಲ್ಲಿ ಹೇಳಬೇಕಾಗಿ ಬಂದಿದೆ. ಹಿಂದೆ ಈ ಅಡಲ್ಟ್ ಎಜುಕೇಷನ್ ಕೌನ್ಸಿಲ್ ಆರಂಭವಾದಾಗ ಡೆನ್‌ಮಾರ್ಕಿನಿಂದ ಕೆಲವು ತಜ್ಞರು ಬಂದಿದ್ದರು, ಮತ್ತು ಅವರು ಬೆಲೆಬಾಳುವ ಎರಡು ಕಾರುಗಳನ್ನು ಈ ಅಡಲ್ಟ್ ಎಜುಕೇಷನ್ ಕೌನ್ಸಿಲ್ಲಿನ ಉಪಯೋಗಕ್ಕಾಗಿ ಬಿಟ್ಟುಕೊಟ್ಟರು ಮತ್ತು ಇದನ್ನು ಯಾವ ಕಾಲಕ್ಕೂ ಮಾರಕೂಡದು ಎನ್ನುವ ಷರತ್ತಿನ ಮೇಲೆ ಕಾರುಗಳನ್ನು ಕೊಟ್ಟಿದ್ದರು, ಇದನ್ನು ಹಾಗೆ ಒಂದು ವೇಳೆ ಮಾರ ಬೇಕಾಗಿದ್ದರೆ ಕೇಂದ್ರ ಸರಕಾರದವರ ಅಪ್ಪಣೆ ಪಡೆದು ನಂತರ ಇವುಗಳನ್ನು ಮಾರಬೇಕೆಂದು ಇತ್ತು. ಆದರೆ ನನಗೆ ತಿಳಿದುಬಂದಿರುವ ಪ್ರಕಾರ ಕೇಂದ್ರದವರ ಅಪ್ಪಣೆ ಪಡೆಯದೆಯೇ ಈ ಕಾರುಗಳನ್ನು ಮಾರಿಬಿಟ್ಟಿದ್ದಾರೆ; ಮತ್ತು ಅಡಲ್ಟ್ ಎಜುಕೇಷನ್ ಸಂಸ್ಥೆಗಾಗಿ ಪಂಚಾಯಿತಿಗಳಿಂದ ಇಲ್ಲಿಯವರೆಗೆ ಸುಮಾರು ಎಪ್ಪತ್ತು ಸಾವಿರ ರೂಪಾಯಿಗಳನ್ನು ಪಂಚಾಯತಿಯವರು ವಸೂಲು ಮಾಡಿದ್ದಾರೆ. ನನಗೆ ತಿಳಿದುಬಂದಿರುವ ಪ್ರಕಾರ ಈ ಹಣವೆಲ್ಲಾ ದುರುಪಯೋಗವಾಗಿದೆ ಮತ್ತು ಕಾರುಗಳನ್ನು ಮಾರಿದುದರಿಂದ ಅಡಲ್ಟ್ ಎಜುಕೇಷನ್ ಕೌನ್ಸಿಲ್ಲಿಗೆ ಸುಮಾರು ಒಂಬತ್ತು ಲಕ್ಷದಷ್ಟು ಹಣ ಬಂದರೂ ಕೂಡ ಇದೂ ದುರುಪಯೋಗವಾಗಿದೆ. ಹಾಗೂ ಇನ್ನೂ ಎರಡು ಲಕ್ಷದಷ್ಟು ಹಣ ಇಲ್ಲಿ ದುರುಪ ಯೋಗವಾಗಿದೆ. ಕೇಂದ್ರ ಸರಕಾರ ಅಪ್ಪಣೆ ಕೊಡದೇ ಈ ಕಾರುಗಳನ್ನು ಹೇಗೆ ರಾಜ್ಯಸರಕಾರ ಮಾರಿತು ? ಇದನ್ನು ಮಾನ್ಯ ವಿದ್ಯಾಮಂತ್ರಿಗಳು ಪರಿಶೀಲನೆಮಾಡಿ ತಿಳಿಸಬೇಕು ಎಂದು ಹೇಳು ತ್ತೇನೆ. ವಿದ್ಯಾ ಕ್ಷೇತ್ರದಲ್ಲಿ ಅಡಲ್ಟ್ ಎಜುಕೇಷನ್ ಎನ್ನುವುದೂ ಒಂದು ಭಾಗ. ಇದಕ್ಕಾಗಿ ಕೊಟ್ಟಿರುವ ಒಂದು ವ್ಯಾನ್‌ನ್ನು ಚುನಾವಣಾ ಪ್ರಚಾರಕ್ಕಾಗಿ ಕಾಂಗ್ರೆಸು ಪಕ್ಷ ಬಳಸಿಕೊಂಡಿದೆ. ಇದು ರಾಜ್ಯದ ಹೊಸ ನೀತಿಯೇ ? ಪ್ರಜಾಪ್ರಭುತ್ವದಲ್ಲಿ ನಂಬಿಕೆ ಇರುವ ನೀವುಗಳು ಸಂಸ್ಕೃತಿ ಪ್ರಚಾರಕ್ಕೆ ಎಂದು ಒಂದು ಇಲಾಖೆಯನ್ನೇ ಏತಕ್ಕೆ ಇಡಬೇಕು ? ಇದರಿಂದ ಜನಕ್ಕೆ ಪ್ರಯೋಜನ ವಾಗುತ್ತಿದೆಯೇ ಎನ್ನುವುದನ್ನು ನೋಡಬೇಕಾಗಿದೆ.

5-30 P.M.

ಆಡಳಿತ ವಿಷಯದಲ್ಲಿ ಹೆಚ್ಚಿಗೆ ಹೇಳುವುದಕ್ಕೆ ಮನಸ್ಸು ಮಾಡುವುದಿಲ್ಲ. ದಯವಿಟ್ಟು ಸರ್ಕಾರ ದವರು ಇದಕ್ಕೆ ತೀವ್ರ ಗಮನ ಕೊಟ್ಟು ನಿವಾರಿಸಬೇಕು, ಇಲ್ಲದಿದ್ದರೆ ತೆಗೆದುಹಾಕಬೇಕು. ಒಂದೇ ಒಂದು ಮಾತನ್ನು ಹೇಳುತ್ತೇನೆ. ವಿದ್ಯಾರ್ಥಿಗಳಿಗೆ ಒಳ್ಳೆಯದು ಆಗಬೇಕಾದರೆ ಸಮಾಜದಲ್ಲಿ ವಿದ್ಯೆ ಪೂರಕ ಆಗಬೇಕು. ಒಳ್ಳೆಯ ಸಂಸ್ಕೃತಿ ಅಭಿವೃದ್ಧಿಯಾಗಬೇಕು. ವಿದ್ಯಾರ್ಥಿಗಳ ಮನಸ್ಸಿನ ಮೇಲೆ ದುಷ್ಪರಿಣಾಮ ಬೀರುವ ಸಿನಿಮಾದ ಅಶ್ಲೀಲ ಭಿತ್ತಿ ಚಿತ್ರಗಳು ಏನು ಇವೆಯೋ ಅವು ಇನ್ನೂ ತಪ್ಪಿಲ್ಲ ಎಂದು ಅನೇಕ ಮಾನ್ಯ ಸದಸ್ಯರು ಒತ್ತಾಯ ಮಾಡುತ್ತಿದ್ದಾರೆ. ಭಿತ್ತಿ ಪತ್ರಗಳು ಅಶ್ಲೀಲ ಆಗಿರು ವುದರಿಂದ ಇದನ್ನು ಸರ್ಕಾರದವರು ತಡೆಗಟ್ಟಲೇ ಬೇಕು, ಇಲ್ಲದಿದ್ದರೆ ಮಕ್ಕಳ ಮನಸ್ಸಿನ ಮೇಲೆ ಒಳ್ಳೆಯದಾಗುವುದಿಲ್ಲ. ಹಿಂದೆ ಸಂಸ್ಕೃತಿ ಪ್ರಚಾರ ಇಲಾಖೆ ಇತ್ತು. ಅದನ್ನು ಪುನರುಜ್ಜೀವನ ಗೊಳಿಸಿ. ನಮ್ಮ ಸಂಸ್ಕೃತಿ ಭಾರತ-ರಾಮಾಯಣ ವಿದ್ವನ್ಮಣಿಗಳ ನಾಡು. ನಮ್ಮ ನಾಡಿನ ಸಂಸ್ಕೃತಿ ಏನು ಎನ್ನುವುದು ಜನತೆಗೆ ಗೊತ್ತಾಗುತ್ತದೆ. ವಿದ್ಯಾಸಚಿವರು ಕ್ರಾಂತಿಕಾರರು ಎಂದು ಜನ ತಿಳಿದುಕೊಂಡಿದ್ದರು, ಅದನ್ನು ಉಳಿಸಿಕೊಳ್ಳಬೇಕು ಎಂದು ಹೇಳುತ್ತೇನೆ ಮತ್ತು ಅಧ್ಯಕ್ಷರು ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ಅವರಿಗೆ ವಂದನೆಯನ್ನು ಅರ್ಪಿಸಿ ನನ್ನ ಮಾತನ್ನು ಮುಗಿಸುತ್ತೇನೆ.

†Sri M. MALLIKARJUNASWAMY (Malavalli).—Mr. Deputy Speaker, at the outset I would like to say in the later half of 20th century Socialism has been advancing internationalism in the field of economics. I say scientists have conquered both time and space ; though it is not possible to think of inter-nationalism in the field of economics, it is possible in the field of education. Therefore, I would like to confine my remarks while welcoming the demand pertaining to education that is before us today, only to the university education on the one hand

(SRI M. MALLIKARJUNASWAMY)

and on the other hand to social education, that is, adult education in our State. Of course in a good society or in a good social custom, the education in character and knowledge should be open to everybody and should in fact be enjoyed by everybody.

On the principle of selection, it is an important aspect that the principle of selection ought to be educational and not financial. The function of the university according to me and also according to experts on education is to bring it into the life of the community and to provide proper leaders for the community. I therefore would like to say, that if we study the history and development of universities in the World, especially in Great Britain and America, it has passed through three stages. The first stage in the middle ages was that learning was confined to clergy and with the renaissance, the idea gained ground that every well-to-do person ought to be educated though women were supposed to need less education than men. The education of a gentleman was given at the Universities throughout the 17th, 18th and 19th centuries and is still given at Oxford, because at the very outset internationalism is possible in the field of education. The idea of the education of a gentleman depended on aristocracy, but now it has ceased to be an important aspect of the life of a Nation. The idea of aristocracy cannot flourish in democracy or in an industrial plutocracy which we are having in every well-developed country and which we are passing through in this Country also. Now, Universities are becoming schools for professions. As the World grows more complicated and industry becomes more scientific, an increasing number of experts are required, and in the main they are being supplied by the Universities. Of course, old fashioned people lament the intrusion of technical schools into the haunts of pure learning. Just like Art for Art's sake, knowledge for knowledge's sake is an aristocratic idea and not a plutocratic ideal. In this connection, I say the plutocrats welcome the intrusion. They demand it. They care nothing for culture. The renaissance tradition is not yet dead with them. If you introduce heirarchy into the educational system that would mean the advent of culture to the educational advancement which flourishes in democracy and socialism. Of course, here, if we cling to mere tradition, we shall be fighting a losing battle. If pure learning is to survive as one of the purposes of University, as I said, it will have to be brought into relation with the life of the community as a whole; and not only with the refined delights of a few gentlemen of leisure. Disinterested learning must find proper place in academic learning. Every now and then on the floor of the Senate and Academic Council, as a member of the Syndicate. I have been saying that disinterested learning is the key to the new World. We have to build up a new Society. We need intellectuals in all walks of life to build our Country into a new Society. Students are pioneers in this respect. Disinterested learning is of utmost importance in academic life. Its place in academic life must increase and not diminish. This

is my honest opinion which I am holding as an educationist. Take for instance, American Universities or British Universities from which we have also copied down some of their systems of education just as our Constitution has taken the best of everything from American and British Constitutions. Both in America and in England, the main force tending to its diminution has been the desire to get endowments from ignorant millionaires. This is also happening in our Country to some extent and many members have referred on the floor of this august House to the atrocities perpetrated through this bogey, that is this capitation fees-the so-called demon of capitation fees. In a democracy it is very essential that public funds need not be spent on objects on which the capatains of industry are willing to spend. This will help in raising the intellectual level in the University field. Therefore, every entrant into the university will have to be carefully screened. After the P.U.C., the social and other factors pertaining to the teacher also must be carefully studied. Then only we can build up a new Society. That is why some of our friends should look to the educational progress in the Soviet Union. We are wedded to democratic socialism and planning. Therefore, the fault lies with the type of Government we are having. This I would like to tell my friend Mr. Krishnan, it would greatly facilitate if our learned men realise their responsibilities. Of course, take a purely imaginary example, a learned man in Finance or economics teaching his own subject instead of organic chemistry. We have to create proper incentive to attract proper men for the University. This is my opinion. Of course, we have not attained that stage of democracy in our Country—if you mean by Democracy 'Government of the people, by the people and for the people' as Abraham Lincoln said. Democracy means quality and purity in public life. Then only, we can strengthen Democracy. Otherwise, Democracy will come to a dead end. In my opinion, Democracy instead of talking deep roots, it is the one thing that is on trial in this Country. Let us leave aside political considerations.

Now I will come to the University. University exists for two purposes to train men and women for certain professions, secondly learning without regard to maximum utility. The above two purposes do not decide how we are to select persons for professions of engineering and medicine. It is very difficult to enter upon this. What is the natural corrollory ? Naturally the selections as I said, will be purely on social grounds and on hereditary basis, basing my arguments on the Kothari Commission Report. The principle of heridity lingers in many Departments of life. We have been advertising that land will be given only to landless people who are agriculturists. We say 'reasonable extent of land is available ; it may be granted to *bona fide* agriculturists. Mostly sons of the soil are selected for this purpose. Therefore I say here that even after 20 years of Independence, we are not self-sufficient in the matter of foodstuffs. That is because we have not yet realised the agricultural fundamentalism. The Fourth Plan has realised this agricultural fundamentalism, to attain self-sufficiency in the matter of foodgrains. But the Planning

(SRI M. MALLIKARJUNASWAMY)

Commission have realised the fault and at last have said, we have to realise this agricultural fundamentalism. We must open junior agricultural schools and we should say that every man who cultivates a particular number of acres of land, the minimum is, they must have a diploma in scientific agriculture. I think then only we can improve our agriculture and the principle of hereditary selections will have to be done away with. For instance, at the Davanagere College I have said as a member of the affiliation commission, I have had opportunities to know this-they have said, out of 150 students, only 2 have passed the first terminal examinations. Why, because of the diobolical demon of capital fees ! People who can make a better use of these educational opportunities are denied the opportunity. I remember, Rajkumari Amrut Kaur was the Health Minister in those days; she decried this. She said, 'we should not allow this demon and we should do away with this'.

As there is restriction on my time here, I do not wish to take more time of this House. I would only point out that in the net result what is happening is, people with natural aptitude are not selected for the respective courses, because they are poor. They are not getting admission in these colleges. That means a deplorable waste of talent and waste of money to the State which will ultimately turn out to be a National waste.

Mr. DEPUTY SPEAKER.—The ten minutes time given to the Hon'ble member is over.

Sri M. MALLIKARJUNASWAMY.—I have just finished the first item. If the Speaker is pleased to give me five minutes, I will wind up in a befitting manner.

Social education is very important and the Adult Education Council is doing its utmost for the last 25 years. We are celebrating the Silver Jubilee of this Council, but the grant given to this voluntary organisation is not adequate. In the literacy classes, we have developed several activities and international record has been given to this voluntary effort. Many of our men are humble workers in the field of Adult Education and there are experts offered by several other international organisations, and they are doing very good work in this field. One such is, the *vidyapeeth* movement. The Planning Commission has given due attention to this Vidypeeth movement in our State and they have also said that similar Vidyapeets will have to be started throughout the length of the Indian Nation. It is a great credit to the people who are working in this field. For the last one or two years, I am adorning the Office of the President of the Adult Education Council and I am very proud to say that our Hon'ble Education Minister Sri Shankara Gowda is taking very keen interest with his agricultural background. He is taking a lot of interest in assisting us in every way. Our first Member of the Government is also

here fortunately. I request him to do his best. The former Education Minister Sri S. R. Kanthi is also here. He has also done his very best to improve this aspect of social education in Mysore State and our thanks naturally go to him.

In conclusion, I say that in the university, there should be a great respect for maintaining standards and there are serious obstacles placed in the way of the scheduled caste people in getting their due education. They are now saying that they will not entertain students who have secured below 40 marks. In stipulating this 40 per cent, they are violating even the constitutional provision made in order to safeguard the interests of scheduled caste students. I trust that Government will look into these things because the scheduled castes are the most vulnerable section of the society. Unless these people are cared for, you will be antagonising them and reducing them to the proletarian class. That will not only lead to a socio-economic revolution but also to a volcanic eruption of unimaginable magnitude in the Country. With this warning, I close my speech.

Mr. DEPUTY SPEAKER.—Mr. Azeez Sait, is given only five minutes.

Sri AZEEZ SAIT.—Mr. Speaker Sahib, if it is only five minutes, I refuse to speak.

Mr. DEPUTY SPEAKER.—Then Sri Deve Gowda.

ಶ್ರೀ ಎಚ್. ಡಿ. ದೇವೇಗೌಡ (ಹೊಳೆನರಸೀಪುರ).—ಮಾನ್ಯ ಸಭಾಪತಿಯವರೇ, ಈಗ ನಮ್ಮ ಮುಂದಿರತಕ್ಕ ವಿದ್ಯಾಭ್ಯಾಸಕ್ಕೆ ಸಂಬಂಧಪಟ್ಟ ಬೇಡಿಕೆಯ ಚರ್ಚೆಯ ಕಾಲದಲ್ಲಿ ಈ ದಿವಸ ಈ ರಂಗದಲ್ಲಿರತಕ್ಕ ತೊಡಕುಗಳನ್ನು ಸಭೆಯ ಗಮನಕ್ಕೆ ತರಬಯಸುತ್ತೇನೆ. ಇವತ್ತಿನ ದಿವಸ ಸುಮಾರು 33 ಕೋಟಿ ರೂಪಾಯಿಗಳನ್ನು ವಿದ್ಯಾಭ್ಯಾಸಕ್ಕೋಸ್ಕರ ಖರ್ಚು ಮಾಡುತ್ತಿದ್ದಾರೆ. ಈ ಮೂವತ್ತಮೂರು ಕೋಟಿ ರೂಪಾಯಿಗಳನ್ನು ಖರ್ಚು ಮಾಡತಕ್ಕ ಕಾಲದಲ್ಲಿ ಇವತ್ತಿನ ದಿವಸ ಸಮಾಜಕ್ಕೆ ಎಂಥ ವಿದ್ಯೆ ಕಲಿಸಬೇಕೆಂಬುದನ್ನು ಸ್ವಲ್ಪ ಮಾನ್ಯ ವಿದ್ಯಾ ಮಂತ್ರಿಗಳು ಆಲೋಚನೆ ಮಾಡತಕ್ಕದ್ದು ಯೋಗ್ಯ. ಈ ರೀತಿಯ ಹಣ ಖರ್ಚು ಮಾಡುತ್ತಿರುವುದರಿಂದ ಸಮಾಜಕ್ಕೆ ಇದರಿಂದ ಏನಾದರೂ ಒಳ್ಳೆಯದಾಗುತ್ತದೆಯೇ ಎಂಬುದನ್ನು ವಿಚಾರ ಮಾಡಬೇಕು. ನಾವು ಪತ್ರಿಕೆಗಳಲ್ಲಿ ಓದಿದ್ದೇವೆ—9 ಲಕ್ಷ ಚಿಲ್ಲರೆ ಜನರು ಎಂಪ್ಲಾಯ್‌ಮೆಂಟ್ ಎಕ್ಸ್ಚೇಂಜಿನಲ್ಲಿ ರಿಜಿಸ್ಟರ್ ಮಾಡಿಕೊಂಡಿದ್ದಾರೆ. ಇದರಲ್ಲಿ ಎಲ್ಲಾ ರಂಗವೂ ಬಂತು. ಇವತ್ತಿನ ದಿವಸ ಎಲ್ಲಾ ವರ್ಗದ ಟೆಕ್ನಿಕಲ್, ಯುನಿವರ್ಸಿಟಿ ಗ್ರಾಜ್ಯುಯೇಟ್ಸ್, ಹಾಗೂ ಇನ್ನಿತರ ರಂಗದಲ್ಲಿರತಕ್ಕ, ಜನರು ಸಾಧಾರಣ 9 ಲಕ್ಷ ಚಿಲ್ಲರೆ ನಿರುದ್ಯೋಗಿಗಳಾಗಿ, ಎಂಪ್ಲಾಯ್‌ಮೆಂಟ್ ಎಕ್ಸ್‌ಚೇಂಜಿನಲ್ಲಿ ರಿಜಿಸ್ಟರ್ ಮಾಡಿದ್ದಾರೆಂಬುದನ್ನು ನಾವೆಲ್ಲಾ ಓದಿದ್ದೇವೆ. ಅದರಲ್ಲೂ ಈಗ ಕೊಡತಕ್ಕ ವಿದ್ಯಾಭ್ಯಾಸದಿಂದ ಸಮಾಜಕ್ಕೆ ಏನಾದರೂ ಫಲಕಾರಿಯಾಗುತ್ತಿದೆಯೋ ಎಂಬುದನ್ನು ತಜ್ಞರು ಇದರ ಕಡೆಗೆ ಗಮನ ಕೊಟ್ಟು ನೋಡಬೇಕು. ಇವತ್ತು ಪಾಲಿಟೆಕ್ನಿಕ್, ಮತ್ತು ಇಂಜಿನಿಯರಿಂಗ್ ಸಂಸ್ಥೆಗಳಿವೆ, ಇದರಿಂದ ಹೊರಬರತಕ್ಕ ಮಕ್ಕಳಿಗೆ ಪ್ರೋತ್ಸಾಹ ಇದೆಯೇ ಭವಿಷ್ಯವಿದೆಯೇ ಎಂಬುದನ್ನು ಯೋಚನೆ ಮಾಡಬೇಕು. ಇವತ್ತು ಸರ್ಕಾರ ಖರ್ಚು ಮಾಡತಕ್ಕ ಹಣ, ಹೆತ್ತವರು ಖರ್ಚು ಮಾಡತಕ್ಕ ಹಣ, ಜೊತೆಗೆ ಹುಡುಗನ ಮುಂದಿನ ಭವಿಷ್ಯವನ್ನು ಗಮನದಲ್ಲಿಟ್ಟುಕೊಂಡು ಈ ವಿದ್ಯಾಭ್ಯಾಸ ಪದ್ಧತಿಯಲ್ಲಿ ಬದಲಾವಣೆ ಮಾಡದೆ ಹೋದರೆ, ಬಹುಶಃ ಈ ವಿದ್ಯಾವಂತರು ಜೀವನದಲ್ಲಿ ಒಂದು ತರ ನಿರಾಶರಾಗಿ ಸರ್ಕಾರದ ಮುಂದೆ ಒಂದು ರೆವೊಲ್ಯೂಶನ್ ಮಾಡತಕ್ಕ ಸನ್ನಿವೇಶ ಬರಬಹುದು ಎಂದು ನಾನಾದರೂ ಸರ್ಕಾರಕ್ಕೆ ಹೇಳಬಯಸುತ್ತೇನೆ. ಇವತ್ತಿನ ದಿವಸ ಈ ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಇರುವತಂಹ ವಿದ್ಯಾಭ್ಯಾಸ ಪದ್ಧತಿಯನ್ನು ಮಾರ್ಪಾಡು ಮಾಡುವುದು ಸೂಕ್ತವೆಂದು ನಾನು ಮಾನ್ಯ ಸಚಿವರಲ್ಲಿ ವಿನಂತಿಸಿಕೊಳ್ಳುತ್ತೇನೆ. ಅವುಗಳು ಇವತ್ತಿನ ದಿವಸದ ಸನ್ನಿವೇಶಗಳಿಗೆ ಯೋಗ್ಯವಾದುವಲ್ಲ, ಅದಕ್ಕೋಸ್ಕರ ಅದನ್ನು ಬದಲಾವಣೆ ಮಾಡಬೇಕಾಗಿದೆ. ಇದರಿಂದ ಮಕ್ಕಳಿಗೂ

(ಶ್ರೀ ಎಚ್. ಡಿ. ದೇವೇಗೌಡ)

ಅನಾನುಕೂಲ, ಜೊತೆಗೆ ಸರ್ಕಾರದವರಿಗೂ ಅನಾನುಕೂಲವೆಂದು ನಾನು ತಿಳಿಸುತ್ತೇನೆ. ಆದ್ದರಿಂದ ಈ ವಿಚಾರದಲ್ಲಿ ಮಾನ್ಯ ಮಂತ್ರಿಯವರು ಸೂಕ್ತವಾದ ಕ್ರಮವನ್ನು ತೆಗೆದುಕೊಳ್ಳ ಬೇಕೆಂದು ನಾನು ಸಲಹೆ ಮಾಡುತ್ತೇನೆ.

ಇನ್ನು ಪ್ರೈಮರಿ ವಿದ್ಯಾಭ್ಯಾಸದ ಬಗ್ಗೆ ಕೆಲವು ವಿಚಾರಗಳನ್ನು ಹೇಳುತ್ತೇನೆ. ಇವತ್ತು ನಾನು ಎರಡು ಕಡೆಯ ವಾದಗಳನ್ನೂ ಕೇಳಿದ್ದೇನೆ. ಅನೇಕರು, ಸ್ಥಳೀಯ ಉಪಾಧ್ಯಾಯರುಗಳು ಅನೇಕ ಪ್ರಾಥಮಿಕ ಶಾಲೆಯ ದರ್ಜೆಯ ಮಟ್ಟವನ್ನು ಕೆಳಗಿಳಿಸಿದ್ದಾರೆಂದು ಹೇಳಿದ್ದಾರೆ. ಕೆಲವರು ಒಂದು ತಾಲ್ಲೂಕಿನವರನ್ನು ಅಲ್ಲಿಯೇ ಇಡಬೇಕೆಂದು ಹೇಳಿದ್ದಾರೆ. ಇನ್ನು ಕೆಲವರು, ಅದರ ಅನಾನುಕೂಲತೆಯನ್ನು ತಿಳಿಸಿದ್ದಾರೆ. ಬಹುಶಃ ಇವತ್ತಿನ ದಿವಸ ತಾಲ್ಲೂಕಿನಿಂದ ತಾಲ್ಲೂಕಿಗೆ ವರ್ಗಮಾಡಿದರೆ, ಅಲ್ಲಿ ಅವರಿಗೆ ವಸತಿ ಸೌಕರ್ಯ ಹಾಗೂ ಇನ್ನೂ ಅನೇಕ ರೀತಿಯ ತೊಂದರೆಗಳು ಉಂಟಾಗುತ್ತದೆ. ಉಪಾಧ್ಯಾಯರನ್ನು ಅಲ್ಲಿ ಇಡುವಾಗ, ಅಲ್ಲಿ ಸಾಕಷ್ಟು ಮಟ್ಟಿನ ಪ್ರಮಾಣದಲ್ಲಿ ಈ ಇನ್‌ಸ್ಪೆಕ್ಟಿಂಗ್ ಅಥೋರಿಟೀಸ್ ಏನಿದ್ದಾರೆ, ಅವರನ್ನು ಜಾಸ್ತಿಮಾಡಬೇಕು. ಇವತ್ತು ಒಂದು ತಾಲ್ಲೂಕಿನಲ್ಲಿ ಒಬ್ಬನಿಗೆ ಸುಮಾರು 700-800 ಪ್ರಾಥಮಿಕ ಶಾಲೆಗಳ ಉಪಾಧ್ಯಾಯರುಗಳನ್ನು ಹಿಡಿತದಲ್ಲಿಟ್ಟುಕೊಂಡು, ಅವರ ಶಿಕ್ಷಣ ಕೆಲಸಗಳನ್ನು ವಿಚಕ್ಷಣೆಯಿಂದ ನೋಡುವುದಕ್ಕಾಗುವುದಿಲ್ಲ. ಆದ್ದರಿಂದ ಈ ಇನ್‌ಸ್ಪೆಕ್ಟಿಂಗ್ ಆಫೀಸರಸರನ್ನು ಹೆಚ್ಚು ಮಾಡಬೇಕು ಇಲ್ಲದಿದ್ದರೆ, ಮಕ್ಕಳ ವಿದ್ಯಾಭ್ಯಾಸದ ಮಟ್ಟ ಬಹಳ ಕೆಳಮಟ್ಟಕ್ಕೆ ಹೋಗುತ್ತದೆ ಎಂದು ನಾನು ಹೇಳುತ್ತೇನೆ. ಶ್ರೀಮತಿ ನಾಗರತ್ನಮ್ಮನವರು--ಸ್ಕೂಲಿಗೆ ಹೋದಾಗ ಅಲ್ಲಿನ ಹುಡುಗರು ಯಾವ ರೀತಿಯಲ್ಲಿ ಇಂಗ್ಲಿಷ್ ಅಕ್ಷರಗಳನ್ನು ಹೇಳಿದರು, ಮತ್ತು ಅವರ ಮಟ್ಟ ಯಾವ ರೀತಿಯಲ್ಲಿದೆ ಎಂದು ಹೇಳಿದರು. ಆದ್ದರಿಂದ ಸರ್ಕಾರದವರು ತಾಲ್ಲೂಕು ಮಟ್ಟದಲ್ಲಿ ಇನ್‌ಸ್ಪೆಕ್ಟಿಂಗ್ ಆಫೀಸರ್ಸ್ ಜಾಸ್ತಿ ಮಾಡದೆ ಹೋದರೆ, ಬಹುಶಃ ಖರ್ಚು ಮಾಡತಕ್ಕ 17—18 ಕೋಟಿ ರೂಪಾಯಿಗೆ ತಕ್ಕಂತೆ ಫಲ ದೊರೆಯ ಲಾರದು. ಆದ್ದರಿಂದ ಇದಕ್ಕೆ ಆದ್ಯಗಮನ ಕೊಡಬೇಕು, ಇಲ್ಲದಿದ್ದರೆ, ಹಳ್ಳಿಗಾಡಿನಲ್ಲಿರುವ ಮಕ್ಕಳ ಕೊಲೆ ಮಾಡಿದ ಹಾಗೆ ಆಗುತ್ತದೆ.

ಇನ್ನು ಮಾನ್ಯ ಮಂತ್ರಿಗಳಾದ ಕಂಠಿಯವರು, ಈ ಸ್ಕೂಲುಗಳನ್ನು ಡಿಸ್ಟ್ರಿಕ್ಟ್ ಎಜುಕೇಶನ್ ಬೋರ್ಡಿಗೆ ವಹಿಸಿಕೊಡುವ ಅಭಿಪ್ರಾಯವನ್ನು ವ್ಯಕ್ತಪಡಿಸಿದರು. ಇದಕ್ಕಿಂತಲೂ ಅನಾಹುತವಾದ ಕೆಲಸ ಬೇರೊಂದು ಇಲ್ಲ. ಬಹುಶಃ ಇದರಿಂದ ವಿದ್ಯಾಭ್ಯಾಸದ ಭ್ರಷ್ಟಾಚಾರ ತಾಂಡವವಾಡುತ್ತಿರು ವಾಗ, ಇವಕ್ಕೆ ಮೂರು ಪಾಲು ಜಾಸ್ತಿಯಾಗುತ್ತದೆ. ಇವುಗಳು ಎಷ್ಟುಮಟ್ಟಿಗೆ ಮಕ್ಕಳ ವಿದ್ಯಾಭ್ಯಾಸದ ಕಡೆಗೆ ಗಮನ ಕೊಡುತ್ತಿವೆ, ಬಾಂಬೆ ಕರ್ನಾಟಕದಲ್ಲಿ ಈ ಸಂಸ್ಥೆಗಳು ಎಷ್ಟು ಮಟ್ಟಿಗೆ ಕೆಲಸ ಮಾಡುತ್ತಿವೆ ಎಂದು ಎಲ್ಲಾ ಗೊತ್ತಿರತಕ್ಕ ವಿಚಾರ. ಅದರಿಂದ ದಯವಿಟ್ಟು ಈ ವಿಚಾರಕ್ಕೆ ಕೈಹಾಕಬೇಡಿ ಎಂದು ನಾನು ಕೇಳಿಕೊಳ್ಳುತ್ತೇನೆ.

ಇನ್ನು ಯೂನಿಫಾರಂ ಗ್ರ್ಯಾಂಟ್-ಇನ್-ಎಯಿಡ್ ಕೋಡನ್ನು ತರತಕ್ಕ ವಿಚಾರ ಮಾನ್ಯ ಮಂತ್ರಿಯವರು ತಿಳಿಸಿದರು ಹಳೆಯ ಮೈಸೂರು ಮತ್ತು ಹೊಸ ಮೈಸೂರಿಗೆ ಎಲ್ಲಾ ಯೂನಿಫಾರಂ ಆಗಿ ಮಾಡುತ್ತೇವೆಂದು ಹೇಳಿದರು. ಇದನ್ನು ತರದೆ ಹೋದರೆ ಬಹಳ ಅನಾನುಕೂಲ ವಾಗುತ್ತದೆ. ಸುಮಾರು 5 ವರ್ಷದಿಂದ ಅನೇಕ ಸಾರಿ ಇದನ್ನು ನಾವು ಪ್ರಸ್ತಾಪ ಮಾಡಿದ್ದೇವೆ. ಇದರಲ್ಲಿ ಸರ್ಕಾರ ವಿಫಲವಾಗಿದೆಯೋ ಏನೋ ಗೊತ್ತಿಲ್ಲ. ಮೊನ್ನೆ ಕೂಡ ಇದರ ಬಗ್ಗೆ ಆಶ್ವಾಸನೆ ಯನ್ನು ಕೊಟ್ಟಿದ್ದಾರೆ. ಆದ್ದರಿಂದ ಸರ್ಕಾರದವರು ಇದನ್ನು ಆದಷ್ಟು ಬೇಗ ಜಾರಿಗೆ ತರುವುದಕ್ಕೆ ಪ್ರಯತ್ನ ಮಾಡಬೇಕೆಂದು ಹೇಳುತ್ತೇನೆ.

ಇವತ್ತಿನ ದಿವಸ ಸ್ಥಳೀಯ ಸಂಸ್ಥೆಗಳಲ್ಲಿ ಉಪಾಧ್ಯಾಯರುಗಳಿಗೆ ಹಣ ಕೊಡುತ್ತಿದ್ದಾಗ ಬಹಳ ಕಡೆ ಅನ್ಯಾಯವಾಗುತ್ತಿದೆ ಎಂದು ಸರ್ಕಾರದ ಗಮನಕ್ಕೆ ತಂದಿದ್ದೆವು. ಕೆಲವು ಕಡೆ 50 ರೂಪಾಯಿ ಕೊಟ್ಟರೆ, ಅಲ್ಲಿ ವೋಚರ್ 100-120 ಕ್ಕೆ ತೆಗೆದುಕೊಳ್ಳುತ್ತಿದ್ದಾರೆ. ಇನ್ನು ಈ ಚೆಕ್ ಸಿಸ್ಟಮ್ ಪ್ರೈಮರಿ ಸ್ಕೂಲ್ ಟೀಚರ್ಸಿಗೂ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಇಲ್ಲದಿದ್ದರೆ ಬೇರೆ ಏನಾದರೂ ಒಂದು ಪರಿಹಾರವನ್ನು ಕಂಡುಹಿಡಿಯಬೇಕು. ಇನ್ನು ಯೂನಿವರ್ಸಿಟಿಯಲ್ಲಿ, ಕರ್ನಾಟಕ ಯೂನಿವರ್ಸಿಟಿಯಲ್ಲಿ ಸೇಕಡ 45 ಮಾರ್ಕ್ಸ್ ತೆಗೆದುಕೊಂಡರೆ ಡಿಗ್ರಿಯಲ್ಲಿ ಸೆಕೆಂಡ್ ಕ್ಲಾಸ್ ಕೊಡು ತ್ತಾರೆ, ಆದರೆ ಮೈಸೂರ್ ಯೂನಿವರ್ಸಿಟಿಯಲ್ಲಿ 50 ಪರ್‌ಸೆಂಟ್ ತೆಗೆದರೆ ಸೆಕೆಂಡ್ ಕ್ಲಾಸ್ ಕೊಡು ತ್ತಾರೆ. ಆದ್ದರಿಂದ ಇವೆರಡನ್ನೂ ಒಂದೇ ಸಮಾನವಾಗಿ ಟ್ರೀಟ್ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

6-00 P.M.

ಒಂದು ವಿಶ್ವವಿದ್ಯಾನಿಲಯದ ಅಂಕಗಳಿಗೂ ಇನ್ನೊಂದು ವಿಶ್ವವಿದ್ಯಾನಿಲಯದ ಅಂಕಗಳಿಗೂ ಏಕೆ ವ್ಯತ್ಯಾಸವಿರಬೇಕು ? ಇದು ಯೂನಿವರ್ಸಿಟಿಗೆ ಸಂಬಂಧಪಟ್ಟ ವಿಷಯವಾದರೂ ಕೂಡ ಸರಕಾರದವರೇಕೆ ಒತ್ತಾಯ ಹಾಕಿ ಎಲ್ಲಾ ಕಡೆಯೂ ಯೂನಿಫಾರಂ ಆಗಿ ಒಂದೇ ಪದ್ಧತಿಯಿರುವಂತೆ ಮಾಡಬಾರದು ? ಇದನ್ನು ಏಕೆ ಪ್ರಸ್ತಾಪ ಮಾಡಿರುವುದೆಂದರೆ, ಯೂನಿವರ್ಸಿಟಿಯಲ್ಲಿ ತಾರತಮ್ಯವಿರಬಾರದು. ಎಲ್ಲೇ ಓದಲಿ, ಮಕ್ಕಳ ಮಟ್ಟ ಒಂದೇ ರೀತಿ ಇರಬೇಕು. ಈಗ ಕಾಲೇಜಿನಲ್ಲಿ ಪಿ.ಯು.ಸಿ. ಇದೆ, ಹೈಸ್ಕೂಲುಗಳಲ್ಲಿ 11ನ ಸ್ಟ್ಯಾಂಡರ್ಡ್ ಇದೆ, ಅಲ್ಲಿಗೆ ಸೇರಿಸಿಕೊಳ್ಳಲು ಬೇರೆ ಬೇರೆ ಪದ್ಧತಿ ಇದೆ, ಜೊತೆಗೆ ಪಿ.ಯು.ಸಿ. ಎರಡು ವರ್ಷ ಮಾಡಬೇಕೆಂಬ ಸೂಚನೆಯಿರುವುದಾಗಿ ಹೇಳಿದ್ದಾರೆ; ಇದು ಮುಂದಿನ ವರ್ಷದಿಂದ ಜಾರಿಗೆ ಬರುವುದಂತೆ. ಈ ಸುಧಾರಣೆಗಳನ್ನೆಲ್ಲಾ ಮಾಡುವಾಗ ಅವು ಮಕ್ಕಳ ಮೇಲೆ ಪ್ರಯೋಗವಾಬಾರದು. ಒಂದು ನಿರ್ದಿಷ್ಟವಾದ ನೀತಿಯಿರಬೇಕು.

ಕೊನೆಯದಾಗಿ ಹೇಳುವುದೇನೆಂದರೆ, ಟೆಕ್ನಿಕಲ್ ವಿದ್ಯಾಭ್ಯಾಸಕ್ಕೆ ಮಕ್ಕಳನ್ನು ಆಯ್ಕೆಮಾಡುವಾಗ್ಗೆ ರಾಜ್ಯಾಂಗದ ಅಡಚಣೆಯೇನಿದೆ ಎಂದು ಪ್ರಸ್ತಾಪಮಾಡಿದ್ದಾರೆ ಅದರ ಬಗ್ಗೆ ಪರಿಹಾರ ಕಂಡುಹಿಡಿಯಬೇಕು, ಇದಕ್ಕೆ ಹೆಚ್ಚು ಗಮನಕೊಡಬೇಕು. ಹಳ್ಳಿಗಾಡಿನ ಜನರ ಸ್ಥಿತಿ ಹೇಗಿದೆಯೆಂಬುದು ಎಲ್ಲರಿಗೂ ಗೊತ್ತಿದೆ, ಬರೀ ಮೆರಿಟ್‌ಮೇಲೆ ಚುನಾಯಿಸುವುದಾದರೆ ಹಳ್ಳಿಗಾಡಿನವರಿಗೆ ತೊಂದರೆಯಾಗುತ್ತದೆ. ಪುಟ್ಟಸ್ವಾಮಿಯವರು ಇಂಟರ್‌ವ್ಯೂ ಮಾರ್ಕ್ಸ್ ಗಣನೆಗೆ ತೆಗೆದುಕೊಳ್ಳಬಾರದೆಂದು ಹೇಳಿರುವುದರಿಂದ ಅನುಕೂಲವಾಗಿದೆಯೆಂದು ಹೇಳಿದರು. ಅದನ್ನು ಹೇಗೆ ಸಮರ್ಥನೆ ಮಾಡಿದರೋ ನನಗೆ ಗೊತ್ತಾಗಲಿಲ್ಲ. ಇಂಜನಿಯರಿಂಗ್ ಕಾಲೇಜಿಗಾಗಲಿ ಅಥವಾ ಮೆಡಿಕಲ್ ಕಾಲೇಜಿಗಾಗಲಿ ಮಕ್ಕಳನ್ನು ಈ ಪದ್ಧತಿಯ ಮೇರೆಗೆ ಆರಿಸುವುದಾದರೆ ಹಳ್ಳಿಗಾಡಿನವರಿಗೆ ಇದರಿಂದ ಎಷ್ಟು ಅನುಕೂಲವಾಗಿದೆ ಎಂಬುದನ್ನು ಪುನರಾಲೋಚನೆ ಮಾಡಬೇಕು. ಇಂದು ಹಳ್ಳಿಗಾಡಿನವರಿಗೆ ರಕ್ಷಣೆ ಕೊಡದೇ ಹೋದರೆ ಬಹಳ ಕಷ್ಟ, ಅವರು ಹಿಂದುಳಿಯಬೇಕಾಗುತ್ತದೆ ಎಂಬುದನ್ನು ಮತ್ತೊಮ್ಮೆ ಜ್ಞಾಪಕಕ್ಕೆ ತರುತ್ತೇನೆ. ಇಂದು ಪರೀಕ್ಷೆಗಳ ಕ್ರಮ ಸರಿಯಾಗಿಲ್ಲ, ಎಷ್ಟೋ ಕಡೆ ಬಹಳ ಅನ್ಯಾಯವಾಗುತ್ತಿದೆ. ಪರೀಕ್ಷಕರೇ ಕುಳಿತು ಕಾಪೀಮಾಡುವುದಕ್ಕೆ ಅವಕಾಶ ಕೊಡುತ್ತಿದ್ದಾರೆ. ಪ್ರಶ್ನೆಪತ್ರಿಕೆಗಳು ಲೀಕೌಟ್ ಆಗಿರುತ್ತವೆ, ಕೆಲವು ಕಡೆ ಮಕ್ಕಳಿಗೆ ಸೇಕಡ 90 ನಂಬರುಗಳು ಬಂದರೆ ಹಳ್ಳಿಗಾಡಿನವರಿಗೆ ಸೇಕಡ 45 ಬಂದಿರುತ್ತದೆ. ಇದರ ಕಾರಣ ಕಂಡುಹಿಡಿದು ಹಾಗೆ ಅಷ್ಟು ವೆತ್ಯಾಸಕ್ಕೆ ಅವಕಾಶವಿಲ್ಲದಂತೆ ಮಾಡಬೇಕು. ಹೀಗೆ ತಾರತಮ್ಯ ಮಾಡುವುದು ಅನ್ಯಾಯ. ಹೇಗಾದರೂ ಮಾಡಿ ಹಳ್ಳಿಗಾಡಿನವರಿಗೆ ಪರಿಹಾರ ನೀಡಬೇಕು.

ವಯಸ್ಕರ ಶಿಕ್ಷಣಕ್ಕೆ ಬಜೆಟ್ಟಿನಲ್ಲಿ ಸುಮಾರು 6 ಲಕ್ಷ ಚಿಲ್ಲರೆ ರೂಪಾಯಿಗಳನ್ನು ಒದಗಿಸಿದ್ದಾರೆ, ಎಲ್ಲಿ ಇದರ ಬಗ್ಗೆ ಏನು ಕೆಲಸ ನಡೆಯುತ್ತಿದೆಯೆಂಬುದೇ ಗೊತ್ತಿಲ್ಲ. ಮಲ್ಲಿಕಾರ್ಜುನಸ್ವಾಮಿಯವರೇನೋ ಇದರ ವಿಚಾರ ಹೇಳಿದರು. ನನಗೆ ಗೊತ್ತಿರುವಹಾಗೆ ಇದನ್ನು ಸತ್ತ ಸ್ವಂಸ್ಥೆ ಎಂದು ಹೇಳಬಹುದು. ಇಂಥ ಸಂಸ್ಥೆಗೆ 6 ಲಕ್ಷ ಚಿಲ್ಲರೆ ಖರ್ಚು ಮಾಡುವುದು ಅನ್ಯಾಯ. ಏಕಾನಮಿ ಪ್ರಪೋಸಲ್ಸ್ ಇರುವಾಗ ಇದನ್ನು ಕಿತ್ತುಹಾಕುವುದು ಒಳ್ಳೆಯದು. ಈಗಿರುವ ವಿದ್ಯಾಭ್ಯಾಸ ಪದ್ಧತಿಯನ್ನು ಮಾರ್ಪಾಡು ಮಾಡದಿದ್ದರೆ ಬಹಳ ಅನ್ಯಾಯವಾಗುತ್ತದೆ.

[MR. SPEAKER in the Chair]

ಶ್ರೀಮತಿ ಕೆ. ಲೀಲಾವತಿ ರೈ (ಬಂಟವಾಳ).—ಮಾನ್ಯ ಸಭಾಧ್ಯಕ್ಷರೇ, ವಿದ್ಯಾ ಮಂತ್ರಿಗಳು ಮಂಡಿಸಿದ ಡಿಮ್ಯಾಂಡುಗಳನ್ನು ಸ್ವೀಕರಿಸುತ್ತಾ ಒಂದೆರಡು ತಿದ್ದುಪಡಿಗಳನ್ನು ಹೇಳಲಿಚ್ಛಿಸುತ್ತೇನೆ. ಈಗ ನನಗೆ ಮಾತನಾಡಲು 5 ನಿಮಿಷ ಅವಕಾಶ ಕೊಟ್ಟಿದ್ದಾರೆ. ಅಷ್ಟರಲ್ಲಿ ಎಷ್ಟು ಹೇಳಲು ಸಾಧ್ಯವೋ ಅಷ್ಟನ್ನು ಮಾತ್ರ ಹೇಳುತ್ತೇನೆ. ನಮ್ಮ ದೇಶದಲ್ಲಿ ಕಲಿಯುವಾಗ ಉತ್ಪತ್ತಿಮಾಡಿಕೊಳ್ಳುವುದಕ್ಕೆ ಹೆಚ್ಚಿನ ಅವಕಾಶವಿಲ್ಲ, ಇದನ್ನು ಸರಕಾರ ವಿಚಾರಮಾಡಿ ತಕ್ಕ ಅವಕಾಶ ಕಲ್ಪಿಸಬೇಕು. ಏಕೆಂದರೆ ಕೆಲವು ಮಕ್ಕಳಿಗೆ ಕಲಿಯುವಾಗ ಅವಕ್ಕೆ ಉತ್ಪತ್ತಿಮಾರ್ಗ ಬೇಕಾಗುತ್ತದೆ. ಆದುದರಿಂದ ಪ್ರತಿಯೊಂದು ಕಡೆಯೂ ಕಲಿಯುವಾಗ ಉತ್ಪತ್ತಿಮಾಡುವುದಕ್ಕೆ ಅವಕಾಶ ಕೊಡುವ ನೀತಿಯನ್ನು ಅನುಸರಿಸಬೇಕೆಂದು ಸರಕಾರವನ್ನು ಈ ಸಂಧರ್ಭದಲ್ಲಿ ಕೇಳಿಕೊಳ್ಳುತ್ತೇನೆ.

ಸರಕಾರಿ ಶಾಲೆಗಳಲ್ಲಿ 40 ಮಕ್ಕಳಿಗೆ ಒಬ್ಬ ಉಪಾಧ್ಯಾಯರಿರಬೇಕೆಂದು ಆಜ್ಞೆಯಾಗಿದೆ. ಆದರೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 80 ಮಕ್ಕಳಿಗೆ ಒಬ್ಬ ಉಪಾಧ್ಯಾಯರಿದ್ದಾರೆ; ಅದಲ್ಲದೆ 10-12 ಮೈಲಿಗಳ ದೂರದಿಂದ ಉಪಾಧ್ಯಾಯರು ಶಾಲೆಗೆ ಬರಬೇಕಾಗಿದೆ. ಪರಿಸ್ಥಿತಿ ಹೀಗಿರುವುದನ್ನು

(ಶ್ರೀಮತಿ ಕೆ. ಲೀಲಾವತಿ ರೈ)

ಗಮನಿಸಿ ಶಾಲೆಗೆ ಹತ್ತಿರವಿರುವ ಉಪಾಧ್ಯಾಯರನ್ನೇ ಹಾಕಿ 40 ಮಕ್ಕಳಿಗೆ ಒಬ್ಬರು ಉಪಾಧ್ಯಾಯರಿರುವಂತೆ ನೋಡಿಕೊಳ್ಳಬೇಕು. ಸಣ್ಣ ಮಕ್ಕಳನ್ನು ಒಂದು ಚಿಕ್ಕ ಕೋಣೆಯಲ್ಲಿ ಕೂಡಿಸಿ ಪಾಠ ಹೇಳುವಾಗ 80 ಮಕ್ಕಳಿಗೆ ಒಬ್ಬ ಉಪಾಧ್ಯಾಯರನ್ನು ಹಾಕಿದರೆ ಬಹಳ ತೊಂದರೆಯಾಗುತ್ತದೆ. ಮಾರ್ಕ್ಸ್ ಕೊಡುವುದರ ಬಗ್ಗೆ ಇಲ್ಲಿ ತುಂಬಾ ಸದಸ್ಯರು ಮಾತನಾಡಿದ್ದಾರೆ, ಈ ಪರಿಸ್ಥಿತಿ ನಮ್ಮ ಹಳ್ಳಿಗಳಿಂದ ಬರತಕ್ಕ ಮಕ್ಕಳಿಗೂ ಅನ್ವಯವಾಗುತ್ತದೆ. ಇವರನ್ನು ಬುದ್ಧಿವಂತರನ್ನಾಗಿ ಮಾಡಲು ಅರ್ಬನ್ ಏರಿಯಾದಲ್ಲಿ ಯಾವ ರೀತಿ ಸೌಖರ್ಯಗಳನ್ನು ಕೊಡುತ್ತಿದ್ದಾರೋ ಅದೇ ರೀತಿ ಹಳ್ಳಿಗಳ ಕಡೆಯಿಂದ ಬರುವ ಮಕ್ಕಳ ವಿದ್ಯಾಭ್ಯಾಸಕ್ಕೂ ಅನುಕೂಲಗಳನ್ನು ಮಾಡಿಕೊಡಬೇಕು. ಅದರಲ್ಲೂ ನನ್ನ ಕ್ಷೇತ್ರದಿಂದ ಬರುವ ಹುಡುಗರು ಬಹುತೇಕ ಹಳ್ಳಿಗಳಿಂದ ಬಂದವರೇ. ಅವರಿಗೆ ಎಷ್ಟು ಸಾಧ್ಯವೋ ಅಷ್ಟು ಅನುಕೂಲಗಳನ್ನು ಮಾಡಿಕೊಡಬೇಕು ಮತ್ತು ಮಾರ್ಕ್ಸ್ ಬಗ್ಗೆ ಸ್ವಲ್ಪ ರಿಲ್ಯಾಕ್ಸ್ ಮಾಡಬೇಕು ಎಂದು ತಮ್ಮಲ್ಲಿ ವಿನಂತಿ ಮಾಡುತ್ತೇನೆ.

ಹೈಸ್ಕೂಲುಗಳ ಬಗ್ಗೆ ಮಾತನಾಡುತ್ತಾ ಶ್ರೀಮತಿ ಬಸವರಾಜೇಶ್ವರಿಯವರು ಎಲ್ಲಿ ತಾಲ್ಲೂಕಾ ಬೋರ್ಡು ಸ್ಕೂಲುಗಳನ್ನು ಓಪನ್ ಮಾಡುತ್ತಾರೋ ಅವರಿಗೆ ಸರಕಾರ ಗ್ರ್ಯಾಂಟು ಕೊಟ್ಟಿದೆ, ಎಲ್ಲಿ ಇಲ್ಲವೋ ಅಲ್ಲಿಗೆ ಕೊಟ್ಟಿಲ್ಲ ಎಂದರು. ನಾನೂ ಕೂಡ ಸುಮಾರು ಐದು ವರ್ಷಗಳಿಂದ ತಾಲ್ಲೂಕಾ ಬೋರ್ಡು ಪ್ರೆಸಿಡೆಂಟ್ ಆಗಿ ಕೆಲಸ ಮಾಡುತ್ತ ಬಂದಿದ್ದೇನೆ. ಅಲ್ಲಿಯೂ ಕೂಡ ಹೈಸ್ಕೂಲುಗಳನ್ನು ತೆರೆದಾಗ ಅದಕ್ಕೆ ಬೇಕಾದ ಮೆಟೀರಿಯಲ್ಸ್‌ಗಳನ್ನೂ ಕೊಡಬೇಕೆಂದು ಸರಕಾರದಲ್ಲಿ ಕೇಳುತ್ತ ಬಂದಿದ್ದೇವೆ ; ಇದುವರೆಗೂ ಕೊಟ್ಟಿಲ್ಲ. ಇದನ್ನು ನೋಡಿದರೆ ಸೌತ್ ಕ್ಯಾನರಾದವರಿಗೇ ಒಂದು ರೀತಿ ಬೇರೆ ಮೈಸೂರಿಗೇ ಒಂದು ರೀತಿ ಎನ್ನುವಂತೆ ಇಲ್ಲಿ ಕಾಣುತ್ತಿದೆ. ಅಲ್ಲದೆ ನಮ್ಮ ಕಡೆ ಇರುವ ತಾಲ್ಲೂಕಾ ಬೋರ್ಡು ಹೈಸ್ಕೂಲುಗಳಲ್ಲಿ ಅಲ್ಲಿನ ಜನರೇ ಸುಮಾರು ನಲವತ್ತು ಸಾವಿರದಷ್ಟು ಖರ್ಚು ಮಾಡಿ ಸಹಾಯ ಮಾಡಿದ್ದಾರೆ. ಆದುದರಿಂದ ಇಲ್ಲಿ ಹೇಳಿದ ಸದಸ್ಯರು ಮಾತನಾಡುವುದನ್ನು ನೋಡಿದರೆ ಸೌತ್ ಕ್ಯಾನರಾಕ್ಕೇ ಒಂದು ರೀತಿಯಾಗಿ ಗ್ರ್ಯಾಂಟನ್ನು ಕೊಡುತ್ತಿದ್ದಾರೆನ್ನುವ ಭಾವನೆ ಬರುತ್ತದೆ. ಈ ತರಹ ಮಾಡದೇ ಒಂದೇ ರೀತಿಯಾಗಿ ಎಲ್ಲ ಕಡೆಗೂ ಗ್ರ್ಯಾಂಟುಗಳನ್ನು ಹಂಚಬೇಕೆಂದು ಸರಕಾರದಲ್ಲಿ ವಿನಂತಿ ಮಾಡುತ್ತಿದ್ದೇನೆ.

ಇನ್ನು ಸ್ಕಾಲರ್‌ಷಿಪ್ಪುಗಳನ್ನು ಕೊಡುವಾಗ ಸರಿಯಾದ ಕಾಲದಲ್ಲಿ ಕೊಡದೇ ಇದ್ದರೆ ಅದರಿಂದ ಮಕ್ಕಳಿಗೆ ತೊಂದರೆಯಾಗುತ್ತದೆ. ನಮ್ಮ ತಾಲ್ಲೂಕಾ ಬೋರ್ಡಿಗೆ ಹೆಚ್ಚು ಮಕ್ಕಳು ಬಂದು ಈಗ ಸ್ವಲ್ಪ ಹಣ ಕೊಡಿಸಿ ಆ ನಂತರ ಸ್ಕಾಲರ್‌ಷಿಪ್ ಬಂದ ಮೇಲೆ ಕೊಡುತ್ತೇವೆ ಎಂದು ಹೇಳಿ ಸಹಾಯ ಪಡೆಯುತ್ತಿದ್ದಾರೆ. ಸ್ಕಾಲರ್‌ಷಿಪ್‌ನ ಹಣ ಆರು ತಿಂಗಳು ಹಾಗೂ ವರ್ಷಾನುಗಟ್ಟಲೆ ನಿಧಾನವಾಗಿ ಕೊಟ್ಟರೆ ಅದರಿಂದ ಮಕ್ಕಳಿಗೆ ಬಹಳ ತೊಂದರೆಯಾಗುತ್ತದೆ. ಇನ್ನು ಮುಂದಾದರೂ ಸಕಾಲದಲ್ಲಿ ಸ್ಕಾಲರ್‌ಷಿಪ್ ಹಣ ಸಿಗುವಂತೆ ಮಾಡಬೇಕು ಎಂದು ನಾನು ಇಲ್ಲಿ ಸರ್ಕಾರವನ್ನು ಕೇಳಿಕೊಳ್ಳುತ್ತೇನೆ. ಟೆಕ್ನಿಕಲ್ ಕಾಲೇಜುಗಳಲ್ಲಿ ಇಂತಿಷ್ಟು ಸೀಟುಗಳನ್ನು ಮಕ್ಕಳಿಗಾಗಿ ಕೊಡುತ್ತಿದ್ದಾರೆ. ಇದರಲ್ಲಿ ಶೇಕಡಾ 47 ರಷ್ಟು ಅಥವಾ 45 ರಷ್ಟು ಅಂಕಗಳು ಬಂದಿರಲೇಬೇಕು ಎಂದು ನಿಯಮ ಇದೆ. ಹೀಗಿದ್ದರೆ ಕೆಲವು ಮಕ್ಕಳಿಗೆ ಡಾಕ್ಟರುಗಳಾಗಲಿಕ್ಕೆ, ಇಂಜನೀಯರುಗಳಾಗಲಿಕ್ಕೆ ಒಂದು ಸಂದರ್ಭ ಸಿಗದೇ ತೊಂದರೆಯಾಗುತ್ತಿದೆ. ಇದನ್ನು ಸರಿಯಾದ ರೀತಿ ಮಾಡಲು ಸರ್ಕಾರದವರೇ ಕಾಲೇಜುಗಳನ್ನು ತೆರೆಯುವುದು ಸೂಕ್ತವಾಗಿದೆ. ಇಲ್ಲದೇ ಇದ್ದರೆ ಪ್ರೈವೇಟು ಕಾಲೇಜುಗಳಲ್ಲಿರುವಂತೆ ಸರ್ಕಾರದವರು ಕಾಲೇಜುಗಳನ್ನು ತೆರೆದು ಬೇಕಾದರೆ ಇಂತಿಷ್ಟು ಕ್ಯಾಪಿಟೇಷನ್ ಫೀಜು ಕೊಡಬೇಕೆಂದು ಮಾಡಿದರೂ ಅದು ಸರಿಯಾಗಿರುತ್ತದೆ. ಇಂತಹ ಸಲಹೆ ಸರ್ಕಾರ ತಂದರೆ ಇದಕ್ಕೆ ನಾನು ಖಂಡಿತ ಒಪ್ಪಿಗೆ ಕೊಡುತ್ತೇನೆ ಮತ್ತು ನಮ್ಮ ಸಹಕಾರ ಕೊಡುತ್ತೇನೆ. ಈಗ ಮಾರ್ಕ್ಸ್ ಪ್ರಕಾರ ಟೆಕ್ನಿಕಲ್ ಕಾಲೇಜುಗಳಲ್ಲಿ ಅಡ್‌ಮಿಷನ್‌ಗಳನ್ನು ಕೊಡುವಾಗ ಶೇಖಡಾ 47, 46 ರಷ್ಟು ಅಂಕಗಳು ಇದ್ದರೆ ಅಂಥವರಿಗೆ ಮಾತ್ರ ಸೀಟುಗಳು ಸಿಗುತ್ತವೆ, ಇಲ್ಲದಿದ್ದರೆ ಇಲ್ಲ. ಇದರಿಂದ ಸುಮಾರು ಇಪ್ಪತ್ತು ಅಥವಾ ಮೂವತ್ತು ಸಾವಿರ ಮಕ್ಕಳಿಗೆ ಕಷ್ಟಗಳಾಗುತ್ತವೆ. ಇದಕ್ಕೆ ಸರಿಯಾದ ಒಂದು ರೂಲ್ಸ್ ಮಾಡಿ ಸರಿಪಡಿಸಬೇಕೆಂದು ಸರ್ಕಾರದಲ್ಲಿ ವಿನಂತಿ ಮಾಡುತ್ತೇನೆ.

ಇನ್ನು ಕಾಲೇಜುಗಳಲ್ಲಿ ಮಕ್ಕಳಿಗೆ ಸೀಟು ಸಿಗುವುದೂ ಕಷ್ಟವಾಗಿದೆ. ಇದಕ್ಕೂ ರೆಸ್ಟ್ರಿಕ್‌ಷನ್ ಹಾಕಿದ್ದಾರೆ, ಎಸ್.ಎಸ್.ಎಲ್.ಸಿ. ಪಾಸಾಗುವಾಗ ಇಂತಿಷ್ಟು ಪರ್ಸೆಂಟು ಮಾರ್ಕ್ ಇರಬೇಕೆಂದು ಇದೆ. ಇದರಿಂದ ಹಳ್ಳಿಗಾಡಿನಿಂದ ಬರುವ ಮಕ್ಕಳಿಗೆ ಕಷ್ಟವಾಗಿದೆ ಮತ್ತು ಇಂತಹ ತೊಂದರೆಗಳನ್ನು ಹಾಗೂ ಜನರ ಉಪದ್ರವವನ್ನು ತಪ್ಪಿಸಲು ಸರ್ಕಾರ ಹಳ್ಳಿಗಳಿಂದ ಬಂದ ಮಕ್ಕಳ ಅಂಕದ ವಿಚಾರದಲ್ಲಿ ಸ್ವಲ್ಪ ರಿಯಾಯಿತಿ ಕೊಟ್ಟು ರಿಲ್ಯಾಕ್ಸ್ ಮಾಡಬೇಕೆಂದು ಸಲಹೆ ಮಾಡುತ್ತೇನೆ. ಇಂತಹ ಕಡೆಗಳಲ್ಲಿ ಸರ್ಕಾರ ಕಾಲೇಜುಗಳನ್ನು ಹೆಚ್ಚು ಮಾಡಬಹುದು.

ಇನ್ನು ಪಾರ್ಟ್‌ಟೈಂ ಲಕ್ಚರರುಗಳು ಎಂದು ಕಾಲೇಜುಗಳಲ್ಲಿ ನೇಮಿಸುತ್ತಿದ್ದಾರೆ. ಆದರೆ ಬೆಂಗಳೂರಿನಲ್ಲಿ ನೇಮಕವಾಗುವ ಪಾರ್ಟ್ ಟೈಂ ಲಕ್ಚರರುಗಳ ಸಂಬಳವೇ ಬೇರೆ, ನಮ್ಮ ಭಾಗದಲ್ಲಿ ನೇಮಕವಾಗುವ ಪಾರ್ಟ್ ಟೈಂ ಲಕ್ಚರರುಗಳ ಸಂಬಳವೇ ಬೇರೆ, ಹೀಗೆ ವ್ಯತ್ಯಾಸಗಳಿವೆ ಎನ್ನುವ ಭಾವನೆ ಬಂದಿದೆ. ಇದರ ಬಗ್ಗೆ ಹಿಂದೆ ಈ ಮಾನ್ಯ ಸಭೆಯ ಸದಸ್ಯರಾಗಿದ್ದ ಶ್ರೀಮಾನ್ ಕೋಲ್ಕಿಬೈರ್‌ರವರೂ ಕೂಡ ಸರ್ಕಾರದ ಗಮನಕ್ಕೆ ತಂದು ಇದನ್ನು ಅಲ್ಲಿಗೇ ಬಿಟ್ಟರು. ಈಗಲೂ ಕೂಡ ಇವರ ಸ್ಥಿತಿ ಒಂದೇ ರೀತಿಯಾಗಿದೆ. ನಾನೂ ಕೂಡ ಪುನಃ ಅದನ್ನೇ ಇಲ್ಲಿ ಪ್ರಸ್ತಾಪವಾಡ ಬೇಕಾಗಿ ಬಂದಿದೆ. ಇದನ್ನು ಮಾನ್ಯ ವಿದ್ಯಾ ಮಂತ್ರಿಗಳು ಪರಿಶೀಲನೆ ಮಾಡಿ ಎಲ್ಲ ಕಡೆಯಲ್ಲಿ ಒಂದೇ ರೀತಿಯಾದ ಸಂಬಳ ದೊರಕುವಂತೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಇನ್ನು ಕೆಲವು ಕಡೆ ಉಪಾಧ್ಯಾಯರುಗಳಿಗೆ ಚೆಕ್ ಮೂಲಕ ಸಂಬಳದ ಹಣ ಪಾವತಿ ಮಾಡುವ ಕೆಲಸ ಬಂದಿದೆ. ಈ ರೀತಿ ಮಾಡಿರುವುದೇನೋ ತುಂಬಾ ಸಂತೋಷ. ಆದರೆ ಇದು ಸರಿಯಾದ ರೀತಿಯಲ್ಲಿ ಸಿಗುವಂತೆ ಮಾಡಬೇಕಾದದು ನಮ್ಮ ಕರ್ತವ್ಯ. ಒಂದು ನಿರ್ದಿಷ್ಟ ಕಾಲದಲ್ಲಿ ಈ ಹಣ ಎಲ್ಲರಿಗೂ ಸಿಗುವಂತೆ ಮಾಡಬೇಕೆಂದು ಸಲಹೆ ಮಾಡುತ್ತೇನೆ.

ಇನ್ನು ಸರ್ಕಾರ ಕೊಡುವ ಗ್ರ್ಯಾಂಟುಗಳು ಸಕಾಲದಲ್ಲಿ ಸಿಗುತ್ತಿಲ್ಲ. ಮದ್ರಾಸಿನಲ್ಲಿ ಗ್ರ್ಯಾಂಟು ಗಳನ್ನು ಕೊಡುವಾಗ ಒಂದು ರೀತಿ ಇತ್ತು. ಈಗ ಇಲ್ಲಿ ಬಂದ ಮೇಲೆ ತಾಲ್ಲೂಕಾ ಬೋರ್ಡುಗಳು ಗ್ರ್ಯಾಂಟುಗಳನ್ನು ಕೊಡಬೇಕೆಂದು ಇದೆ. ಇದನ್ನು ಕಾನೂನು ಪ್ರಕಾರ ಸರಿಯಾದ ರೀತಿಯಲ್ಲಿ ಸಿಗುವಂತೆ ಮಾಡಬೇಕು.

ಮಾನ್ಯ ಸದಸ್ಯರಾದ ಶ್ರೀಮತಿ ನಾಗರತ್ನಮ್ಮನವರು ಹೇಳಿದಂತೆ ಬಿ. ಇಡಿ. ಟ್ರೈನಿಂಗಿಗೆ ಟೀಚರುಗಳನ್ನು ಕಳಿಸುವಾಗ ಒಂದೇ ನೀತಿ ಇಲ್ಲ. ಕೆಲವು ಕಡೆ ಅವರೇ ಹೋಗಿ ಪಾಸು ಮಾಡು ತ್ತಾರೆ ಮತ್ತು ಬೆಳಗಾಂ, ಮೈಸೂರು ಈ ಭಾಗಗಳಲ್ಲಿ ಡಿಪಾರ್ಟಿನಿಂದಲೇ ಟ್ರೈನಿಂಗ್‌ಗಾಗಿ ಕಳು ಹಿಸುತ್ತಿದ್ದಾರೆ. ಇವರ ಕ್ವಾಲಿಫಿಕೇಷನ್ ಇಷ್ಟೇ ಇರಬೇಕು ಎಂದು ಕೂಡ ಮಾಡಲಾಗಿದೆ. ಇದನ್ನು ನಾನೂ ಕೂಡ ಅನುಮೋದಿಸುತ್ತಾ ನಮ್ಮ ಭಾಗದಿಂದ ಟೀಚರುಗಳನ್ನು ಟ್ರೇನಿಂಗಿಗೆ ಕಳುಹಿಸುವಾಗ ಒಂದೇ ನೀತಿಯನ್ನು ಅನುಸರಿಸಬೇಕೆಂದು ಸಲಹೆ ಮಾಡುತ್ತೇನೆ.

ಇನ್ನು ಹೈಸ್ಕೂಲುಗಳನ್ನು ಮಾಡುವಾಗ ಅಗ್ರಿಕಲ್‌ಚರ್ ಹೈಸ್ಕೂಲು ಒಂದು ಮಾಡುವಾಗ ಎಲ್ಲೆಲ್ಲಿ ಇಂತಹ ಸ್ಕೂಲುಗಳ ಅವಶ್ಯಕತೆ ಇದೆಯೋ ಅಂತಹ ಕಡೆಗಳಲ್ಲಿ ಇದನ್ನು ತೆರೆಯಬೇಕು ಮತ್ತು ಎಲ್ಲೆಲ್ಲಿ ಸಾಧ್ಯವೋ ಅಲ್ಲಿ ಸೈನ್ಸ್ ಹಾಗೂ ಆರ್ಟ್ಸ್ ಕಾಲೇಜುಗಳನ್ನು ತೆರೆಯಬೇಕು ಎಂದು ಮಾನ್ಯ ವಿದ್ಯಾ ಮಂತ್ರಿಗಳಲ್ಲಿ ಹಾಗೂ ಮುಖ್ಯ ಮಂತ್ರಿಗಳಲ್ಲಿ ಮನವಿ ಮಾಡಿಕೊಳ್ಳುತ್ತೇನೆ. ಇದಕ್ಕೆ ಸರ್ಕಾರ ಎಲ್ಲ ಸಹಾಯ ಸಹಕಾರಗಳನ್ನು ಕೊಟ್ಟು ಹೈಸ್ಕೂಲುಗಳು ಇನ್ನೂ ಹೆಚ್ಚುವಂತೆ ಸಹಕರಿಸಬೇಕು.

ಶ್ರೀ ಬಿ. ಭಾಸ್ಕರಶೆಟ್ಟಿ (ಕಾಪು).—ಅಗ್ರಿಕಲ್‌ಚರ್ ಸ್ಕೂಲುಗಳಲ್ಲಿ ಈಗಿರುವುದರಲ್ಲೇ ನೊಗ ಇದ್ದರೆ ಎತ್ತು ಇಲ್ಲ, ಎತ್ತು ಇದ್ದರೆ ಉಪಕರಣಗಳೇ ಇಲ್ಲ. ಹೀಗಾಗಿ ಇರುವ ಸ್ಕೂಲುಗಳೇ ನಡೆಯುತ್ತಿಲ್ಲ.

ಶ್ರೀಮತಿ ಕೆ. ಲಲಾವತಿ ರೈ.—ಮಗು ಹುಟ್ಟುವಾಗ ನಡೆಯುವುದಿಲ್ಲ. ಸಮಯ ಹೋದ ಹಾಗೆ ಸರಿಯಾಗುತ್ತದೆ. ಸರಿಯಾಗಿರುವ ಕಡೆ ಸ್ಕೂಲುಗಳು ನಡೆಯುತ್ತವೆ. ಇಂತಹ ಹೈಸ್ಕೂಲು ಗಳನ್ನು ಇನ್ನೂ ಹೆಚ್ಚಾಗಿ ತೆರೆಯಬೇಕೆಂದು ಹೇಳಿ ಸರ್ಕಾರದಲ್ಲ ವಿನಂತಿ ಮಾಡಿಕೊಂಡು ಮಾನ್ಯ ಅಧ್ಯಕ್ಷರು ಇಷ್ಟು ಮಾತನಾಡಲು ಅವಕಾಶ ಕೊಟ್ಟುದಕ್ಕಾಗಿ ಅವರನ್ನು ವಂದಿಸಿ ನನ್ನ ಮಾತು ಗಳನ್ನು ಮುಗಿಸುತ್ತೇನೆ.

ಶ್ರೀ ಕೆ. ಎಚ್. ಪಾಟೀಲ್ (ಗದಗ್).—ಮಾನ್ಯ ಅಧ್ಯಕ್ಷರೇ, ಇವೊತ್ತಿನ ದಿವಸ ಮೈಸೂರು ರಾಜ್ಯದಲ್ಲಿ ಶಿಕ್ಷಣದ ಪ್ರಗತಿ, ಶಿಕ್ಷಣದ ಮಟ್ಟ ಇವುಗಳ ಬಗೆಗೆ ನಾನು ಇಂದು ಇಲ್ಲಿ ಶಿಕ್ಷಣದ ಬೇಡಿಕೆ ವಿರೋಧಿಸುತ್ತ ಮಾತನಾಡಬೇಕಾಗಿದೆ.

ಶ್ರೀಮಾನ್ ಶಂಕರೇಗೌಡರು ನಮಗೆ ಗೊತ್ತಿದ್ದಂತೆ ಅವರು ಸಹಕಾರಿಗಳು. ಅವರು ಈಗ ಮಾನ್ಯ ಕಂಠಿಯವರ ಶಿಕ್ಷಣ ರಂಗಕ್ಕೆ ಬಂದಿದ್ದಾರೆ. ಶಿಕ್ಷಣ ರಂಗದಲ್ಲಿ ಇರುವ ರೀತಿ ನೀತಿಗಳು, ನಡವಳಿಕೆಗಳನ್ನು ಅವರು ಈಗಾಗಲೇ ಅಭ್ಯಾಸ ಮಾಡಲಿಕ್ಕೆ ಸಾಕು. ಅವುಗಳ ಬಗ್ಗೆ ಹಿಂದಿನಿಂದ ಪರೀಕ್ಷಿಸಿ ನೋಡಬೇಕಾಗಿದೆ. ಶಿಕ್ಷಣದಲ್ಲಿ ಮಾನ್ಯ ಶಂಕರೇಗೌಡರು ಶಿಕ್ಷಣದ ಸ್ಥಾನವನ್ನು ಉನ್ನತ ಮಟ್ಟಕ್ಕೇರಿಸಿ ಜನರ ಬೇಡಿಕೆಗಳನ್ನು ಗಮನಿಸಿ ಶಿಕ್ಷಣ ರಂಗವನ್ನು ಇನ್ನೂ ಮುಂದಕ್ಕೆ ತರಲು ಪ್ರಗತಿ

(ಶ್ರೀ ಕೆ. ಎಚ್. ಪಾಟೀಲ್)

ಯುತವಾದ ಸುಧಾರಣೆಗಳನ್ನು ತಂದು ಅದಕ್ಕೆ ಬೇಕಾಗುವ ಉತ್ಪತ್ತಿ ಸಾಧನಗಳನ್ನು ಮಾಡಿಕೊಂಡರೆ ಆಗ ಶಿಕ್ಷಣರಂಗವನ್ನು ಬದಲಾವಣೆ ಮಾಡಿದಂತಾಗುತ್ತದೆ. ಮಾನ್ಯ ಸಚಿವರಲ್ಲಿ ಇವೊತ್ತಿನ ದಿನ ಶಿಕ್ಷಣದ ಬಗ್ಗೆ ಎರಡು ಮಾತುಗಳನ್ನಾಡಬೇಕಾಗಿದೆ. ಕೆಲವಾರು ಜನರು ಪಕ್ಷದ ಬಂಧನದಿಂದ ಪಕ್ಷದ ನಿಯಮಕ್ಕನುಸಾರವಾಗಿ ಈ ಬಡ್ಜೆಟ್ಟನ್ನು ಬೆಂಬಲಿಸುತ್ತಾ ಇರಬಹುದು. ಆ ಒಂದು ಮಾತನ್ನು ಬಿಟ್ಟರೆ ಎಲ್ಲರೂ ಸಹ ಶಿಕ್ಷಣ ರಂಗದಲ್ಲಿ ಆಗತಕ್ಕಂಥ ಅನ್ಯಾಯಗಳನ್ನು ಬಹಿರಂಗವಾಗಿ ಹೇಳಿದ್ದಾರೆ. ಇದರಲ್ಲಿ ಎರಡು ಮಾತುಗಳಿಲ್ಲ. ಅಷ್ಟು ಮಾತುಗಳನ್ನು ಶ್ರೀಮಾನ್ ಶಂಕರೇಗೌಡರೇ ಗಮನಿಸಿದ್ದಾರೆ. ಮತ್ತು ಬಡ್ಜೆಟ್ಟಿನ ಮಂಜೂರಾತಿಯನ್ನ ಈ ವಿರೋಧದೊಂದಿಗೆ ಪಡೆಯಬಹುದು. ಈ ಬೇಡಿಕೆಗೆ ಹಣವನ್ನು ಮಂಜೂರು ಮಾಡುವುದರಲ್ಲಿ ಅನೇಕರು ವಿರೋಧವನ್ನು ವ್ಯಕ್ತಪಡಿಸಿದರು. ಆದರೂ ಸಹ ಈ ಸಭೆಯ ಮಂಜೂರಾತಿಯನ್ನು ಪಡೆದುಕೊಳ್ಳಬಹುದು. ಫ್ರೀ ಪ್ರೈಮರಿ ವಿದ್ಯಾಭ್ಯಾಸ, ಹೈಸ್ಕೂಲು ವಿದ್ಯಾಭ್ಯಾಸ, ಕಾಲೇಜು ವಿದ್ಯಾಭ್ಯಾಸ ಟೆಕ್ನಿಕಲ್ ವಿದ್ಯಾಭ್ಯಾಸ ಎಲ್ಲಾ ರಂಗಗಳಲ್ಲಿ ನೋಡಿದರೂ ಕೂಡ ಶಿಕಣದ ಮಟ್ಟ, ಶಿಕ್ಷಣದ ಅಭಿವೃದ್ಧಿ, ಬೆಳವಣಿಗೆ ಅಷ್ಟು ಪ್ರಗತಿಪರವಾಗಿ ಸಾಗಿಲ್ಲ. ಇದರಲ್ಲಿ ಪ್ರಾಮುಖ್ಯ ವಿಷಯಗಳು ಹುದುಗಿಕೊಂಡಿವೆ ಎಂದು ನಾನು ಹೇಳುತ್ತೇನೆ. ಶಿಕ್ಷಣರಂಗ ಬಹು ಪವಿತ್ರವಾದ ರಂಗ. ಇದರಲ್ಲಿ ರಾಜಕೀಯ ಗುಂಪುಗಾರಿಕೆ, ಜಾತೀಯ ಪ್ರಶ್ನೆ ಇತ್ಯಾದಿಗಳೆಲ್ಲವೂ ಹುದುಗಿಕೊಂಡು ಶಿಕ್ಷಣದ ಮಟ್ಟ ಕೆಳಮಟ್ಟಕ್ಕೆ ಹೋಗಲಿಕ್ಕೆ ಹತ್ತಿದೆ. ಈ ಸಂದರ್ಭದಲ್ಲಿ ನಾನು ಒಂದು ವಿಷಯವನ್ನು ಮಾನ್ಯ ವಿದ್ಯಾ ಮಂತ್ರಿಗಳಾದ ಶಂಕರೇಗೌಡರ ಗಮನಕ್ಕೆ ತರುತ್ತೇನೆ. ಶಿಕ್ಷಣ ತಜ್ಞರಾದ ಶ್ರೀ ದಿನಕರ ದೇಸಾಯಿ ಅವರು ಸ್ವಂತ ಹಣದಿಂದ ಪ್ರೌಢ ಶಾಲೆಯನ್ನು ತೆರೆಯಲು ಅನುಮತಿ ಕೇಳಿದಾಗ ಅದನ್ನು ನಿರಾಕರಿಸಿದ ಸರ್ಕಾರವೇ ಮಾನ್ಯ ಶ್ರೀ ಕಂಠಿಯವರ ಮತದಾರ ಕ್ಷೇತ್ರದಲ್ಲಿ ಸರಕಾರೀ ಖರ್ಚಿನಿಂದ ಶಾಲೆಗಳನ್ನು ತೆರೆಯಿತು. ಇದು ಯಾವ ನೀತಿ? ನೀವು ಏನಿದ್ದರೂ ನಿಮ್ಮ ಹಿತವನ್ನು ಸಾಧನೆ ಮಾಡಿಕೊಂಡರೇ ವಿನಾ ಮತ್ತೊಬ್ಬರ ಹಿತವನ್ನು ಲಕ್ಷ್ಯಕ್ಕೆ ತೆಗೆದುಕೊಳ್ಳಲಿಲ್ಲ. ನೀವು ಮಾಡುವಂತಹ ತಪ್ಪು ಪರಮಾವಧಿ ಆಗಿದೆ. ನಾನು ಬಹಳ ವಿಷಾದದಿಂದ ಈ ಮಾತುಗಳನ್ನು ಹೇಳುತ್ತೇನೆ. ಶ್ರೀಮಾನ್ ಶಂಕರೇಗೌಡರು ಈ ಶಿಕ್ಷಣದ ಪ್ರಗತಿಯ ವಿಷಯದಲ್ಲಿ ಪ್ರಾಮಾಣಿಕತೆಯಿಂದ ದೇವರ ಸಾಕ್ಷಿಯಾಗಿ ವಿಚಾರ ಮಾಡಿ ಜನತೆಯ ಹಿತ ದೃಷ್ಟಿಯಿಂದ ಈ ಶಿಕ್ಷಣ ರಂಗದಲ್ಲಿರತಕ್ಕ ತಪ್ಪುಗಳನ್ನು ತಿದ್ದಿಕೊಳ್ಳಬೇಕು. ಆ ರೀತಿ ಮಾಡುವುದಾದರೆ ಶಿಕ್ಷಣ ರಂಗದಲ್ಲಿ ಕಲ್ಯಾಣವಾಗುತ್ತದೆ ಎಂದು ನಾನು ಹೇಳುತ್ತೇನೆ.

ಇನ್ನು ಫ್ರೀ ಪ್ರೈಮರಿ ವಿದ್ಯಾಭ್ಯಾಸದ ವಿಷಯದಲ್ಲಿ ಹೇಳುವುದಾದರೆ ಬಾಲವಾಡಿಗಳನ್ನು, ಶಿಶು ವಿಹಾರಗಳನ್ನು ನಡೆಸುವುದಕ್ಕೆ ವಿದ್ಯಾ ಇಲಾಖೆಯಿಂದ ಗ್ರಾಂಟು ಹೋಗುತ್ತದೆ. ಆದರೆ ಆ ಹಣ ಎಲ್ಲಾ ಶಿಕ್ಷಣ ಸಂಸ್ಥೆಗಳಿಗೂ ಸಂಪೂರ್ಣವಾಗಿ ಸಿಕ್ಕುತ್ತದೆಯೇ ಎಂದು ನೋಡುವುದಾದರೆ ಕೆಲವಕ್ಕೆ ಸಿಕ್ಕುತ್ತದೆ ಕೆಲವಕ್ಕೆ ಸಿಕ್ಕುವುದಿಲ್ಲ. ಮಾರ್ಚಿ ತಿಂಗಳು 30ನೇ ತಾರೀಖು ಗ್ರಾಂಟು ಹಣವನ್ನು ರದ್ದಾದೀತೆಂದು ಮನಬಲ್ಲಂತೆ 10-15 ರೂಪಾಯಿಗಳನ್ನು ಒಂದೊಂದು ಸಂಸ್ಥೆಗೆ ಹಂಚುವುದನ್ನು ಕಾಣುತ್ತೇವೆ. ಈಗ ಬಾಲವಾಡಿಗಳು ಸರಿಯಾಗಿ ನಡೆಯುವುದಿಲ್ಲ. ಶಿಕ್ಷಣದಲ್ಲಿ ಫ್ರೀ ಪ್ರೈಮರಿ ವಿದ್ಯಾಭ್ಯಾಸ ಏನಿದೆ ಇದು ವಿದ್ಯಾಭ್ಯಾಸಕ್ಕೆ ತಳಹದಿ ಇದ್ದಹಾಗೆ. ಆದ್ದರಿಂದ ಈಗ ತಳಹದಿಯನ್ನು ಸರಿಯಾಗಿ ಹಾಕದೆ ಕಟ್ಟಡವನ್ನು ಕಟ್ಟಿದರೆ ಅದು ಮುಂದೆ ಕುಸಿದು ಬೀಳುತ್ತದೆ. ಅದರ ಸಲುವಾಗಿ ಈ ಫ್ರೀ ಪ್ರೈಮರಿ ವಿದ್ಯಾಭ್ಯಾಸವನ್ನು ಮಕ್ಕಳಿಗೆ ಸರಿಯಾದ ರೀತಿಯಲ್ಲಿ ಕೊಡಬೇಕಾದರೆ ತರಬೇತಿಯನ್ನು ಹೊಂದಿದ ಶಿಕ್ಷಕರು ಬೇಕು. ಬಾಲವಾಡಿಯ ಶಿಕ್ಷಕರನ್ನು ತಯಾರಿಸುವುದಕ್ಕೆ ಕೆಲವು ಶಿಕ್ಷಣ ಸಂಸ್ಥೆಗಳು ಬೇಡವೇ? ಬಿಜಾಪುರದಲ್ಲಿ ಪವಿತ್ರವಾದ ಶಿಕ್ಷಣದ ಕೆಲಸಕ್ಕೆ ತರಬೇತಿಯನ್ನು ಕೊಡುವುದಕ್ಕೆ ನಮ್ಮಲ್ಲಿ ಶಿಕ್ಷಣ ಸಂಸ್ಥೆಗಳು ಇವೆ. ಅಂಥಾ ಶಿಕ್ಷಣ ಸಂಸ್ಥೆಗಳನ್ನು ಮಾನ್ಯ ಮಂತ್ರಿಗಳು ತೆಗೆಯುವುದಕ್ಕೆ ಆಗುವುದಿಲ್ಲ. ನಿಜವಾಗಿಯೂ ನಾನು ಹೇಳುವುದು ಅವಹೇಳನಕ್ಕೆ ಆಸ್ಪದವಾಗುತ್ತದೆ. ಅದಕ್ಕಾಗಿ ನಾನು ಅವರಲ್ಲಿ ಬಿನ್ನವಿಸಿಕೊಳ್ಳುತ್ತೇನೆ. ಮಕ್ಕಳಿಗೆ ಶಿಕ್ಷಣವನ್ನು ಕೊಡುವುದಕ್ಕಾಗಿ ಸಾಕಷ್ಟು ಬಾಲವಾಡಿಗಳನ್ನು ಪ್ರಾರಂಭಿಸಬೇಕು.

ಇನ್ನು ಪ್ರೈಮರಿ ವಿದ್ಯಾಭ್ಯಾಸದ ವಿಷಯದಲ್ಲಿ ಹೇಳುವುದಾದರೆ ಪ್ರೈಮರಿ ಶಾಲೆಗಳಲ್ಲಿ ಇಂಗ್ಲೀಷ್ ವಿಷಯವನ್ನು ಕಲಿಯಲು ಹಚ್ಚಿದ್ದಾರೆ. ಇಂಗ್ಲಿಷನ್ನ ಕಲಿಸುವುದಕ್ಕೆ ಮಾಸ್ತರ್ ಇಲ್ಲದೆ ಇರುವ ಶಾಲೆಗಳಿವೆ. ಆ ಹುಡುಗರ ಗತಿಯೇನು? ಇಂಗ್ಲಿಷಿನಲ್ಲಿ ಆ ಹುಡುಗರು ಫೇಲಾದರೆ ಅಥವಾ 5-6 ನಂಬರುಗಳನ್ನು ತೆಗೆದುಕೊಂಡರೆ ಆ ಹುಡುಗರ ಭವಿಷ್ಯವೇನು?

ಇನ್ನು ಹೈಸ್ಕೂಲು ವಿದ್ಯಾಭ್ಯಾಸದ ವಿಷಯವನ್ನು ಹೇಳುವುದಾದರೆ ಕೆಲವು ಹೈಸ್ಕೂಲಿನಲ್ಲಿ ಪ್ರೈಮರಿ ಸ್ಕೂಲಿನ ಉಪಾಧ್ಯಾಯರಿಗೆ ಏನು ಪಗಾರನ್ನು ಕೊಡುತ್ತಾರೆಯೋ ಅದೇ ಪ್ರಮಾಣದ

ಪಗಾರವನ್ನು ಕೊಡುತ್ತಿದ್ದಾರೆ. ಇದರಿಂದ ಆ ಉಪಾಧ್ಯಾಯರಿಗೆ ಮಕ್ಕಳಿಗೆ ಕಲಿಸುವುದಕ್ಕೆ ಹೆಚ್ಚು ಉತ್ಸಾಹವಿರುವುದಿಲ್ಲ. ಆದ್ದರಿಂದ ಅದಕ್ಕೆ ಸರ್ಕಾರದವರು ಗಮನ ಕೊಡಬೇಕು ಎಂದು ನಾನು ಹೇಳುತ್ತೇನೆ. ಹಿಂದೆ ದಿವಂಗತ ಶ್ರೀ ಕೆ. ಎಚ್. ರಾಮಯ್ಯ ಹಾಗೂ ಡಾ|| ಸಿ. ಆರ್. ರೆಡ್ಡಿಯವರಂಥ ಮಹನೀಯರ ಪ್ರಯತ್ನದಿಂದ ಮೈಸೂರಿನಲ್ಲಿ ಅನೇಕ ಹಾಸ್ಟಲುಗಳು ಸ್ಥಾಪನೆಯಾದವು. ಆ ಹಾಸ್ಟಲುಗಳ ಬಗ್ಗೆ ಸರ್ಕಾರದವರು ಅಲಕ್ಷ್ಯವನ್ನ ತೋರಿಸಿದ್ದಾರೆ. ಅವುಗಳನ್ನು ಸರಿಯಾದ ರೀತಿಯಲ್ಲಿ ನಡೆಸಿಕೊಂಡು ಹೋಗಬೇಕು. ಶಿರಿಗೆರೆ ಮತ್ತು ಚಿತ್ರದುರ್ಗಗಳಲ್ಲಿಯೂ ಆ ತರಹ ಹಾಸ್ಟಲುಗಳಿವೆ. ಮೊನ್ನೆ ಚಿತ್ರದುರ್ಗ ನಗರದಲ್ಲಿರತಕ್ಕ ಶ್ರೀ ಸಿರಿಗೇರಿ ಸ್ವಾಮೀಜಿಯವರಿಂದ ನಡೆದಿರುವ ಹಾಸ್ಟಲನಲ್ಲಿ ವಿದ್ಯಾರ್ಥಿಗಳು ಕುಡಿಯುವುದಕ್ಕೆ ನೀರು ಇಲ್ಲ ಎಂದು ತೊಂದರೆ ಪಡುತ್ತಿರುವುದನ್ನು ಗಮನಿಸಿದೆ. ಕೇಂದ್ರ ಸರ್ಕಾರದಿಂದ ಗ್ರಾಂಟು ಪ್ರವಾಹ ರೂಪದಲ್ಲಿ ಬರುತ್ತದೆ. ಆದರೆ ಅದರಲ್ಲಿ ಕೆಲವು ದುರ್ವಿನಿಯೋಗವಾಗುತ್ತದೆ. ಕೆಲವು ಲ್ಯಾಪ್ಸ್ ಆಗುತ್ತದೆ. ಈ ಹಾಸ್ಟಲುಗಳಿಗೆ ಖರ್ಚು ಮಾಡತಕ್ಕಂಥ ಹಣವನ್ನು ಸರಿಯಾದ ರೀತಿಯಲ್ಲಿ ಪ್ರಾಮಾಣಿಕತೆಯಿಂದ ಸರ್ಕಾರದವರು ಖರ್ಚು ಮಾಡಬೇಕು. ಹಾಗೆಯೇ ನಮ್ಮ ಮಾನ್ಯ ಸದಸ್ಯರಾದ ಹುಚ್ಚಮಾಸ್ತಿಗೌಡರ ಕ್ಷೇತ್ರವಾದ ಹುಲಿಯೂರು ದುರ್ಗದಲ್ಲಿರತಕ್ಕ ಹೈಸ್ಕೂಲು ಮತ್ತು ಹಾಸ್ಟಲಿನ ವಿಷಯದಲ್ಲಿ ಯಾವ ರಾಜಕೀಯ ಪ್ರವೇಶ ಮಾಡಿದೆಯೋ ಗೊತ್ತಿಲ್ಲ. ಕಟ್ಟಲು ಪ್ರಾರಂಭಿಸಿರುವ ಹೈಸ್ಕೂಲು ಕಟ್ಟಡ ಅರ್ಧಕ್ಕೇನೇ ನಿಂತು ಹೋಗಿದೆ. ಆಮೇಲೆ ಹನುಮನಹಟ್ಟಿಯ ವಿಚಾರ ಬಹಳ ಇದೆ. ಸಮಯ ಬಂದಾಗ ಹೇಳುತ್ತೇನೆ. ಅಲ್ಲಿ ನಡೆಯುತ್ತಾ ಇರತಕ್ಕ ರಾಜಕೀಯ, ಅಲ್ಲಿ ನಡೆಯುತ್ತಾ ಇರತಕ್ಕ ಸರಕಾರಿ ಅಧಿಕಾರಿಗಳಿಂದಾಗಿರುವ ದುರ್ವ್ಯವಹಾರಕ್ಕೆ ಈಗ ಕಾನೂನು ಶಾಖೆ ಹಾಗೂ ಪಾರ್ಲಿಮೆಂಟಿನ ವ್ಯವಹಾರ ಶಾಖಾ ಮಂತ್ರಿಗಳಾದ ಶ್ರೀಮಾನ್ ಕಂಠಿಯವರು ಸಂಪೂರ್ಣವಾಗಿ ಜವಾಬ್ದಾರರು. ಅದಕ್ಕೆ ಸಂಬಂಧಪಟ್ಟ ಡಾಕ್ಯುಮೆಂಟುಗಳು ನನ್ನ ಹತ್ತಿರ ಇವೆ. ಬೇಕಾದರೆ ತೋರಿಸುತ್ತೇನೆ. ಹನುಮನಹಟ್ಟಿಯ ವಿದ್ಯಾ ಸಂಸ್ಥೆಯಲ್ಲಿ ಸರಕಾರಿ ಅಧಿಕಾರಿಗಳಿಂದಲೇ ಹಣ ದುರುಪಯೋಗವಾಗಿದೆ. ಅಲ್ಲಿ ನಾನಾ ತರಹ ಅನ್ಯಾಯಗಳು ನಡೆಯುತ್ತಿವೆ. ಅಲ್ಲಿ ಶ್ರೀಮಾನ್ ಕಂಠಿಯವರು ಏನೇನು ಭ್ರಷ್ಟಾಚಾರಗಳನ್ನು, ಏನೇನು ಅನ್ಯಾಯಗಳನ್ನು ಮಾಡಿಸಿದ್ದಾರೆ ಎನ್ನುವ ಬಗ್ಗೆ ಅವರು ತಮ್ಮ ಹೃದಯವನ್ನು ಪರೀಕ್ಷೆ ಮಾಡಿಕೊಂಡು ಒಂದು ಎನ್‌ಕ್ವೈರಿ ಕಮಿಟಿಯನ್ನ ನೇಮಕ ಮಾಡಲಿ, ಅದಕ್ಕೆ ಬೇಕಾದ ಪುರಾವೆಗಳನ್ನೆಲ್ಲಾ ನಾನು ಹಾಜರು ಮಾಡುತ್ತೇನೆ. ನನ್ನಲ್ಲಿ ಏನಾದರೂ ತಪ್ಪು ಇದ್ದರೆ ನಾನು ರೂರಲ್ ಇನ್‌ಸ್ಟಿಟ್ಯೂಟ್ ಪದವಿಯನ್ನು ಬಿಟ್ಟು ಬಿಡುತ್ತೇನೆ. ಅವರಲ್ಲಿ ತಪ್ಪು ಇದ್ದರೆ ಅವರು ಈ ಮಂತ್ರಿ ಪದವಿಗೆ ರಾಜೀನಾಮೆಯನ್ನು ಕೊಡಲಿ. ಇಷ್ಟು ಹೇಳಿ ನಾನು ನನ್ನ ಮಾತನ್ನು ಅಧ್ಯಕ್ಷರಿಗೆ ವಂದಿಸಿ ಮುಗಿಸುತ್ತೇನೆ.

ಶ್ರೀ ಬಿ. ಎಂ. ಇದಿನಬ್ಬ (ಮಂಗಳೂರು-II).—ಸನ್ಮಾನ್ಯ ಸಭಾಪತಿಗಳೇ, ವಿದ್ಯಾ ಸಚಿವರು ಈ ಸಭೆಯ ಮುಂದಿಟ್ಟಿರತಕ್ಕ ಬೇಡಿಕೆಗಳನ್ನು ಸ್ವಾಗತಿಸುತ್ತಾ ನಾನು ನಾಲ್ಕು ಮಾತುಗಳನ್ನು ಹೇಳಬಯಸುತ್ತೇನೆ. ಸ್ವಾತಂತ್ರ್ಯ ಪೂರ್ವದಲ್ಲಿ ನಮ್ಮ ದೇಶದಲ್ಲಿ ವಿದ್ಯಾಭ್ಯಾಸದ ಪ್ರಗತಿ ಬಹಳ ಕೆಳಮಟ್ಟದಲ್ಲಿತ್ತು. ಆಗ ನಮ್ಮ ದೇಶದಲ್ಲಿ ಪ್ರಾಥಮಿಕ ಶಾಲೆಗಳು, ಪ್ರೌಢಶಾಲೆಗಳು, ಮಾಧ್ಯಮಿಕ ಶಾಲೆಗಳು ಮತ್ತು ಕಾಲೇಜುಗಳು ಬಹಳ ಕಡಿಮೆ ಇದ್ದುವು. ನಮಗೆ ಸ್ವಾತಂತ್ರ್ಯ ಬಂದಮೇಲೆ ಸರ್ಕಾರದವರು ಪ್ರಾಥಮಿಕ ಶಾಲೆಗಳು, ಮಾಧ್ಯಮಿಕ ಶಾಲೆಗಳು, ಪ್ರೌಢಶಾಲೆಗಳು ಮತ್ತು ಕಾಲೇಜುಗಳನ್ನು ತಾಂತ್ರಿಕ ಶಾಲೆಗಳನ್ನು ತಾಂತ್ರಿಕ ಕಾಲೇಜುಗಳನ್ನು ಹೆಚ್ಚು ಮಾಡುತ್ತಾ ಬಹಳ ತ್ವರಿತವಾಗಿ ವಿದ್ಯಾಭ್ಯಾಸದಲ್ಲಿ ಪ್ರಗತಿಯನ್ನು ಸಾಧನೆ ಮಾಡುತ್ತಾ ಬಂದಿದ್ದಾರೆ. ಹಿಂದೆ ದಿವಂಗತ ಪಂಡಿತ್ ನೆಹರೂ ಅವರು ತಮ್ಮ ಭಾಷಣದಲ್ಲಿ ಹೇಳಿದಂಥಾ ಒಂದು ಮಾತು ನನಗೆ ನೆನಪು ಬರುತ್ತದೆ. ಅವರು ಬಹಳ ಗಂಭೀರವಾಗಿ ಹೇಳುತ್ತಿದ್ದರು. ನನಗೆ ಚಿನ್ನಬೇಡ ಬೆಳ್ಳಿಬೇಡ ಜನರ ಸಂಪತ್ತು ಬೇಡ ನನಗೆ ದೇಶದ ಜನತೆ ಬೇಕು, ವಿದ್ಯೆಬೇಕು, ವಿದ್ಯೆ ಬಂದರೆ ಆಸ್ತಿ ಬರುತ್ತದೆ, ಸಂಪತ್ತು ಬರುತ್ತದೆ, ಆದ್ದರಿಂದ ನಮ್ಮ ಜನತೆಗೆ ವಿದ್ಯೆ ಬರಬೇಕು ಎಂದು ಹೇಳುತ್ತಿದ್ದರು. ಅದೇ ರೀತಿಯಲ್ಲಿ ಅವರು ಒಂದನೇ ಪಂಚವಾರ್ಷಿಕ ಯೋಜನೆಯಲ್ಲಿ ಎರಡನೆಯ ಪಂಚವಾರ್ಷಿಕ ಯೋಜನೆಯಲ್ಲಿ ವಿದ್ಯಾಭ್ಯಾಸಕ್ಕೆ ಹೆಚ್ಚಿನ ಹಣವನ್ನು ಮಂಜೂರು ಮಾಡಿಕೊಂಡು ವಿದ್ಯಾಭ್ಯಾಸದಲ್ಲಿ ಪ್ರಗತಿಪರವಾದ ಸಾಧನೆಯನ್ನು ಮಾಡಿಕೊಂಡು ಬಂದರು. ಈಗ ನಮ್ಮ ರಾಜ್ಯದಲ್ಲಿ ಸಾಕಷ್ಟು ವಿದ್ಯಾಶಾಲೆಗಳನ್ನು ನಮ್ಮ ಸರ್ಕಾರದವರು ಸ್ಥಾಪನೆ ಮಾಡಿದ್ದಾರೆ. ಪ್ರತಿಯೊಂದು ಊರಿಗೂ ಒಂದು ಪ್ರಾಥಮಿಕ ಶಾಲೆಗಳು, 3–4 ಮೈಲಿಗೊಂದು ಮಾಧ್ಯಮಿಕಶಾಲೆಗಳು, ಇದೇ ರೀತಿ ಪ್ರೌಢಶಾಲೆಗಳು ಕಾಲೇಜುಗಳು, ಮೆಡಿಕಲ್ ಕಾಲೇಜುಗಳು, ಇಂಜಿನಿಯರಿಂಗ್ ಕಾಲೇಜುಗಳು ಇವುಗಳನ್ನು ಸ್ಥಾಪನೆ ಮಾಡಿ ವಿದ್ಯಾಭ್ಯಾಸದಲ್ಲಿ ಒಂದು ಹೆಚ್ಚಿನ ಪ್ರಗತಿಯನ್ನು ಸಾಧನೆ ಮಾಡಿದ್ದಾರೆ. ಇದರಿಂದಾಗಿ ನಮ್ಮ ದೇಶದಲ್ಲಿ ಡಾಕ್ಟರುಗಳು ಇಂಜಿನಿಯರು ತಯಾರಾಗಿ ನಮ್ಮ ರಾಜ್ಯವಲ್ಲದೆ ಬೇರೆ ಬೇರೆ ರಾಜ್ಯಗಳಿಗೂ ಕೂಡ ಹೋಗಿ ಕೆಲಸಮಾಡುತ್ತಿದ್ದಾರೆ.

(ಶ್ರೀ ಬಿ. ಎಂ. ಇದಿನಬ್ಬ)

ಇನ್ನು ನಮ್ಮ ಮಾನ್ಯ ಸದಸ್ಯರನೇಕರು ಈ ವಿದ್ಯಾಭ್ಯಾಸದಲ್ಲಿ ಅನೇಕ ಸುಧಾರಣೆಗಳನ್ನು ಮಾಡಬೇಕೆಂದು ಸಲಹೆ ಮಾಡಿದರು ನಿಜ, ಬದಲಾವಣೆಗಳು ಆಗಬೇಕು. ಕ್ರಾಂತಿಕಾರಕವಾದ ಬದಲಾವಣೆಗಳಾಗಬೇಕು. ನಾವು ಜಾತ್ಯಾತೀತ ರಾಷ್ಟ್ರವನ್ನು ಸ್ಥಾಪನೆಮಾಡಬೇಕೆಂದು ಹೊರಟಿರುವಾಗ ನಮ್ಮ ದೇಶದಲ್ಲಿ ಯಾವ ಜಾತೀಯ ಹಾಸ್ಟಲುಗಳನ್ನು ಸ್ಥಾಪನೆ ಮಾಡಲೂ ಪ್ರೋತ್ಸಾಹವನ್ನು ಕೊಡಕೂಡದು. ಇವರು ಇಂಥಾ ಕೋಮಿನವರು, ಇವರು ಅಂಥಾ ಕೋಮಿನವರು ಎನ್ನುವ ಭಾವನೆ ಹೋಗಬೇಕು. ಸಾಮೂಹಿಕವಾದ ಜನರಲ್ ಹಾಸ್ಟಲುಗಳನ್ನು ಸ್ಥಾಪನೆ ಮಾಡುವುದಕ್ಕೆ ಪ್ರೋತ್ಸಾಹವನ್ನು ಕೊಡಬೇಕು. ಅಂಥಾ ಸಾಮೂಹಿಕವಾದ ಹಾಸ್ಟಲಿನಿಂದ ವಿದ್ಯಾಭ್ಯಾಸ ಮಾಡಿ ಹೊರಗೆ ಬರತಕ್ಕ ವಿದ್ಯಾರ್ಥಿಗಳು ವಿಚಾರ ಸಂಪನ್ನರಾಗುತ್ತಾರೆ. ರಾಷ್ಟ್ರ ಮತ್ತು ದೇಶದ ವಿಚಾರದಲ್ಲಿ ಅಭಿಮಾನವುಳ್ಳವರಾಗಿಯೂ ಮತ್ತು ಪ್ರಾಮಾಣಿಕರಾಗಿಯೂ ಆಗುತ್ತಾರೆ ಎಂದು ಹೇಳುವುದಕ್ಕೆ ನಾನು ಇಷ್ಟಪಡುತ್ತೇನೆ.

6-30 P.M.

ಇನ್ನು ಪಠ್ಯಪುಸ್ತಕಗಳ ಬಗ್ಗೆ ಹೇಳುವುದಾದರೆ, ಕಾಲಕ್ಕೆ ಸರಿಯಾಗಿ ಪಠ್ಯಪುಸ್ತಕಗಳು ಸಿಗುತ್ತಿಲ್ಲ. ಶಾಲೆಗಳು ಪ್ರಾರಂಭವಾದ ಒಂದು ತಿಂಗಳು, ಎರಡು ತಿಂಗಳು, ಮೂರು ತಿಂಗಳುಗಳು ಆದಮೇಲೆ ಪಠ್ಯಪುಸ್ತಕಗಳು ಸಿಗುತ್ತಿವೆ. ಇದರಿಂದ ವಿದ್ಯಾರ್ಥಿಗಳಿಗೆ ತೊಂದರೆಯಾಗುತ್ತದೆ. ಈ ಪಠ್ಯಪುಸ್ತಕಗಳಲ್ಲಿ ಬರುವ ಲೇಖನಗಳು ನಮ್ಮ ದೇಶಕ್ಕೆ, ನಮ್ಮ ನೀತಿಗೆ ಅನುಗುಣವಾಗಿಲ್ಲ. ಪಠ್ಯಪುಸ್ತಕಗಳಲ್ಲಿ ರಾಷ್ಟ್ರಪ್ರೇಮವನ್ನು ತುಂಬಿಸುವಂತಹ, ದೇಶಪ್ರೇಮವನ್ನು ತುಂಬಿಸುವಂತಹ, ದೇಶದ ರಕ್ಷಣೆಯನ್ನು ಮಾಡುವಂತಹ ಜ್ಞಾನವನ್ನು ಹೆಚ್ಚಿಸುವಂತಹ ಲೇಖನಗಳು ಇರಬೇಕು. ಈ ರೀತಿಯ ಲೇಖನಗಳು ಬಂದರೆ ದೇಶವು ಮುಂದುವರೆಯುತ್ತದೆ. ಜಾತ್ಯಾತೀತ ರಾಜ್ಯದಲ್ಲಿ ವಿದ್ಯಾರ್ಥಿಗಳು ಸಮಾನ ರೀತಿಯಿಂದ ವಿದ್ಯಾಭ್ಯಾಸ ಮಾಡುವುದಕ್ಕೆ ಅನುಗುಣವಾದ ರೀತಿಯಲ್ಲಿ ಪಠ್ಯಪುಸ್ತಕಗಳು ಇರಬೇಕು. ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಿರುವುದು ಮಲೆನಾಡು ಪ್ರಾಂತ್ಯದಲ್ಲಿ. ಅಲ್ಲಿ ದೊಡ್ಡ ದೊಡ್ಡ ಹಳ್ಳಿಗಳಿವೆ. ಮಲೆನಾಡಿನ ಹಳ್ಳಿಗಳಿಗೆ ವರ್ಗವಾಗಿ ಹೋದ ಅಧ್ಯಾಪಕರಿಗೆ ವಾಸಕ್ಕೆ ಮನೆಗಳಿರುವುದಿಲ್ಲ. ಆದ್ದರಿಂದ ಅಲ್ಲಿ ಮನೆಗಳನ್ನು ಕಟ್ಟಿಸಿಕೊಡಬೇಕು. ನಮ್ಮಲ್ಲಿ ವರ್ಷಕ್ಕೆ 150 ಇಂಚ್ ಮಳೆಯಾಗುವುದರಿಂದ, ತಾವು ಒಂದು ಸಾವಿರ ರೂಪಾಯಿಗಳ ಗ್ರಾಂಟ್ ಕೊಟ್ಟು ಸ್ಕೂಲ್ ಬಿಲ್ಡಿಂಗ್ ಕಟ್ಟಿಸಿದರೆ ಅವು ಮಳೆ ಗಾಳಿಗೆ ಬಿದ್ದುಹೋಗುತ್ತವೆ. ಆದ್ದರಿಂದ ಒಂದು ಸಾವಿರ ಇರುವುದನ್ನು ಹೆಚ್ಚು ಮಾಡುವುದಕ್ಕೆ ಆಲೋಚನೆ ಮಾಡಬೇಕೆಂದು ಹೇಳುತ್ತೇನೆ. ನಮ್ಮ ದಕ್ಷಿಣ ಕನ್ನಡದಲ್ಲಿ 19–20 ಕಾಲೇಜ್‌ಗಳಿವೆ. ಇಷ್ಟು ಕಾಲೇಜ್‌ಗಳು ಇರುವುದರಿಂದ ನಮ್ಮ ದಕ್ಷಿಣ ಕನ್ನಡಕ್ಕೆ ಪ್ರತ್ಯೇಕವಾಗಿ ಒಂದು ವಿಶ್ವವಿದ್ಯಾನಿಲಯವನ್ನು ಕೊಟ್ಟರೆ ಒಳ್ಳೆಯದಾಗುತ್ತದೆಂದು ಹೇಳುತ್ತೇನೆ.

ಇನ್ನು ಕಲಾಗಾರರ ಬಗ್ಗೆ ಹೇಳುವುದಾದರೆ, ನಮ್ಮ ಈಗಿನ ವಿದ್ಯಾ ಮಂತ್ರಿಗಳು ಕಲಾ ಪ್ರೇಮಿಗಳು, ನಾಟಕ ಪ್ರೇಮಿಗಳು, ಅವರು ಕಲಾಗಾರರಿಗೆ ಹೆಚ್ಚಿನ ಸಹಾಯ ಮಾಡಬೇಕೆಂದು ಹೇಳುತ್ತೇನೆ. ಈಗ ಪ್ರತ್ಯೇಕವಾಗಿ ಇದಕ್ಕಾಗಿ ಸಂಗೀತ ನಾಟಕ ಅಕಾಡೆಮಿ ಇದೆ. ಈ ಅಕಾಡೆಮಿ ಮೂಲಕ ಕಲಾಗಾರರಿಗೆ ಹೆಚ್ಚಿನ ಅನುಕೂಲಗಳನ್ನು ಮಾಡಿಕೊಡಬೇಕು. ಕವಿ ಕುವೆಂಪು ಅವರು ಹೇಳಿದ್ದಾರೆ, ಕಲೆಗಿಂತ ದೊಡ್ಡದು ಇಲ್ಲ. ಆದ್ದರಿಂದ ಕಲೆಗೆ ಹೆಚ್ಚು ಪ್ರೋತ್ಸಾಹ ಕೊಡಬೇಕೆಂದು. ಕಲೆ ಯಾರಲ್ಲಿದೆ ಅಂತಹವರಿಗೆ ಪ್ರೋತ್ಸಾಹ ಕೊಡಬೇಕು. ಕನ್ನಡ ಸಾಹಿತ್ಯ ಪರಿಷತ್ತನ್ನು ಬಲಯುತಗೊಳಿಸಿ ಮುಂದುವರೆಸಬೇಕು. ಈಗ ಅಧ್ಯಾಪಕರುಗಳಿಗೆ ಚೆಕ್ ರೂಪದಲ್ಲಿ ಸಂಬಳ ಕೊಡುವುದನ್ನು ಜಾರಿಗೆ ತಂದಿರುವುದು ಉಪಾಧ್ಯಾಯರುಗಳ ಮನೆಗೆ ಕಾಮಧೇನು ಬಂದಂತಾಗಿದೆ. ಎಲ್ಲಾ ಕಡೆಗಳಿಗೂ ಎಲ್ಲಾ ವಿಭಾಗದ ಶಾಲಾ ಅಧ್ಯಾಪಕರಿಗೂ ಇದೇ ರೀತಿ ಜಾರಿಗೆ ತರಬೇಕು. ಇನ್ನೂ ಹೇಳಬೇಕಾದ ಅನೇಕ ವಿಚಾರಗಳಿವೆ. ಇನ್ನೊಂದು ಸಂದರ್ಭದಲ್ಲಿ ಹೇಳುತ್ತೇನೆ. ಇಷ್ಟು ಹೇಳಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಬಿ. ಎನ್. ರಾಮೇಗೌಡ (ಸಿರಾ).—ಈ ದಿವಸ ಮಾನ್ಯ ವಿದ್ಯಾ ಸಚಿವರು ಮಂಡಿಸಿರತಕ್ಕ ವಿದ್ಯಾ ಇಲಾಖೆಯಗೆ ಸಂಬಂಧಪಟ್ಟ ವೆಚ್ಚಗಳ ಬೇಡಿಕೆಗಳನ್ನು ನಾನು ಸಂಪೂರ್ಣವಾಗಿ ಸ್ವಾಗತ ಮಾಡುತ್ತಾ ಕೆಲವು ಮಾತುಗಳನ್ನು ಹೇಳಬಿಚ್ಛಿಸುತ್ತೇನೆ. ಈಗ ನಮ್ಮ ದೇಶದಲ್ಲಿ ವಿದ್ಯಾಭ್ಯಾಸದ ಅಭಿವೃದ್ಧಿಗೆ ಹೆಚ್ಚು ಹಣ ಖರ್ಚು ಮಾಡುತ್ತಿದ್ದಾರೆ. ಏತಕ್ಕೆಂದರೆ ಹೆಚ್ಚು ಜನ ವಿದ್ಯಾರ್ಥಿಗಳು ವಿದ್ಯಾವಂತರಾಗಬೇಕು ಎನ್ನುವ ಅಭಿಪ್ರಾಯವನ್ನು ಇಟ್ಟುಕೊಂಡು ನಮ್ಮ ಸರ್ಕಾರದವರು ಹೆಚ್ಚು ಹಣವನ್ನು ಖರ್ಚು ಮಾಡಿ ಪ್ರೋತ್ಸಾಹ ಕೊಡುತ್ತಿದ್ದಾರೆ. ಈ ವಿಚಾರವನ್ನು ನಿಜವಾಗಿ ಮೆಚ್ಚತಕ್ಕದ್ದಾ

ಗಿದೆ. ಸ್ವಾಗತ ಮಾಡುವಂತ್ತಾದ್ದಾಗಿದೆ. ವಿದ್ಯಾಭಾಸದ ಕೆಲವು ಕ್ರಮಗಳಲ್ಲಿ ನ್ಯೂನತೆಗಳಿವೆ. ಅವುಗಳನ್ನು ಸರಿಪಡಿಸಬೇಕೆನ್ನುವ ವಿಷಯವನ್ನು ಮಾನ್ಯ ವಿದ್ಯಾ ಸಚಿವರ ಗಮನಕ್ಕೆ ತರಲಿಚ್ಛಿಸುತ್ತೇನೆ. ಪ್ರಾಥಮಿಕ ಶಾಲೆಗಳಲ್ಲಿ ಮತ್ತು ಮಾಧ್ಯಮಿಕ ಶಾಲೆಗಳಲ್ಲಿ ನಡೆಯುತ್ತಿರುವ ವಿದ್ಯಾಭ್ಯಾಸ ಮತ್ತು ಅಲ್ಲಿನ ವಿದ್ಯಾಭಾಸದ ಮಟ್ಟ ಬಹುಮಟ್ಟಿಗೆ ಹೇಳಿಕೊಳ್ಳುವಂತಿಲ್ಲ. ಎಷ್ಟರಮಟ್ಟಿಗೆ ವಿದ್ಯಾಭ್ಯಾಸದ ಅಭಿವೃದ್ಧಿಯಾಗುತ್ತದೆಂದು ತಿಳಿದುಕೊಂಡಿದ್ದೆವೋ ಅಷ್ಟರಮಟ್ಟಿಗೆ ಈ ಎರಡು ಹಂತಗಳಲ್ಲಿ ಆಗುತ್ತಿಲ್ಲವೆನ್ನುವುದು ಆಶ್ಚರ್ಯದ ವಿಷಯವಾಗಿದೆ. ಮುಖ್ಯವಾಗಿ ಪ್ರಾಥಮಿಕ ಶಾಲಾ ಹಂತದಲ್ಲಿ ಮತ್ತು ಮಾಧ್ಯಮಿಕ ಶಾಲಾ ಹಂತದಲ್ಲಿ ಬಹುಮಟ್ಟಿಗೆ ವಿದ್ಯಾಭ್ಯಾಸದ ಮಟ್ಟ ಕೆಟ್ಟುಹೋಗಿದೆ. ಇದಕ್ಕೆ ಸರ್ಕಾರ ಹೊಣೆ ಎಂದು ಹೇಳುವುದಿಲ್ಲ. ಉಪನ್ಯಾಸ ಕ್ರಮದಲ್ಲಿ ಉಪಾಧ್ಯಾಯರುಗಳ ಜವಾಬ್ದಾರಿ ಹೆಚ್ಚು. ಅವರಲ್ಲಿರತಕ್ಕಂಥ ಒಂದು ಅಶ್ರದ್ಧೆ ವಿದ್ಯಾಬ್ಯಾಸದ ಮಟ್ಟವನ್ನು ಕೆಳಮಟ್ಟಕ್ಕೆ ಇಳಿಸಿದೆ. ಪ್ರಾಥಮಿಕ ಶಾಲೆಗಳಲ್ಲಿ ಹೇಳಿಕೊಡುವ ವಿದ್ಯಾಭ್ಯಾಸವು ಮುಂದಿನ ವಿದ್ಯಾಭ್ಯಾಸಕ್ಕೆ ತಳಹದಿಯಾಗುತ್ತದೆ. ಆದ್ದರಿಂದ ಅಲ್ಲಿ ನಾವು ವಿದ್ಯಾಭ್ಯಾಸದ ಕ್ರಮವನ್ನು ಬಹಳ ಅಚ್ಚುಕಟ್ಟಾಗಿ ಜವಾಬ್ದಾರಿಯುತವಾಗಿ ನಡೆಸದೆ ಹೋದರೆ ಖಂಡಿತವಾಗಿ ನಮ್ಮ ಮುಂದಿನ ಪೀಳಿಗೆ ವಿದ್ಯಾಭ್ಯಾಸದಲ್ಲಿ ಮುಂದುವರಿಯುವಂತಹ ಸ್ಥಿತಿಯಿರುವುದಿಲ್ಲವೆಂದು ವಿದ್ಯಾ ಸಚಿವರ ಗಮನಕ್ಕೆ ತರಬಯಸುತ್ತೇನೆ.

ಇನ್ನು ಶಾಲಾ ಕಟ್ಟಡಗಳ ಬಗ್ಗೆ ಹೇಳಬೇಕೆಂದರೆ, ಪ್ರಾಥಮಿಕ ಶಾಲಾ ಕಟ್ಟಡಗಳನ್ನು ಈಗಾಗಲೆ ಸರ್ಕಾರದವರು ತಾಲ್ಲೂಕ್ ಅಭಿವೃದ್ಧಿ ಸಂಸ್ಥೆಗೆ ಒಪ್ಪಿಸಿದ್ದಾರೆ. ಈಗಾಗಲೇ ಕೆಲವೊಂದು ಕಟ್ಟಡಗಳನ್ನು ಒಪ್ಪಿಸಿದ್ದಾರೆ. ಮತ್ತೆ ಕೆಲವನ್ನು ಒಪ್ಪಿಸುವ ಸ್ಥಿತಿಯಲ್ಲಿದ್ದಾರೆ. ತಾಲ್ಲೂಕ್ ಅಭಿವೃದ್ಧಿ ಸಂಸ್ಥೆಗಳಿಗೆ ಒಪ್ಪಿಸಿರುವ ಶಾಲಾ ಕಟ್ಟಡಗಳು ಹತ್ತಾರು ವರ್ಷಗಳಾದರೂ ರಿಪೇರಿ ಇಲ್ಲದೆ, ಬೆಲೆ ಬಾಳುವ ಕಟ್ಟಡಗಳು ನೆಲಸಮವಾಗುತ್ತಿವೆ. ಈಗ ಶಾಲಾ ಕಟ್ಟಡಗಳು ಬಿದ್ದುಹೋಗಿರುವ ಕಡೆ ಶಾಲೆಗಳನ್ನು ಬಯಲಿನಲ್ಲಿ ನಡೆಸುವ ಪರಿಸ್ಥಿತಿ ಬಂದಿದೆ. ಇನ್ನು ಮುಂದೆ ತಾಲ್ಲೂಕ್ ಅಭಿವೃದ್ಧಿ ಮಂಡಲಿಯವರು ಶಾಲಾ ಕಟ್ಟಡಗಳ ರಿಪೇರಿಯನ್ನು ಮಾಡಿಸಿದರೆ ಶಾಲಾ ಕಟ್ಟಡಗಳು ಉಳಿಯುತ್ತವೆ, ಇಲ್ಲವಿದ್ದರೆ ಶಾಲಾ ಕಟ್ಟಡಗಳು ನೆಲಸಮವಾಗಿ, ಬಯಲಿನಲ್ಲಿ ಪಾಠ ಹೇಳಿಕೊಡುವ ಪರಿಸ್ಥಿತಿ ಬರುತ್ತದೆ. ಮಾಧ್ಯಮಿಕ ಶಾಲಾ ಕಟ್ಟಡಗಳನ್ನು ತಾಲ್ಲೂಕ್ ಅಭಿವೃದ್ಧಿ ಸಂಸ್ಥೆಗಳಿಗೆ ಇನ್ನೂ ಸರ್ಕಾರದವರು ವಹಿಸಿಕೊಟ್ಟಿಲ್ಲ. ಇನ್ನೂ ಸರ್ಕಾರದ ಹತೋಟಿಯಲ್ಲಿವೆ. ಇಂತಹ ಶಾಲೆಗಳು ಸಹ ಹತ್ತಾರು ವರ್ಷಗಳಿಂದ ರಿಪೇರಿ ಕಾಣದೆ ನೆಲಸಮವಾಗುವ ಸ್ಥಿತಿಗೆ ಬೇಕಾದಷ್ಟು ಬಂದಿವೆ. ಜಾಗ್ರತೆ ರಿಪೇರಿ ಮಾಡಿಸದಿದ್ದರೆ ಅವುಗಳು ನೆಲಸಮವಾಗಿ ಬೇರೆ ಕಟ್ಟಡಗಳನ್ನೇ ಕಟ್ಟಬೇಕಾದ ಪರಿಸ್ಥಿತಿ ಬರಬಹುದು. ಶಾಲಾ ಕಟ್ಟಡಗಳು ಇಲ್ಲದಿದ್ದರೆ ವಿದ್ಯಾಭ್ಯಾಸಕ್ಕೆ ಇಲ್ಲದ ತೊಂದರೆ ಬರುತ್ತದೆ. ಪಟ್ಟಣಗಳಲ್ಲಿ ಪ್ರಾಥಮಿಕ ಮತ್ತು ಮಾಧ್ಯಮಿಕ ಶಾಲೆಗಳಲ್ಲಿರುವ ಅನುಕೂಲಗಳು ಗ್ರಾಮಾಂತರ ಶಾಲೆಗಳಲ್ಲಿ ಇಲ್ಲ. ಕೆಲವು ಗ್ರಾಮಗಳಲ್ಲಿ ಉಪಾಧ್ಯಾಯರುಗಳು 15 ದಿವಸ ಅಥವಾ 30 ದಿವಸಗಳಿಗೊಂದು ಸಾರಿ ಶಾಲೆಗಳಿಗೆ ಬಂದು ಹಾಜರಾತಿಯನ್ನು ತೆಗೆದುಕೊಂಡು ತಮ್ಮ ತಮ್ಮ ಗ್ರಾಮಗಳಿಗೆ ಹೊರಟು ಹೋಗುತ್ತಾರೆ. ಇದರಿಂದ ವಿದ್ಯಾರ್ಥಿಗಳು ವಿದ್ಯಾರ್ಜನೆ ಇಲ್ಲದೆ ಕೆಟ್ಟುಹೋಗುತ್ತಿದ್ದಾರೆ. ಉಪಾಧ್ಯಾಯರುಗಳಿದ್ದು ಸಹ ವಿದ್ಯಾರ್ಥಿಗಳಿಗೆ ವಿದ್ಯಾ ಸೌಲಭ್ಯ ಇಲ್ಲದಂತಾಗಿದೆ. ಈ ಹಳ್ಳಿಗಳಲ್ಲಿರುವ ಉಪಾಧ್ಯಾಯರುಗಳನ್ನು ಆಯಾ ತಾಲ್ಲೂಕಿನ ಇಲಾಖಾ ರೇಂಜ್ ಇನ್ಸ್‌ಪೆಕ್ಟರುಗಳು ತನಿಖೆ ಮಾಡುವುದಕ್ಕೂ ತೊಂದರೆಯಾಗುತ್ತಿದೆ. ಹೆಚ್ಚಿನ ತನಿಖೆ ಇವರ ಮೇಲೆ ಇರಬೇಕು. ಉಪಾಧ್ಯಾಯರುಗಳ ಜವಾಬ್ದಾರಿ ಬಹಳವಿರುತ್ತದೆ. ಸರಿಯಾದ ರೀತಿಯಲ್ಲಿ ಇವರಿಂದ ಕೆಲಸ ಮಾಡಿಸಿದರೆ ಮಾತ್ರ ಇಷ್ಟೊಂದು ಹಣ ಖರ್ಚುಮಾಡುವುದು ಸಾರ್ಥಕವಾಗುತ್ತದೆ.

ಇನ್ನು ಕಾಲೇಜು ವಿದ್ಯಾಭ್ಯಾಸದ ಬಗ್ಗೆ ಹೇಳುವುದಾದರೆ, ತಾಂತ್ರಿಕ ಕಾಲೇಜುಗಳಲ್ಲಿ ಗ್ರಾಮಾಂತರ ಪ್ರದೇಶಗಳಿಂದ ಬರುವ ವಿದ್ಯಾರ್ಥಿಗಳಿಗೆ ಸರಿಯಾಗಿ ಸೀಟ್‌ಗಳನ್ನು ಕೊಡುತ್ತಿಲ್ಲ. ಇದರಿಂದ ಅವರಿಗೆ ತೊಂದರೆಯಾಗುತ್ತಿದೆ. ಪಟ್ಟಣಗಳಲ್ಲಿರುವ ಅನುಕೂಲಗಳು ಗ್ರಾಮಾಂತರಗಳಲ್ಲಿ ಇಲ್ಲದಿರುವುದರಿಂದ ಹೆಚ್ಚಿನ ಅಂಕಗಳನ್ನು ಪಡೆದು ಪಾಸ್ ಮಾಡುವುದು ಕಷ್ಟವಾಗುತ್ತದೆ. ಆದ್ದರಿಂದ ನಾನು ಒಂದು ಸಲಹೆ ಮಾಡುತ್ತೇನೆ, ಗ್ರಾಮಾಂತರ ಪ್ರದೇಶಗಳಿಂದ ಬರತಕ್ಕ ವಿದ್ಯಾರ್ಥಿಗಳಿಗೆ ಪ್ರತ್ಯೇಕವಾಗಿ ಅವರ ಅರ್ಹತೆ ಮೇಲೆ ಕೆಲವು ಸೀಟ್‌ಗಳನ್ನು ಹಂಚಬೇಕು, ಪಟ್ಟಣಗಳಲ್ಲಿರುವ ವಿದ್ಯಾರ್ಥಿಗಳಿಗೆ ಪ್ರತ್ಯೇಕವಾಗಿ ಅವರ ಅರ್ಹತೆಯ ಮೇಲೆ ಕೆಲವು ಸೀಟ್‌ಗಳನ್ನು ಹಂಚಬೇಕು. ಇದರಿಂದ ಎಲ್ಲರಿಗೂ ನ್ಯಾಯ ದೊರಕಿದಂತ್ತಾಗುತ್ತದೆ. ಅದರಲ್ಲೂ ಹೆಚ್ಚಾಗಿ ಗ್ರಾಮಾಂತರ ಪ್ರದೇಶಗಳಿಂದ ಬರುವ ವಿದ್ಯಾರ್ಥಿಗಳಿಗೆ ತಾಂತ್ರಿಕ ವಿದ್ಯಾ ಸೌಲಭ್ಯವನ್ನು ಕೊಡಿಸುವುದಕ್ಕೆ ತಕ್ಕ ಏರ್ಪಾಡು ಮಾಡಬೇಕೆಂದು ವಿದ್ಯಾ ಸಚಿವರಲ್ಲಿ ಮನವಿ ಮಾಡಿಕೊಂಡು, ಈ ಸಂದರ್ಭದಲ್ಲಿ ಎರಡು ಮಾತುಗಳನ್ನು ಹೇಳಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಕೆ. ರತ್ನಕುಮಾರ ಶೆಟ್ಟಿ (ಮೂಡಬಿದ್ರಿ).—ಮಾನ್ಯ ಅಧ್ಯಕ್ಷರೇ, ನಮ್ಮ ಸರ್ಕಾರದವರು ದೇಶದ ಹಿತದೃಷ್ಟಿಯಿಂದ ಹಿಂದಿ ಪ್ರಚಾರವಾಗಬೇಕೆಂಬ ಒತ್ತಾಯವನ್ನು ಜನರ ಮೇಲೆ ಹೊರಿಸಿದರು

(ಶ್ರೀ ಕೆ. ರತ್ನಕುಮಾರ ಶೆಟ್ಟಿ)

ಇದು ಸರ್ವಸಮ್ಮತವಾದುದು, ದೇಶದ ಹಿತದೃಷ್ಟಿಯಿಂದ ಹಿಂದೀ ಪ್ರಚಾರಕ್ಕೆ ಬರಬೇಕು ಅದು ದೇಶ ಭಾಷೆಯಾಗಬೇಕು ಎನ್ನುವಂತಹ ವಿಚಾರ. ಆದರೆ ಹಿಂದಿಯನ್ನು ಪ್ರತಿ ಶಾಲೆಗಳಲ್ಲೂ ಅಭ್ಯಾಸಮಾಡುವಂತಹ ಕಾನೂನನ್ನು ತರುತ್ತಾರೆ ಎಂಬ ವಿಚಾರವನ್ನು ವಿರೋಧಿಸಿ ಕಳೆದ ಎರಡು ವರ್ಷಗಳ ಹಿಂದೆ ಮದ್ರಾಸ್ ಪ್ರಾಂತ್ಯದಲ್ಲಿ ವಿದ್ಯಾರ್ಥಿಗಳು ಬಹಳವಾಗಿ ಚಳುವಳಿಯನ್ನು ಹೂಡಿದರು, ಅದಕ್ಕೆ ಕಾರಣ ರಾಜಾಜಿ ಅವರು ಎಂದು ಹೇಳಿ ಅವರ ಮೇಲೆ ಅಪವಾದ ಬಿತ್ತು. ನನಗೆ ತಿಳಿದಮಟ್ಟಿಗೆ ಅವರು ಹಿಂದಿಯನ್ನು ವಿರೋಧ ಮಾಡಿದ್ದಿಲ್ಲ, ಇಂಗ್ಲೀಷನ್ನು ತೆಗೆಸಬಾರದು ಎಂಬ ಮಾತನ್ನು ಹೇಳಿದರು ಎಂಬುದಾಗಿ ನನಗೆ ತಿಳಿದು ಬಂದಿದೆ. ಅವರು ಏನು ಹೇಳುತ್ತಾರೆ ಎನ್ನುವುದು ಬೇಕಾಗಿಲ್ಲ. ಆ ರೀತಿ ಆಗಬಹುದು ಆಗದೇ ಇರಬಹುದು. "ಹೇಳುವುದು ಶಾಸ್ತ್ರ ಇಕ್ಕುವುದು ಗಾಳ" ಎಂಬಂತೆ ಕಾಂಗ್ರೆಸ್‌ನವರು ಹಿಂದೀ ಪ್ರಚಾರಕ್ಕೆ ಬರಬೇಕೆಂದು ಹೇಳುವುದು ಸರಿ, ಆದರೆ ಈ ಕಾಂಗ್ರೆಸ್‌ನವರ "ಕಾಂಗ್ರೆಸ್" ಎಂಬ ಮೂಲ ಶಬ್ದವೇ ಇಂಗ್ಲೀಷ್ ಭಾಷೆಯಾಗಿದೆ, ಹಾಗಿರುವಾಗ ಇನ್ನುಳಿದವರು ಹಿಂದೀ ಕಲಿಯಬೇಕೆಂಬ ಮಾತನ್ನು ಹೇಳುವುದು ಸರಿಯಲ್ಲ. ಇಲ್ಲಿ ಯಾವ ಕಾಂಗ್ರೆಸ್‌ನವರು ಇದ್ದಾರೆ ಅವರ ಮಕ್ಕಳನ್ನು, ಮೊಮ್ಮಕ್ಕಳನ್ನು, ಸಂಬಂಧಿಕರನ್ನು ಪರದೇಶಗಳಿಗೆ ಕಳುಹಿಸಿಕೊಟ್ಟು, ಅವರಿಗೆ ಇಂಗ್ಲೀಷ್ ವಿದ್ಯಾಭ್ಯಾಸ ಮಾಡಿಸಿ ಉಳಿದವರ ಮಕ್ಕಳು ಹಿಂದೀ ಕಲಿಯಬೇಕೆಂದು ಹೇಳುವ ಮಾತನ್ನು ನಾನು ಒಪ್ಪುವುದಿಲ್ಲ. ಕಾಂಗ್ರೆಸ್ಸಿಗರು ಪ್ರಥಮತಃ ತಮ್ಮ ಮಕ್ಕಳಿಗೆ ಕೊಡಿಸುತ್ತಾ ಇರತಕ್ಕ ಇಂಗ್ಲೀಷ್ ಭಾಷೆಯ ಅಭ್ಯಾಸವನ್ನು ತೆಗೆಸಿ ಅದಕ್ಕೆ ಬದಲಾಗಿ ಹಿಂದೀ ಭಾಷೆಯನ್ನು ಕೊಡಿಸಬೇಕು ಎಂದು ಹೇಳಿ ತಮ್ಮ ಮೂಲಕ ಹೇಳುತ್ತೇನೆ. ಅದು ಮಾತ್ರವಲ್ಲದೆ ಹಿಂದಿಯನ್ನು ಜಾರಿಗೆ ತರಬೇಕು, ಹಿಂದೀ ಪ್ರಚಾರವಾಗಬೇಕೆಂಬ ಆಶೆ ನಮ್ಮಲ್ಲಿ ಇದೆ. ಆದರೆ ಶಾಲೆಗಳಲ್ಲಿ ಸರಿಯಾದ ರೀತಿಯಲ್ಲಿ ಕಡ್ಡಾಯವಾಗಿ ಹಿಂದೀ ಪ್ರಚಾರವಾಗುವಂತೆ ವ್ಯವಸ್ಥೆ ಮಾಡಿಲ್ಲ, ಆದ್ದರಿಂದ ತಮ್ಮ ಮೂಲಕ ಹೇಳಿಕೊಳ್ಳುವುದೇನೆಂದರೆ ನಮ್ಮ ರಾಜ್ಯದ ಭಾಷೆಯಾಗಿ ಕನ್ನಡ ಇದೆ. ಅದರ ಜೊತೆಯಲ್ಲಿ ನಮ್ಮ ರಾಷ್ಟ್ರದ ಹಿತದೃಷ್ಟಿಯಿಂದ ಹಿಂದೀ ಭಾಷೆಯನ್ನು 3ನೇ ತರಗತಿಯಿಂದ ಅಭ್ಯಾಸಮಾಡಿಸುವಂತೆ ಶಾಲೆಗಳಿಗೆ ಹುಕುಂ ಕೊಡಬೇಕು. ಮತ್ತು ಎಸ್.ಎಸ್.ಎಲ್.ಸಿ. ಕ್ಲಾಸ್‌ನಲ್ಲಿ ಕಡ್ಡಾಯವಾಗಿ ಇಡಬೇಕೆಂದು ತಮ್ಮ ಮೂಲಕ ಹೇಳಿಕೊಳ್ಳುತ್ತೇನೆ. ಅದು ಮಾತ್ರವಲ್ಲದೆ ನಮ್ಮ ಇಂಟರ್‌ನ್ಯಾಷನಲ್ ಭಾಷೆಯಾಗಿ ಇರತಕ್ಕ ಇಂಗ್ಲೀಷನ್ನು 6ನೇ ತರಗತಿಯಿಂದ ಕಡ್ಡಾಯವಾಗಿ ಇಡಬೇಕು. ಈ ರೀತಿಯಾಗಿ 3 ಭಾಷೆಯ ತತ್ವವನ್ನು ಇಟ್ಟುಕೊಳ್ಳಬೇಕೆಂದು ತಮ್ಮ ಮೂಲಕ ಹೇಳಿಕೊಳ್ಳುತ್ತಾ ಇದ್ದೇನೆ ಮಾತ್ರವಲ್ಲದೇ ವಿದ್ಯಾರ್ಥಿಗಳನ್ನು ಪರದೇಶಗಳಿಗೆ ಕಳುಹಿಸುವಾಗ ಅವರಿಗೆ ಸರಿಯಾಗಿ ಪಾಸ್ ಪೋರ್ಟ್ ಸಿಕ್ಕುವುದಿಲ್ಲ. ನಮ್ಮ ದೇಶದ ಈಗಿನ ಆರ್ಥಿಕ ಸ್ಥಿತಿಯಲ್ಲಿ ಪರದೇಶಗಳಿಗೆ ಹೋಗಿ ತಮ್ಮ ಹಣವನ್ನು ವ್ಯಯಮಾಡಿಕೊಂಡು ಬರುತ್ತಾರೆ ಎಂಬ ನೀತಿಯನ್ನು ಅನುಸರಿಸಿ ಸರಿಯಾಗಿ ಪಾಸ್ ಪೋರ್ಟ್‌ನ್ನು ಕೊಡುತ್ತಾ ಇಲ್ಲ, ಬಾವಿಯಲ್ಲಿ ಇದ್ದ ಕಪ್ಪೆಯಂತೆ ಆಗಬಾರದು, ವಿದ್ಯಾರ್ಥಿಗಳಿಗೆ ಅವರವರ ಅನುಕೂಲತೆಗೆ ತಕ್ಕಂತೆ ಹೊರದೇಶಗಳಿಗೆ ಹೋಗಿ ಅವರ ವಿದ್ಯಾಭ್ಯಾಸವನ್ನು ಮುಂದುವರಿಸಿಕೊಂಡು ಬರುವುದಕ್ಕೆ ಯಾವ ಅಡ್ಡಿ ಆತಂಕವನ್ನೂ ಒಡ್ಡಬಾರದು ಎಂದು ಹೇಳಿ ಕೇಳಿಕೊಳ್ಳುತ್ತೇನೆ.

ಇನ್ನು ಯೂನಿವರ್ಸಿಟಿಗಳ ವಿಷಯ. ನನ್ನ ಅನುಭವದಲ್ಲಿ ಹೇಳುವುದಾದರೆ ಅವುಗಳು ವಿದ್ಯಾ ಸಂಸ್ಥೆಗಳೇ ಅಲ್ಲ. ವ್ಯಾಪಾರದ ಸಂಸ್ಥೆಗಳಾಗಿವೆ. ನಮ್ಮ ಮೈಸೂರು ರಾಜ್ಯದಲ್ಲಿ ಮೈಸೂರು ಯೂನಿವರ್ಸಿಟಿ ಇದೆ, ಕರ್ನಾಟಕ ಯೂನಿವರ್ಸಿಟಿ ಇದೆ, ಬೆಂಗಳೂರು ಯೂನಿವರ್ಸಿಟಿ ಇದೆ, ಇದು ಮಾತ್ರವಲ್ಲದೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಇನ್ನೊಂದು ಯೂನಿವರ್ಸಿಟಿ ಮಾಡುವ ಪ್ರಯತ್ನದಲ್ಲಿ ಇದ್ದಾರೆ. ಒಂದು ರಾಜ್ಯದಲ್ಲಿ 4-4 ಯೂನಿವರ್ಸಿಟಿಗಳು ಎಂದರೆ ಅವು ವ್ಯಾಪಾರದ ಸಂಸ್ಥೆಯೇ ಹೊರತು ವಿದ್ಯಾರ್ಜನೆಗೆ ಇರತಕ್ಕ ವಿದ್ಯಾ ಸಂಸ್ಥೆಗಳಲ್ಲ. ತಮ್ಮ ಮೂಲಕ ಹೇಳಿಕೊಳ್ಳುವುದೇನೆಂದರೆ ಭಾರತ ದೇಶಕ್ಕೆಲ್ಲಾ ಆಲ್ ಇಂಡಿಯಾ ಯೂನಿವರ್ಸಿಟಿ ಒಂದು ಆಗಿರಬೇಕು ಮಾತ್ರವಲ್ಲದೆ ಒಂದೊಂದು ರಾಜ್ಯ ಒಂದೊಂದು ಸಬ್‌ಡಿವಿಜನ್ ಆಗಿ ಅಲ್ಲಿ ಸಬ್ ಯೂನಿವರ್ಸಿಟಿಗಳಿರಬೇಕೆಂದು ಹೇಳಿ ತಮಗೆ ಧನ್ಯವಾದಗಳನ್ನು ಅರ್ಪಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಕೆ. ಎಚ್. ಶ್ರೀನಿವಾಸ (ಸಾಗರ).—ಸನ್ಮಾನ್ಯ ಅಧ್ಯಕ್ಷರೇ, ವಿದ್ಯಾಭ್ಯಾಸ ಇಲಾಖೆಯ ಬೇಡಿಕೆಗಳನ್ನು ಸಮರ್ಥಿಸುತ್ತ ಕೆಲವು ವಿಚಾರಗಳನ್ನು ಹಾಗೂ ಕೆಲವು ಪ್ರಾರ್ಥನೆಗಳನ್ನು ಸಚಿವರ ಮುಂದೆ ಇಡಲಿಕ್ಕೆ ಬಯಸುತ್ತೇನೆ. ಸ್ವಾತಂತ್ರ್ಯ ನಂತರ ನಡೆದಿರತಕ್ಕ ವಿದ್ಯಾ ಸೌಲಭ್ಯಗಳು ಹಾಗೂ ಸಂಸ್ಥೆಗಳ ಹೆಚ್ಚಳ ಏನಿದೆ 'ವಿದ್ಯಾಭ್ಯಾಸದ ವಿಕಾಸ ಏನಿದೆ ಆದರಿಂದ ಲಕ್ಷಾಂತರ ಮಕ್ಕಳಿಗೆ ಅನುಕೂಲವಾಗಿದೆ ಎಂಬ ಮಾತಿನ ಬಗ್ಗೆ ಯಾರೂ ಪ್ರಾಯಶಃ ವಿವಾದವನ್ನು ಎತ್ತಲಿಕ್ಕೆ ಸಾಧ್ಯವಿಲ್ಲ. ಆದರೆ ಇದೇ ಸಂದರ್ಭದಲ್ಲಿ ನಮ್ಮ ವಿದ್ಯಾಭ್ಯಾಸದ ಗುರಿಯನ್ನು ಇನ್ನೂ ಸ್ಪಷ್ಟಪಡಿಸಬೇಕು ಮತ್ತು

ನಾನಾ ವಿದ್ಯಾಸೌಲಭ್ಯಗಳ ಸಾರ್ಥಕತೆಯನ್ನು ಹೆಚ್ಚು ಮಾಡಬೇಕೆಂಬ ಬಗ್ಗೆ ಯಾವ ಯಾವ ಪ್ರಯೋಗಗಳು ನಡೆದಿವೆ ಅದರಿಂದ ಯಾವುದೇ ವಿಧವಾದ ಒಳ್ಳೆಯದಾಗಿರುವುದು ಕಂಡುಬರುವುದಿಲ್ಲ. ಎಲ್.ಎಸ್. ಪರೀಕ್ಷೆಯನ್ನು ತೆಗೆದು ಹಾಕಿದ್ದರಲ್ಲಿ ಇಂಟರ್‌ಮೀಡಿಯಟ್‌ನ್ನು ತೆಗೆದು ಪಿ.ಯು.ಸಿ. ಅನ್ನು ಮಾಡಿದ್ದರಲ್ಲ 7–8ನೇ ಸ್ಟ್ಯಾಂಡರ್ಡ್‌ನ್ನು ಒಂದುಗೂಡಿಸಿ ಆ ಮಕ್ಕಳು ಒಟ್ಟಿಗೆ ಹೈಸ್ಕೂಲಿಗೆ ಬರುವ ಒಂದು ಕಾರ್ಯಕ್ರಮವನ್ನು ಮಾಡಿದ್ದರಲ್ಲಿ ಅಥವಾ ಚರಿತ್ರೆ, ಭೂಗೋಳಕ್ಕೆ ಬದಲಾಗಿ ಸೋಷಿಯಲ್ ಸ್ಟಡೀಸ್ ಅಂತ ಅಮೆರಿಕದ ಮಾದರಿಯಲ್ಲಿ ತಂದಿರುವುದರಲ್ಲಿ, ಇಂತಹ ಅನೇಕ ಬದಲಾವಣೆಗಳು ಮತ್ತು ಸರ್ಕಸ್‌ಗಳು ಏನು ನಡೆದಿವೆ ಅದರಿಂದ ವಿದ್ಯಾಭ್ಯಾಸದ ಒಂದು ಗುಣವನ್ನಾಗಲಿ ಅಥವಾ ಸಾರ್ಥಕತೆಯನ್ನಾಗಲಿ ಹೆಚ್ಚು ಮಾಡುವುದಕ್ಕೆ ಸಾಧ್ಯವಾಗಿಲ್ಲ. ಆದ್ದರಿಂದ ಪ್ರಾಯಶಃ ಇವತ್ತು ಈ ದೇಶದಲ್ಲ ನೀಡುತ್ತಿರುವ ಈ ವಿದ್ಯಾಭ್ಯಾಸದಿಂದ ಸಾಕಷ್ಟು ಸಾರ್ಥಕತೆಯಾಗಿಲ್ಲ, ಇದರ ಗುರಿಯನ್ನು ಇನ್ನೂ ಸ್ಪಷ್ಟಪಡಿಸಬೇಕು ಮತ್ತು ಹೆಚ್ಚಿನ ಸಾರ್ಥಕತೆಯನ್ನು ನೀಡಬೇಕೆಂಬ ದೃಷ್ಟಿಯಿಂದ ವಿದ್ಯಾಭ್ಯಾಸದಲ್ಲಿ ಮೂಲಭೂತವಾದ ಬದಲಾವಣೆಯನ್ನು ನಿರೀಕ್ಷಣೆ ಮಾಡುತ್ತಾ ಇದ್ದೇವೆ. ಇದಕ್ಕೆ ಕೊಠಾರಿ ಕಮಿಷನ್ ನೇಮಕಮಾಡಿ, ಆ ಸಮಿತಿಯ ರಿಪೋರ್ಟ್ ಕೂಡ ಇದೆ. ನಮ್ಮ ದೇಶದಲ್ಲಿ ಒಂದು ಅಭ್ಯಾಸವೇನೆಂದರೆ ಯಾವುದೇ ರಿಪೋರ್ಟ್ ಬಂದರೂ, ಅಲ್ಲೊಂದು ಸ್ವಲ್ಪ ಇಲ್ಲೊಂದು ಸ್ವಲ್ಪ ಅನುಸರಿಸುವುದು ಬಾಕಿಯದನ್ನು ಕೈಬಿಡುವುದು. ಬಹುಶಃ ಯಾವುದೇ ಕಮಿಷನ್‌ನ್ನು ಸಮಗ್ರವಾದಂತಹ ಕೆಲವು ದೃಢವಾದ ಮೌಲ್ಯಗಳನ್ನು ಇಟ್ಟುಕೊಂಡರೆ ಒಂದು ಸಿಸ್ಟಮ್ ಅನ್ನು ಪ್ರತಿಪಾದಿಸುತ್ತಾರೆ. ಅಂಥಾದ್ದನ್ನು ಪೂರ್ತಿ ಕಾರ್ಯಗತ ಮಾಡಿದರೆ, ನಮಗೆ ಖುಷಿ ಬಂದ ರೀತಿಯಲ್ಲಿ ಸುಲಭವಾದಂತಹ ಕೆಲವು ಅಂಶಗಳನ್ನು ಜಾರಿಗೆ ತರುವುದರಿಂದ, ಅಂತಹ ಒಂದು ಯಥಾನುಶಕ್ತಿ ಸಹಗಮದಿಂದ ಪ್ರಾಯಶಃ ನಿರೀಕ್ಷಿಸಿದಷ್ಟು ಪ್ರಯೋಜನವಾಗುವುದಿಲ್ಲ. ಒಂದು ಧೃಢವಾದ ಚಿಂತನೆಯ ಆಧಾರದ ಮೇಲೆ ವ್ಯವಸ್ಥಿತವಾಗಿ ಬದಲಾವಣೆಗಳನ್ನು ಮಾಡದೇ ಖುಷಿಬಂದ ರೀತಿಯಲ್ಲಿ ಬದಲಾವಣೆಗಳನ್ನು ಮಾಡಿ ವಿದ್ಯಾರ್ಥಿಗಳನ್ನು ಮಕ್ಕಳನ್ನು ಗಿನಿಪಿಗ್ಸ್‌ನಂತೆ ಮಾಡತಕ್ಕ ಪದ್ಧತಿ ನಿಲ್ಲಬೇಕು. ಏನಾದರೂ ಬದಲಾವಣೆ ಮಾಡಬೇಕಾಗಿದ್ದರೆ ಜ್ಞಾಪಕ ಶಕ್ತಿ, ಬುದ್ಧಿವಂತಿಕೆ ಮತ್ತು ಪರಾವಲಂಬನೆಯನ್ನು ಈಗಿನ ವಿದ್ಯಾಭ್ಯಾಸ ಕ್ರಮ ಏನಿದೆ ಅದರ ಬದಲಾಗಿ ಮಕ್ಕಳ ಕುತೂಹಲ ಕಲ್ಪನಾ ಶಕ್ತಿ, ಕರ್ತೃ ಶಕ್ತಿಯನ್ನು ಬೆಳೆಸತಕ್ಕ ದಿಶೆಯಲ್ಲಿ ಮೂಲಭೂತವಾದ ಬದಲಾವಣೆ ಇದ್ದರೆ ಮಾತ್ರ ಅದನ್ನು ತರಬೇಕೆಂದು ಪ್ರಾರ್ಥನೆಮಾಡಿಕೊಳ್ಳಲು ಬಯಸುತ್ತೇನೆ. ಈ ದೇಶದ ವಿದ್ಯಾಪ್ರಗತಿಯನ್ನು ಪರಿಶೀಲಿಸಿ ನೋಡಿದರೆ, ನಮ್ಮ ಆರ್ಥಿಕ ಪರಿಸ್ಥಿತಿಯನ್ನು ಪರಿಶೀಲಿಸಿ ನೋಡಿದರೆ ಗಣನೀಯವಾದಂತಹ ಸೇವೆ ಖಾಸಗೀ ಸಂಸ್ಥೆಗಳಿಂದಲೂ ಕೂಡ ಸಲ್ಲುತ್ತಾ ಇದೆ ಎಂಬುದನ್ನು ನಾವು ಗಮನಿಸಬಹುದು. ಖಾಸಗಿ ವಿದ್ಯಾ ಸಂಸ್ಥೆಗಳಲ್ಲಿ ನಡೆಯುವ ಆರ್ಟ್ಸ್ ಮತ್ತು ಸೈನ್ಸ್ ಕಾಲೇಜುಗಳಿಗೆ ಸಂಬಂಧಪಟ್ಟ ಗ್ರಾಂಟ್-ಇನ್-ಏಡ್ ಕೋಡಿನಲ್ಲಿ ಕೆಲವು ತಿದ್ದುಪಡಿಗಳು ಆಗಬೇಕಾಗಿವೆ. ಎಕ್ವಿಪ್‌ಮೆಂಟ್ ಗ್ರಾಂಟ್, ಯೂನಿವರ್ಸಿಟಿ ರಿಕ್ವೈರ್‌ಮೆಂಟಿಗೂ ಸರ್ಕಾರದವರು ಗ್ರಾಂಟ್-ಇನ್ ಏಡ್ ಕೋಡಿನಲ್ಲಿ ಹಾಕಿರುವ ಸೀಲಿಂಗ್ ಲಿಮಿಟ್‌ಗೂ ಅರ್ಥಾರ್ಥ ಸಂಬಂಧವಿಲ್ಲ. ಯೂನಿವರ್ಸಿಟಿ ರಿಕ್ವೈರ್‌ಮೆಂಟಿಗನುಸಾರವಾಗಿ ಸೀಲಿಂಗ್ ಲಿಮಿಟ್‌ನ್ನು ತರಬೇಕೆಂದು ಸರ್ಕಾರದವರಲ್ಲಿ ಹೇಳುತ್ತೇನೆ. ಅಲ್ಲದೆ ಈ ಎಕ್ವಿಪ್‌ಮೆಂಟ್ ಗ್ರಾಂಟ್ ಸೀಲಿಂಗ್‌ನ್ನು ಇಯರ್ಲಿ ಮಾಡಿದ್ದಾರೆ. ಇದಕ್ಕೆ ಬದಲಾಗಿ ನಾಲ್ಕುವರ್ಷಕ್ಕೆ ಈ ಸೀಲಿಂಗ್ ನಿಗದಿ ಮಾಡಿದರೆ ಅನೇಕ ಸಂಸ್ಥೆಗಳಿಗೆ ಪ್ರಯೋಜನ ಪಡೆದುಕೊಳ್ಳಲಿಕ್ಕೆ ಸಾಧ್ಯವಿದೆ. ಈ ವರ್ಷ ಕೊಟ್ಟರೆ ಮುಂದಿನ ವರ್ಷ ಸಿಕ್ಕುವುದಿಲ್ಲ. ಈ ವರ್ಷದ್ದನ್ನು ತೋರಿಸದೇ ಹಾಗೆಯೇ ಮುಚ್ಚಿಟ್ಟು ಮುಂದಿನ ವರ್ಷ ಕೇಳಬಹುದು. ಈ ಬಗ್ಗೆ ಒಂದು ತಿದ್ದುಪಡಿಯನ್ನು ತರುತ್ತೇವೆ ಎಂದು ಹಿಂದಿನ ವಿದ್ಯಾಸಚಿವರು ಭರವಸೆ ಕೊಟ್ಟಿದ್ದರು. ಅದನ್ನು ಈಗಲಾದರೂ ಕಾರ್ಯಗತ ಮಾಡಬೇಕೆಂದು ಪ್ರಾರ್ಥಿಸಿಕೊಳ್ಳುತ್ತೇನೆ. ಇನ್ನು ಕೆಲವು ಹೊಸ ವಿದ್ಯಾಸಂಸ್ಥೆಗಳು ಸ್ಥಾಪನೆಯಾಗಿದೆ. ಅನುಭವಸ್ಥರಾದ ಉಪಾಧ್ಯಾಯರು ಬೇಕಾಗುತ್ತಾರೆ, ಅವರನ್ನು ಬೇರೆ ಯಾವುದಾದರೂ ಸಂಸ್ಥೆಯಿಂದ ಪಡೆದುಕೊಳ್ಳಬೇಕಾಗುತ್ತದೆ, ಆ ಸಂಸ್ಥೆಯಲ್ಲಿ ಅವರಿಗೆ ಸಿಕ್ಕುವಷ್ಟು ಸಂಬಳವನ್ನಾದರೂ ಕೊಡಬೇಕಾಗುತ್ತದೆ. ಕೊಡದಿದ್ದರೆ ಅವರು ಬರುವುದಕ್ಕೆ ಇಷ್ಟಪಡುವುದಿಲ್ಲ. ಆದರೆ ಗ್ರಾಂಟ್-ಇನ್-ಏಡ್ ಕೋಡ್ ಪ್ರಕಾರ ಬೇಸಿಕ್ ಸ್ಯಾಲರಿಯನ್ನು ಮಾತ್ರ ಗಮನಕ್ಕೆ ತೆಗೆದುಕೊಳ್ಳುತ್ತಾರೆ. ಇದು ಸಾಲುವುದಿಲ್ಲ, ಆದ್ದರಿಂದ ಸಂಬಂಧಪಟ್ಟ ವಿದ್ಯಾಸಂಸ್ಥೆಗಳವರು ತಮ್ಮ ಅಹವಾಲನ್ನು ಹೇಳಿಕೊಳ್ಳುವುದಕ್ಕೆ ಅವಕಾಶ ಕೊಟ್ಟು ಅದರಲ್ಲಿ ಸೂಕ್ತ ಬದಲಾವಣೆಗಳನ್ನು ತರಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ತೀವ್ರವಾಗಿ ಟೀಕಿಸಲ್ಪಟ್ಟಿರುವ ವಿಷಯ ಎಂದರೆ ಕ್ಯಾಪಿಟೇಷನ್ ವಿಷಯ. ಮೆಡಿಕಲ್ ಮತ್ತು ಇಂಜನಿಯರಿಂಗ್ ಕಾಲೇಜುಗಳ ಬಗ್ಗೆ ನನಗೆ ವಿಶೇಷ ಮಾಹಿತಿ ಇಲ್ಲ, ಅದ್ದರಿಂದ ಆ ವಿಷಯದಲ್ಲಿ ನಾನು ಹೆಚ್ಚು ಪ್ರಸ್ತಾಪಿಸಲಿಕ್ಕೆ ಬಯಸುವುದಿಲ್ಲ. ಆರ್ಟ್ಸ್, ಸೈನ್ಸ್ ಮತ್ತು

(ಶ್ರೀ ಕೆ. ಹೆಚ್. ಶ್ರೀನಿವಾಸ)

ಕಾಮರ್ಸ್ ಕಾಲೇಜುಗಳಲ್ಲಿ ಸುಮಾರು 50 ರೂಪಾಯಿಗಳ ಕ್ಯಾಪಿಟೇಷನ್ ಫೀಜನ್ನು ತೆಗೆದು ಕೊಳ್ಳುವುದು ಸರ್ವೇಸಾಧಾರಣವಾಗಿ ಕಂಡುಬರುತ್ತಿದೆ. ಇದಕ್ಕೆ ಕಾರಣವೇನೆಂದರೆ, ಸರ್ಕಾರ ದಿಂದ 50 ಪರ್ಸೆಂಟ್ ಗ್ರ್ಯಾಂಟ್ ಪಡೆಯಬೇಕೆಂಬ ಧೋರಣೆ ಇದ್ದರೂ ಕೂಡ ಅನೇಕ ಟೆಕ್ನಿಕಲ್ ಕಾರಣಗಳಿಗಾಗಿ ಅದು ಸಿಕ್ಕುವುದಿಲ್ಲ ಅದನ್ನು ಭರ್ತಿಮಾಡಿಕೊಳ್ಳಲಿಕ್ಕೆ ಕ್ಯಾಪಿಟೇಷನ್ ಫೀಜನ್ನು ತೆಗೆದುಕೊಳದಿದ್ದರೆ ವಿದ್ಯಾ ಸಂಸ್ಥೆಯನ್ನು ನಡೆಸುವುದಕ್ಕೆ ಉಪಾಧ್ಯಾಯರುಗಳಿಗೆ ಸಂಬಳವನ್ನು ಕೊಡುವುದಕ್ಕೆ ಸಾಧ್ಯವಾಗುವುದಿಲ್ಲ. ಈ ಫಂಡ್ಸ್ ಬಗ್ಗೆ ಒಂದು ವಾಸ್ತವಿಕವಾದ ದೃಷ್ಟಿಯನ್ನು ಇಟ್ಟುಕೊಳ್ಳಬೇಕೇ ಹೊರತು ಕೇವಲ ಆದರ್ಶವನ್ನು ಹೇಳಿದರೆ ಅದರಿಂದ ಏನು ಪ್ರಯೋಜನವಾಗುತ್ತದೆ ಎಂದು ಪ್ರಶ್ನಿಸಲು ಬಯಸುತ್ತೇನೆ. ವಿದ್ಯಾ ವಿಕ್ರಯ ಮಾಡುವುದು ದೊಡ್ಡ ಚಂಡಾಲತನ ಎಂದು ಹೇಳುತ್ತಾರೆ. ಇನ್ನು ಎಲ್ಲಾ ಕಡೆಗಳಲ್ಲಿಯೂ ಈ ಸಂಸ್ಥೆಗಳು ಉಚಿತ ಶಿಕ್ಷಣವನ್ನು ಕೊಡುವುದಕ್ಕೇನಾದರೂ ಸಾಧ್ಯವಿದೆಯೋ, ಸಾಧ್ಯವಿಲ್ಲ. ಆದುದರಿಂದ ವಾಸ್ತವಿಕವಾಗಿ ಏನು ಕ್ಯಾಪಿಟೇಷನ್ ಕೊಡಲಾಗುತ್ತಿದೆ ಎಂಬುದನ್ನು ಆ ವಿದ್ಯಾ ಮಟ್ಟದಲ್ಲಿ ಪರಿಗಣಿಸದೆ ಅಲ್ಲಸಲ್ಲದ ಟೀಕೆಗಳನ್ನು ಮಾಡುವುದರಿಂದ ಹೆಚ್ಚಿನ ಹಾನಿಯಾಗು ತ್ತದೆಯೇ ವಿನಾ ಅದರಿಂದ ಪರಿಸ್ಥಿತಿ ಏನೂ ಉತ್ತಮವಾಗುವುದಿಲ್ಲ. ಇನ್ನು ಎಲ್ಲಾ ಕಡೆಗಳಲ್ಲೂ ಕ್ಯಾಪಿಟೇಷನ್ ಫೀಯನ್ನು ಲೆಕ್ಕವಿಲ್ಲದಷ್ಟು ತೆಗೆದುಕೊಳ್ಳುತ್ತಿದ್ದಾರೆಂಬ ಪುಕಾರುಗಳು ಕೇಳಿಬರು ತ್ತಿವೆ. ಅದನ್ನು ಲಂಚದ ರೂಪದಲ್ಲಿಯೂ ತೆಗೆದುಕೊಳ್ಳಲಾಗುತ್ತಿದೆ ಎಂದು ಹೇಳುತ್ತಿದ್ದಾರೆ. ಆದರೆ ಅದನ್ನು ಹೇಗೆ ನಾವೀಗ ರದ್ದುಮಾಡಬಹುದು ಎಂಬುದನ್ನು ಪರಿಶೀಲಿಸಬೇಕಾದ್ದು ಅತ್ಯವಶ್ಯಕ.

ಇನ್ನು ನಮ್ಮ ಶಿವಮೊಗ್ಗ ಜಿಲ್ಲೆಯಲ್ಲಿ ಒಂದು ಟೆಕ್ನಿಕಲ್ ಕಾಲೇಜನ್ನು ಸ್ಥಾಪಿಸುತ್ತೇವೆಂದು ಸರ್ಕಾರದವರು ಸಾರ್ವಜನಿಕರಿಂದ ಎರಡು ಲಕ್ಷ ರೂಪಾಯಿಗಳ ಡೋನೇಷನ್ನನ್ನು ಡಿಪಾಜಿಟ್ ಮಾಡಿಸಿಕೊಂಡು ಅನೇಕ ವರ್ಷಗಳಾದರೂ ಇಲ್ಲಿಯವರೆಗೂ ಯಾವ ಕಾರ್ಯಕ್ರಮವನ್ನೂ ಕೈಗೊಂಡಿಲ್ಲ. ಹಾಗೆ ಅವರಿಗೆ ಇದನ್ನು ಸ್ಥಾಪಿಸುವುದಕ್ಕೆ ಸಾಧ್ಯವಿಲ್ಲ ಎನ್ನುವುದಾದರೆ ಆ ಹಣವನ್ನು ಯಾರಿಂದ ಪಡೆದುಕೊಳ್ಳಲಾಗಿತ್ತೊ ಅವರಿಗೆ ಹಿಂದಕ್ಕೆ ಕೊಡಬೇಕು ಅಂದರೆ ಆ ಸಾರ್ವಜನಿಕರಿಂದ ಪಡೆದಿದ್ದ ಹಣವನ್ನು ಅವರಿಗೆ ವಾಪಸ್ಸು ಕೊಡಬೇಕೆಂದು ಹೇಳಬಯಸುತ್ತೇನೆ.

ಇನ್ನು ನಮ್ಮ ಸಾಗರ ಡಿವಿಷನ್‌ನಲ್ಲಿ ಸುಮಾರು 120 ಪ್ರೈಮರಿ ಉಪಾಧ್ಯಾಯರ ಸ್ಥಾನಗಳು ಖಾಲಿಬಿದ್ದಿವೆ. ಸರ್ಕಾರದವರು ಅಲ್ಲಿಗೆ ಯಾವಾಗಲೂ ಖಾಲಿ ವೇಕೆನ್ಸಿಗಳನ್ನು ವರ್ಗಾಯಿಸು ತ್ತಿದ್ದಾರೆಯೇ ವಿನಾ ಅಲ್ಲಿಗೆ ಜನರನ್ನು ಮಾತ್ರ ವರ್ಗಾಯಿಸುತ್ತಿಲ್ಲ. ಇದನ್ನು ಒಂದು ಎಕಾನಮಿ ಡ್ರೈವ್ ಎಂದು ಲೋಕಲ್ ನೇಮಕ ಮಾಡಬಾರದು ಎಂದು ಸರ್ಕ್ಯುಲರ್ ಹೊರಡಿಸಿದ್ದಾರೆ. ಆದರೆ ನಮ್ಮಲ್ಲಿ ಇಂಥಾ ಎಕಾನಮಿ ಡ್ರೈವ್ ಮಾಡಿದರೆ ಇದರಿಂದ ಹೆಚ್ಚಿನ ಹಾನಿಯಾಗುತ್ತದೆ. ಅಲ್ಲಿಗೆ ಇನ್ನಾದರೂ ಹೆಚ್ಚು ಉಪಾಧ್ಯಾಯರನ್ನು ಒದಗಿಸಬೇಕೆಂದು ಹೇಳಬಯಸುತ್ತೇನೆ.

ಇನ್ನು ಜೋಗದಲ್ಲಿ ಒಂದು ಯೂತ್ ಹಾಸ್ಟಲ್ ಕಟ್ಟಡವನ್ನು ಕೇಂದ್ರ ಸರ್ಕಾರದವರು 46,354-92 ರೂಪಾಯಿಗಳಲ್ಲಿ ಕಟ್ಟಿಸಿದ್ದಾರೆ. ಅದು ಇಲ್ಲಿಗೆ ಕಳೆದ 5 ವರ್ಷಗಳಿಂದಲೂ ರಿಪೇರಿ ಯನ್ನು ಯಾರು ಮಾಡಬೇಕೆಂಬುದು ಗೊತ್ತಿಲ್ಲದೆ ಹಾಗೆ ನಿಂತು ಬಂದಿದೆ. ಅದನ್ನು ಕೂಡಲೆ ರಿಪೇರಿ ಮಾಡದಿದ್ದರೆ ಅದು ಬಹುಶಃ ಈ ಮಳೆಗಾಲದಲ್ಲಿ ಇಲ್ಲದಿದ್ದರೆ ಮುಂದಿನ ಮಳೆಗಾಲಕ್ಕೆ ಖಂಡಿತ ಬಿದ್ದುಹೋಗುತ್ತದೆ. ಅದರ ರಿಪೇರಿಗೆ 3 ಸಾವಿರ ರೂಪಾಯಿಗಳು ಬೇಕಾಗಬಹುದು. ಆದುದರಿಂದ ಅದಕ್ಕೆ ಈ ವರ್ಷದ ಬಡ್ಜೆಟ್ಟಿನಲ್ಲೇ ಹಣವನ್ನು ಒದಗಿಸಿ ಅದನ್ನು ಕೂಡಲೆ ಸರಿಪಡಿಸ ಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಇನ್ನು ನಮ್ಮಲ್ಲಿ ವಿದ್ಯಾರ್ಥಿಗಳಿಗೆ ಕಂಪಲ್‌ಸರಿಯಾಗಿ ಎನ್. ಸಿ. ಸಿ. ಎಂಬ ಒಂದು ಟ್ರೈನಿಂಗನ್ನು ಕೊಡಲಾಗುತ್ತಿದೆ. ಸರ್ಕಾರದವರು ಇದಕ್ಕಾಗಿ ಬಹಳ ಹಣವನ್ನು ಖರ್ಚ ಮಾಡು ತ್ತಿದ್ದಾರೆ. ಹಿಂದೆ ಯುದ್ಧ ಮಾಡುವುದನ್ನು ದೇಶದ್ರೋಹ ಎಂದು ಕರೆಯುತ್ತಿದ್ದರೆ ಈ ದಿವಸ ಶಾಂತಿಪಾಲನೆ ಮಾಡುವುದು ದೇಶ ದ್ರೋಹ ಎಂದು ಹೇಳುವ ಸ್ಥಿತಿ ಬಂದಿದೆ. ಅದಕ್ಕಾಗಿ ನಾವು ನಮ್ಮ ನಾಡಿನಲ್ಲಿರತಕ್ಕ ತರುಣರನ್ನು ಸೈನಿಕ ಶಿಕ್ಷಣದಲ್ಲಿ ತರಬೇತು ಮಾಡಬೇಕಾಗಿದೆ. ಅದನ್ನು ಮಾಡದೆ ಸರ್ಕಾರ ಈ ದಿವಸ ಹಣವನ್ನು ವ್ಯಥಾ ಖರ್ಚುಮಾಡುತ್ತಿದೆ. ಇದರಿಂದ ನಾವು ನಿರೀಕ್ಷಿಸಿದ ಫಲ ದೊರೆಯುವುದಿಲ್ಲ. ನಮ್ಮ ಎನ್. ಸಿ. ಸಿ. ದಳವನ್ನು ಈ ದಿವಸ ಯುದ್ಧಕ್ಕೆ ಕಳುಹಿಸಿದರೆ ಪರಿಣಾಮವೇನಾಗುತ್ತದೆ ಎಂಬುದು ತಮಗೇ ಗೊತ್ತಾಗುತ್ತದೆ. ಎಲ್ಲರಿಗೂ ಈ ಎನ್. ಸಿ. ಸಿ. ಶಿಕ್ಷಣವನ್ನು ಕಡ್ಡಾಯವಾಗಿ ಕೊಡುವುದರ ಬದಲು ಯುದ್ಧಕ್ಕೆ ಯಾರು ಸರಿಯಾದವರು ಎಂಬುದನ್ನು

ನೋಡಿ ಅವರಿಗೆ ಉತ್ತಮ ಸೈನಿಕ ಶಿಕ್ಷಣವನ್ನೂ ತರಬೇತನ್ನೂ ಕೊಡತಕ್ಕದ್ದು ಯೋಗ್ಯವಾದುದು ಎಂದು ಸಲಹೆ ಮಾಡಿ ನಾನು ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಸಿ. ಎಂ. ಎಸ್. ಶಾಸ್ತ್ರಿ (ಚಿಕ್ಕಮಗಳೂರು).—ಮಾನ್ಯ ಸಭಾಪತಿಗಳೇ, ನಮ್ಮ ಮುಂದೆ ಶಿಕ್ಷಣ ಸಚಿವರು 1967-68ನೇ ಸಾಲಿಗೆ ಶಿಕ್ಷಣಕ್ಕೆ ಸಂಬಂಧಪಟ್ಟಹಾಗೆ 33,57,28,700 ರೂಪಾಯಿ ಗಳು ಖರ್ಚಾಗುತ್ತದೆಂದು ನಮ್ಮ ಮುಂದೆ ಇಟ್ಟಿರತಕ್ಕ ಬೇಡಿಕೆಯನ್ನು ನಾನು ವಿರೋಧಿಸುತ್ತೇನೆ.

ಮಾನ್ಯ ಹಣಕಾಸಿನ ಸಚಿವರು ಈ ಸಭೆಯ ಮುಂದೆ ಅವರು ತಮ್ಮ ಮುಂಗಡಪತ್ರವನ್ನು ಮಂಡಿಸತಕ್ಕ ವೇಳೆಯಲ್ಲಿ ಅವರು ಒಂದು ಮಾತನ್ನು ಹೇಳಿದ್ದಾರೆ; ಅದು ಏನೆಂದರೆ ವಿದ್ಯಾಭ್ಯಾಸಕ್ಕೆ ಹಣವನ್ನು ಒದಗಿಸುವ ಬಗ್ಗೆ ಹೊಸ ತೆರಿಗೆಗಳನ್ನು ವಿಧಿಸುವ ಅವಕಾಶ ಪರಿಮಿತವಾಗಿದ್ದರೂ ಸಮಾಜದ ದುರ್ಬಲವರ್ಗದ ಹಿತದೃಷ್ಟಿಯನ್ನು ಗಮನಿಸಿ ವರಮಾನವನ್ನು ಹೆಚ್ಚಿಸುವ ಬೇರೆ ಹೊಸ ಸಾಧನಗಳನ್ನು ನಾವು ಹುಡುಕಬೇಕಾಗಿದೆ—ಎಂಬುದಾಗಿ ಹೇಳಿದ್ದಾರೆ. ಈ ಹಿಂದೆ ಸರ್ಕಾರದವರು ಚಿಕ್ಕಮಗಳೂರು, ಮಂಡ್ಯಾ ಮತ್ತು ಕೋಲಾರ ಜಿಲ್ಲೆಗಳಲ್ಲಿದ್ದ ಇಂಟರ್ ಕಾಲೇಜುಗಳನ್ನು ಅಪ್ ಗ್ರೇಡ್ ಮಾಡಿ ಫಸ್ಟ್‌ಗ್ರೇಡ್ ಕಾಲೇಜುಗಳನ್ನಾಗಿ ಪರಿವರ್ತನೆ ಮಾಡಲು ಸಾರ್ವಜನಿಕರು ಮೂರುವರೆ ಲಕ್ಷ ರೂಪಾಯಿಗಳನ್ನು ಮುಂಗಡವಾಗಿ ಸರ್ಕಾರಕ್ಕೆ ಕೊಡಬೇಕೆಂದು ಒಂದು ಸರ್ಕಾರಿ ಹುಕುಮನ್ನು ಜಿ. ಒ. ನಂ. ಇ1-145 ಯು. ಜಿ. ಸಿ. 62, ತಾ॥ 29-6-1962ರಲ್ಲಿ ಹೊರಡಿಸಿದರು. ಈ ಆರ್ಡರ್ ಪ್ರಕಾರ ಚಿಕ್ಕಮಗಳೂರಿನವರೂ ಮಂಡ್ಯಾದವರೂ ಮತ್ತು ಕೊಲಾರದವರೂ ಮೂರುವರೆ ಲಕ್ಷ ರೂಪಾಯಿಗಳನ್ನು ಕಾಂಟ್ರಿಬ್ಯೂಷನ್ ರೂಪದಲ್ಲಿ ಕೊಡಬೇಕಾಗಿತ್ತು. ಇದೇ ಈ ಸರ್ಕಾರದವರೂ ಕಂಡುಹಿಡಿದಂಥ ಒಂದು ಹೊಸ ವಿಧಾನ. ಇದನ್ನು ಯಾರು ಕಂಡುಹಿಡಿದಿದ್ದಾರೆಂದರೆ—ಹಿಂದೆ ಮಂತ್ರಿಮಂಡಲದಲ್ಲಿ ಇದ್ದ ಶ್ರೀ ಎಂ. ವಿ. ಕೃಷ್ಣಪ್ಪನವರೂ ಮತ್ತು ಈಗ ಕ್ಯಾಬಿನೆಟ್‌ಲ್ಲಿರತಕ್ಕ ವಿದ್ಯಾಮಂತ್ರಿಗಳು. ಇದರಲ್ಲಿ ಅಡಗಿರತಕ್ಕ ವಿದ್ಯಮಾನಗಳೇನೆಂಬುದನ್ನು ನಾನೀಗ ಈ ಸಭೆಯ ಗಮನಕ್ಕೆ ತರಲಿಚ್ಛಿಸುತ್ತೇನೆ. ಸರ್ಕಾರದವರು ತಾವೇನು ಆರ್ಡರನ್ನು ಮಾಡಿದ್ದಾರೋ ಅದಕ್ಕೆ ತಾವೇ ದ್ರೋಹವನ್ನು ಬಗೆದಿದ್ದಾರೆ. ತಾವು ಮಾಡಿದಂಥ ಆರ್ಡರನ್ನು ತಾವೆ ಒಪ್ಪಿಲ್ಲದಿದ್ದರೂ ಆ ಆರ್ಡರನ್ನು ಚಿಕ್ಕಮಗಳೂರಿನವರಿಗೆ ಮಾತ್ರ ಜಾರಿ ಮಾಡಿ ಅವರಿಂದ ಮೂರೂವರೆ ಲಕ್ಷ ರೂಪಾಯಿಗಳನ್ನು ವಸೂಲ್ಮಾಡಿಕೊಂಡು ಇನ್ನುಳಿದ ಮಂಡ್ಯಾ ಮತ್ತು ಕೋಲಾರದವರಿಂದ ಮೂರೂವರೆ ಮತ್ತು ಮೂರೂವರೆ ಹೀಗೆ ಲಕ್ಷ ಏಳು ರೂಪಾಯಿಗಳನ್ನು ವಸೂಲ್ಮಾಡದೆ ಸರ್ಕಾರಕ್ಕೆ ಸರ್ಕಾರದವರೇ ದ್ರೋಹವನ್ನು ಬಗೆದಿದ್ದಾರೆ. ಚಿಕ್ಕಮಗಳೂರಿನವರಿಂದ ಮೂರುಮುಕ್ಕಾಲು ಲಕ್ಷ ರೂಪಾಯಿಗಳ ಬೆಲೆ ಬಾಳತಕ್ಕ ಕಟ್ಟಡವನ್ನು ಕಾಲೇಜನ್ನು ನಡೆಸುವುದಕ್ಕಾಗಿ ಸರ್ಕಾರದವರು ಪಡೆದುಕೊಂಡರು. ಎಲ್ಲಿ ಸರ್ಕಾರದ ಮೇಲೆ ಪ್ರಭಾವ ಬೀರತಕ್ಕ ಜನರಿಲ್ಲವೋ ಅಲ್ಲಿ ಸರ್ಕಾರದವರು ಏನು ಕ್ರಮವನ್ನಾದರೂ ಕೈಗೊಳ್ಳುತ್ತಾರೆ; ಎಷ್ಟು ಹಣವನ್ನು ಬೇಕಾದರೂ ವಸೂಲ್ಮಾಡುತ್ತಾರೆ. ಆದರೆ ಎಲ್ಲಿ ಪ್ರಭಾವಶಾಲಿಗಳಿರುತ್ತಾರೋ ಅಂಥ ಕಡೆಗಳಲ್ಲಿ ಸರ್ಕಾರ ಯಾವುದನ್ನೂ ಕೇಳುವಂತಿಲ್ಲ. ಇದು ದೊಡ್ಡ ದೇಶ ದ್ರೋಹ. ಹೀಗೆ ಸರ್ಕಾರದವರು ತಮ್ಮ ಮನಸೋ ಇಚ್ಛೆ ಕೆಲಸಗಳನ್ನು ಮಾಡುವುದಕ್ಕೆ ಹೊರಟರೆ ಇವರಿಗೆ ಸಾಕಾಗುವಷ್ಟು ದುಡ್ಡು ಬೇಕು ಎಂದರೆ ಅದು ಎಲ್ಲಿಂದ ಬರಬೇಕು? ಇವರು ದೇಶಾಭ್ಯುದಯದ ಕೆಲಸಗಳನ್ನು ಇನ್ನೆಷ್ಟರಮಟ್ಟಿಗೆ ನಿರ್ವಹಿಸಬಲ್ಲರು? ವಿದ್ಯಾಭಿವೃದ್ಧಿಗೆ ಯಾವ ಜಿಲ್ಲೆಯಲ್ಲಿ ಪ್ರಭಾವ ಶಾಲಿಗಳಿಲ್ಲವೋ ಅಲ್ಲಿ ಅವರು ಅಪ್ಲಿಕೇಷನ್‌ಗಳನ್ನೇ ಹಾಕುವಂತಿಲ್ಲ. ಪ್ರಭಾವಶಾಲಿಗಳಿರತಕ್ಕ ಜಿಲ್ಲೆಯವರು ಮಾತ್ರ ವಿದ್ಯಾವಂತರಾಗಬೇಕು, ಇನ್ನುಳಿದ ಜಿಲ್ಲೆಯವರಿಗೆ ಅದು ಬೇಕಾಗಿಲ್ಲ. ಇಷ್ಟವಿಲ್ಲದವರು ಬಂದರೆ ಅವರು ಕೇಳಿದಷ್ಟು ಹಣವನ್ನು ಕೊಡಬೇಕು, ತಮಗೆ ಬೇಕಾದವರು ಬಂದರೆ ಅವರೇನು ಹಣವನ್ನು ಕೊಡಬೇಕಾಗಿಲ್ಲ. ಹೀಗೆ ಒಂದು ಪಕ್ಷಪಾತಭಾವನೆಯಿಂದ ಈ ಸರ್ಕಾರ ಆಡಳಿತವನ್ನು ನಡೆಸುತ್ತಿದೆ.

ಇನ್ನು ನಮ್ಮ ಚಿಕ್ಕಮಗಳೂರು ಜಿಲ್ಲೆಗೆ ಯಾವ ಒಂದು ಜನೋಪಯುಕ್ತ ಕಾರ್ಯ ಆಗಬೇಕಾಗಿದ್ದರೂ ಅದು ಸಾರ್ವಜನಿಕರ, ದಾನಿಗಳ, ಪುರಪ್ರಮುಖರ ಸಾಹಸ ಮತ್ತು ಸಹಾಯಗಳಿಂದಲೇ ಆಗಬೇಕಾಗಿದೆ. ಸರ್ಕಾರದವರು ನಮ್ಮ ಜಿಲ್ಲೆ ಏನೊಂದೂ ಸಾರ್ವಜನಿಕ ಉಪಯುಕ್ತ ಕೆಲಸ ಗಳನ್ನು ಮಾಡಿರುವುದಿಲ್ಲ. ಇದು ಈ ಜಿಲ್ಲೆಯಮೇಲೆ ಸರ್ಕಾರದವರಿಗೆ ಇರತಕ್ಕ ತಾತ್ಸಾರ ಮನೋಭಾವನೆಯನ್ನು ಇದು ಎತ್ತಿ ಸೂಚಿಸುತ್ತಿದೆ. ನಮ್ಮ ಚಿಕ್ಕಮಗಳೂರಿನಲ್ಲಿ ಕಟ್ಟಿರತಕ್ಕ ಜನರಲ್ ಆಸ್ಪತ್ರೆಯನ್ನು ಮಲ್ಲೇಗೌಡರು ಮುಂದೆ ಬಂದರು, ಶಿವರಾವ್ ಅವರು ಪಶುವೈದ್ಯ ಶಾಲೆಯನ್ನು ಕಟ್ಟಿಸಿದರು. ಕಾನ್‌ವೆಂಟಿನವರು ಕಾನ್‌ವೆಂಟ್ ಸ್ಕೂಲನ್ನು ಕಟ್ಟಿಸಿದರು. ಮಲೆನಾಡು ಎಜುಕೇಷನ್ ಸೊಸೈಟಿಯವರು ಬಾಲಿಕಾ ಪ್ರೌಢಶಾಲೆಯನ್ನು ಕಟ್ಟಿಸಿದ್ದಾರೆ. ಮತ್ತು

(ಶ್ರೀ ಸಿ. ಎಂ. ಎಸ್. ಶಾಸ್ತ್ರಿ)

ದೊಡ್ಡ ಸಿದ್ದಲಿಂಗೇಗೌಡರು ಫಸ್ಟ್‌ಗ್ರೇಡ್ ಕಾಲೇಜನ್ನು ಕಟ್ಟಿಸಿದರು, ಲಚ್ಚಯ್ಯಸೆಟ್ಟರು ಸ್ತ್ರೀಯರ ಆಸ್ಪತ್ರೆಯನ್ನು ಕಟ್ಟಿಸಿದರು. ಶಿಶುಸಂರಕ್ಷಣಾ ಕೇಂದ್ರ ಇವೆಲ್ಲವೂ ಸಾರ್ವಜನಿಕರ ಸಾಹಸ ಮತ್ತು ಸಹಾಯಗಳಿಂದಲೇ ಆಗಿರುತ್ತವೆ. ನಾವು ನಮ್ಮ ಕಾಲೇಜಿನ ಬಗ್ಗೆ ಕೊಡಬೇಕಾಗಿದ್ದ ಮೂರೂವರೆ ಲಕ್ಷ ರೂಪಾಯಿಗಳಿಗೆ ಒಂದು ದೊಡ್ಡ ಕಟ್ಟಡವನ್ನೇ ಕಾಲೇಜ್ ನಡೆಸುವುದಕ್ಕಾಗಿ ಬಿಟ್ಟು ಕೊಟ್ಟೆವು. ಆದರೆ ಈ ದಿವಸ ಆ ಕಟ್ಟಡದಲ್ಲಿ ಕಾಲೇಜನ್ನು ನಡೆಸುತ್ತಿಲ್ಲ. ಅದನ್ನು ಬೇರೆ ಒಂದು ಕಟ್ಟಡದಲ್ಲಿ ನಡೆಸಲಾಗುತ್ತಿದೆ. ಇದರಿಂದ ಬೇರೆ ಇಲಾಖೆಯ ಕೆಲಸಕಾರ್ಯಗಳಿಗೂ ತೊಂದರೆಯಾಗಿದೆ, ಅಲ್ಲಿ ಪಾಠ ಪ್ರವಚನಗಳನ್ನು ನಡೆಸುವುದಕ್ಕೂ ಸಾಕಷ್ಟು ಸ್ಥಳವಿಲ್ಲ. ಹೀಗೆ ಆ ಕಟ್ಟಡವನ್ನು ಸರ್ಕಾರದವರು ನಾವು ದಾನವಾಗಿ ಕೊಟ್ಟಿದ್ದನ್ನು ಸರಿಯಾಗಿ ಬಳಸುವುದಕ್ಕೂ ಕೂಡ ಶಕ್ತರಾಗಿಲ್ಲ. ಈ ಕಟ್ಟಡವನ್ನು ಹಿಂದೆ ವಿದ್ಯಾಮಂತ್ರಿಗಳಾಗಿದ್ದವರ ಅಧ್ಯಕ್ಷತೆಯಲ್ಲಿ ಈಗಿರತಕ್ಕ ಮಾನ್ಯ ಮುಖ್ಯ ಮಂತ್ರಿಗಳೇ ಪ್ರಾರಂಭೋತ್ಸವವನ್ನು ನೆರವೇರಿಸಿದರು. ಆದರೆ ಇಲ್ಲಿಯವರೆಗೂ ಆ ಕಟ್ಟಡದಲ್ಲಿ ಕಾಲೇಜನ್ನು ನಡೆಸುತ್ತಿಲ್ಲ. ಹಿಂದೆ ಇದ್ದ ಕಟ್ಟಡದಿಂದ ಕಾಲೇಜನ್ನು ಇದಕ್ಕೆ ಇನ್ನೂ ಬದಲಾವಣೆ ಮಾಡದಿರುವುದಕ್ಕೆ ಕಾರಣಗಳು ಗೊತ್ತಾಗುವುದಿಲ್ಲ. ಹೀಗಾಗಿ ನಾವು ದಾನವಾಗಿ ಕೊಟ್ಟ ಕಟ್ಟಡ ಹಾಳಾಗುವ ಸ್ಥಿತಿಗೆ ಬಂದಿದೆ. ನಾವು ಈ ಕಟ್ಟಡಕ್ಕೆ ಮೂರೂಮುಕ್ಕಾಲು ಲಕ್ಷವನ್ನು ಖರ್ಚು ಮಾಡಿ ಕಟ್ಟಿಸಿದ್ದು ಅದೂ ಹಾಗೇ ಖಾಲಿ ಬಿದ್ದಿದೆ. ಇಲ್ಲಿಯವರೆಗೆ ಆ ಮೊಬಲಗಿಗೆ ಬಡ್ಡಿ ಎಷ್ಟಾಯಿತು ? ಇದನ್ನು ಕೇಳತಕ್ಕವರು ಯಾರು ? ಆದುದರಿಂದ ಸರ್ಕಾರದವರು ಕೂಡಲೆ ಈ ಕಟ್ಟಡಕ್ಕೆ ಆ ಕಾಲೇಜನ್ನು ಬದಲಾವಣೆ ಮಾಡಬೇಕೆಂದು ಹೇಳುತ್ತೇನೆ.

7-00 P.M.

ಅದೂ ಕೂಡ ಸಾರ್ವಜನಿಕರ ಸಹಾಯದಿಂದ ಪ್ರಾರಂಭ ಮಾಡಿರುವುದು. ಲಚ್ಚಯ್ಯ ಶೆಟ್ಟಿ ಹೆಣ್ಣುಮಕ್ಕಳ ಹಾಸ್ಟಲ್ ಮತ್ತು ಕಾಡುಮನೆ ಶಿಶುವಿಹಾರ ಕೂಡ ಸರ್ಕಾರದ ಸಹಾಯವಿಲ್ಲದೆ ಕಟ್ಟಿದವು. ನಮ್ಮ ಚಿಕ್ಕಮಗಳೂರಿನಲ್ಲಿ ಪ್ರತಿಯೊಂದು ಕೂಡ ಸಾರ್ವಜನಿಕರ ಹಣದಿಂದ ಕಟ್ಟಲ್ಪಟ್ಟಿದೆ. ಸರ್ಕಾರಕ್ಕೆ ಈ ವಿಚಾರವನ್ನು ಒತ್ತಾಯಮಾಡಿ ಏತಕ್ಕೆ ಹೇಳುತ್ತಿದ್ದೇನೆಂದರೆ, ಕಾನೂನು ಮಾಡಬೇಕಾದರೆ ಎಲ್ಲರಿಗೂ ಅನುಗುಣವಾಗುವಂತೆ ಮಾಡಬೇಕು. ಒಂದು ಕಣ್ಣಿಗೆ ಸುಣ್ಣ, ಒಂದು ಕಣ್ಣಿಗೆ ಬೆಣ್ಣೆ ಎಂಬಂತೆ ಮಾಡಬಾರದು. ಚಿಕ್ಕಮಗಳೂರು ಕಾಲೇಜನ್ನು ಅಪ್‌ಗ್ರೇಡ್ ಮಾಡಲು ಮೂರೂವರೆ ಲಕ್ಷ ರೂಪಾಯಿಗಳನ್ನು ಸರ್ಕಾರ ಸಾರ್ವಜನಿಕರಿಂದ ವಸೂಲು ಮಾಡಿತ್ತು. ಆದರೆ ಮಂಡ್ಯ ಮತ್ತು ಕೋಲಾರಗಳ ಕಾಲೇಜುಗಳನ್ನು ಅಪ್‌ಗ್ರೇಡ್ ಮಾಡುವಾಗ ಅವರಿಗೆ ತೆಗೆದುಕೊಳ್ಳಲಿಲ್ಲ. ಈ ರೀತಿಯಾಗದಂತೆ ಸರಿಪಡಿಸಿಕೊಳ್ಳಬೇಕೆಂದು ಒತ್ತಾಯ ಮಾಡುತ್ತೇನೆ. ಧರ್ಮ ಮಾಡುವವರು ಮುಂದೆಬಂದು ಕೊಟ್ಟರೆ, ಅದನ್ನು ಸರಿಯಾಗಿ ಉಪಯೋಗಿಸಿಕೊಳ್ಳಬೇಕು. ಐ. ಎಸ್. ಮಲ್ಲೇಗೌಡರು ಒಂದು ಲಕ್ಷ ರೂಪಾಯಿ ಖರ್ಚು ಮಾಡಿ ಕಾಲೇಜು ಕಟ್ಟಡವನ್ನು ಕಟ್ಟಿಸಿದ್ದಾರೆ. ಕಟ್ಟಿಸಿ ಒಂದು ವರ್ಷವಾದರೂ ಕೂಡ ಈಗಿರುವ ಕಾಲೇಜನ್ನು ಈ ಹೊಸ ಕಟ್ಟಡಕ್ಕೆ ಬದಲಾವಣೆ ಮಾಡಿಲ್ಲ. ನಾನು ಕಟ್ಟಿಸಿರುವ ಕಟ್ಟಡವನ್ನು ಇನ್ನೂ ಉಪಯೋಗ ಮಾಡಿಕೊಳ್ಳಲಿಲ್ಲವಲ್ಲ ಎಂದು ಅವರು ವ್ಯಸನಪಡುತ್ತಿದ್ದಾರೆ. ಆದ್ದರಿಂದ ಅವರು ಬದುಕಿರುವಾಗಲೇ ಹೊಸ ಕಟ್ಟಡಕ್ಕೆ ಕಾಲೇಜನ್ನು ಬದಲಾಯಿಸಿ, ಅಲ್ಲಿ ಮಕ್ಕಳು ಓದುವುದನ್ನು ಅವರು ನೋಡಿ ಸಂತೋಷಪಡಿಸುವುದಕ್ಕೆ ಅವಕಾಶ ಕಲ್ಪಿಸಿಕೊಡಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಇದೇ ಸಂದರ್ಭದಲ್ಲಿ ಮುಖ್ಯ ಮಂತ್ರಿಗಳು ಯಾವಾಗ ನಮ್ಮ ಜಿಲ್ಲೆಗೆ ಬಂದರೂ, ಅವರನ್ನು ಶಾಲಾ ಕಟ್ಟಡಗಳನ್ನು ಕಟ್ಟಿಸಿ ಕೊಡಬೇಕೆಂದು ಕೇಳಿದಾಗ ಅವರು ಉತ್ತರ ಕೊಡುತ್ತಾರೆ, ಶಾಲಾ ಕಟ್ಟಡಗಳಿಗೆ ಲಕ್ಷಾಂತರ ರೂಪಾಯಿಗಳನ್ನು ಖರ್ಚು ಮಾಡುವುದು ಕಷ್ಟ, ಗುರುಕುಲಾಶ್ರಮದ ರೀತಿಯಲ್ಲಿ ಷೆಡ್‌ಗಳನ್ನು ಹಾಕಿಸುವುದು ಒಳ್ಳೆಯದೆಂದು ಹೇಳಿದ್ದಾರೆ. ಈ ಸಂದರ್ಭದಲ್ಲಿ ಒಂದು ವಿಚಾರವನ್ನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ, ಈ ವಿಚಾರದಲ್ಲಿ ಬರಿ ಬಾಯಿಮಾತಿನಲ್ಲಿ ಹೇಳಿದರೆ ಸರಿಯಾಗುವುದಿಲ್ಲ, ಸರ್ಕಾರದ ಒಂದು ಆರ್ಡರನ್ನು ಹೊರಡಿಸಿದರೆ ಮಾತ್ರ ಶಾಲಾ ಕಟ್ಟಡಗಳನ್ನು ಕಟ್ಟಿಸುವವರಿಗೆ ಅದರ ಅರ್ಥ ವಾಗುತ್ತದೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಒಂದು ಕಡೆ ಸರ್ಕಾರದವರು ಶಾಲಾ ಕಟ್ಟಡ ಗಳನ್ನು ನ್ಯೂಟೈಪ್ ಡಿಜೈನ್‌ನಲ್ಲಿ ಕಟ್ಟಿಸಬೇಕೆಂದು ಹೇಳುತ್ತಾರೆ, ಅದೇ ಮುಖ್ಯ ಮಂತ್ರಿಗಳು ಟೂರ್ ಬಂದಾಗ ಹೇಳುತ್ತಾರೆ, ಪರ್ಣಾಶ್ರಮದ ರೀತಿಯಲ್ಲಿ ಷೆಡ್‌ಗಳನ್ನು ಕಟ್ಟಬೇಕೆಂದು. ವಿದ್ಯಾಮಂತ್ರಿಗಳಲ್ಲಿ ಒಂದು ವಿಚಾರವನ್ನು ಹೇಳುತ್ತೇನೆ. ಏನೆಂದರೆ ಮಲೆನಾಡು ಎಜುಕೇಷನ್ ಸೊಸೈಟಿಯವರು ಪ್ರಥಮ ದರ್ಜೆ ಕಾಲೇಜಿಗೆ ಸೇರಿದಂತೆ ಒಂದು ಸಾರ್ವಜನಿಕ ಹಾಸ್ಟಲನ್ನು

ಸರ್ ಎಂ. ವಿಶ್ವೇಶ್ವರಯ್ಯನವರ ಹೆಸರಿನಲ್ಲಿ ಕಟ್ಟಿಸಬೇಕೆಂದು 50 ಸಾವಿರ ರೂಪಾಯಿಗಳನ್ನು ಶೇಖರಣೆ ಮಾಡಿದ್ದಾರೆ. ಅದರ ಜೊತೆಗೆ ಸರ್ಕಾರದ ಗ್ರಾಂಟನ್ನು ಜಾಗ್ರತೆ ಕೊಡಿಸಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ನನಗೆ ಕೊಟ್ಟಿರುವ ಅವಕಾಶ ಬಹಳ ಕಡಿಮೆ. ಇದೇ ಸಂದರ್ಭದಲ್ಲಿ 5 ನಿಮಿಷಕಾಲ ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಸೋಲೂರು ಸಿದ್ದಪ್ಪ (ಕುದೂರು).—ಮಾನ್ಯ ಸಭಾಪತಿಗಳೇ, ನಾನು ಶ್ರೀಮಾನ್ ರಾಮೇಗೌಡರು ಹೇಳಿದ ವಿಷಯಗಳಿಗೆ ಅನುಮೋದನೆ ಕೊಡುತ್ತಾ, ನಮ್ಮ ಮುಂದಿರುವ ವಿದ್ಯಾ ಇಲಾಖೆಯ ಡಿಮ್ಯಾಂಡ್‌ಗಳನ್ನು ಹೃತ್ಪೂರ್ವಕವಾಗಿ ಸ್ವಾಗತಿಸಿ, ಕೆಲವು ಸಲಹೆಗಳನ್ನು ಸರ್ಕಾರಕ್ಕೆ ಕೊಡುತ್ತೇನೆ. ಸರ್ಕಾರದವರು ದೇಶದ ಅಭ್ಯುದಯಕ್ಕೋಸ್ಕರವಾಗಿ ಸುಮಾರು 20 ವರ್ಷಗಳಿಂದೀಚೆಗೆ ಸತತವಾಗಿ ಬಹಳ ಹೆಚ್ಚಿನ ಹಣವನ್ನು ಖರ್ಚುಮಾಡಿ ವಿದ್ಯಾಭ್ಯಾಸದ ಮಟ್ಟವನ್ನು ದೇಶದಲ್ಲಿ ಹೆಚ್ಚಿಸಿದ್ದಾರೆ. ಶ್ರೀಮಾನ್ ಕಂಠಿಯವರು ವಿದ್ಯಾ ಮಂತ್ರಿಗಳಾಗಿದ್ದಾಗ ದೇಶದ ನಾನಾ ಭಾಗಗಳಲ್ಲಿ ಪ್ರೌಢ ಶಾಲೆಗಳನ್ನು ಮತ್ತು ಕಾಲೇಜುಗಳನ್ನು ಕಟ್ಟಿಸಿ ವಿದ್ಯಾರ್ಥಿಗಳಿಗೆ ಹೆಚ್ಚಿನ ವಿದ್ಯಾರ್ಜನೆಗೆ ಅವಕಾಶವನ್ನು ಮಾಡಿಕೊಟ್ಟಿದ್ದಾರೆ . ಈ ದಿವಸ ನಮ್ಮ ಶ್ರೀ ಶಂಕರ ಗೌಡರು ವಿದ್ಯಾ ಮಂತ್ರಿಗಳಾಗಿ ದಯಮಾಡಿಸಿದ್ದಾರೆ. ಅವರು ರೈತರ ಕುಟುಂಬಕ್ಕೆ ಸೇರಿದವರು. ವಿದ್ಯಾಭ್ಯಾಸದಲ್ಲಿ ಹೆಚ್ಚಿನ ಮಾಹಿತಿ ಪಡೆದವರು. ಅನೇಕ ಕಾಲೇಜುಗಳನ್ನು ತೆರೆದು ಸ್ವಂತ ಅನುಭವವನ್ನು ಪಡೆದಿದ್ದಾರೆ. ಈಗ ನಮ್ಮ ಮುಖ್ಯ ಮಂತ್ರಿಗಳು ಇವರನ್ನು ವಿದ್ಯಾ ಮಂತ್ರಿಗಳನ್ನಾಗಿ ಮಾಡಿದ್ದಾರೆ. ದೇಶದ ಅಭ್ಯುದಯಕ್ಕಾಗಿ ಅವರ ಕಾಲದಲ್ಲಿ ಈಗಿರತಕ್ಕಂಥ ವಿದ್ಯಾಭ್ಯಾಸದ ಮಟ್ಟವನ್ನು ಉತ್ತಮಪಡಿಸಬೇಕೆಂದು ಕೇಳಿಕೊಳ್ಳುತ್ತೇನೆ. ಈಗಿರತಕ್ಕಂಥ ಮಟ್ಟವೆಂದರೆ, ಇಂಜನಿಯರಿಂಗ್ ಸ್ಕೂಲು ಮತ್ತು ಕಾಲೇಜುಗಳಲ್ಲಿ ವಿದ್ಯಾಭ್ಯಾಸ ಮಾಡಿ ಪಾಸಾದ ಯುವಕರು ಮೂರು ನಾಲ್ಕು ಸಾವಿರದವರೆಗೆ ಕೆಲಸವಿಲ್ಲದೆ ಕೂತಿದ್ದಾರೆ. ಅವರು ಕೆಲಸವಿಲ್ಲದೆ ತಪಸ್ಸು ಮಾಡುತ್ತಿದ್ದಾರೆ. ಸರ್ಕಾರಕ್ಕೆ ನಾನು ಮನವಿ ಮಾಡಿಕೊಳ್ಳುವುದೇನೆಂದರೆ ಎಲ್ಲಾ ಶಾಲೆಗಳಲ್ಲೂ ವೃತ್ತಿ ಶಿಕ್ಷಣವನ್ನು ಪ್ರಾರಂಭ ಮಾಡಿಸಿ, ವಿದ್ಯಾರ್ಥಿಗಳಿಗೆ ಅನುಗುಣವಾದ ವೃತ್ತಿ ಶಿಕ್ಷಣವನ್ನು ಹೇಳಿಕೊಟ್ಟರೆ ದೇಶದ ಅಭ್ಯುದಯವಾಗುತ್ತದೆ. ಮುಂದೆ ಸರ್ಕಾರದ ಕೆಲಸಕ್ಕೆ ಯಾರೂ ಕಾಯದೆ ತಮ್ಮ ವೃತ್ತಿಯನ್ನು ತಾವೇ ಮಾಡಿಕೊಳ್ಳುತ್ತಾರೆ.

ಇನ್ನು ಮೈಸೂರು ಸಂಸ್ಥಾನದ ಅನೇಕ ಗ್ರಾಮಗಳಲ್ಲಿ ವಿದ್ಯಾಭ್ಯಾಸದ ಪ್ರಗತಿ ಚಿಂತಾಜನಕವಾಗಿದೆ. ಇದು ಶ್ರೀಮಾನ್ ಶಂಕರಗೌಡರಿಗೆ ಗೊತ್ತಿದೆ. ಏಕೆಂದರೆ ಆಯಾ ತಾಲ್ಲೂಕಿನವರೇ ಉಪಾಧ್ಯಾಯರುಗಳು ಇರುವುದರಿಂದ, ಅವರು ಸ್ವಂತ ಕಸಬಿಗೆ ಹೆಚ್ಚಿನ ಗಮನ ಕೊಟ್ಟು, ವಿದ್ಯಾರ್ಥಿಗಳಿಗೆ ಸರಿಯಾಗಿ ಪಾಠವನ್ನು ಕಲಿಸುತ್ತಿಲ್ಲ. ಸ್ಕೂಲ್ ಪಕ್ಕದಲ್ಲೇ ಇವರ ಮನೆಗಳಿರುತ್ತವೆ. ಆದ್ದರಿಂದ ಇಂತಹವರನ್ನು ದೂರದ ತಾಲ್ಲೂಕುಗಳಿಗೆ ವರ್ಗ ಮಾಡಿಸಿ ಈಗಿರತಕ್ಕಂಥ ಅನಾನುಕೂಲತೆಗಳನ್ನು ಉತ್ತಮಪಡಿಸುವುದಕ್ಕೆ ವಿದ್ಯಾಮಂತ್ರಿಗಳು ಸಹಾಯಕರಾಗಬೇಕೆಂದು ಈ ಮೂಲಕ ಅವರನ್ನು ಒತ್ತಾಯ ಪಡಿಸುತ್ತೇನೆ. ಶ್ರೀಮಾನ್ ವೆಂಕಟಪ್ಪನವರು ವಿದ್ಯಾ ಮಂತ್ರಿಗಳಾಗಿದ್ದಾಗ ಈ ವಿಷಯವನ್ನು ಕಾರ್ಯರೂಪದಲ್ಲಿ ತರಬೇಕೆಂದು ಸರ್ಕಾರದ ಆರ್ಡರನ್ನು ಹೊರಡಿಸುವ ಕಾಲಕ್ಕೆ ಯಾವ ಕಾರಣದಿಂದಲೋ ನಿಂತುಹೋಯಿತು. ಈಗ ಬಂದಿರುವ ವಿದ್ಯಾಮಂತ್ರಿಗಳು ಅದನ್ನು ಕಾರ್ಯಗತ ಮಾಡಿ, ದೇಶಕ್ಕೆ ಖರ್ಚುಮಾಡುವಂತಹ ಹಣ ಉತ್ತಮ ರೀತಿಯಿಂದ ಸಾರ್ವಜನಿಕರಿಗೆ ಅನುಕೂಲವಾಗುವಂತೆ, ಲಾಭವಾಗುವಂತೆ ಇರಬೇಕು. ಮಾಗಡಿಯಲ್ಲಿ ಹರಿಜನರ ಹಾಸ್ಟಲನ್ನು ಕಟ್ಟುವ ಸಲುವಾಗಿ ಒಂದು ಜಾಗವನ್ನು ಸ್ವಾಧೀನಪಡಿಸಿಕೊಂಡು 10 ವರ್ಷವಾದರೂ ಸಹ ಇನ್ನೂ ಕಟ್ಟಿಸಿಲ್ಲ. ಆ ಜಾಗ ಸರ್ಕಾರದ ಅಧೀನದಲ್ಲಿದೆ. ನಾನು ಸರ್ಕಾರಕ್ಕೆ ಹೇಳುವುದು ಇಷ್ಟೆ, ಇನ್ನುಮೇಲೆ ಸಾರ್ವಜನಿಕರ ಹಾಸ್ಟಲ್‌ಗಳನ್ನು ಕಟ್ಟಿಸಬೇಕೇ ವಿನಾ ಜಾತಿ, ಕುಲಗೋತ್ರಗಳ ಹೆಸರಿನಲ್ಲಿ ಹಾಸ್ಟಲ್‌ಗಳನ್ನು ಕಟ್ಟಿಸುವುದನ್ನು ರದ್ದು ಮಾಡಬೇಕು. ಸಾರ್ವಜನಿಕರ ಹಾಸ್ಟಲ್‌ಗಳನ್ನು ಕಟ್ಟಿಸುವಾಗ ಭಿನ್ನಾಭಿಪ್ರಾಯಗಳು ಬಾರದ ರೀತಿಯಲ್ಲಿ ನಮ್ಮ ಸರ್ಕಾರದವರು ವ್ಯವಸ್ಥೆ ಮಾಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ. ಇನ್ನುಮೇಲೆ ಕಾಲೇಜುಗಳನ್ನು ಮತ್ತು ದೊಡ್ಡ ದೊಡ್ಡ ತಾಂತ್ರಿಕ ವಿದ್ಯಾಭ್ಯಾಸದ ಕಾಲೇಜುಗಳನ್ನು ಬರೀ ಪಟ್ಟಣಗಳಲ್ಲಿ ಸ್ಥಾಪನೆ ಮಾಡಬಾರದೆಂದು ಸರ್ಕಾರಕ್ಕೆ ಕೇಳಿಕೊಳ್ಳುತ್ತೇನೆ. ಪ್ರತಿ ತಾಲ್ಲೂಕ್ ಹೆಡ್‌ಕ್ವಾರ್ಟರ್ಸ್‌ಗಳಲ್ಲಿ ಕಾಲೇಜುಗಳನ್ನು ಸ್ಥಾಪನೆ ಮಾಡುವುದರಿಂದ ಗ್ರಾಮಾಂತರ ಪ್ರದೇಶಗಳಿಂದ ಬರುವ ವಿದ್ಯಾರ್ಥಿಗಳಿಗೆ ಮುಂದಿನ ವಿದ್ಯಾಭ್ಯಾಸ ಮಾಡಲು ಅನುಕೂಲವಾಗುತ್ತದೆ. ಪಟ್ಟಣಗಳಿಗೆ ಬರುವುದು ತಪ್ಪುತ್ತದೆ. ಮುಂದೆ ಅವರು ವಿದ್ಯಾಭ್ಯಾಸ ಮುಗಿದಮೇಲೆ ತಮ್ಮ ತಮ್ಮ ಕಸುಬುಗಳನ್ನು ತಾವೇ ಮಾಡಿಕೊಂಡು, ತಂದೆ ತಾಯಿಗಳಿಗೆ ಭಾರವಾಗದೆ, ಕುಟುಂಬದ ಪೋಷಣೆ ಮಾಡಿಕೊಂಡು ಹೋಗುತ್ತಾರೆ. ಉದ್ಯೋಗಕ್ಕಾಗಿ ಅಲೆಯುವುದು ತಪ್ಪುತ್ತದೆ. ಈ ವಿಚಾರಗಳನ್ನು ಮನಗಂಡು ನಮ್ಮ ಸರ್ಕಾರದವರು ಇನ್ನು ಮೇಲೆ ಎಲ್ಲಾ

(ಶ್ರೀ ಸೋಲೂರು ಸಿದ್ದಪ್ಪ)

ರೀತಿಯ ವಿದ್ಯಾಭ್ಯಾಸದ ವ್ಯವಸ್ಥೆಯನ್ನು ಪಟ್ಟಣಗಳಲ್ಲೇ ಪ್ರಾರಂಭಿಸುವುದನ್ನು ನಿಲ್ಲಿಸಿ ಮೈಸೂರು ಸಂಸ್ಥಾನದ ಎಲ್ಲಾ ತಾಲ್ಲೂಕ್ ಹೆಡ್‌ಕ್ವಾರ್ಟರ್ಸ್‌ಗಳಲ್ಲಿ ಪ್ರಾರಂಭ ಮಾಡಬೇಕು. ಮತ್ತು ಆಯಾ ಜಿಲ್ಲೆಗಳಿಗೆ ಅನುಗುಣವಾದ ರೀತಿಯಲ್ಲಿ ತಾಂತ್ರಿಕ ವಿದ್ಯೆಗಳನ್ನು ಕಲಿಸಬೇಕು. 1927ರಿಂದಲೂ ನಾನು ಇಲ್ಲಿದ್ದೇನೆ. ವಿದ್ಯಾಭ್ಯಾಸದ ಖರ್ಚಿಗಾಗಿ 33 ಕೋಟಿ ರೂಪಾಯಿಗಳ ಬೇಡಿಕೆಯನ್ನು ಸಭೆಯಮುಂದಿಟ್ಟಿದ್ದಾರೆ. 1927ರಲ್ಲಿ ಮಿರ್ಜಾ ಕಾಲದಲ್ಲಿ ಕೇವಲ 4 ಕೋಟಿ ರೂಪಾಯಿಗಳ ಬಡ್ಜೆಟ್ಟನು ಮಾತ್ರ ಮಂಡಿಸಿದರು. ಇವತ್ತು ಅದು 120 ಕೋಟಿ ರೂಪಾಯಿಗಳಿಗೇರಿದೆ. ಕೇವಲ ವಿದ್ಯಾಭ್ಯಾಸಕ್ಕೋಸ್ಕರವೇ 33 ಕೋಟಿ ರೂಪಾಯಿಗಳನ್ನು ಖರ್ಚು ಮಾಡುವಾಗ ರೈತರ ಮಕ್ಕಳು ಮುಂದುವರಿಯದಿದ್ದರೆ ಅನ್ಯಾಯವಾಗುತ್ತದೆ. ರೈತರ ಮಕ್ಕಳು ಸಹ ವಿದ್ಯಾವಂತರಾಗಬೇಕು. ಈಗ ಹೆಚ್ಚಿನ ಹಣ ಪಟ್ಟಣವಾಸಿಗಳಿಗೆ ಖರ್ಚಾಗುತ್ತದೆ. ಗ್ರಾಮಾಂತರ ಪ್ರದೇಶಗಳಲ್ಲಿರುವ ಜನಗಳು ಬಡವರು. ತುಂಬಾ ದರಿದ್ರಾವಸ್ಥೆಯಲ್ಲಿರುತ್ತಾರೆ. ಅವರು ವಿದ್ಯಾವಂತರಾಗುವುದಕ್ಕೆ ಬಹಳ ತೊಂದರೆಯಾಗಿದೆ. ಇದು ಸರ್ಕಾರಕ್ಕೆ ಗೊತ್ತಿರತಕ್ಕ ಅಂಶ. ನಮ್ಮ ವಿದ್ಯಾಮಂತ್ರಿಗಳಾದ ಶ್ರೀಮಾನ್ ಶಂಕರ ಗೌಡರಿಗೆ ಗ್ರಾಮಾಂತರ ಪ್ರದೇಶಗಳಲ್ಲಿನ ಜನಗಳ ಸ್ಥಿತಿಗತಿಗಳೆಲ್ಲವೂ ಚೆನ್ನಾಗಿ ಗೊತ್ತಿದೆ. ಈ ವಿಚಾರದಲ್ಲಿ ನಾನು ಹೆಚ್ಚು ಹೇಳುವುದಕ್ಕೆ ಕಾಲಾವಕಾಶವಿಲ್ಲ. ಒಟ್ಟಿನಲ್ಲಿ ವಿದ್ಯಾಭ್ಯಾಸದ ವ್ಯವಸ್ಥೆ ಸರ್ವತೋಮುಖವಾಗಿ ದೇಶದ ಎಲ್ಲಾ ಭಾಗಕ್ಕೂ ಅನ್ವಯವಾಗುವಹಾಗೆ ಅನುಕೂಲಮಾಡಿಕೊಡಬೇಕೆಂದು ನಾನು ಹೇಳುತ್ತೇನೆ.

ಇನ್ನು ಉಪಾಧ್ಯಾಯರ ವ್ಯವಸ್ಥೆಯನ್ನು ಮಾತ್ರ ಈಗ ಉಪಾಧ್ಯಾಯರು ಯಾವ ಯಾವ ತಾಲ್ಲೂಕುಗಳಲ್ಲಿದ್ದಾರೆಯೋ ಅವರು ಆಯಾ ತಾಲ್ಲೂಕುಗಳಲ್ಲಿಯೇ ಇದ್ದುಕೊಂಡು ಅವರವರ ಮನೆ ಮಠಗಳ ಕೆಲಸಗಳನ್ನು ಮಾಡಿಕೊಂಡು ಹೋಗುವುದಕ್ಕೆ ಅವಕಾಶವನ್ನು ಕೊಡದಂತೆ ಅವರನ್ನು ಬೇರೆ ಬೇರೆ ತಾಲ್ಲೂಕುಗಳಿಗೆ ವರ್ಗ ಮಾಡತಕ್ಕ ಒಂದು ನಿಯಮಾವಳಿಯನ್ನು ಗೊತ್ತುಮಾಡಬೇಕು. ಸ್ಕೂಲ್ ಕಟ್ಟಡಗಳನ್ನು ಕಟ್ಟತಕ್ಕ ಜವಾಬ್ದಾರಿಯನ್ನು ತಾಲ್ಲೂಕು ಬೋರ್ಡುಗಳಿಗೆ ವಹಿಸುವುದರಿಂದ ಅದು ಸರಿಯಾದ ರೀತಿಯಲ್ಲಿ ನಡೆಯುವುದಿಲ್ಲ. ಆದ್ದರಿಂದ ಸರ್ಕಾರದವರೇ ಅದಕ್ಕೆ ಹಣವನ್ನು ಒದಗಿಸಬೇಕು. ಗ್ರಾಮಾಂತರ ಪ್ರದೇಶಗಳಲ್ಲಿರುವ ಬಡಜನಗಳಿಗೆ ವಿದ್ಯಾಭ್ಯಾಸವನ್ನು ಒದಗಿಸಿಕೊಡಬೇಕೆಂದು ಸರ್ಕಾರದವರನ್ನು ಪ್ರಾರ್ಥಿಸಿಕೊಂಡು ಅಧ್ಯಕ್ಷರು ನನಗೆ ಮಾತನಾಡುವುದಕ್ಕೆ 5 ನಿಮಿಷ ಕಾಲಾವಕಾಶವನ್ನು ಕೊಟ್ಟಿದ್ದಕ್ಕಾಗಿ ಅವರಿಗೆ ವಂದಿಸಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎ. ನಂಜಪ್ಪ (ಶಾಂತಿನಗರ).—ಮಾನ್ಯ ಸಭಾಪತಿಯವರೇ, ಮಾನ್ಯ ವಿದ್ಯಾ ಇಲಾಖೆಯ ಮಂತ್ರಿಗಳು ಈ ಸಭೆಯ ಮುಂದಿಟ್ಟಿರತಕ್ಕ 33,57,28,700 ರೂಪಾಯಿಗಳ ಬೇಡಿಕೆಯನ್ನು ನಾನು ಅನುಮೋದಿಸುತ್ತಾ ಎರಡು ಮಾತುಗಳನ್ನು ಮಾತನಾಡುವುದಕ್ಕೆ ಇಚ್ಛೆ ಮಾಡುತ್ತೇನೆ. ಅಧ್ಯಕ್ಷರೇ, ನಮ್ಮ ಸಿವಿಲ್ ಸ್ಟೇಷನ್ನಿನಲ್ಲಿ ಸಾಧಾರಣವಾಗಿ ಬ್ರಿಟಿಷರ ಕಾಲದಿಂದ ಇದುವರೆಗೂ ಬಾಡಿಗೆ ಕಟ್ಟಡಗಳಲ್ಲಿ ಪ್ರೈಮರಿ ಮತ್ತು ಮಿಡಲ್ ಸ್ಕೂಲುಗಳನ್ನು ನಡೆಸುತ್ತಿದ್ದಾರೆ. ಸರ್ಕಾರ ಗಮನ ಕೊಡುತ್ತಿಲ್ಲ. ಈಗ ಸ್ಕೂಲು ನಡೆಯುತ್ತಿರುವ ಜಾಗದಲ್ಲಿ ಮಕ್ಕಳು ಓದುವುದಕ್ಕೆ ಆಗುವುದಿಲ್ಲ ಮಳೆ ಬಂದರೆ ಮಕ್ಕಳು ಒಳಗಡೆ ಕುಳಿತುಕೊಳ್ಳುವುದಕ್ಕಾಗುವುದಿಲ್ಲ. ಈಗ ಅಲ್ಲಿ ಒಂದು ಕಟ್ಟಡಕ್ಕೆ 60 ರೂಪಾಯಿಗಳ ಬಾಡಿಗೆಯನ್ನು ಕೊಡುತ್ತಿದ್ದಾರೆ. ಜೋಗು ಪಾಳ್ಯದಲ್ಲಿ ಒಂದು ಹೆಣ್ಣು ಮಕ್ಕಳು ಓದುವ ಸ್ಕೂಲನ್ನು ಬಾಡಿಗೆ ಕಟ್ಟಡದಲ್ಲಿ ನಡೆಸುತ್ತಿದ್ದಾರೆ. ಅನೇಕ ಸಲ ಈ ವಿಷಯವನ್ನು ನಾವು ಸರ್ಕಾರದ ಗಮನಕ್ಕೆ ತಂದಿದ್ದೇವೆ. ಆದರೆ ಇದುವರೆಗೂ ಈ ಬಗ್ಗೆ ಏನೂ ಕ್ರಮ ತೆಗೆದುಕೊಳ್ಳಲಿಲ್ಲ. ಅಲ್ಲಿ ಮಕ್ಕಳು ಓದುವುದಕ್ಕೆ ಆಗುವುದಿಲ್ಲ. ಅದನ್ನು ಮಾನ್ಯ ವಿದ್ಯಾಮಂತ್ರಿಗಳೂ ಸಹ ನೋಡಿಕೊಂಡು ಬಂದಿದ್ದಾರೆ. ಇದೇ ಸಿವಿಲ್ ಏರಿಯಾದಲ್ಲಿ ಆರ್ಸ್ಟಲರಿ ರೋಡಿನಲ್ಲಿ ಹರಿಜನರಿದ್ದಾರೆ. ಅಲ್ಲಿ ಸಾಧಾರಣವಾಗಿ 600—700 ಮಕ್ಕಳು ಇರಬಹುದು. ಅಲ್ಲಿ ನಡೆಸುತ್ತಿದ್ದಂಥ ಸ್ಕೂಲ್ ಬಿಲ್ಡಿಂಗಿನಲ್ಲಿ ಏನೋ ಅನಾನುಕೂಲವಾಗಿದೆಯೆಂದು ಅದನ್ನು ಒಂದು ಮೈಲಿ ದೂರಕ್ಕೆ ವರ್ಗಾಯಿಸಿದರು. ಆ ಕಟ್ಟಡ ಇನ್ನೂ ಹಾಗೆಯೇ ಇದೆ. ಅದು ಚೆನ್ನಾಗಿಯೂ ಇದೆ. ನಾನು ಕಾರ್ಪೋರೇಷನ್ ಕೌನ್ಸಿಲರ್ ಆಗಿದ್ದಾಗ ಆ ಕಟ್ಟಡವನ್ನು ರಿಪೇರಿ ಮಾಡಿದ್ದಾರೆ. ಈಗ ಆ ಕಟ್ಟಡದಲ್ಲಿದ್ದ ಸ್ಕೂಲನ್ನು ಮರ್ಫಿಟೌನಿಗೆ ವರ್ಗಾಯಿಸಿರುವುದರಿಂದ ಅಲ್ಲಿನ ಮಕ್ಕಳಿಗೆ ಕಷ್ಟವಾಗಿದೆ. ಜನಗಳು ಸರ್ಕಾರದವರನ್ನು ಆಕ್ಷೇಪಣೆ ಮಾಡುತ್ತಾರೆ. ಅಲ್ಲಿ ಹರಿಜನರೇ ಜಾಸ್ತಿ ಜನ ಇದ್ದಾರೆ. ಅಲ್ಲಿಂದ ಈಗ ಹೊಸದಾಗಿ ಷಿಫ್ಟ್ ಮಾಡಿರುವ ಸ್ಕೂಲಿಗೆ ಮಕ್ಕಳು ಒಂದು ಮೈಲಿ ದೂರ ನಡೆದುಕೊಂಡು ಹೋಗುವುದಕ್ಕೆ ತೊಂದರೆಯಾಗದೆ ಎಂದು ಅಲ್ಲಿನ ಜನಗಳು ಆಕ್ಷೇಪಣೆ ಮಾಡುತ್ತಿದ್ದಾರೆ. ಶ್ರೀಮಾನ್ ಕಂಠಿಯವರೂ ಸಹ ಅದನ್ನು ನೋಡಿಕೊಂಡು ಬಂದಿದ್ದಾರೆ. ಎಂ. ಎಲ್. ಎ. ಗಳು

ನೋಡಿದ್ದಾರೆ. ಆ ಬಿಲ್ಡಿಂಗ್ ಚೆನ್ನಾಗಿದೆ R. C. C. ಬಿಲ್ಡಿಂಗ್. ಆ ಕಟ್ಟಡದ ಮಾಲೀಕರು ಸ್ವಲ್ಪ ತೊಂದರೆಯಲ್ಲಿದ್ದಾರೆ. ಅದಕ್ಕೋಸ್ಕರ ಅವರು ರಿಪೇರಿ ಮಾಡಿಕೊಡುತ್ತಿರಲಿಲ್ಲ. ಆದರೂ ಸಹ ಆ ಕಟ್ಟಡ ಮಕ್ಕಳು ಓದುವುದಕ್ಕೆ ಚೆನ್ನಾಗಿತ್ತು. ಈಗ ಅದನ್ನು ಮರ್ಫಿಟೌನಿಗೆ ಹಾಕಿದ್ದಾರೆ. ಮೊದಲು ಇದ್ದ ಜಾಗಕ್ಕೆ ಒಂದು ಮೈಲಿ ದೂರ ಆಗಿದೆ. ಇದರಿಂದ ಅಲ್ಲಿನ ಮಕ್ಕಳಿಗೆ ತೊಂದರೆ ಯಾಗಿದೆ. ಇದನ್ನು ಸರ್ಕಾರದವರು ಗಮನಕ್ಕೆ ತೆಗೆದುಕೊಂಡು ಆ ತೊಂದರೆಯನ್ನು ನಿವಾರಣೆ ಮಾಡಬೇಕು. ಮೊದಲು ಇದ್ದ ಸ್ಥಳದಲ್ಲಿಯೇ ಸ್ಕೂಲನ್ನು ನಡೆಸುವುದಕ್ಕೆಪ್ರಯತ್ನ ಮಾಡಬೇಕು ಎಂದು ನಾನು ಈ ಸಂದರ್ಭದಲ್ಲಿ ತಿಳಿಸುತ್ತಿದ್ದೇನೆ.

ಆ ಮೇಲೆ ಹಾಗೆ ಆಸ್ಟ್ರೀನ್ ಟೌನ್, ನೀಲಸಂದ್ರ, ಮರ್ಫಿಟೌನ್ ಇತ್ಯಾದಿ ಸಿವಿಲ್ ಏರಿಯಾದಲ್ಲಿ ಸರ್ಕಾರದವರು ನಡೆಸುತ್ತಾ ಇರುವ ಪ್ರೈಮರಿ ಸ್ಕೂಲು ಮತ್ತು ಮಿಡಲ್ ಸ್ಕೂಲುಗಳಲ್ಲಿ ಓದುತ್ತಿರುವ ಹುಡುಗರಿಗೆ ಸರಿಯಾದ ಸೌಕರ್ಯವಿಲ್ಲ. ನಿಜವಾಗಿಯೂ ಸರ್ಕಾರದವರು ಆ ಮಕ್ಕಳನ್ನು ಕೊಲೆ ಮಾಡುತ್ತಿದ್ದಾರೋ ಏನೋ ಅನಿಸುತ್ತದೆ. ಆ ಮಕ್ಕಳಿಗೆ ಕುಡಿಯುವುದಕ್ಕೆ ನೀರು ಇಲ್ಲ. ಆ ಸ್ಕೂಲುಗಳ ಕಡೆ ಅಧಿಕಾರಿಗಳು ಯಾರಾದರೂ ನೋಡುತ್ತಾರೆಯೋ ಇಲ್ಲವೋ ಗೊತ್ತಿಲ್ಲ. ಬೆಳಿಗ್ಗೆ 9 ಗಂಟೆಯಿಂದ ಸಾಯಂಕಾಲ $4\frac{1}{2}$ ಗಂಟೆಯವರೆಗೆ ಅಲ್ಲಿ ನೀರೇ ಬರುವುದಿಲ್ಲ. ಓದುವ ಮಕ್ಕಳಿಗೆ ಕುಡಿಯುವುದಕ್ಕೆ ನೀರೇ ಇಲ್ಲ. ಈ ವಿಷಯದಲ್ಲಿ ನಾನು ಚೀಫ್ ಇಂಜಿನಿಯರ್ ಎಗ್ಸಿ ಕ್ಯುಟೀವ್ ಇಂಜಿನಿಯರುಗಳನ್ನು ನೋಡಿದೆ. ಎಲ್ಲಾ ಅಧಿಕಾರಿಗಳಿಗೂ ಕಾಗದ ಬರೆದಿದ್ದೇನೆ. ಮಂತ್ರಿಗಳಿಗೂ ಕಾಗದವನ್ನು ಬರೆದಿದ್ದೇನೆ. ಅಲ್ಲಿ ಮಕ್ಕಳಿಗೆ ತೊಂದರೆಯಾಗಿದೆ. ಅದಕ್ಕಾಗಿ ಅಲ್ಲ ಒಂದು ಓವರ್ ಹೆಡ್ ಟ್ಯಾಂಕ್ ಕಟ್ಟಿ ಅದರ ಮೂಲಕ ಸ್ಕೂಲಿನ ನಲ್ಲಿಗಳಿಗೆ ಕನೆಕ್ಷನ್ ಕೊಟ್ಟು ಓದುವ ಮಕ್ಕಳಿಗೆ ಕುಡಿಯುವ ನೀರಿಗೆ ಅನುಕೂಲ ಮಾಡಿಕೊಡಬೇಕು. ನಾನು ಸಂಬಂಧಪಟ್ಟ ಅಧಿಕಾರಿಗಳಿಗೆ ಬರೆದಿದ್ದೇನೆ. ಅವರು ಈ ಬಗ್ಗೆ ಏನು ಕ್ರಮ ತೆಗೆದುಕೊಂಡಿದ್ದಾರೋ ಗೊತ್ತಿಲ್ಲ. ಎಗ್ಸಿಕ್ಯುಟೀವ್ ಇಂಜಿನಿಯವರನ್ನು ನೋಡಿದರೆ ಯಾವ ಕೆಲಸವನ್ನೂ ಮಾಡಬಾರದು ಎಂದು ಸರ್ಕಾರದವರು ಬ್ಯಾನ್ ಮಾಡಿದ್ದಾರೆ ಎಂದು ಹೇಳುತ್ತಾರೆ. ಇದಕ್ಕೆ ನಾನಾದರೂ ಹೇಳುತ್ತೇನೆ. ಯಾವ ಕೆಲಸಗಳನ್ನು ಮಾಡಬಾರದು ಎಂದರೆ ಆ ಮಕ್ಕಳನ್ನು ಓದುವುದನ್ನು ಬಿಡಿಸಿ ಮನೆಗೆ ಕಳುಹಿಸಿಬಿಡಿ ಆ ಸ್ಕೂಲುಗಳಿಗೆಲ್ಲಾ ಬೀಗ ಹಾಕಿದರೆ ಚೆನ್ನಾಗಿರುತ್ತದೆ. ನಿಜವಾಗಿಯೂ ಬಹಳ ಅನ್ಯಾಯವಾಗುತ್ತಿದೆ. ಇದನ್ನು ಹೇಳುವುದಕ್ಕೆ ಮನಸ್ಸಿಗೆ ಬಹಳ ವ್ಯಥೆಯಾಗುತ್ತದೆ. ಅಲ್ಲ ಓದತಕ್ಕ ಮಕ್ಕಳು ತುಂಬಾ ಕಷ್ಟ ಪಡುತ್ತಿದ್ದಾರೆ. ಕಡ್ಡಾಯ ಶಿಕ್ಷಣ ಇರುವ ಕಡೆ ಸರ್ಕಾರದವರು ಗಮನ ಕೊಟ್ಟಿಲ್ಲ. ಅದರ ಬಗ್ಗೆ ಸರ್ಕಾರದವರು ನಿಗಾ ಕೊಡಬೇಕು. ಈಗಾಗಲೇ ನಾನು ಹೇಳಿ ದಂತಹ ಸ್ಕೂಲುಗಳ ವಿಷಯದಲ್ಲಿ ಸರ್ಕಾರದವರು ಗಮನ ಕೊಟ್ಟು ಅಧಿಕಾರಿಗಳಿಗೆ ತಿಳಿಸಿ ಅಲ್ಲಿರತಕ್ಕ ನ್ಯೂನತೆಗಳನ್ನೆಲ್ಲಾ ಸರಿಪಡಿಸಿ ಮಕ್ಕಳು ಓದುವುದಕ್ಕೆ ಸೌಕರ್ಯ ಮಾಡಿಕೊಡಬೇಕೆಂದು ನಾನು ಸರ್ಕಾರದವರನ್ನು ವಿನಯದಿಂದ ಕೇಳಿಕೊಳ್ಳುತ್ತೇನೆ.

ಇನ್ನು ಸಿವಿಲ್ ಏರಿಯಾದಲ್ಲಿ ಸರ್ಕಾರಿ ಹೈಸ್ಕೂಲು ಮತ್ತು ಕಾಲೇಜುಗಳು ಯಾವುದೂ ಇಲ್ಲ. ಇದುವರೆಗೂ ಸರ್ಕಾರದವರು ಆ ಕಡೆ ಗಮನ ಕೊಟ್ಟಿಲ್ಲ. ದಯೆಯಿಟ್ಟು ಅಲ್ಲಿನ ಜನಗಳಿಗೆ ಸರ್ಕಾರದವರು ಹೈಸ್ಕೂಲು ಮತ್ತು ಕಾಲೇಜುಗಳನ್ನು ಕಟ್ಟಿಸಿಕೊಟ್ಟು ಅನುಕೂಲ ಮಾಡಿಕೊಡ ಬೇಕೆಂದು ಎಂದು ಹೇಳಿ ಅಧ್ಯಕ್ಷರು ನನಗೆ ಮಾತನಾಡುವುದಕ್ಕೆ ಅವಕಾಶವನ್ನು ಕೊಟ್ಟಿದ್ದಕ್ಕಾಗಿ ವಂದಿಸಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಬೋಳಾ ರಘುರಾಮ ಶೆಟ್ಟಿ (ಕಾರ್ಕಳ).—ಸನ್ಮಾನ್ಯ ಸಭಾಪತಿಗಳೇ, ಮಾನ್ಯ ವಿದ್ಯಾ ಮಂತ್ರಿಗಳು ಈ ಸಭೆಯ ಮುಂದಿಟ್ಟಿರತಕ್ಕ ಬೇಡಿಕೆಯನ್ನು ನಾನು ವಿರೋಧಿಸುತ್ತೇನೆ. ನಮ್ಮ ದೇಶದಲ್ಲಿ ನಾವು ಪ್ರಜಾಪ್ರಭುತ್ವವನ್ನು ಸ್ವೀಕಾರ ಮಾಡಿದ್ದೇವೆ. ಪ್ರಜಾಪ್ರಭುತ್ವ ದಲ್ಲಿ ಪ್ರತಿಯೊಬ್ಬ ವಯಸ್ಕರಿಗೂ ಕೂಡ ಮತದಾನದ ಹಕ್ಕನ್ನು ಕೊಟ್ಟಿದ್ದೇವೆ. ನಮ್ಮ ದೇಶದಲ್ಲಿ ಪ್ರಜಾಪ್ರಭುತ್ವ ಉಳಿಯಬೇಕಾದರೆ ಪ್ರತಿಯೊಬ್ಬ ವಯಸ್ಕನೂ ಕೂಡ ನಮ್ಮ ದೇಶದ ರಾಜಕೀಯ ಧೋರಣೆಗಳು ಏನಿವೆಯೋ ಅವನ್ನು ಅರ್ಥಮಾಡಿಕೊಳ್ಳುವ ಒಂದು ತಿಳುವಳಿಕೆಯನ್ನು ಅವರಿಗೆ ಸರ್ಕಾರ ಮಾಡಿಕೊಡದಿದ್ದರೆ ನಮ್ಮ ದೇಶದ ಪ್ರಜಾಪ್ರಭುತ್ವ ವನ್ನು ಒಂದು ದುರಂತಕ್ಕೆ ಎಳೆಯುವ ಸಂದರ್ಭ ಉಂಟು. ಈ ದೃಷ್ಟಿಯಿಂದ ನೋಡುವುದಾದರೆ ನಮ್ಮ ದೇಶದಲ್ಲಿ ಸರ್ಕಾರದವರು ಪ್ರಾಥಮಿಕ ಮತ್ತು ಮಾಧ್ಯಮಿಕ ವಿದ್ಯಾಭ್ಯಾಸಕ್ಕೆ ಹೆಚ್ಚಿನ ಪ್ರೋತ್ಸಾಹವನ್ನು ಕೊಡಬೇಕು. ಈಗ ಸರ್ಕಾರದವರು ಕಡ್ಡಾಯ ಶಿಕ್ಷಣವನ್ನು ಜಾರಿಗೆ ತಂದಿ ದ್ದಾರೆ. ಆದರೆ ಈ ಕಡ್ಡಾಯ ಶಿಕ್ಷಣ ಎಲ್ಲಾ ಕಡೆಗಳಲ್ಲಿಯೂ ಜಾರಿಯಲ್ಲಿಲ್ಲ. ಗುಡ್ಡಗಾಡು ಪ್ರದೇಶ ದಲ್ಲಿ ಕಡ್ಡಾಯ ಶಿಕ್ಷಣ ಈಗ ಸರ್ಕಾರದವರು ಹೇಳುವಷ್ಟು ಪ್ರಮಾಣದಲ್ಲಿ ಎಲ್ಲಾ ಕಡೆಗಳಲ್ಲೂ ಜಾರಿ ಯಲ್ಲಿ ಇಲ್ಲ ಎಂದು ನಾನು ಹೇಳುತ್ತೇನೆ. ರೆಕಾರ್ಡ್ ಪ್ರಕಾರ ಕಡ್ಡಾಯ ಶಿಕ್ಷಣವನ್ನು ಎಲ್ಲಾ

(ಶ್ರೀ ಬೋಳ್ಳಾ ರಘುರಾಮ ಶೆಟ್ಟಿ)

ಕಡೆ ಜಾರಿಯಲ್ಲಿ ತಂದಿದ್ದೇವೆ ಎಂದು ಇದ್ದರೂ ಕೂಡ ಇದನ್ನು ಯಾವ ಮಟ್ಟದಲ್ಲಿ ಎಷ್ಟರವಟ್ಟಿಗೆ ಜಾರಿಗೆ ತರಬೇಕಾಗಿತ್ತೋ ಅಷ್ಟರಮಟ್ಟಿಗೆ ಜಾರಿಗೆ ತಂದಿಲ್ಲ. ಗುಡ್ಡಗಾಡು ಪ್ರದೇಶದಲ್ಲಿ ಎಷ್ಟೋ ಮಕ್ಕಳು ಶಾಲೆಗೆ ಹೋಗದೆ ಬೀದಿಗಳಲ್ಲಿ ಅಲೆಯುತ್ತಿದ್ದಾರೆ. ಆದ್ದರಿಂದ ಆ ಪ್ರದೇಶದಲ್ಲಿ ಕಡ್ಡಾಯ ಶಿಕ್ಷಣವನ್ನು ಜಾರಿಗೆ ತಂದು ಅವಕ್ಕೆ ಬೇಕಾದ ಶಾಲಾಕಟ್ಟಡ, ಉಪಾಧ್ಯಾಯರು ಇತ್ಯಾದಿ ಸೌಕರ್ಯಗಳನ್ನು ಒದಗಿಸಿ ಕೊಡುವುದಕ್ಕೆ ತಕ್ಕಕ್ರಮವನ್ನು ಕೈಗೊಳ್ಳಬೇಕು. ಮುಖ್ಯವಾಗಿ ಎಲ್ಲಾ ಕಡೆಯಲ್ಲಿಯೂ ಶಾಲೆಗಳನ್ನು ಜಾಸ್ತಿಮಾಡುವುದಲ್ಲದೆ ಉಪಾಧ್ಯಾಯರ ಸಂಖ್ಯೆಯನ್ನೂ ಜಾಸ್ತಿಮಾಡ ಬೇಕು. ಮತ್ತು ಶಾಲೆಗಳಿಗೆ ಬೇಕಾದ ಉಪಕರಣಗಳ ಸೌಕರ್ಯ ಬೆಂಚು, ಕುರ್ಚಿ ಇತ್ಯಾದಿಗಳನ್ನು ಒದಗಿಸಿಕೊಡಬೇಕು. ಈಗ ಹಳ್ಳಿಗಳಲ್ಲಿ ಉಪಾಧ್ಯಾಯರುಗಳಿಗೆ ಕೊಡುವ ಸಂಬಳ ಸಾಕಾಗುವು ದಿಲ್ಲ. ಹೀಗಿರುವಾಗ ಉಪಾಧ್ಯಾಯರುಗಳನ್ನು ಅವರ ಊರುಗಳಿಂದ ಬೇರೆ ಬೇರೆ ಸ್ಥಳಗಳಿಗೆ ಟ್ರಾನ್ಸ್‌ಫರ್ ಮಾಡುತ್ತಾರೆ. ಆದರಲ್ಲಿಯೂ ಕೂಡ ಕೆಲವು ಮಹನೀಯರು ಉಪಾಧ್ಯಾಯರು ರಾಜ ಕೀಯದಲ್ಲಿ ಪ್ರವೇಶ ಮಾಡುತ್ತಾರೆ, ಆದ್ದರಿಂದ ಅವರನ್ನು ಅವರವರ ಸ್ಥಳದಲ್ಲಿ ಇಡಬಾರದು, ಬೇರೆ ಕಡೆ ವರ್ಗಮಾಡಬೇಕೆಂದು ಹೇಳಿದ್ದಾರೆ. ಅದು ಸರಿಯಲ್ಲ. ನಾನು ಅದನ್ನು ವಿರೋಧಿಸುತ್ತೇನೆ. ಈಗಿನ ಜೀವನದ ಮಟ್ಟ, ಆರ್ಥಿಕಸ್ಥಿತಿ ಬಹಳ ದುಸ್ಥಿತಿಯಲ್ಲಿರುವಾಗ ಬಡ ಉಪಾಧ್ಯಾಯರನ್ನು ಅವರು ಇರುವ ಊರುಗಳನ್ನು ಬಿಟ್ಟು ಬೇರೆ ಊರುಗಳಿಗೆ ಕಳುಹಿಸಿದರೆ ನಿಜವಾಗಿಯೂ ಈಗಿನ ಆರ್ಥಿಕ ಸ್ಥಿತಿಯಲ್ಲಿ ಅವರು ಜೀವನ ಮಾಡುವುದಕ್ಕೆ ಸಾಧ್ಯವಿಲ್ಲ. ಉಪಾಧ್ಯಾಯರು ಶಾಲೆಯ ಕೆಲಸ ವನ್ನು ಮಾಡದಿದ್ದರೆ, ಅವರು ರಾಜಕೀಯದಲ್ಲಿ ಪ್ರವೇಶ ಮಾಡಿದರೆ ಅವರ ಮೇಲೆ ಕ್ರಮತೆಗೆದುಕೊಳ್ಳು ವುದಕ್ಕೆ ಅವಕಾಶವಿದೆ. ಸ್ಥಳದಲ್ಲಿರತಕ್ಕ ಉಪಾಧ್ಯಾಯರು ಏನಾದರೂ ಒಂದು ತಪ್ಪುಮಾಡಿದರು ಎಂದು ಒಂದು ನೆಪ ಹುಡುಕಿ ಬೇರೆ ಸ್ಥಳಕ್ಕೆ 15-20 ಮೈಲಿ ದೂರದ ಊರುಗಳಿಗೆ ವರ್ಗಮಾಡಿದರೆ ಅವರಿಗೆ ತೊಂದರೆಯಾಗುತ್ತದೆ. ಆ ಸ್ಥಳಗಳಲ್ಲಿ ಅವರಿಗೆ ವಾಸಮಾಡುವುದಕ್ಕೆ ಮನೆಗಳು ಸಿಕ್ಕುವು ದಿಲ್ಲ. 4 ಮೈಲಿ 5 ಮೈಲಿ ದೂರದಲ್ಲಿ ಅವರು ವಾಸಮಾಡಿಕೊಂಡು ಸ್ಕೂಲುಗಳಿಗೆ ಬರಬೇಕಾಗು ತ್ತದೆ. ಅಂಥ ಸ್ಥಳಕ್ಕೆ ಹೋಗಿ ಸರಿಯಾಗಿ ಕೆಲಸ ಮಾಡುವುದು ಅವರಿಗೆ ಕಷ್ಟವಾಗುತ್ತದೆ. ಅನೇಕ ಕಡೆಗಳಲ್ಲಿ ಟ್ರಾನ್ಸ್‌ಫರ್ ಆದ ಟೀಚರ್ಸ್ ಅಸಂತುಷ್ಟರಾಗಿದ್ದಾರೆ. ಇದೇ ರೀತಿ ಇದು ಬೆಳೆದು ಕೊಂಡುಹೋದರೆ ಶಿಕ್ಷಕರು ಹಳ್ಳಿಗಳಿಗೆ ಹೋಗಿ ಕೆಲಸ ಮಾಡಲಿಕ್ಕೆ ಅವರು ಒಪ್ಪಲಿಕ್ಕಿಲ್ಲ. ಇನ್ನು ಮಂಗಳೂರು ಜಿಲ್ಲೆಯ ವಿಷಯ ಒಂದು ಹೇಳುತ್ತೇನೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 13 ಸೈನ್ಸ್ ಕಾಲೇಜುಗಳಿವೆ, ಒಂದು ಮೆಡಿಕಲ್ ಕಾಲೇಜು ಇದೆ, ಎರಡು ಎಂಜನಿಯರಿಂಗ್ ಕಾಲೇಜುಗಳಿವೆ, ಟೀಚರ್ಸ್ ಟ್ರೈನಿಂಗ್ ಕಾಲೇಜುಗಳು ಎರಡು ಇವೆ, ಲಾ ಕಾಲೇಜು ಒಂದು ಇದೆ. ಮೈಸೂರು ರಾಜ್ಯದಲ್ಲಿ ಸೇರ್ಪಡೆಯಾಗುವ ಪೂರ್ವದಲ್ಲಿ ನಮ್ಮ ಜಿಲ್ಲೆಯು ಮದ್ರಾಸು ರಾಜ್ಯದಲ್ಲಿದ್ದಾಗ ವಿದ್ಯಾ ಭ್ಯಾಸದ ಮಟ್ಟ, ಶಿಕ್ಷಣ ಕ್ರಮ ಬಹುಮಟ್ಟಿಗೆ ಮೈಸೂರು ರಾಜ್ಯಕ್ಕಿಂತ ಹೆಚ್ಚಿನ ಮಟ್ಟದಲ್ಲಿತ್ತು. ಅಂಥ ವಿದ್ಯಾಮಟ್ಟವನ್ನು ಇನ್ನುಮುಂದೆ ಸಹ ಮುಂದುವರಿಸಿಕೊಂಡು ಹೋಗಬೇಕು. ನಮ್ಮ ಜಿಲ್ಲೆಗೆ ಒಂದು ಪ್ರತ್ಯೇಕವಾದ ಯೂನಿವರ್ಸಿಟಿ ಮಾಡಿಕೊಡಬೇಕು ಎಂಬುದನ್ನು ಸರಕಾರ ಗಮನದಲ್ಲಿಟ್ಟುಕೊಂಡು ಆಶ್ವಾಸನೆ ಕೊಟ್ಟಿದೆ. ಆದರೆ ಅದು ಇದುವರೆಗೆ ಪೂರೈಸಿಲ್ಲ. ಈ ಆಶ್ವಾಸನವನ್ನು ಕೂಡಲೇ ಪೂರೈಸಿಕೊಡಬೇಕು ಎಂದು ಹೇಳಿ, ನನ್ನ ಮಾತು ಮುಗಿಸುತ್ತೇನೆ.

[MR. SPEAKER in the Chair]

† ಶ್ರೀ ಕೆ. ಪ್ರಭಾಕರ್ (ವರ್ತೂರು).—ಮಾನ್ಯ ಅಧ್ಯಕ್ಷರೇ, ವಿದ್ಯಾಖಾತೆಯ ಬೇಡಿಕೆಯನ್ನು ಸಂಪೂರ್ಣವಾಗಿ ನಾನು ಅನುಮೋದಿಸುತ್ತೇನೆ. ಶ್ರೀಮಾನ್ ಸೋಲೂರು ಸಿದ್ದಪ್ಪನವರು ಹೇಳಿರುವ ಹಾಗೆ ಹರಿಜನರ ಸಾರ್ವಜನಿಕ ವಿದ್ಯಾರ್ಥಿನಿಲಯವನ್ನು ಬೆಳೆಸುವುದಕ್ಕೆ ಮುಂದುವರಿಯಬೇಕು ಮತ್ತು ಇದಕ್ಕೆ ಬುನಾದಿ ಹಾಕುವುದಕ್ಕೆ ಸರಕಾರ ಹೆಚ್ಚು ಪುರಸ್ಕಾರ ಕೊಡಬೇಕು ಎಂಬುದನ್ನು ವಿದ್ಯಾಮಂತ್ರಿಗಳ ಗಮನಕ್ಕೆ ತರಲು ಬಯಸುತ್ತೇನೆ.

ಸಾರ್ವಜನಿಕ ಹಾಸ್ಟೆಲ್ ಬೆಳೆಸಬೇಕು ಎಂಬ ನೀತಿ ಸರಕಾರ ಮುಂದುವರಿಸಿಕೊಂಡು ಹರಿಜನರ ಹಾಸ್ಟೆಲಿನಲ್ಲಿ 25 ಸೀಟುಗಳನ್ನು ಬೇರೆಯವರಿಗೆ ಕೊಡಬೇಕು ಎಂದು ಒಂದು ಕಾನೂನು ಮಾಡಬೇಕು. ಅದೇ ರೀತಿಯಾಗಿ ಸರಕಾರದ ಗ್ರಾಂಟು ತೆಗೆದುಕೊಂಡು ಬೇರೆ ಜನರಲ್ ಹಾಸ್ಟೆಲ್ ಮಾಡಿರತಕ್ಕಂಥವುಗಳಿಗೆ ಇದನ್ನು ಅನ್ವಯ ಮಾಡಿಲ್ಲ. ಸರಕಾರದ ನೀತಿ ಪೂರ್ತಿಯಾಗಿ ಜಾರಿಗೆ ಬಂದಿಲ್ಲ ಎಂದು ಹೇಳಿದರೆ ಖಂಡಿತವಾಗಿ ಅದು ತಪ್ಪಾಗಲಾರದು. ಇದನ್ನು ಸರಿಪಡಿಸಬೇಕು. ಬೇರೆ ವಿದ್ಯಾರ್ಥಿ ನಿಲಯಗಳಿಗೂ ಇದನ್ನು ಅನ್ವಯಿಸಿ ಜಾರಿಗೆ ತರಬೇಕು ಎಂದು ತಿಳಿಸುತ್ತೇನೆ.

ಇನ್ನು ಸ್ಕಾಲರ್‌ಶಿಪ್ ಕೊಡತಕ್ಕ ಪದ್ಧತಿ ಇದೆ. ಇದು ಒಳ್ಳೆಯ ಪದ್ಧತಿ. ಎಷ್ಟೋ ಜನರಿಗೆ ಸ್ಕಾಲರ್‌ಶಿಪ್ ಸಿಕ್ಕುತ್ತದೆ. ಆದರೆ ಕಾರಣಾಂತರದಿಂದ ಬಡ ಮಕ್ಕಳಿಗೆ ಇದು ಖೋತಾ ಆಗುತ್ತದೆ. ಬಡ ಮಕ್ಕಳಿಗೆ ಹೆಚ್ಚಿನ ಸಂಖ್ಯೆಯಲ್ಲಿ ಇದು ಸಿಕ್ಕುವಹಾಗೆ ಮಾಡಬೇಕು. ಟೆಕ್ಸ್ಟ್‌ಬುಕ್ ಸ್ಟೇಷನರಿ, ಸೀಸಕಡ್ಡಿ, ಹಾಸ್ಟಲ್ ಸೌಕರ್ಯ ಇವು ಬಡ ವಿದ್ಯಾರ್ಥಿಗಳಿಗೋಸ್ಕರ ಇವೆ. ಸರಕಾರ ಇದನ್ನು ಕೊಡುತ್ತಾರೆ. ಆದರೆ ಕಾರಣಾಂತರದಿಂದ ಬಡ ಮಕ್ಕಳಿಗೆ ಇವು ಸಕಾಲದಲ್ಲಿ ಸಿಕ್ಕುವುದಿಲ್ಲ. ಆದುದರಿಂದ ಈ ಸೌಕರ್ಯ ಅವರಿಗೆ ಸಕಾಲದಲ್ಲಿ ಸಿಕ್ಕುವಹಾಗೆ ಮಾಡಬೇಕು.

ವಿದ್ಯೆ ಎಲ್ಲದಕ್ಕೂ ಬುನಾದಿಯಾಗಿದೆ. ಇನ್ನು ಫೌಂಡೇಷನ್ ಆಫ್ ಎಜ್ಯುಕೇಷನ್ ಕಲಿಸತಕ್ಕಂಥ ಮಾಧ್ಯಮವಾಗಿರುವ ಭಾಷೆಯಾಗಿದೆ. ಇದರಿಂದ ಪ್ರಜಾಕೋಟಿ ತಯಾರ್ಮಾಡಬೇಕೆಂದು ವಿಚಾರ ಇಟ್ಟುಕೊಂಡು ನಮ್ಮ ದೇಶದಲ್ಲಿ ಇಂದು ಡೆಮೋಕ್ರಾಟಿಕ್ ಸೋಷಿಯಾಲಿಜಂ ಶ್ರದ್ಧೆಯ ಜ್ಯೋತಿ ಸುಭದ್ರವಾಗಿ ಬೆಳಗುವಂತೆ ಸರಕಾರ ಪ್ರಯತ್ನ ಮಾಡುತ್ತಿದ್ದಾರೆ. ಟೆಕ್ಸ್ಟ್‌ಬುಕ್ ಮೂಲಕ ಚಿಕ್ಕ ಮಕ್ಕಳ ಮನಸ್ಸು ಬದಲಿಸುವಂತೆ ಪ್ರಯತ್ನ ಮಾಡಬೇಕಾಗಿದೆ. ಹಾಸ್ಟೆಲ್ ಮ್ಯಾನೇಜಿಂಗ್ ಕಮಿಟಿಯು ಆಡಿಟ್ ಮಾಡುವುದು ಎನ್ನತಕ್ಕಂಥಾದ್ದನ್ನು ವರ್ಷೇ ವರ್ಷೇ ಸಕಾಲದಲ್ಲಿ ನಡೆಸಬೇಕು. ಈ ಮ್ಯಾನೆಜಿಂಗ್ ಕಮಿಟಿಯು ಬದಲಾವಣೆಯಾಗುತ್ತಿರಬೇಕು. ಯಾಕೆಂದರೆ, ಅದರಲ್ಲಿ ಕೆಲವು ಕದೀಮರು ಸೇರಿಕೊಂಡಿರುತ್ತಾರೆ. ಅಂಥವರು ಹಾಸ್ಟೆಲ್ಲಿಗೆ ದೊರೆಯುವ ರೇಷನ್ನನ್ನು ದುರುಪಯೋಗ ಮಾಡಿಕೊಳ್ಳುತ್ತಾರೆ. ಆದುದರಿಂದ ಸಕಾಲದಲ್ಲಿ ಬದಲಾವಣೆ ಮಾಡಬೇಕು. ಕೆಲವು ಕದೀಮರು ತಮ್ಮ ಸ್ಥಾನ ಉಳಿಸಿಕೊಳ್ಳುವುದಕ್ಕಾಗಿ ತಕರಾರು ಮಾಡಿ ಹೈಕೋರ್ಟಿಗೆ ಹೋಗಿ ರಿಟ್ ಅರ್ಜಿ ಹಾಕಿದ ನಿದರ್ಶನಗಳಿವೆ. ಇದಕ್ಕೆ ಗಮನ ಕೊಡಬೇಕು.

ಇನ್ನು ಬೇಸಿಕ್ ಎಜ್ಯುಕೇಷನ್ ಬಗ್ಗೆ ಒಂದು ವಿಚಾರ ಹೇಳಬೇಕಾಗಿದೆ. ಈ ಬೇಸಿಕ್ ಎಜ್ಯುಕೇಷನ್ ನೀತಿಯನ್ನು ಸರಕಾರ ಎಲ್ಲಿ ಕೈ ಬಿಡುತ್ತಾರೋ ಎಂದು ಸಂಶಯ ಬಂದಿದೆ. ಬೇಸಿಕ್ ಎಜ್ಯುಕೇಷನ್ ಅನ್ನು ಹೆಚ್ಚು ರೂಢಿಗೆ ತರಬೇಕು. ಇದರಲ್ಲಿ ಏನಾದರೂ ನ್ಯೂನತೆಗಳು ಕಂಡುಬಂದರೆ ಅವುಗಳ ನಿವಾರಣೆ ಮಾಡುವುದಕ್ಕೆ ಪ್ರಯತ್ನ ಮಾಡಬೇಕು. ಹಿಂದಿನ ಹಳೇ ಪದ್ಧತಿಯಲ್ಲಿ ಅಕ್ಷರ ಬರೆಯುವುದು ಒತ್ತು ಕಾಗುಣಿತ ಕಲಿಸುವುದು ಬಹಳ ಬಂದೋಬಸ್ತ್ ಆಗಿ ಇದ್ದಿತು. ಈಗ ಚಿತ್ರಪಟ ಇಟ್ಟು ಅಕ್ಷರ ಮಾಲೆ ಕಲಿಸುತ್ತಾರೆ. ಚಿತ್ರದಲ್ಲಿ ಇದು ಕುದುರೆ ಎಂದು ತೋರಿಸಿ ಕಲಿಸುತ್ತಾರೆ. ಹುಡುಗರಿಗೆ ಕುದುರೆ ಅಂದರೆ ಹುಡುಗರು ಆಟವಾಡುವ ಕೋಲು ಕುದುರೆ ಅವರಿಗೆ ಭಾಸವಾಗುತ್ತದೆಯೇ ಹೊರತು ಕಾಗುಣಿತಾಕ್ಷರಗಳು ಮರೆತುಹೋಗುತ್ತವೆ. ಹಳೇ ಪದ್ಧತಿಯಿಂದ ಕಲಿಸುವುದು ಒಳ್ಳೆಯದಾಗಿತ್ತು. ಆದುದರಿಂದ ಈ ಹೊಸ ಪದ್ಧತಿಯ ವಿಚಾರದಲ್ಲಿ rethinking is necessary ಎಂದು ಹೇಳುತ್ತೇನೆ. ಸ್ಕೂಲು ಇನ್‌ಸ್ಪೆಕ್ಟ್ ಮಾಡುವುದನ್ನು ಅಧಿಕಾರಿಗಳು ಪ್ರೋಗ್ರಾಂ ಕೊಟ್ಟು ಹೋಗಬಾರದು. ಯಾಕಂದರೆ, ಯಾರಾದರೂ ಬರುತ್ತಾರೆ ಎಂದು ತಿಳಿದರೆ ಎಲ್ಲ ವ್ಯವಸ್ಥೆ ಮಾಡಿ, ಚನ್ನಾಗಿ ಬಟ್ಟೆ ಹಾಕಿಕೊಂಡು ಎಲ್ಲರೂ ಬರುತ್ತಾರೆ. ನಿಜ ಪರಿಸ್ಥಿತಿ ಗೊತ್ತಾಗುವುದಿಲ್ಲ. ಎಲ್ಲವೂ ಸರಿಯಾಗಿ ಇದೆ ಎಂದು ರಿಪೋರ್ಟಿನಲ್ಲಿ very good ಎಂದು ಬರೆದುಕೊಂಡು ಬರುತ್ತಾರೆ. ಆದುದರಿಂದ ಅನಿರೀಕ್ಷಿತವಾಗಿ ಸ್ಕೂಲುಗಳಿಗೆ ಭೇಟಿ ಕೊಟ್ಟು ಅಲ್ಲಿಯ ವಾಸ್ತವಾಂಶ ತಿಳಿದುಕೊಂಡು ಉತ್ತಮ ಪಡಿಸುವುದಕ್ಕೆ ಪ್ರಯತ್ನ ಮಾಡಬೇಕು ಎಂದು ಹೇಳುತ್ತೇನೆ.

ಪೋಲೀಸಿನವರಿಗೆ ಒಂದೇ ಮಾದರಿಯ ಯೂನಿಫಾರಂ ಬಟ್ಟೆ ಇರುವ ಹಾಗೆ ಉಪಾಧ್ಯಾಯರಿಗೆ ಯೂನಿಫಾರಂ ಬಟ್ಟೆ ಕೊಡಬೇಕು. ಪೋಲೀಸರ ಡ್ರೆಸ್ಸು ಕೊಡಬೇಕು ಎಂದು ಅಲ್ಲ. ಬೇರೆ ರೀತಿಯ ಒಳ್ಳೇ ಆಕರ್ಷಣೀಯವಾಗಿರುವ ಉಡುಪನ್ನು ಅವರಿಗೆ ಕೊಡಬೇಕು. ಅವರು ಇಂಥವರು ಎಂದು ಎಲ್ಲರಿಗೂ ತಿಳಿದುಬರುವ ಹಾಗೆ ಇದ್ದು ಅವರ ಬಗ್ಗೆ ಗೌರವ ಹೆಚ್ಚಿಸುವಂತೆ ಮಾಡಬೇಕು. ಡಿಪ್ರೆಸ್ಡ್ ಕ್ಲಾಸ್ ಬಡ ವಿದ್ಯಾರ್ಥಿಗಳಿಂದ ಫೀಜ್ ತೆಗೆದುಕೊಳ್ಳಬಾರದು, ಅದನ್ನು ವಜಾ ಮಾಡಿದ್ದೇವೆ ಎಂದು ಹೇಳುವುದು ಪೇಪರಿನಲ್ಲಿ ಮಾತ್ರ ಉಳಿದಿದೆ. ಅಡ್ಮಿಷನ್ ಫೀಜ್ ತೆಗೆದುಕೊಳ್ಳುತ್ತಾರೆ. ಫೀಜ್ ವಜಾ ಮಾಡಿದ್ದರೂ ಕೂಡ ಕೆಲವು ಸ್ಕೂಲುಗಳಲ್ಲಿ 24, 18, 8 ರೂಪಾಯಿ ಹೀಗೆ ಬೇರೆ ಬೇರೆ ಕ್ಲಾಸುಗಳಿಗೆ ಫೀಜ್ ಇದೆ. ಇದು ಯಾವ ರೀತಿ ಆಗಿದೆ ಎಂದರೆ operation is a success but life is a failure ಎಂದು ಹೇಳಿದ ಹಾಗೆ ಆಗಿದೆ. ಮಾರ್ಚ್ 31ರವರೆಗೆ ಫೀಜನ್ನು ತೆಗೆದುಕೊಳ್ಳಬಾರದು ಎಂದು ಆರ್ಡರ್ ಇದ್ದರೂ ಕೂಡ ಈ ಆರ್ಡರ್ ಜೂನ್ ತಿಂಗಳಿನಲ್ಲಿ ಅವರ ಕೈ ಸೇರುವುದರಿಂದ ಎರಡು ಮೂರು ತಿಂಗಳ ಫೀಜ್ ವಸೂಲ್ಮಾಡುತ್ತಾರೆ. ಫೀಜ್ ಕೊಡತಕ್ಕ ಶಕ್ತಿ ಇಲ್ಲದವರು ಸ್ಕೂಲು ಬಿಟ್ಟು ಹೋಗುತ್ತಾರೆ. ಈಗ ಫೀಜ್ ಕೊಡಿ ಮುಂದಕ್ಕೆ ರಿಫಂಡ್ ಕೊಡುತ್ತೇವೆಂದು ಹೇಳುತ್ತಾರೆ. ಆದರೆ ಹಣ ವಾಪಸ್ಸು ಬರುವುದಿಲ್ಲ. ಆದುದರಿಂದ ಈ ನ್ಯೂನತೆಯನ್ನು ತಪ್ಪಿಸಬೇಕು ಎಂದು ಹೇಳುತ್ತೇನೆ.

(ಶ್ರೀ ಕೆ. ಪ್ರಭಾಕರ್)

ಇನ್ನು ಸ್ಕೂಲು ಇರತಕ್ಕ ಸ್ಥಳದಲ್ಲಿ ಸ್ಕೂಲು ಜೋನು ಎಂದು ಮಾಡಿ Drive slowly, ಮಕ್ಕಳು ಅಪಾಯ ಎಂದು ಬೋರ್ಡು ಹಾಕಿಸಬೇಕು. ಇದಕ್ಕಾಗಿ ಒಂದು ಜನರಲ್ ಸರ್ಕ್ಯುಲರ್ ಕಳುಹಿಸಬೇಕು.

ಇನ್ನು ಮಧ್ಯಾಹ್ನದ ಊಟದ ಬಗ್ಗೆ ಹೇಳುವುದಾದರೆ, ಅದಕ್ಕೆ ಹಣ ಖರ್ಚು ಆಗುತ್ತದೆ. ಆದರೆ ವ್ಯವಸ್ಥೆ ಸರಿಯಾಗಿಲ್ಲ. ಆದುದರಿಂದ ಇದರ ಬಗ್ಗೆ ಒಂದು ರೀತಿಯ ಸುವ್ಯವಸ್ಥೆ ಮಾಡಬೇಕು ಎಂದು ಹೇಳುತ್ತೇನೆ.

ಕೊಡತಕ್ಕಂಥ ಶಿಕ್ಷಣದಿಂದ ಬಡವರಿಗೆ ಲಾಭವಾಗಿಲ್ಲ ಎಂದು ಹೇಳುತ್ತೇನೆ. ನಮ್ಮ ವರ್ತೂರು ಗ್ರಾಮಕ್ಕೆ ಒಂದು ಸಾರ್ವಜನಿಕ ಹಾಸ್ಟೆಲ್ ಬೇಕಾಗಿದೆ. ಅದನ್ನು ಕೊಡಬೇಕು ಎಂದು ಕೇಳಿಕೊಳ್ಳುತ್ತೇನೆ. ಸ್ಕೂಲು ಕಟ್ಟಡ ಕಟ್ಟಿಸುವ ವಿಚಾರದಲ್ಲಿ ಎಂ. ಎಲ್. ಎ. ಜನರ ಹಾವಳಿ ಮತ್ತು ಇನ್‌ಫ್ಲುಯೆನ್ಸ್ ಮಾಡುವುದಕ್ಕೆ ಆಸ್ಪದ ಕೊಡಬಾರದು. ಒಂದು ರೆಗ್ಯುಲರ್ ಪ್ಯಾಟರ್ನ್ ಸ್ಕೀಂ ಇಟ್ಟುಕೊಂಡು ಸ್ಕೂಲು ಕಟ್ಟಡ ಕೊಡುವ ಹಾಗೆ ಮಾಡಬೇಕೆಂದು ಈ ಸಂದರ್ಭದಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಇನ್ನು ವಿದ್ಯಾಪ್ರಗತಿ ವಿಚಾರದಲ್ಲಿ ಒಂದು ಮಾತು ಹೇಳುತ್ತೇನೆ. ಡಾಕ್ಟರ್ ಸಿ. ಆರ್. ರೆಡ್ಡಿಯವರು ಬ್ಯಾಕ್‌ವರ್ಡ್ ಕ್ಲಾಸ್ ಬಗ್ಗೆ ನಾನಾ ವಿಧವಾದ ಸೂಚನೆಗಳನ್ನು ಮಾಡಿದರು. ಎನ್. ಎಸ್. ಸುಬ್ಬರಾಯರು ಯೂನಿವರ್ಸಿಟಿ ಸೆಟ್ಲ್‌ಮೆಂಟ್ ಮಾಡಿದರು. ಶ್ರೀ ಎಸ್. ಆರ್. ಕಂಠಿಯವರು ಟೀಚರ್ಸ್ ಟ್ರಿಪಲ್ ಬೆನಿಫಿಟ್ ಸ್ಕೀಂ ಜಾರಿಗೆ ತಂದಿದ್ದಾರೆ. ಶ್ರೀಮಾನ್ ಕೆ. ಹನುಮಂತಯ್ಯನವರು ಅರ್ನ್ ವೈಲ್ ಯು learn ಅಂದರೆ ಕಾಯಕವೇ ಕೈಲಾಸ ಎಂಬುದನ್ನು ತಿಳಿಸಿಕೊಟ್ಟಿದ್ದಾರೆ. Work is prayer ಎಂಬುದನ್ನು ತಿಳಿಸಿ dignity of labour ಕಲಿಸಿದ್ದಾರೆ. ಡೆಮಾಕ್ರಸಿಯಲ್ಲಿ long range plan ಮಾಡಿ ವಿದ್ಯಾ ದಾನ ಮಾಡಬೇಕು. ಇದಕ್ಕೆ ಅನುಕೂಲವಾಗುವ ಹಾಗೆ ರೆಸಿಡೆನ್ಷಿಯಲ್ ಸ್ಕೂಲ್ಸ್ ಮಾಡಬೇಕು. ಆಶ್ರಮದಲ್ಲಿ ಕಲಿಸುವ ಹಾಗೆ ವಿದ್ಯಾಪೀಠ ರಚನೆ ಮಾಡಬೇಕು. ಎಲಿಮೆಂಟ್ ಆಫ್ ಡಿಸಿಪ್ಲಿನ್ ಮಕ್ಕಳಲ್ಲಿ ಬರುವ ಹಾಗೆ ಮಾಡಿ ರೆಜಿಮೆಂಟೇಷನ್ ಅಂಡರ್ ದಿ ಕೇರ್‌ಫುಲ್ ಸ್ಟಡಿ ಆಫ್ ಟ್ಯೂಟರ್ಸ್ ವ್ಯವಸ್ಥೆ ಮಾಡಬೇಕಾದುದು ಅಗತ್ಯ. ಒಟ್ಟಿನಲ್ಲಿ ರೆಸಿಡೆನ್ಷಿಯಲ್ ಸ್ಕೂಲ್ಸ್ ಮಾಡಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ನಮ್ಮ ಯುವಕರಲ್ಲಿ ಡಿಗ್ನಿಟಿ ಆಫ್ ಲೇಬರ್ ಮತ್ತು ಡೆಮೊಕ್ರಾಟಿಕ್ ಸೋಷಿಯಾಲಿಜಂ ಬೆಳೆಯುವುದು ಸ್ಪಿರಿಟ್ ಆಫ್ ಎಜುಕೇಷನ್ ಆಗಬೇಕು. ಇಷ್ಟು ಹೇಳಿ ನನ್ನ ಮಾತು ಮುಗಿಸುತ್ತೇನೆ. ಜೈಹಿಂದ್.

Mr. SPEAKER.—The House will now adjourn and will re-assemble tomorrow at 12 NOON.

——

The House adjourned at Thirty Minutes past Seven of the Clock to meet again at Twelve of the Clock on Tuesday, the 18th July 1967.

WD 9076—GPB—500—9-10-1967